ಮೊಳಕಾಲ್ಮೂರು ತಾಲ್ಲೂಕಿನ ಸ್ಥಳನಾಮಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಪದವಿಗಾಗಿ
ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕ
ಬಿ.ಮೈಲಾರಪ್ಪ

ಮಾರ್ಗದರ್ಶಕರು
ಡಾ. ಎಸ್.ಎಸ್.ಅಂಗಡಿ
ಪ್ರವಾಚಕರು

ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೮

ಮೊಳಕಾಲ್ಮೂರು ತಾಲ್ಲೂಕಿನ ಸ್ಥಳನಾಮಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಪದವಿಗಾಗಿ
ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕ
ಬಿ.ಮೈಲಾರಪ್ಪ

ಮಾರ್ಗದರ್ಶಕರು
ಡಾ. ಎಸ್.ಎಸ್.ಅಂಗಡಿ
ಪ್ರವಾಚಕರು

ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

೨೦೦೮

ಮಾರ್ಗದರ್ಶಕರ ದೃಢೀಕರಣ ಪತ್ರ

ಮೊಳಕಾಲ್ಮೂರು ತಾಲ್ಲೂಕಿನ ಸ್ಥಳನಾಮಗಳು ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ **ಬಿ.ಮೈಲಾರಪ್ಪ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ.ಎಸ್.ಎಸ್.ಅಂಗಡಿ
ಪ್ರವಾಚಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ

ದಿನಾಂಕ : ೩೦-೦೮-೨೦೦೮.

ಸಂಶೋಧಕರ ಪ್ರಮಾಣ ಪತ್ರ

ಮೊಳಕಾಲ್ಮೂರು ತಾಲ್ಲೂಕಿನ ಸ್ಥಳನಾಮಗಳು ಎಂಬ ನಿಬಂಧವನ್ನು ಡಾ.ಎಸ್.ಎಸ್.ಅಂಗಡಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಭಾಷಾ ನಿಕಾಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ಬಿ.ಮೈಲಾರಪ್ಪ)
ಸಂಶೋಧಕ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : ೨೦-೦೮-೨೦೦೮.

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ಸ್ವರೂಪ

೧

ಅಧ್ಯಯನದ ಉದ್ದೇಶ ಮತ್ತು ಸ್ವರೂಪ

ಮಾನವ ತನ್ನ ಅಲೆಮಾರಿ ಜೀವನವನ್ನು ಕೈಬಿಟ್ಟು ಪ್ರಕೃತಿಯನ್ನು ಪಳಗಿಸಿ ತನ್ನ ಜೀವನಕ್ಕೆ ಒಗ್ಗಿಸಿಕೊಳ್ಳುವುದು ಸಾಧ್ಯ ಎಂಬುದನ್ನು ಯಾವಾಗ ಮನಗಂಡನೋ ಆಗ 'ಊರು' 'ಹಳ್ಳಿ'ಗಳ ಉಗಮವಾಯಿತು ನೆಲದೊಂದಿಗೆ ಹೋರಾಡುವ ಪ್ರಕೃತಿಯಲ್ಲಿ ತಾನು ನೆಲೆಗೊಂಡ ಸ್ಥಳದ ಜೊತೆಗೆ ತನ್ನನ್ನು ತಾನು ತೊಡಗಿಸಿಕೊಂಡ ಸಂಕೇತವಾಗಿ ಆ ಸ್ಥಳಕ್ಕೆ ಆತ ಒಂದು ಹೆಸರಿಟ್ಟುಕೊಂಡನು. ಆ ಸ್ಥಳ ಅವನ ಜೀವನದಲ್ಲಿ ಹಾದುಹೋದ ಕುರುಹಾಗಿ ಒಂದು ಹೆಸರು ತಳೆಯಿತು. ಕ್ರಮೇಣದಲ್ಲಿ ಅಲ್ಲಿ ಜನವಸತಿ ಇರಲಿ, ಇಲ್ಲದಿರಲಿ ಒಂದು ಜನಾಂಗದ ಸ್ಮೃತಿಯನ್ನು ಹೊತ್ತ ಆ ಗುರುತು ಪಟ್ಟಿಕೆ ಹಾಗೆಯೇ ಬಳಕೆಯಾಗ ತೊಡಗಿತು. ಹಲವು ಜನಾಂಗಳ ಸ್ಮೃತಿ ಮತ್ತು ಅಭಿಮಾನಗಳನ್ನು ಶಾಶ್ವತವಾಗಿ ಬೆಸೆಯುವ ಸಂಸ್ಕೃತಿಯ ಒಂದು ಕೊಂಡಿ ಎನಿಸಿತು. ಆ ಕೊಂಡಿಯೇ ಸ್ಥಳನಾಮ.

ಸಮುದಾಯಗಳೂ ಆರಂಭದಲ್ಲಿ ಪ್ರಾಕೃತಿಕ ಪರಿಸರದ ಚಹರೆಯೊಂದಿಗೆ ತಮ್ಮ ನೆಲೆಗಳಿಗೆ ಹೆಸರುಗಳನ್ನು ಕರೆದುಕೊಂಡರು. ಬೆಟ್ಟ, ಗುಡ್ಡ, ಗಿಡ, ಮರ, ಕಲ್ಲು, ಮಣ್ಣು ಇವುಗಳ ಗಾಢ ಸಂಬಂಧವು ಹೆಸರುಗಳಿಗೆ ಪ್ರೇರೇಪಿಸಿರಬೇಕು. ಹೆಚ್ಚಾಗಿ ಸಮುದಾಯಗಳು ವಾಸಿಸುತ್ತಿದ್ದು, ಬೆಟ್ಟಗಳ ಅಂಚಿನಲ್ಲಿ ದಿನ್ನೆ ಪ್ರದೇಶಗಳಲ್ಲಿ ಮತ್ತು ತಮಗೆ ಅಗತ್ಯವಾಗಿಬೇಕಾದಂತಹ ನೀರಿನ ತಾಣಗಳಲ್ಲಿ, ಜಗತ್ತಿನ ಬಹುತೇಕ ಪ್ರಾಚೀನ ನಾಗರೀಕತೆಗಳು ಆರಂಭವಾದದ್ದು ನದಿ ದಂಡೆಯ ಮೇಲೆ ಎಂಬುದನ್ನು ಗಮನಿಸಿದರೆ, ಸಮುದಾಯಗಳ ನೆಲಸುವಿಕೆಯ ಆಯ್ಕೆಯು ಸ್ಪಷ್ಟವಾಗಿ ಗೋಚರಿಸುತ್ತದೆ. ಅಂತೆಯೇ ಪಶುಪಾಲನೆ ಮತ್ತು ಕುರಿಸಾಕಾಣಿಕೆಯು ಬೆಟ್ಟಗಳಲ್ಲಿ ಬೆಟ್ಟದ ಬದಿಯಲ್ಲಿ ಅನುಕೂಲಕರವಾಗಿತ್ತು. ಆ ವೃತ್ತಿಯೊಂದಿಗೆ ತಮ್ಮ ವಾಸದ ನೆಲೆಗಳನ್ನು ಅಲ್ಲಲ್ಲಿಯೇ ನಿರ್ಮಿಸಿಕೊಂಡರು. ಈ ಕಾರಣದಿಂದಾಗಿ ನಿಸರ್ಗದ ಗಾಢವಾದ ಸಂಬಂಧದೊಂದಿಗೆ ತಳುಕು ಹಾಕಿಕೊಂಡ ಮಾನವರು ಆರಂಭಿಕ ಹಂತದಲ್ಲಿ ಪ್ರಕೃತಿನಿಷ್ಠ ಗ್ರಾಮನಾಮಗಳ ಉದಯಕ್ಕೆ ನಾಂದಿಯಾದರು. ಹೀಗೆ ಗ್ರಾಮಸಮಾಜಗಳು ಆರಂಭವಾದವು. ಗ್ರಾಮಗಳಿಗೆ, ಸ್ಥಳಗಳಿಗೆ ಹೆಸರಿಡುವಾಗ ತಮ್ಮ ಜನಾಂಗ ಅಥವಾ ತಮ್ಮ ಜನಾಂಗದ ವ್ಯಕ್ತಿಗಳ, ಚಾರಿತ್ರಿಕ ವ್ಯಕ್ತಿಗಳ ಧಾರ್ಮಿಕ ವ್ಯಕ್ತಿಗಳ ಹೆಸರುಗಳನ್ನು ಕೊಡಲು ಮುಂದಾದದ್ದು ಗ್ರಾಮನಾಮಗಳ ಇತಿಹಾಸದಿಂದ ತಿಳಿಯುತ್ತದೆ.

ಮುಂದೆ ಅದು ಕಾಲಾನಂತರದ ಬದಲಾವಣೆ, ಆಯಾ ಕಾಲದ ಸಮಕಾಲೀನ ಸಾಮಾಜಿಕ ಜೀವನವನ್ನು ಅವಲಂಬಿಸಿ 'ಹೆಸರಿಡುವಿಕೆ'ಯು ಸ್ಥಿತ್ಯಂತರಕ್ಕೊಳಗಾಯಿತು. ಗ್ರಾಮ ಸಮುದಾಯಗಳು ಆರಂಭದಲ್ಲಿ ನಿಸರ್ಗವಾಚಿಯೊಂದಿಗೆ ಹೆಸರುಗಳನ್ನು ಕರೆದುಕೊಂಡು ಕ್ರಮೇಣ ಜನಾಂಗವಾಚಿ, ವ್ಯಕ್ತಿವಾಚಿಗೆ ಮುಂದಾದವು. ಈ ಮೂರು ಕಾಲಘಟ್ಟದಲ್ಲಿ ಒಂದು ಸ್ಥಳಕ್ಕೆ ಹೆಸರಿಡುವ ಕ್ರಮದಲ್ಲಿ ಅನೇಕ ಬಗೆಯ ಬದಲಾವಣೆಗಳಾದವು. ಈ ಬದಲಾವಣೆಯ ನಡುವಿನ ಅಂತರದಲ್ಲಿ ಸಂಸ್ಕೃತಿಗಳ, ಸಮುದಾಯಗಳ ವಿಕಾಸದ ಹಾದಿಯನ್ನು ಕಂಡುಕೊಳ್ಳಬಹುದು. ಒಂದೊಂದು ಗ್ರಾಮ ಒಂದೊಂದು ಸಂಸ್ಕೃತಿಯನ್ನು ತನ್ನಲ್ಲಿ ಅಡಗಿಸಿಕೊಂಡಿರುತ್ತದೆ.

ಸ್ಥಳನಾಮಗಳು ಸಂಸ್ಕೃತಿ ಅಧ್ಯಯನದ ಪ್ರಮುಖ ಆಕರಗಳಲ್ಲಿ ಒಂದು. ಒಂದು ಹೆಸರಿನಲ್ಲಿ ಒಂದು ಜೀವನ ಕ್ರಮದ ಚರಿತ್ರೆಯಿರುತ್ತದೆ ಎಂಬುದನ್ನು ಗಮನಿಸಬೇಕು. ಅಂದರೆ ನೇರವಾಗಿ ಜೀವನ ಕ್ರಮದ ಸಂಗತಿಗಳನ್ನು ಹೇಳುವುದಿಲ್ಲವಾದರೂ, ಅದರ ಒಟ್ಟಂದವನ್ನು ಪರೋಕ್ಷ ನೆಲೆಯಲ್ಲಿ ತೆರೆದುತೋರಿಸುವ ಮೂಲಾಧಾರಗಳಾಗಿ ನಾಮಗಳು ಮಹತ್ವದ ಪಾತ್ರವಹಿಸುತ್ತವೆ. ನಮ್ಮ ಅತ್ಯಂತ ನಿಕಟ ಸಂಬಂಧವನ್ನೊಂದಿದ ಗ್ರಾಮನಾಮ ಸ್ಥಳನಾಮಗಳಿಂದ ವಿಭಿನ್ನ ಬಗೆಯ ಸಾಂಸ್ಕೃತಿಕ ಚಹರೆಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಕಾರಣ ಪ್ರಾಮಾಣಿಕ ಸಾಂಸ್ಕೃತಿಕ ಪ್ರಜ್ಞೆಯುಳ್ಳ ವ್ಯಕ್ತಿಗಳು ಹಾಗೂ ಸಮಾಜ, ಸ್ಥಳನಾಮಗಳನ್ನು ಪ್ರಮುಖ ಆಕರಗಳೆಂದು ಭಾವಿಸಿದಲ್ಲಿ ವಾಸ್ತವತೆಯ ತಳಹದಿಯಿಂದ ಸಂಸ್ಕೃತಿಯ ಅಧ್ಯಯನಕ್ಕೆ ತೊಡಗಲು ಸಾಧ್ಯವಾಗುತ್ತದೆ. ಪಾಶ್ಚಾತ್ಯ ವಿದ್ವಾಂಸರು ಸ್ಥಳನಾಮಗಳನ್ನು ಭಾಷಿಕ ಘಟಕಗಳಿಂದಲೇ ವರ್ಣನಾತ್ಮಕ ಮಾದರಿಯಲ್ಲಿ ಪ್ರಯೋಗಕ್ಕೆ ಒಳಪಡಿಸಿದರು. ನಂತರದಲ್ಲಿ ಸಾಮಾಜಿಕ ಸಂಗತಿಗಳ ಕಡೆಗೆ ಗಮನಹರಿಸಿದರು. ಅಂತೆಯೇ ೧೯೪೦ರಲ್ಲಿ ಶಂಬಾ ಜೋಶಿಯವರು ತಮ್ಮ ಸಂಸ್ಕೃತಿಯ ಅಧ್ಯಯನದಲ್ಲಿ ಬಹುಮುಖ್ಯವಾದ ಆಕರಗಳನ್ನಾಗಿ ಸ್ಥಳನಾಮಗಳನ್ನು ಬಳಸಿಕೊಂಡಿದ್ದಾರೆ. ಕನ್ನಡ ನಾಡಿನ ಭೌಗೋಳಿಕ ಎಲ್ಲೆಯನ್ನು ಗುರುತಿಸಲು ತೊಡಗಿದ ಶಂಬಾಜೋಶಿಯವರು, ಈ ನಾಡಿನ ಮೂಲ ಜನಾಂಗದ, ಈ ನಾಡಿನ ಸಂಸ್ಕೃತಿಯ ಚಹರೆಗಳನ್ನು ಗುರುತಿಸಲು ತೊಡಗಿದರು.

ಆರಂಭದ ಕಾಲದ ಹಟ್ಟಿ, ಹಾಡಿ, ಬಾಡ, ಹಾಳ್ ಈ ನಾಡಿನ ಗೋವಳರು, ಕುರುಂಬರು, ಹಟ್ಟಿಕಾರರ, ಗೌಡರ ಮೂಲನೆಲೆಗಳೆಂದು ಶಂಬಾ ಜೋಶಿಯವರು ಅಭಿಪ್ರಾಯಪಡುತ್ತಾರೆ. ಗ್ರಾಮಗಳು ಒಂದು ಕಾಲಕ್ಕೆ ಪ್ರಾಮುಖ್ಯತೆಯನ್ನು ಪಡೆದು ಪಟ್ಟಣಗಳಾಗಿಯೋ, ರಾಜಧಾನಿಗಳಾಗಿಯೋ, ಸಾಂಸ್ಕೃತಿಕ ಕೇಂದ್ರಗಳಾಗಿಯೋ, ಮೆರೆದ ಪ್ರದೇಶಗಳು ಮತ್ತೊಂದು ಕಾಲಕ್ಕೆ ನೆಲಕಚ್ಚಿ ವಿಘಟನೆಗೊಂಡು ಬೂದಿಗುಡ್ಡೆಗಳಾಗಿಯೋ, ಹಾಳೂರುಗಳಾಗಿಯೋ ಉಳಿದು ಗತಕಾಲದ ಸತ್ಯಗಳನ್ನು ತಮ್ಮ ಗರ್ಭದಲ್ಲಿ ಅಡಗಿಸಿಕೊಂಡಿರುತ್ತವೆ. ಪ್ರಾಚೀನ ಕಾಲದಿಂದಲೂ ಗ್ರಾಮಗಳು ಆಡಳಿತದ ಚಿಕ್ಕ ಘಟಕಗಳಾಗಿ

ಕಾರ್ಯನಿರ್ವಹಿಸಿವೆ. ಗ್ರಾಮೀಣ ಜನಜೀವನದ ಸಾಮಾಜಿಕ ಮತ್ತು ರಾಜಕೀಯ ಜೀವನವನ್ನು ಸುಧಾರಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದವು. ಅನೇಕ ಏಳುಬೀಳುಗಳನ್ನು ಕಂಡರೂ ಪ್ರಜಾಪ್ರಭುತ್ವದ ಸಂಸ್ಥೆಗಳಾಗಿ ಗ್ರಾಮಗಳು ಬೆಳೆದುಕೊಂಡುಬಂಧಿವೆ. ಗಂಗರ ಶಾಸನಗಳಲ್ಲಿ ಗ್ರಾಮಗಳ ಗುಂಪನ್ನು ಅಗ್ರಹಾರ, ಊರು ಒಕ್ಕಲು(ನಿವಾಸಿಗಳು), ಪ್ರಜೆ(ನಾಗರೀಕರು) ಪ್ರಜಾ ಸಮುದಾಯ 'ಸಮಸ್ತರು'(ಎಲ್ಲಾ ಜನರು) 'ಊರ ಹದಿನೆಂಟುಜಾತಿ' ಎಂದು ಕರೆಯಲಾಗುತ್ತಿತ್ತು. ಪಟ್ಟಣವನ್ನು ನಗರ ಎಂದು ಗುರುತಿಸಲಾಗಿತ್ತು. ಐದನೇ ಶತಮಾನದ ಹಲ್ಮಿಡಿ ಶಾಸನದಲ್ಲಿ ಜಿಲ್ಲೆಯನ್ನು 'ಮಹಾನಾಡು' ಎಂದು ಗುರುತಿಸಲಾಗಿತ್ತು. ಗ್ರಾಮದ ಆಡಳಿತದಲ್ಲಿ ಗಾವುಂಡ ಅಥವಾ ಗ್ರಾಮದ ಮುಖ್ಯಸ್ಥ ನೋಡಿಕೊಳ್ಳುತ್ತಿದ್ದನು. ಗ್ರಾಮದ ಲೆಕ್ಕಾಧಿಕಾರಿಯಾಗಿ ಶ್ಯಾನುಭೋಗ ಅಥವಾ ಕುಲಕರ್ಣಿ ನೋಡಿಕೊಂಡರೆ ಕಾರ್ಯದರ್ಶಿ ಕಾರ್ಯವನ್ನು ಗಾವುಂಡ ನಿರ್ವಹಿಸುತ್ತಿದ್ದನು ಎನ್ನುವುದನ್ನು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.

ಪ್ರಸ್ತುತ ಅಧ್ಯಯನವು ಮೊಳಕಾಲ್ಮೂರು ತಾಲ್ಲೂಕಿನ ಸ್ಥಳನಾಮ ಅಧ್ಯಯನವಾದರೂ ಆ ಪರಿಸರ, ಭಾಷೆ, ಸಮಾಜ ಮೌಖಿಕ ಪರಂಪರೆ, ಸಂಸ್ಕೃತಿ ಮತ್ತು ಚರಿತ್ರೆಯ ಹಿನ್ನೆಲೆಯೊಂದಿಗೆ ಅನಾವರಣಗೊಳಿಸಲು ಪ್ರಯತ್ನಿಸಿ ಅಧ್ಯಯನ ಮಾಡಲಾಗಿದೆ.

೧.೧. ಉದ್ದೇಶ

ಕನ್ನಡದಲ್ಲಿ ಸ್ಥಳನಾಮ ಅಧ್ಯಯನಗಳು ಎಂಬತ್ತರ ದಶಕದಿಂದ ವ್ಯಾಪಕವಾಗಿ ನಡೆಯುತ್ತಿವೆ. ವಿಶ್ವವಿದ್ಯಾಲಯಗಳಲ್ಲಿ ಜಿಲ್ಲಾವಾರು, ತಾಲ್ಲೂಕುವಾರು ಕೆಲವು ಅಧ್ಯಯನಗಳಾಗಿವೆ. ಆದರೆ ಚಿತ್ರದುರ್ಗ ಜಿಲ್ಲೆಯ ಕರ್ನಾಟಕದ ಗಡಿಭಾಗದಲ್ಲಿರುವ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಭಾಷೆ, ಸಮಾಜ, ಸಂಸ್ಕೃತಿ, ಚರಿತ್ರೆಯ ಹಿನ್ನೆಲೆಯಲ್ಲಿ ಸ್ಥಳನಾಮಗಳ ಅಧ್ಯಯನ ನಡೆದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಮೊಳಕಾಲ್ಮೂರು ಪರಿಸರದ ಸ್ಥಳನಾಮ ಅಧ್ಯಯನದ ಕೊರತೆಯನ್ನು ಆದಷ್ಟು ತುಂಬಲು ಹಾಗೂ ಶಾಸನೋಕ್ತ ಸ್ಥಳನಾಮಗಳ ಬಗೆಯ ಚರ್ಚೆಯ ಅವಶ್ಯಕತೆಯನ್ನು ಪ್ರಸ್ತುತಗೊಳಿಸಲು ಈ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದೇನೆ.

ಸಮಾಜ ರಚನೆಯಲ್ಲಿ ಭಾಷೆ, ಮೌಖಿಕ ಪರಂಪರೆ, ಸಂಸ್ಕೃತಿ ಚರಿತ್ರೆಯ ವಿವಿಧ ಆಯಾಮಗಳನ್ನು ಅರ್ಥಮಾಡಿಕೊಳ್ಳುವ ನಿಟ್ಟಿನಲ್ಲಿ 'ಸ್ಥಳನಾಮಗಳು' ಸೂಚಕ ಪರಿಕರಗಳಾಗಿ ಹೇಗೆ ನಿಲ್ಲಬಲ್ಲವೆಂಬುದರ ಕಡೆಗೆ ಇಣುಕುವ ಪ್ರಯತ್ನ ಈ ನಿಬಂಧದ ಬಹುಮುಖ್ಯ ಉದ್ದೇಶವಾಗಿದೆ.

ಗ್ರಾಮಗಳಿಗೆ ಆಯಾ ಹೆಸರುಗಳು ಹೇಗೆ ಬಂದವು ಎಂಬುದನ್ನು ಕುರಿತು ಅಧ್ಯಯನ ಮಾಡಿದರೆ ಆ ಗ್ರಾಮದ ಹಿನ್ನಲೆ ಸಂಸ್ಕೃತಿಯನ್ನು ತಿಳಿದುಕೊಂಡಂತಾಗುತ್ತದೆ. ಅಧ್ಯಯನಕ್ಕೆ ತೊಡಗಿದಾಗ ಮೊಳಕಾಲ್ಮೂರು ಪರಿಸರಕ್ಕೆ ಸ್ಥಳನಾಮಗಳಿಗೆ ಸಂಬಂಧಿಸಿದ ಯಾವೊಂದು ಮಾದರಿಗಳು ಎದುರಿಗಿರಲಿಲ್ಲ. ಇದರಿಂದ ಅಧ್ಯಯನದ ರೂಪುರೇಷೆಗೆ ಕೊಂಚ ಹೊಸ ಆಯಾಮ ನೀಡುವ ಸಾಧ್ಯತೆಗಳು ಕಂಡುಬಂದವು.

ಕಾರಣ ಈವರೆಗೆ ಕನ್ನಡ ಸ್ಥಳನಾಮ ಅಧ್ಯಯನಕಾರರ ಉಪಲಬ್ಧ ಗ್ರಂಥಗಳು, ಬಿಡಿಲೇಖನಗಳು, ಕೆಲವು ಕೃತಿಗಳನ್ನು ಅಧ್ಯಯನ ಮಾಡಿ ಅಲ್ಲಿ ರೂಪಿಸಿದ ಕೆಲವು ಮಾದರಿಗಳನ್ನು ಗಮನಿಸಲಾಯಿತು. ಈ ಮಾದರಿಯಲ್ಲಿ ಮುಖ್ಯವಾಗಿ ಕಂಡುಬಂದಿದ್ದು, ಭಾಷಿಕ ಹಿನ್ನಲೆಯಲ್ಲಿ ವರ್ಣನಾತ್ಮಕ ಮಾದರಿಯ ಅಧ್ಯಯನ ಈ ಎಲ್ಲ ಗ್ರಹಿಕೆಗಳೊಂದಿಗೆ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಬರುವ ಒಟ್ಟು ೯೨ ಗ್ರಾಮಗಳು. ಇವುಗಳನ್ನು ಗಮನದಲ್ಲಿ ಇಟ್ಟುಕೊಂಡು 'ಕರಿಯನ್ನು ಕನ್ನಡಿಯಲ್ಲಿ ಹಿಡಿದು ತೋರಿಸುವುದು ಕಷ್ಟ ಸಾಧ್ಯ ಕೆಲಸ'ವೆಂಬಂತೆ ಭಾವಿಸಿ, ಕೆಲವೊಂದು ಸ್ಥಳಗಳನ್ನು ಮಿತಿಗೊಳಪಡಿಸಿಕೊಂಡು ಭಾಷಿಕವಾಗಿ, ಸಾಂಸ್ಕೃತಿಕವಾಗಿ ಚಾರಿತ್ರಿಕವಾಗಿ ಮೌಖಿಕ ಪರಂಪರೆಯ ವಿಭಿನ್ನ ನೆಲೆಗಳನ್ನು ಗುರುತಿಸಬಹುದೆಂದು ತೋರಿಬಂತು. ಅದರ ಒಂದು ಪ್ರಯತ್ನವೇ ಪ್ರಸ್ತುತ 'ಮೊಳಕಾಲ್ಮೂರು ತಾಲ್ಲೂಕಿನ ಸ್ಥಳನಾಮಗಳು'' ಎಂಬ ಈ ನಿಬಂಧ.

ನಿಬಂಧದ ರಚನೆಗೆ ಕೆಲವು ಉದ್ದೇಶಗಳನ್ನು ಚರ್ಚಿಸಲಾಗಿದೆ.

೧. ಸ್ಥಳನಾಮಗಳ ವರ್ಗೀಕರಣವನ್ನು ಭೌಗೋಳಿಕ ಪರಿಸರಕ್ಕನುಗುಣವಾಗಿ ವರ್ಗೀಕರಿಸುವುದು.

೨. ಸ್ಥಳನಾಮಗಳ ಭಾಷಿಕ ವಿವೇಚನೆಗೆ ಒಳಪಡಿಸುವುದು.

೩. ಚರಿತ್ರೆಯೊಂದಿಗೆ ಸ್ಥಳನಾಮಗಳ ಅಧ್ಯಯನವನ್ನು ಶಾಸನೋಕ್ತ ಹೆಸರುಗಳು, ದತ್ತಿ-ದಾನ ನೀಡಿದ ಗ್ರಾಮಗಳು, ಪ್ರತಿನಾಮಕರಣ ಪಡೆದ ಗ್ರಾಮಗಳ ಕುರುಹುಗಳನ್ನು ಗುರುತಿಸುವುದು.

೪. ಸ್ಥಳನಾಮಗಳನ್ನು ಸಾಮಾಜಿಕ ನೆಲೆಯಲ್ಲಿ ಗಮನಿಸುವುದು.

೫. ಸಂಸ್ಕೃತಿಯೊಂದಿಗೆ ಸ್ಥಳನಾಮ ಬೆಸೆದುಕೊಂಡಿರುವ ಬಗೆಯನ್ನು ಗಮನಿಸುವುದು.

೬. ಮೊಳಕಾಲ್ಮೂರು ಪರಿಸರದ ಸಾಂಸ್ಕೃತಿಕ ಅವಲೋಕನವನ್ನು ಗ್ರಹಿಸುವುದು.

೭. ಮೌಖಿಕ ಪರಂಪರೆ ಮೂಲಕ ಸ್ಥಳನಾಮಗಳ ಅಧ್ಯಯನ.

೨.೨. ಸ್ವರೂಪ

ಸ್ಥಳನಾಮಗಳ ಅಧ್ಯಯನ ಒಂದು ಶಾಸ್ತ್ರೀಯ ಅಧ್ಯಯನವೆಂದು ಪರಿಗಣಿತವಾದ ಮೇಲೆ ಅಧ್ಯಯನದ ಸ್ವರೂಪವೆಂತಹದು? ಅನುಸರಿಸಬೇಕಾದ ಕ್ರಮಗಳಾವುವು? ಎಂಬ ಪ್ರಶ್ನೆಗಳು ಏಳುವುದು ಸಹಜ. ಈ ಬಗೆಯ ಅಧ್ಯಯನಕ್ಕೆ ಸಾಂಸ್ಕೃತಿಕ ಮಹತ್ವವಿದೆ ಎನ್ನುವುದು ನಿರ್ವಿವಾದ. ಸ್ಥಳನಾಮಗಳನ್ನು ಒಂದು ಶಾಸ್ತ್ರೀಯ ಚೌಕಟ್ಟಿಗೆ ಒಳಪಡಿಸಿ ಅಧ್ಯಯನ ಮಾಡುವ ಅಗತ್ಯತೆ ಇದೆ. ಶಾಸನಗಳು ಮತ್ತು ಇತರೆ ಚಾರಿತ್ರಿಕ ದಾಖಲೆಗಳು ಒದಗಿಸುವ ಮಾಹಿತಿಯನ್ನು ಇನ್ನಷ್ಟು ಪುಷ್ಟಿಗೊಳಿಸಬಲ್ಲ ಹಾಗೂ ಜ್ವಲಂತಗೊಳಿಸಬಲ್ಲ ಚೈತನ್ಯ ಸ್ಥಳನಾಮಗಳು ಎಂಬುದು ಸಾಬೀತಾಗುತ್ತವೆ. ಸ್ಥಳನಾಮಗಳು ಎಂದರೆ,

ಮೂಲತಃ ಭಾಷಿಕ ಘಟಕಗನ್ನೊಳಗೊಂಡಿರುವುದರಿಂದ ಭಾಷಾ ಶಾಸ್ತ್ರೀಯ ಅಧ್ಯಯನವೇ ಸೂಕ್ತವೆಂದು ಭಾವಿಸದೆ, ಸಾಮಾಜಿಕ ಹಾಗೂ ಚಾರಿತ್ರಿಕ ಆಯಾಮವು ಒಳಗೊಂಡಿರುತ್ತದೆಯೆಂಬುದನ್ನು ಬಹುಮುಖ್ಯವಾಗಿ ಗಮನಿಸಬೇಕಾದ ಸಂಗತಿ. ಸ್ಥಳನಾಮಗಳು ಯಾವಾಗಲೂ ಸ್ಥಳೀಯ ಸತ್ಯವನ್ನು ಹಾಗೂ ಸ್ಥಳೀಯ ಸತ್ವವನ್ನು ಹೀರಿಕೊಂಡಿರುತ್ತವೆ ಎಂಬುದನ್ನು ಮರೆಯುವಂತಿಲ್ಲ. ಹಾಗಾಗಿ ಆ ಸ್ಥಳದ ಭೌಗೋಳಿಕ ಪ್ರಾಕೃತಿಕ ಸಂಗತಿಗಳ ಅರಿವಿರಬೇಕಾಗುತ್ತದೆ. ಒಟ್ಟಿನಲ್ಲಿ ಸ್ಥಳನಾಮ ಅಧ್ಯಯನವು ಸಂಕೀರ್ಣವೂ ಜಟಿಲವೂ ಆದ ಅಧ್ಯಯನವಾಗಿರುವುದರಿಂದ ಬಹುಮುಖಿ ಅಧ್ಯಯನ ವಿಧಾನಗಳ ಅಳವಡಿಕೆ ಅಗತ್ಯ ಮತ್ತು ಅನಿವಾರ್ಯ. ಆಗ ಮಾತ್ರ ಸ್ಥಳನಾಮಗಳ ತಿರುಳು-ಹುರುಳುಗಳನ್ನು ಶಾಸ್ತ್ರೀಯವಾಗಿ ಅಧ್ಯಯನಕ್ಕೆ ಒಳಪಡಿಸುವುದು ಸಾಧ್ಯವಾಗುತ್ತದೆ.

ಈ ಅಧ್ಯಯನದ ಸ್ವರೂಪವನ್ನು ಈ ಕೆಳಗಿನಂತೆ ಗುರುತಿಸಲಾಗಿದೆ

೧. ಅಧ್ಯಾಯ ಒಂದರಲ್ಲಿ ಸ್ಥಳನಾಮಗಳ ಉದ್ದೇಶ ಮತ್ತು ಸ್ವರೂಪವನ್ನು ಕುರಿತು ಚರ್ಚಿಸಲಾಗಿದೆ. ಏಕೆಂದರೆ, ಸ್ಥಳನಾಮಗಳ ಮೂಲಕ ಸಮಾಜದ ಹಾಗೂ ಚಾರಿತ್ರಿಕ ಹಿನ್ನಲೆಯನ್ನು ತಿಳಿದುಕೊಳ್ಳಬಹುದು.

೨. ಅಧ್ಯಾಯ ಎರಡರಲ್ಲಿ ಮೊಳಕಾಲ್ಮೂರು ಪರಿಸರದ ಸಾಂಸ್ಕೃತಿಕ ಅಂಶಗಳನ್ನು ಪರಿಚಯಿಸಲಾಗಿದೆ. ಇದು ಸ್ಥಳನಾಮ ಅಧ್ಯಯನಕ್ಕೆ ಪೂರಕ - ಪೋಷಕ ಆಕರಗಳಾಗಿವೆ ಎಂಬುದನ್ನು ಮನಗಾಣಬಹುದು.

೩. ಅಧ್ಯಾಯ ಮೂರರಲ್ಲಿ ಸ್ಥಳನಾಮಗಳ ಭಾಷಿಕ ವಿವೇಚನೆ ಕುರಿತು ಚರ್ಚಿಸಿ, ಭೌಗೋಳಿಕ ಸ್ಥಳನಾಮಗಳ ವರ್ಗೀಕರಣ ಘಟಕವನ್ನು ಗುರುತಿಸಲಾಗಿದೆ.

೪. ಅಧ್ಯಾಯ ನಾಲ್ಕರಲ್ಲಿ ಸಮಾಜ ಮತ್ತು ಮೌಖಿಕ ಪರಂಪರೆಯ ಕುರಿತು ವಿಶ್ಲೇಷಿಸಿ ಸಾಮಾಜಿಕ ವೃತ್ತಿ-ಜಾತಿಗಳನ್ನು ಆಧಾರವಾಗಿಟ್ಟುಕೊಂಡು ಸ್ಥಳನಾಮಗಳ ಚರ್ಚೆಯನ್ನು ಬೆಳೆಸಲಾಗಿದೆ. ಮೌಖಿಕ ಪರಂಪರೆಯ ಅಗತ್ಯತೆ ಹಾಗೂ ಅನಿವಾರ್ಯತೆಯನ್ನು ಕಂಡುಕೊಳ್ಳಲಾಗಿದೆ.

೫. ಅಧ್ಯಾಯ ಐದರಲ್ಲಿ ಸ್ಥಳನಾಮಗಳ ಚರಿತ್ರೆ ಮತ್ತು ಸಂಸ್ಕೃತಿ ಶಾಸನೋಕ್ತ ಸ್ಥಳನಾಮ ಹಾಗೂ ಪ್ರತಿನಾಮಕರಣ, ಸ್ಥಳನಾಮಗಳ ಸಂಸ್ಕತಿಯ ಚಹರೆಗಳನ್ನು ಗುರುತಿಸುವಲ್ಲಿ ನೆರವಾದ ಬಗೆಯನ್ನು ಕಂಡುಕೊಳ್ಳಲಾಗಿದೆ.

೬. ಅಧ್ಯಾಯ ಆರು ಸಮಾರೋಪದಲ್ಲಿ ಇಡೀ ಅಧ್ಯಯನದ ಫಲಿತಗಳೇನು ಎಂಬ ಆಶಯವನ್ನು ವ್ಯಕ್ತಪಡಿಸಿದ್ದೇನೆ.

ಹೀಗೆ ಸ್ಥಳನಾಮಗಳ ಸ್ವರೂಪವನ್ನು ಕುರಿತು ಚರ್ಚಿಸಲಾಗಿದೆ. ಈ ಮೇಲಿನ ಅಂಶಗಳು ಅಧ್ಯಯನದ ಮುಖ್ಯ ಉದ್ದೇಶಗಳಾಗಿವೆ ಹಾಗೂ ಫಲಿತಗಳೂ ಆಗಿವೆ. ಈ ಮುಖ್ಯ ಅಂಶಗಳನ್ನು ಇಟ್ಟುಕೊಂಡು ಆಯಾ ಅಧ್ಯಾಯಗಳ ಅಡಿಯಲ್ಲಿ ಚರ್ಚೆಯನ್ನೂ ಮಾಡಲಾಗಿದೆ.

ಅಧ್ಯಾಯ ೨

ಮೊಳಕಾಲ್ಮೂರು ಪರಿಸರ : ಸಾಂಸ್ಕೃತಿಕ ಅವಲೋಕನ

೨

ಮೊಳಕಾಲ್ಮೂರು ಪರಿಸರ : ಸಾಂಸ್ಕೃತಿಕ ಅವಲೋಕನ

ಒಂದು ದೇಶದ ನಿಜವಾದ ಇತಿಹಾಸವೆಂದರೆ, ಆ ಜನತೆಯ ಇತಿಹಾಸ. ಜನತೆ ಬದುಕಿದ ರೀತಿ, ಅನುಸರಿಸಿದ ಧರ್ಮ, ಕಟ್ಟಿದ ಕಲೆ, ಅದರ ಜೀವನ ಸಮಸ್ಯೆಗಳು, ಅದರ ಜೀವನ ಮೌಲ್ಯಗಳು ಇತ್ಯಾದಿಗಳ ವಿವರಣೆಯೇ ಆ ದೇಶದ ಇತಿಹಾಸ. ಇದನ್ನು ಸಾಂಸ್ಕೃತಿಕ ಅಧ್ಯಯನವೆಂದೂ ಸಹ ಕರೆಯಬಹುದು. ನಮ್ಮ ದೇಶ ನಮ್ಮ ಸಂಸ್ಕೃತಿ ಎಂಬ ಮಾತುಗಳು ಮೇಲ್ನೋಟಕ್ಕೆ ಒಂದೇ ಅನ್ನಿಸಿದರೂ ಸೂಕ್ಷ್ಮವಾಗಿ ನೋಡಿದಾಗ ಅವು ಒಂದೇ ಅಲ್ಲ. ಹಗ್ಗದ ರಚನೆಯಂತೆ ಹಲವು ಎಳೆಗಳಿಂದ ಅವು ಒಂದೇ ಎನ್ನಿಸುತ್ತವೆ ಅಷ್ಟೇ. ಹಾಗೆ ನೋಡಿದರೆ ಪ್ರಧಾನ ಧಾರೆಯ ಅಧ್ಯಯನವೇ ಬಹುಮುಖ್ಯವಾಗಿದ್ದ ಈ ನೆಲದಲ್ಲಿ ಉಪಧಾರೆಗಳ ಕುರಿತು ಅಧ್ಯಯನ ನಡೆದಿಲ್ಲ. ಈ ಅಲಕ್ಷಿತ ಸ್ಥಳನಾಮಗಳ ಅಕ್ಷರಲೋಕದಿಂದ ಬಹುದೂರ ಉಳಿದಿದ್ದ ಕಾಲ ಒಂದಿತ್ತು. ಹೀಗೆ ಉಪಸಂಸ್ಕೃತಿ - ಪರ್ಯಾಯ ಸಂಸ್ಕತಿ ಎಂದೆಲ್ಲ ಕರೆಯಿಸಿಕೊಂಡು ಹತ್ತು ಹಲವು ದೃಷ್ಟಿಕೋನಗಳಿಂದ ಮಹತ್ವ ಪಡೆದಿವೆ.

೨.೧. ಭೌಗೋಳಿಕ ಪರಿಸರ

ಸಾಮಾನ್ಯವಾಗಿ 'ಮೊಳಕಾಲ್ಮೂರು' ಎಂಬ ಹೆಸರು ದೇಹದ ಅಂಗಾಂಗಳಿಂದ ಬಂದ ಹೆಸರು ಅಥವಾ "ಜಲ ಸಸ್ಯದಿಂದ ಬಂದಿರಬಹುದು."[೧] ಮೊಳಕಾಲ್ಮೂರು ಪಕ್ಕದಲ್ಲಿಯೇ 'ಕೂಗುಬಂಡೆ' ಯೊಂದು ಇದೆ. ಇದಕ್ಕೆ 'ಜೋಗಪ್ಪನ ಗುಡ್ಡ' ಹಾಗು 'ಮೊಳಗುವ ಕಲ್ಲು' ಎನ್ನುತ್ತಾರೆ. ಮೊಳಗುವ ಕಲ್ಲಿನ ಊರು ಮೊಳಕಾಲ್ಮೂರು ಹೆಸರಿಗೆ ಕಾರಣವಾಗಿರಲೂಬಹುದು. ಹಾಗೆಯೇ ಮೊಳಕಾಲ್ಮೂರುವಿನಿಂದ ರಾಯದುರ್ಗದವರೆಗೂ ಗ್ರಾನೈಟ್ ಶಿಲೆಯ ಬೆಟ್ಟ-ಗುಡ್ಡಗಳಿವೆ. ಒಣಕಲ್ಲಿನಿಂದ ಕೂಡಿದ ಊರು 'ಒಳಕಲ್ಲು ಊರು' ಎಂಬುದು ಮೊಳಕಾಲ್ಮೂರು ಆಗಿರಲೂಬಹುದು.

ಅಲ್ಲದೆ ಈ ಊರಿನ ಉತ್ತರಕ್ಕಿರುವ ಬೆಟ್ಟದ ಮೇಲಿನ ಕೋಟೆಯನ್ನು ವಶಪಡಿಸಿಕೊಳ್ಳಲು. ಹಿಂದೆ ರಾಜಮಹಾರಾಜರ ಕಾಲದಲ್ಲಿ ಶತ್ರು ರಾಜರು(ಸೈನಿಕರು) ಬೆಟ್ಟವನ್ನು ಅತಿಕ್ರಮಿಸದಂತೆ ಮೂರನೆಯ ಸಾಲಿನ ಕೋಟೆಯ ಕೆಳಭಾಗದ ಅತ್ಯಂತ ವಿಶಾಲವಾದ, ಇಳಿಜಾರಾದ ಬಂಡೆಗೆ ಎಣ್ಣೆ ಸವರಿ, ಅದರ ಮೇಲೆ ರಾಗಿ ಅಂಟಿಸುತ್ತಿದ್ದರಂತೆ, ಕೋಟೆ ಹತ್ತಲು ಉಪಕ್ರಮಿಸುವ ರೈತರು(ಸೈನಿಕ) ಕಾಲಜಾರಿ

ಮೊಳಕಾಲು ಮುರಿಯುವಂತೆ ಬಿದ್ದು, ಹತರಾಗುತ್ತಿದ್ದರಂತೆ, ಈ ಊರಿಗೆ 'ಮೊಳಕಾಲುಮುರಿ', ಮೊಳಕಾಲ್ಮೂರಿ, ನಂತರದ ದಿನಗಳಲ್ಲಿ 'ಮೊಳಕಾಲ್ಮೂರು' ಎಂಬ ಹೆಸರು ಬಂದಿದೆ ಎಂದು ಸ್ಥಳೀಯ ಐತಿಹ್ಯವಿದೆ. ಇನ್ನೊಂದು ಅಭಿಪ್ರಾಯ ಹೀಗಿದೆ. "ಈ ಪ್ರಾಂತ್ಯವನ್ನು ಆಳಿದ ರಾಜನೊಬ್ಬ ತನ್ನ ಪೂರ್ಣ ಗರ್ಭಿಣಿಯಾದ ಪತ್ನಿಯೊಂದಿಗೆ ವನವಿಹಾರಕ್ಕೆ ಹೋದ ಸಂದರ್ಭದಲ್ಲಿ ಆಕೆ ಅಲ್ಲಿನ ಒಂದು ಮರದ ಕೆಳಗೆ ಸುಕುಮಾರನನ್ನು ಹೆತ್ತಳಂತೆ. ಅವನಿಗೆ ಹಣೆಯಲ್ಲಿ ಕಣ್ಣಿದ್ದುದರಿಂದ ಮುಂದೆ ಅವನಿಗೆ ಪಟ್ಟಕಟ್ಟುವಾಗ ಬಾಸಿಂಗವನ್ನು ಮೊಣಕಾಲಿಗೆ ಕಟ್ಟಿದರಂತೆ. ಈ ಪ್ರಸಂಗದಿಂದಾಗಿ ಈ ಊರಿಗೆ ಮೊಳಕಾಲ್ಮೂರು ಎಂದಾಯಿತೆನ್ನಲಾಗಿದೆ. ಈ ಹೇಳಿಕೆಯು ಪ್ರಾಯಶಃ ತ್ರಿನೇತ್ರ ಕದಂಬನಿಗೆ ಅನ್ವಯಿಸುತ್ತದೆ ಎನ್ನಬಹುದು."[೨] ಆದರೆ ಈ ಮೇಲಿನ ಹೇಳಿಕೆಗಳಿಗೆ ಯಾವುದೇ ರೀತಿಯ ಪುರಾತತ್ವೀಯ ಅಥವಾ ಸಾಹಿತ್ಯಿಕ ಆಧಾರಗಳಿಲ್ಲ. ಇಂದು ಮೊಳಕಾಲ್ಮೂರು ತಾಲ್ಲೂಕು ಕೇಂದ್ರವಾಗಿದ್ದು ಈ ತಾಲ್ಲೂಕು ಚಿತ್ರದುರ್ಗ ಜಿಲ್ಲೆಯ ಈಶಾನ್ಯ ಭಾಗದಲ್ಲಿ 'ಒಂಟೆ' ಅಥವಾ 'ಜಿರಾಫೆ'ಯ ಕತ್ತಿನಂತೆ ಉದ್ದಕ್ಕ ಚಾಚಿಕೊಂಡಿದೆ. ಕರ್ನಾಟಕದ ಮಧ್ಯಬಿಂದುವಿನಂತಿರುವ ಚಿತ್ರದುರ್ಗ ಜಿಲ್ಲೆಯ ಆರು(೬) ತಾಲ್ಲೂಕುಗಳಲ್ಲಿ ಮೊಳಕಾಲ್ಮೂರು ತಾಲ್ಲೂಕು ಒಂದು. ಈ ಪ್ರದೇಶದ ಅನಾವೃಷ್ಟಿ, ಅಭಾವಗಳಿಗೆ ಹೆಸರಾದ ಹಿಂದುಳಿದ ತಾಲ್ಲೂಕಾಗಿದೆ. ತಾಲ್ಲೂಕಿನ ಉತ್ತರ ಅಕ್ಷಾಂಶ ೧೪° ೪ರಿಂದ ೧೫° ೦೨ ಮತ್ತು ಪೂರ್ವ ರೇಖಾಂಶ ೭೬°-೪೧ ರಿಂದ ೭೭°-೦೧ರವರೆಗೆ ಚಾಚಿಕೊಂಡಿದೆ. ಈ ತಾಲ್ಲೂಕಿನ ಪೂರ್ವಕ್ಕೆ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ರಾಯದುರ್ಗ ತಾಲ್ಲೂಕು, ಪಶ್ಚಿಮ ಮತ್ತು ಉತ್ತರಕ್ಕೆ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ಮತ್ತು ಸೊಂಡೂರು ತಾಲ್ಲೂಕುಗಳನ್ನು ಹಾಗೂ ದಕ್ಷಿಣಕ್ಕೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕುಗಳನ್ನು ಮೇರೆಗಳಾಗಿ ಹೊಂದಿದೆ. ಈ ತಾಲ್ಲೂಕಿನ ವಿಸ್ತೀರ್ಣ ೭೩೬ ಚದರ ಕಿಲೋಮೀಟರುಗಳು. ಈ ತಾಲ್ಲೂಕು ಒಟ್ಟು ೬೨ ಗ್ರಾಮಗಳನ್ನು ಹೊಂದಿದೆ.

ಮೊಳಕಾಲ್ಮೂರು ತಾಲ್ಲೂಕಿನ ಸುತ್ತ-ಮುತ್ತಲಿನ ಪ್ರದೇಶದ ಹಲವಾರು ನೆಲೆಗಳಲ್ಲಿ ಪ್ರಾಗೈತಿಹಾಸಿಕ ಕಾಲದ ಅನೇಕ ಪ್ರಾಚ್ಯಾವಶೇಷಗಳು ದೊರೆತಿವೆ. ತಾಲ್ಲೂಕಿನಲ್ಲಿ ಯಾವುದೇ ದೊಡ್ಡ ನದಿಗಳು ಹರಿಯದಿದ್ದರೂ ಅಲ್ಲಲ್ಲಿ ಕೆರೆ, ಕುಂಟೆ, ಕಾಲುವೆ, ಹಳ್ಳ ಮುಂತಾದ ತುಂಗಭದ್ರಾನದಿಯ ಮುಖ್ಯ ಉಪನದಿಯಾದ "ಜಿನಗಿಹಳ್ಳ"(ಚಿನ್ನಹಗರಿ) ಹರಿಯುತ್ತದೆ. ವೇದಾವತಿ ನದಿಯು ಮೊಳಕಾಲ್ಮೂರು ಪ್ರದೇಶವನ್ನು ಪ್ರವೇಶಿಸಿ ಮುಂದೆ ಸಾಗುತ್ತದೆ. ಮೊಳಕಾಲ್ಮೂರು ತಾಲ್ಲೂಕಿನ ಮುಖ್ಯನದಿ 'ಜಿನಗಿಹಳ್ಳ' ಇದಕ್ಕೆ ಚಿನ್ನಹಗರಿ, ಚಿಕ್ಕಹಗರಿ, ಹನೆಯನದಿ, ಅಘಹರಿ, ಪಾಪನಾಶಿನಿ ಎಂದೆಲ್ಲಾ ಹೆಸರುಗಳಿಂದ ಕರೆಯುತ್ತಾರೆ. "ಈ ನದಿ ಚಿತ್ರದುರ್ಗಕ್ಕೆ ಸಮೀಪದ ಗೊಡಬನಾಳ್ ಗ್ರಾಮದ ಬಳಿಯಿಂದ ಹೊಳಲ್ಕೆರೆ ತಾಲ್ಲೂಕಿನ ಓಬಳದೇವರ ಗುಡ್ಡದಲ್ಲಿ ಹುಟ್ಟಿ, ಚಿತ್ರದುರ್ಗ, ಜಗಳೂರು, ಮೊಳಕಾಲ್ಮೂರು ತಾಲ್ಲೂಕಿನ ಅನೇಕ ಕೆರೆಗಳಿಗೆ ನೀರು ಒದಗಿಸಿ, ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಕಲ್ಲಹಳ್ಳಿ ಬಳಿ ಎಲ್ಲೆಯಾಗಿ ಹರಿದು ಆಂಧ್ರ ಪ್ರದೇಶದ ರಾಯದುರ್ಗದ ಬಳಿ ಹಗರಿ ನದಿಯನ್ನು ಕೂಡಿಕೊಳ್ಳುತ್ತದೆ. ಮತ್ತು

ಮೊಳಕಾಲ್ಮೂರು ಬಳ್ಳಾರಿ ಜಿಲ್ಲೆಯ ತಾಲ್ಲೂಕಿನ ಮಧ್ಯೆ ಪ್ರವೇಶಿಸಿದಾಗ ಈಶಾನ್ಯ ಅಭಿಮುಖವಾಗಿ ಹರಿದು ವೇದಾವತಿಯನ್ನು ಸೇರುತ್ತದೆ.''[೩] ಹಾವಿನೋಪಾದಿಯಲ್ಲಿ ಹರಿಯುವುದನ್ನು ಕಾಣಬಹುದು. ಈ ನದಿಗೆ ಕೆಲವು ಸಣ್ಣಪುಟ್ಟ ಹಳ್ಳಗಳು ಬಂದು ಸೇರುತ್ತವೆ. ಈ ನದಿಗೆ ರಂಗಯ್ಯನ ದುರ್ಗ ಜಲಾಶಯ ಅಣೆಕಟ್ಟನ್ನು ನಿರ್ಮಿಸಿದ್ದಾರೆ. ಈ ಜಲಾಶಯದಿಂದ ಕೆಲವು ಕೆರೆಗಳಿಗೆ ನೀರು ಸರಬರಾಜಾಗಿ ನೀರಾವರಿ ವ್ಯವಸ್ಥೆಯಿಂದ ಕೆಲವೊಂದು ಹಳ್ಳಿಗಳಿಗೆ ಉಪಯುಕ್ತವಾಗಿದೆ. ರಾಂಪುರದ ಬಳಿ 'ಗುಂಡೇರಿಹಳ್ಳ' ಇದೆ. ಇದು ಮಳೆಗಾಲದ ಸಮಯದಲ್ಲಿ ಹರಿಯತ್ತದೆ. ತಾಲ್ಲೂಕಿನಲ್ಲಿ ಚಿಕ್ಕ ದೊಡ್ಡ ಸುಮಾರು ೩೦ ಕೆರೆಗಳಿವೆ. ಇಲ್ಲಿನ ಭೂಮಿ, ಕಪ್ಪುಮಿಶ್ರಿತ ಕೆಂಪು ಮಣ್ಣು, ಚೌಳು ಮಣ್ಣಿನಿಂದ ಕೂಡಿರುವುದನ್ನು ಕಾಣಬಹುದು.

ಈ ತಾಲ್ಲೂಕಿನ ಪೂರ್ವಶ್ರೇಣಿಯ ಕಣಶಿಲೆಯು ಬೆಟ್ಟ-ಗುಡ್ಡಗಳಿಂದ ತುಂಬಿದ ಸಾಲಿನಂತೆ ಕಾಣುತ್ತದೆ. ಎಲ್ಲಾ ಬೆಟ್ಟಗಳು ನಗ್ನ ಶಿಲಾಮಯವಾಗಿವೆ ಎಂದು ಹೇಳಬಹುದು. ಬೆಟ್ಟಗುಡ್ಡಗಳು ನಿಸರ್ಗವು ನೀಡಿದ ಉಚಿತ ನೈಸರ್ಗಿಕ ಸಂಪನ್ಮೂಲಗಳಾಗಿವೆ. ಮೊಳಕಾಲ್ಮೂರು ಪರಿಸರದಲ್ಲಿ ಕಂಡುಬರುವ ಇಂತಹ ಬೆಟ್ಟ-ಗುಡ್ಡಗಳು ಗಿರಿಶಿಖರಗಳು ಸಹಜವಾಗಿಯೇ ಕೋಟೆಕೊತ್ತಲಗಳ ನಿರ್ಮಾಣಕ್ಕೆ ಸಹಕಾರಿಯಾಗಿವೆ.

ಮೊಳಕಾಲ್ಮೂರು ಪರಿಸರದ ಬೆಟ್ಟಗಳು

೧. ಶ್ರೀ ಜಟಂಗಿ ರಾಮೇಶ್ವರ ಬೆಟ್ಟ - ೩೪೬೯ ಅಡಿ ಎತ್ತರ

೨. ಶ್ರೀ ನುಂಕೇಭೈರವನ ಬೆಟ್ಟ - ೩೦೨೨ ಅಡಿ ಎತ್ತರ

೩. ಶ್ರೀ ಬ್ರಹ್ಮಗಿರಿಬೆಟ್ಟ (ಇಸಿಲಾ) ೨೫೫೫ ಅಡಿ ಎತ್ತರ

೪. ಜೋಗಪ್ಪನ ಗುಡ್ಡ (ಕೂಗುಬಂಡೆ) - ೨೫೪೦ ಅಡಿ ಎತ್ತರ

೫. ಸಂತೇಗುಡ್ಡ - ೨೨೭೩ ಅಡಿ ಎತ್ತರ

ಈ ಬೆಟ್ಟಗಳನ್ನು ಇನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಈ ಪ್ರದೇಶದ ಬಗ್ಗೆ ಅಧ್ಯಯನ ಮಾಡಿದ ಆಂಗ್ಲ ಇತಿಹಾಸ ತಜ್ಞ ಬ್ರೂಸ್ ಫೂಟ್ "ಈ ಬೆಟ್ಟ ಪ್ರದೇಶಗಳು ವಿಶಿಷ್ಟ ಸೌಂದರ್ಯದಿಂದ ಕೂಡಿವೆ"[೪] ಎಂದು ಹೇಳಿದ್ದಾರೆ. ಇಡೀ ತಾಲ್ಲೂಕು ಸಮುದ್ರ ಮಟ್ಟದಿಂದ ೨೦೬೮ ಅಡಿ ಎತ್ತರದಲ್ಲಿದೆ.

೨.೨. ಮೊಳಕಾಲ್ಮೂರು ತಾಲ್ಲೂಕಿನ ಚಾರಿತ್ರಿಕ ಹಿನ್ನಲೆ

ಮೊಳಕಾಲ್ಮೂರು ತಾಲ್ಲೂಕಿನ ಇತಿಹಾಸವು ಬಹಳ ಪ್ರಾಚೀನವಾದುದು. ಪೂರ್ವ ಶಿಲಾಯುಗದಿಂದಲೂ ಜನವಸತಿ ಇತ್ತೆಂಬುದಕ್ಕೆ ಈ ತಾಲ್ಲೂಕಿನ ಹಲವು ಭಾಗಗಳಲ್ಲಿ ದೊರೆತಿರುವ ಬೃಹತ್ ಶಿಲಾ ಸಮಾದಿಗಳು ಇತರ ಪ್ರಾಚೀನ ಅವಶೇಷಗಳು ಹಾಗೂ ಬ್ರಹ್ಮಗಿರಿಯಲ್ಲಿ ನಡೆದಿರುವ

ಉತ್ಖನನಗಳಿಂದ ಸ್ವಯಂವೇದ್ಯವಾಗಿದೆ. ಇಲ್ಲಿನ ಇತಿಹಾಸವನ್ನು ಕ್ರಿ.ಪೂ.೩ನೇ ಶತಮಾನದಿಂದಲೂ ಗುರುತಿಸಬಹುದು. ಈ ಪ್ರದೇಶವು ಮೌರ್ಯ ಸಾಮ್ರಾಜ್ಯಕ್ಕೆ ಸೇರಿತ್ತು ಎಂಬುದು ಬ್ರಹ್ಮಗಿರಿ, ಸಿದ್ದಾಪುರ, ಜಂಟಗಿ ರಾಮೇಶ್ವರಗಳಲ್ಲಿ ದೊರೆತಿರುವ ಅಶೋಕನ ಶಾಸನಗಳಿಂದ ವ್ಯಕ್ತವಾಗುತ್ತದೆ. ಬ್ರಹ್ಮಗಿರಿಯ ಸುತ್ತ-ಮುತ್ತ ವಿಸ್ತಾರವಾದ ಭೂಶೋಧನೆ ನಡೆದು ಈ ತಾಲ್ಲೂಕಿನ ಪ್ರಾಕ್ತನ ಸಂಸ್ಕೃತಿಯ ಬಗ್ಗೆ ಹೆಚ್ಚಿನ ಮಾಹಿತಿ ದೊರೆಯುವಂತಾಗಿದೆ. ಬ್ರಹ್ಮಗಿರಿಯಲ್ಲಿ ನಡೆದ ಉತ್ಖನನದಲ್ಲಿ ಕೆಲವು ಬಗೆಯ ಸಂಸ್ಕೃತಿಗಳು ಕಂಡುಬಂದಿವೆ. ಅತ್ಯಂತ ಪ್ರಾಚೀನವಾದ ನವಶಿಲಾಯುಗದ ಸಂಸ್ಕೃತಿ (ಇದರ ಮುಖ್ಯ ಕುರುಹು ಕರಿಯ ಕಲ್ಲಿನ ಕೊಡಲಿಯಂಥ ಉಜ್ಜಿ ನಯ ಮಾಡಿದ ಆಯುಧಗಳು) ಕಬ್ಬಿಣ ಯುಗದ ಬೃಹತ್ ಶಿಲಾ ಸಂಸ್ಕೃತಿ, ದಪ್ಪಗುಂಡುಗಳನ್ನು ದುಂಡಗೆ ಜೋಡಿಸಿ ಕಲ್ಲಿನ ಶವಪೆಟ್ಟಿಗೆಯಲ್ಲೋ ಆಳವಾದ ಕುಳಿಯಲ್ಲೋ, ಹಲವಾರು ಬಗೆಯ ಹೊಳಪಿನ ಮಡಕೆಗಳನ್ನು ಕಬ್ಬಿಣದ ಆಯುಧಗಳನ್ನಿಟ್ಟು ವಿಶಿಷ್ಟವಾಗಿ ನಡೆಸುತ್ತಿದ್ದ ಶವಸಂಸ್ಕಾರ ಪದ್ಧತಿ ಈ ಸಂಸ್ಕೃತಿಯ ಹೆಗ್ಗುರುತು. ಬ್ರಹ್ಮಗಿರಿಯಲ್ಲಿ ಇಂತಹ ಬೃಹತ್ ಶಿಲಾಸಮಾಧಿಗಳು ದೊರೆತಿವೆ. ಅಶೋಕ ಚಕ್ರವರ್ತಿಯು ತನ್ನ ಶಾಸನಗಳಲ್ಲಿ ಹೇಳಿಕೊಂಡಿರುವಂತೆ, ಮಾನವ ಹಾಗೂ ಪ್ರಾಣಿಗಳ ಆರೋಗ್ಯ ರಕ್ಷಣೆಗೆ ತಕ್ಕ ವ್ಯವಸ್ಥೆ ಮಾಡಿದ್ದು, ಜೊತೆಗೆ ಅನೇಕ ಸನ್ಯಾಸಿ ಮಠಗಳು ಮತ್ತು ದೇವಾಲಯಗಳೂ ಒಂದು ಭವ್ಯವಾದ ಅರಮನೆಯನ್ನು ಸಹ ಕಟ್ಟಿಸಿದನೆಂದು ಪರಂಪರಾನುಗತವಾಗಿ ಬಂದ ದಾಖಲೆಗಳು ತಿಳಿಸುತ್ತವೆ. ಉದಾಹರಣೆಗೆ ಬ್ರಹ್ಮಗಿರಿ ಬೆಟ್ಟದಲ್ಲಿ ಒಂದು ಅರಮನೆಯನ್ನು ಕಾಣಬಹುದು. ಇದನ್ನು ಈಗ ಮಠ ಎಂದು ಕರೆಯುವುದು ವಾಡಿಕೆಯಾಗಿದೆ. ಈ ಮಠದ ಮುಂದೆ ತ್ರಿಶಂಕೇಶ್ವರನೆಂಬ ಹೆಸರಿನ ದೇವಾಲಯವಿದೆ. ಈ ದೇವಾಲಯದ ಶಾಸನದಿಂದ ಇದು ಪೂರ್ವದಲ್ಲಿ ಜೈನರ ರಾಜಧಾನಿಯಾಗಿತ್ತು ಎನ್ನುವುದು ತಿಳಿಯುತ್ತದೆ. ಇದಾದ ನಂತರ ಇತಿಹಾಸ ಆರಂಭಕಾಲದ ನಾಗರೀಕತೆಯನ್ನು ಗುರುತಿಸಲಾಗಿದೆ. ಕ್ರಿ.ಪೂ. ಮೂರನೇಯ ಶತಮಾನದಲ್ಲಿ ಆರಂಭವಾದ ಈ ಸಂಸ್ಕೃತಿಯಲ್ಲಿ ಇಟ್ಟಿಗೆ-ಕಟ್ಟಡಗಳನ್ನು ಕಟ್ಟಿರುವುದನ್ನು ಕಾಣಬಹುದು. ಬ್ರಹ್ಮಗಿರಿ ಬೆಟ್ಟದ ಇಳಿಜಾರಿನಲ್ಲಿ ಕಟ್ಟಿರುವ ಚೈತ್ಯಾಕಾರದ ಕಟ್ಟಡ ಇವುಗಳಲ್ಲಿ ಮುಖ್ಯವಾದದ್ದು. ಮೊಳಕಾಲ್ಮೂರು ತಾಲ್ಲೂಕಿನ ಸುತ್ತಮುತ್ತಲ ಪ್ರದೇಶವು ಚಿಕ್ಕ ಚಿಕ್ಕ ಮೋರ್ಯರ ಮನೆಗಳನ್ನು ಕಾಣಬಹುದು. ನೀಲಗಿರಿಯ ಬಡಗರ ಮೋರ್ಯರ ಮನೆಗಳೆಂದು ಕರೆಯುತ್ತಾರೆ. ಇವುಗಳನ್ನು ಪೂರ್ವ ಕಾಲೀನರು ಶವಗಳನ್ನು ಭೂಮ್ಯಂತರ್ಗತಗಳನ್ನಾಗಿ ಮಾಡುತ್ತಿದ್ದುದರ ಸ್ಮಾರಕಗಳೆಂದು ನಿಸ್ಸಂದೇಹವಾಗಿ ಹೇಳಬಹುದು. ಬ್ರಹ್ಮಗಿರಿ, ಸಿದ್ದಾಪುರ, ಜಟಂಗಿ ರಾಮೇಶ್ವರಗಳಲ್ಲಿ ದೊರೆತಿರುವ ಶಾಸನಗಳನ್ನು ಆಳವಾಗಿ ದಪ್ಪವಾಗಿ ಬ್ರಾಹ್ಮಿ ಲಿಪಿ ಮತ್ತು ಪ್ರಾಕೃತ ಮತ್ತು ಖರೋಷ್ಠಿ ಪಾಳಿ ಭಾಷೆಯಲ್ಲಿ ಕೆತ್ತಿಸಿದ್ದಾರೆ. ಈ ಶಾಸನಗಳು 'ಇಸಿಲಾ' ಪಟ್ಟಣದ ಬಗ್ಗೆ ಬೆಳಕನ್ನು ಚೆಲ್ಲುತ್ತವೆ.

ಮೊಳಕಾಲ್ಮೂರು ಬೆಟ್ಟದಲ್ಲಿ ಕದಂಬ ದೊರೆಗಳು ಕಟ್ಟಿಸಿದ ಕೋಟೆಯಿದ್ದು, ಅದು 'ಲುಂಕೆಕೋಟೆ' ಎಂದು ಹೆಸರಾಗಿದೆ. ಜಟಂಗಿರಾಮೇಶ್ವರ ಬೆಟ್ಟದ ಮೇಲೆ ಎತ್ತರದ ಬಂಡೆಯ ಕೆಳಗೆ ಇರುವ ತಣ್ಣೀರು

ದೋಣಿಯ ಬಳಿ ಶ್ರೀರಾಮನು ಜಟಾಯುವಿಗೆ ಅಗ್ನಿ ಸಂಸಾರ ಮಾಡಿದನೆಂಬ ಹೇಳಿಕೆ ಉಂಟು. ಅನಂತರ ಕೆಲವು ದಿನ ಅಲ್ಲಿ ಏಕಾಂತವಾಗಿ ತಂಗಿದ್ದರಿಂದ ಅದಕ್ಕಾಗಿ ಈ ದೋಣಿ 'ಏಕಾಂತ ತೀರ್ಥ''ವೆಂದು ಹೆಸರಾಗಿದೆ ಎಂದು ಐತಿಹ್ಯವಿದೆ.

ಬುದ್ಧನಿಗೆ ಏಕಾಂತನೆಂದು ಹೆಸರಿದ್ದು, ಬೌದ್ಧರು ನೆಲಸಿದ ಸ್ಥಳವಾದ್ದರಿಂದ 'ಏಕಾಂತ ತೀರ್ಥ' ಹೆಸರು ಬಂದಂತೆ ಕಾಣುತ್ತದೆ. ಈ ಬೆಟ್ಟದ ಮೇಲೆ 'ಸೀತಾದೋಣಿ' ಎಂಬ ನೀರಿನ ದೋಣಿ ಇದೆ. ಈ ಪ್ರದೇಶದಲ್ಲಿ 'ಅಕ್ಷರಗುಂಡು', ಎಮ್ಮೆತಮ್ಮನ ಗುಂಡು ಹಾಗೆ ಬಳೆಗಾರರಗುಂಡು ಎಂಬ ಮೂರು ಬಂಡೆಗಲ್ಲು ಶಾಸನಗಳು ಲಭ್ಯವಾಗಿದೆ. ಇವು ಬೌದ್ಧಧರ್ಮದ ಕುರುಹುವಿಗೆ ಸಾಕ್ಷಿಯಾಗಿವೆ. ಇಂತಹ ಚಾರಿತ್ರಿಕ ಪರಿಸರದಲ್ಲಿ ಈ ತಾಲ್ಲೂಕು ಪ್ರಸಿದ್ಧವಾಗಿದೆ. ಮೊಳಕಾಲ್ಮೂರು ಪ್ರದೇಶವನ್ನು ಶಾತವಾಹನರು ಆಳ್ವಿಕೆ ಮಾಡಿದ್ದರು. ಅಲ್ಲದೆ ಈ ಪ್ರದೇಶವು ರಾಷ್ಟ್ರಕೂಟರ ಆಳ್ವಿಕೆಗೂ ಸೇರಿತ್ತು. ೧೦ನೆಯ ಶತಮಾನದಲ್ಲಿ ನೊಳಂಬವಾಡಿ ೩೨೦೦೦ ಸೀಮೆಯಲ್ಲಿ ಸೇರ್ಪಡೆಗೊಂಡಿತ್ತು. ತದನಂತರ ಕಲ್ಯಾಣಿ ಚಾಲುಕ್ಯರ, ಹೊಯ್ಸಳರ ಹಾಗೂ ವಿಜಯನಗರ ಅರಸರ ಆಳ್ವಿಕೆಗೂ ಒಳಪಟ್ಟಿತ್ತು. ಮುಂದೆ ಇದು ರಾಯದುರ್ಗದ ಪಾಳೆಗಾರರ ಆಡಳಿತಕ್ಕೆ ಸೇರಿತು. ಹಟ್ಟಿಯ ಪಾಳೇಗಾರರ ಮಲ್ಲಪ್ಪನಾಯಕನು ಈ ಪ್ರದೇಶವನ್ನು ರಾಯದುರ್ಗದ ಬೊಮ್ಮನಾಯಕನಿಗೆ ೨೦೦೦ ಕಪ್ಪು ಹಸುಗಳನ್ನು ೧೦೦೦ ಬಿಳಿ ಹಸುಗಳನ್ನು ಕೊಟ್ಟು ಪಡೆದುಕೊಂಡು ಇಲ್ಲಿನ ಬೆಟ್ಟದ ಮೇಲಣ ಕೋಟೆ ಹಾಗೂ ಸರೋವರಗಳನ್ನು ಕಟ್ಟಿಸಿದರು. ಮುಂದೆ ಇದು ಬಿಚ್ಚುಗತ್ತಿ ಭರಮಣ್ಣ ನಾಯಕನ ಕಾಲದಲ್ಲಿ ಕ್ರಿ.ಶ.೧೬೮೯-೧೭೨೧) ಚಿತ್ರದುರ್ಗದ ಪಾಳೇಗಾರರ ಆಳ್ವಿಕೆಯಲ್ಲಿ ಲೀನವಾಯಿತು. ಅನಂತರ ಹೈದರ್ , ಟಿಪ್ಪು, ಬ್ರಿಟಿಷರ, ಮೈಸೂರು ಒಡೆಯರ ಆಳ್ವಿಕೆಗೆ ಒಳಗಾಗಿ ೧೮೮೬ರಲ್ಲಿ ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಗೆ ಮೊಳಕಾಲ್ಮೂರು ಪ್ರದೇಶವು ಸೇರಿತು.

೨.೩. ಸ್ವಾತಂತ್ರ್ಯ ಸಂಗ್ರಾಮ

ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಮೊಳಕಾಲ್ಮೂರು ತಾಲ್ಲೂಕು ತನ್ನ ಶಕ್ತಿಮೀರಿ ಪಾತ್ರವಹಿಸಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಗಳಾಗಿ ಜೈಲುವಾಸ ಅನುಭವಿಸಿದ ದೇಶಭಕ್ತರು ಕೆಲವರು ಇರುವುದು ತಾಲ್ಲೂಕಿನ ಹೆಮ್ಮೆಯ ಸಂಗತಿಯೇ ಸರಿ. ಸ್ವಾತಂತ್ರ್ಯ ಯೋಧರಲ್ಲಿ ಬಿ.ಟಿ.ತಿಪ್ಪೇರುದ್ರಪ್ಪ, ಗುರ್ರಂ ನರಸಿಂಹಯ್ಯ ಹಾಗೂ ಅನ್ನದಾನಿ ಆರ್. ವೀರಭದ್ರಪ್ಪ, ಎನ್.ಸಿ.ಅಯ್ಯಣ್ಣ, ಕೆರೆಕೊಂಡಾಪುರದ ಎಚ್.ಎಸ್.ಬಸಣ್ಣನವರು ಪ್ರಮುಖರಾಗಿದ್ದಾರೆ.''[೫]

೨.೪. ಮೊಳಕಾಲ್ಮೂರು ತಾಲ್ಲೂಕಿನ ದ್ವಿಭಾಷಿಕ ಪರಿಸರ

ಮನುಷ್ಯ ನಾಗರೀಕನಾಗುತ್ತಾ ಹೋದಂತೆ ಆತನ ಚಿಂತನೆಗಳು ಬೆಳೆದವು. ಆದ್ದರಿಂದ ವಿಜ್ಞಾನ ಮತ್ತು ತಂತ್ರಜ್ಞಾನ ಬೆಳೆದು ಮನುಷ್ಯನ ಬದುಕಿನಲ್ಲಿ ಮಹತ್ತರ ಬದಲಾವಣೆಗಳಾದವು. ಮನುಷ್ಯ

ಬೆಳವಣಿಗೆಯ ಹಂತಗಳು ಮನುಷ್ಯನನ್ನು ಸಂಘಜೀವಿಯಾಗಿ ಬದುಕುವಂತೆ ಮಾಡಿದವು. ಹೀಗೆ ಸಮಾಜದಲ್ಲಿ ಬದುಕುವ ಮನುಷ್ಯನಿಗೆ ಭಾಷೆಯೊಂದು ಸಂವಹನ ಮಾಧ್ಯಮವಾಗಿ ಮನುಷ್ಯನ ಯೋಚನೆ, ಚಿಂತನೆಗಳು ಎಲ್ಲವೂ ಭಾಷೆಯೊಂದರಿಂದ ಅಭಿವ್ಯಕ್ತಿಯಾಗಲು ಸಾಧ್ಯವಾಯಿತು. ಹೀಗೆ ಮನುಷ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಯುಗದಲ್ಲಿ ತನ್ನ ಮಾತೃಭಾಷೆಯೊಂದೇ ಕಲಿತು ಒಂದೇ ರೀತಿಯಾಗಿ ಬದಕುಲಾರ ಬಾಳಲಾರ ತನ್ನ ಅವಶ್ಯಕತೆಗಳನ್ನು ಪೂರೈಸಲು ಅಲ್ಲಿನ ಪ್ರಾದೇಶಿಕ ಭಾಷೆಯನ್ನು ಕಲಿಯುವುದು ಅನಿವಾರ್ಯವಾಗುತ್ತದೆ. ಅಂತಹ ಸಂದರ್ಭದಲ್ಲಿ ದ್ವಿಭಾಷಿಕ ಸಮುದಾಯಗಳು ಕಾಣಿಸಿಕೊಳ್ಳುತ್ತವೆ. ವಲಸೆ ಬಂದಂತಹ ಸಮುದಾಯಗಳು ತಮ್ಮ ಮಾತೃ ಭಾಷೆಯೊಂದಿಗೆ ಅಲ್ಲಿನ ಪ್ರಾದೇಶಿಕ ಭಾಷೆಯನ್ನು ಅಥವಾ ಆ ಪ್ರದೇಶದಲ್ಲಿ ಬಳಸುವ ಭಾಷೆಗಳನ್ನು ಕಲಿತು ವ್ಯವಹರಿಸುವುದು ಅನಿವಾರ್ಯವಾಗುತ್ತದೆ. ಇಂತಹ ದ್ವಿಭಾಷಾ ಸಮುದಾಯಗಳಲ್ಲಿ ಯಾವ ರೀತಿ ಭಾಷೆ ಬಳಕೆಯಾಗುತ್ತದೆ ಮತ್ತು ಬದಲಾವಣೆಯ ಪ್ರಕ್ರಿಯೆಗಳೇನು? ಎಂಬ ಅಧ್ಯಯನವು ಕುತೂಹಲವನ್ನು ಮೂಡಿಸುತ್ತದೆ. ದ್ವಿಭಾಷಿಕ ಸಮುದಾಯಗಳಲ್ಲಿ ತಮ್ಮ ಮಾತೃ ಭಾಷೆಯನ್ನು ಕೌಟುಂಬಿಕ ವಲಯಗಳಲ್ಲಿ ಉಳಿಸಿಕೊಂಡು ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಕಾರಣಗಳಿಂದ ಪ್ರಾದೇಶಿಕ ಭಾಷೆಯನ್ನು ವ್ಯವಹಾರಿಕ ವಲಯಗಳಲ್ಲಿ ಬಳಸುವುದು ಕಂಡುಬರುತ್ತದೆ. ಇಂತಹ ಅಧ್ಯಯನಗಳನ್ನು ಸಾಮಾಜಿಕ ಭಾಷಾಶಾಸ್ತ್ರದ ಹಿನ್ನಲೆಯಲ್ಲಿ ಅಧ್ಯಯನ ಮಾಡಿದರೆ ಉಪಯುಕ್ತವೆನಿಸುತ್ತದೆ. ಸಮಾಜ ಮತ್ತು ಭಾಷೆ ಇವೆರಡರ ಆಂತರಿಕ ಸಂಬಂಧ ವಿಶಿಷ್ಟವಾದುದು. ಭಾಷೆಯಿಂದ ಸಮಾಜದ ರಚನಾ ವ್ಯವಸ್ಥೆಯನ್ನು ಬಹುಸುಲಭವಾಗಿ ಅರಿಯಬಹುದು. ವ್ಯಕ್ತಿಯನ್ನು ಸಮಾಜದಿಂದ ಬೇರ್ಪಡಿಸಲಾಗದು ಮತ್ತು ವ್ಯಕ್ತಿಯಿಂದ ಭಾಷೆಯನ್ನು ಬೇರ್ಪಡಿಸಲಾಗದು. ಭಾಷೆ ಸಮಾಜದ ಎಲ್ಲಾ ಚಟುವಟಿಕೆಯ ಕೇಂದ್ರ. ಸಮಾಜದ ಬೆಳವಣಿಗೆಗೆ ಹಾಗೂ ಬದಲಾವಣೆಗೆ ಭಾಷೆ ಅನಿವಾರ್ಯ. ಸಮಾಜದಲ್ಲಿ ಒಂದೊಂದು ಸಮುದಾಯಕ್ಕೆ ಬಾಷಾ ಭಿನ್ನತೆಯನ್ನು ಗುರುತಿಸಬಹುದು. ಮೊಳಕಾಲ್ಮೂರು ಪ್ರದೇಶದ ಪರಿಸರದಲ್ಲಿ ಕೆಲವರು ಕೌಟುಂಬಿಕ ವಲಯದಲ್ಲಿನ ಭಾಷೆ, ತೆಲುಗು ಮತ್ತು ವ್ಯವಹಾರಿಕ ವಲಯದ ಭಾಷೆ ಪ್ರಾದೇಶಿಕ ಭಾಷೆಯಾದ ಕನ್ನಡವಾಗಿದೆ. ಇವರ ಕೌಟುಂಬಿಕ ವಲಯದಲ್ಲಿ ಬಳಕೆಯಾಗುವ ತೆಲುಗು ಭಾಷೆ, ಶಿಷ್ಟ ತೆಲುಗಿಗಿಂತ ಭಿನ್ನವಾಗಿ ಕಂಡುಬರುತ್ತದೆ. ಈ ಭಾಷೆಯ ಮೇಲೆ ಪ್ರಾದೇಶಿಕ ಭಾಷೆಯಾದ ಕನ್ನಡ ಪ್ರಭಾವ ಬೀರಿ ಕನ್ನಡ ಮಿಶ್ರಿತ ತೆಲುಗು ಕುಟುಂಬದಲ್ಲಿನ ಆಪ್ತರು, ರಕ್ತ ಸಂಬಂಧಿಗಳು. ಬಂಧು ಬಳಗದವರು ಜೊತೆಗೆ ಬಳಸುವ ಭಾಷೆ ತೆಲುಗು ಆಗಿರುತ್ತದೆ.

ಒಂದು ಭಾಷಿಕ ಪ್ರದೇಶದಲ್ಲಿ ಹಲವಾರು ಕಾರಣಗಳಿಂದ ಬೇರೆ ಭಾಷೆಯ ಸ್ಥಳನಾಮಗಳು ಕಂಡುಬರಲು ಸಾಧ್ಯ. ದ್ವಿಭಾಷಿಕ ವಲಯದಲ್ಲಿ ಕೊಂಚ ಮಟ್ಟಿಗಾದರೂ ಪರಸ್ಪರ ಎರಡು ಭಾಷೆಗಳ ನಡುವೆ ನುಡಿಬೆರಕೆ, ನುಡಿಮಿಶ್ರಣ, ನುಡಿಜಿಗಿತಗಳು ಉಂಟಾಗಿರುವುದು ಸಹಜ ಪ್ರಕ್ರಿಯೆಯಾಗಿದೆ.

ಸ್ಥಳನಾಮಗಳನ್ನು ದ್ವಿಭಾಷಿಕ ವಲಯದಲ್ಲಿ ನೋಡುವಾಗ ಅಲ್ಲಿ ನಡೆಯುವ ದ್ವಿಭಾಷಿಕ ವಲಯದ ನುಡಿಬೆರಕೆ, ನುಡಿ ಜಗಿತವನ್ನು ಗುರುತಿಸುವುದು ಸೂಕ್ತವೆನಿಸುತ್ತದೆ. ಕಾರಣ ನುಡಿಬೆರಕೆ, ನುಡಿಜಗಿತವನ್ನು ಇಲ್ಲಿ ಪೂರ್ವ ಪ್ರವೇಶಿಕವಾಗಿ ನೀಡಲಾಗಿದೆ.

ಇಂಗ್ಲೀಷ್ ನ Code mixing ಗೆ ಸಂವಾದಿಯಾಗಿ ನುಡಿಬೆರಕೆ, ನುಡಿಮಿಶ್ರಣ, ಭಾಷಾ ಮಿಶ್ರಣ ಎಂದೂ, Code swtchingಗೆ ಸಂವಾದಿಯಾಗಿ ನುಡಿಜಗಿತ, ನುಡಿ ಪಲ್ಲಟ ಎಂಬ ಪದಗಳನ್ನು ಕನ್ನಡದ ಸಂದರ್ಭದಲ್ಲಿ ಸಾಮಾಜಿಕ ಭಾಷಾಶಾಸ್ತ್ರದ ಬರಹಗಳಲ್ಲಿ ಬಳಸಲಾಗುತ್ತಿದೆ. ದ್ವಿಭಾಷಿಕ ಸನ್ನಿವೇಶಗಳಲ್ಲಿ ಉಂಟಾಗುವ ಈ ಭಾಷಾ ಪ್ರಕ್ರಿಯೆಗಳ ಹಿಂದೆ ಭಾಷಾ ಆಯ್ಕೆಯು ಪ್ರಧಾನವಾಗಿದ್ದು, ದ್ವಿಭಾಷಿಕರು ಯಾವ ಸಂದರ್ಭದಲ್ಲಿ ಎಷ್ಟು ಹೇಗೆ ಭಾಷೆಯನ್ನು ಬಳಸುತ್ತಾರೆ. ಭಾಷೆಯನ್ನು ಬಳಸುವುದರ ಮೂಲಕ ತನ್ನ ಸ್ಥಾನವನ್ನು ಹೇಗೆ ಗುರುತಿಸಿಕೊಳ್ಳಬಹುದು ಎನ್ನುವುದು ಸಹ ಮುಖ್ಯವಾಗಿರುತ್ತದೆ. ಒಬ್ಬ ಭಾಷಿಕನ ಭಾಷಾ ಆಯ್ಕೆ ಸಾಮಾಜಿಕ ಪಾತ್ರವನ್ನು ಆಯ್ಕೆ ಮಾಡಿಕೊಳ್ಳುವಾಗ ಭಾಷೆಯು ಅದೇ ಪ್ರಮಾಣದಲ್ಲಿ ಆಯ್ಕೆಯಾಗುತ್ತಿರುತ್ತದೆ. ಈ ಭಾಷಾ ಆಯ್ಕೆಯು ವ್ಯಕ್ತಿಯ ಜಾತಿ, ವಯಸ್ಸು, ಲಿಂಗ ಶಿಕ್ಷಣ, ಸಾಮಾಜಿಕ ಸ್ಥಾನಮಾನಗಳು, ಅವರು ವಾಸಿಸುವ ಸ್ಥಳ ಮುಂತಾದ ಅಂಶಗಳನ್ನು ಅವಲಂಬಿಸಿರುತ್ತದೆ. ಕನ್ನಡದ ಎಲ್ಲೆ ಮತ್ತು ತೆಲುಗಿನ ಎಲ್ಲೆ ರಾಜಕೀಯ ಗಡಿಯನ್ನು ಮೀರಿ ನಿಂತ ಪ್ರದೇಶಗಳಲ್ಲಿ ಬಹುಮಟ್ಟಿಗೆ ನುಡಿಮಿಶ್ರಣದ ಸಂದರ್ಭಗಳು ಕಂಡುಬರುವುದು ಕಾಣುತ್ತೇವೆ. ದಿನನಿತ್ಯದ ವ್ಯವಹಾರಗಳಲ್ಲಿ ನುಡಿಬೆರಕೆ ಮತ್ತು ನುಡಿಮಿಶ್ರಣ, ನುಡಿಜಗಿತಗಳು ಕಂಡುಬರುತ್ತವೆ. ವ್ಯವಹಾರದ ಸಂದರ್ಭದಲ್ಲಿ ತೆಲುಗು ಮಾತೃ ಭಾಷಿಕರು ಕನ್ನಡಿಗರೊಂದಿಗೆ, ಕನ್ನಡ ಮಾತೃ ಭಾಷಿಕರು ತೆಲುಗರೊಂದಿಗೆ ಸಂವಹನ ಏರ್ಪಡಿಸಿಕೊಂಡಾಗ ಸಹಜವಾಗಿಯೇ ನುಡಿ ಜಗಿತ, ನುಡಿಬೆರಕೆಗಳು ಉಂಟಾಗುತ್ತವೆ. ಭಾಷಿಕರು ತಮಗೆ ತಿಳಿದ ಭಾಷೆಯಿಂದ ತಿಳಿಯದ ಭಾಷೆಯ ಕೆಲವು ಕೊರತೆಗಳಿಂದ ಅರೆ ಕೊರೆಯಾಗಿ ತಿಳಿಯದ ಭಾಷೆಗೆ ತುಂಬುವುದು ಮೊಳಕಾಲ್ಮೂರು ಪರಿಸರದ ಗಡಿಭಾಗದ ಸ್ಥಳಗಳಲ್ಲಿ ಕಂಡುಬರುತ್ತದೆ. ಅಂತಹ ಮಾದರಿಗಳು ಇಲ್ಲಿವೆ.

ದಿನಾಲಿ ಬಸ್ ಎಕ್ಕಿಕೊಂಡೇ ನಮ್ಮೂರಿಗೆ ಹೋಗಾದು

ಅವನಿಗೇನು ವಂಕಾಯಿಗೊತ್ತು

ಆಪಿಲ್ಲ ಒಂದೀಟು ಕೆಲಸ ಮಾಡಕಿಲ್ಲ

ರಾಂಡಿಸಾರ್ ಇದಿ ರಾಜ್ಯಲಕ್ಷ್ಮಿ ಲಾಟರಿ

ಎಂಬಲ್ಲಿ ದಿನನಿತ್ಯದ ವ್ಯವಹಾರ, ವ್ಯಾಪಾರ ಮುಂತಾದ ಕಡೆ ಸಾಮಾನ್ಯವಾಗಿ ಭಾಷೆಯು ಬೆರೆತು ಇನ್ನೊಂದು ಭಾಷೆಯೊಂದಿಗೆ ಜಗಿಯುವ ಸಂದರ್ಭಗಳಿರುತ್ತವೆ. ಎರಡೂ ಭಾಷೆಗಳು ತಮ್ಮ ತೆರುಪುಗಳನ್ನು ತುಂಬಿಕೊಳ್ಳಲು, ಕೊಡುಕೊಳ್ಳುವಿಕೆಯ ಪ್ರಕ್ರಿಯೆಯನ್ನು ಕಾಣಬಹುದು. ಈ ಮೇಲಿನ ಹಿನ್ನಲೆಯೊಂದಿಗೆ ದ್ವಿಭಾಷಿಕ ವಲಯದಲ್ಲಾದಂತಹ ನುಡಿಬೆರಕೆ ಮತ್ತು ನುಡಿಜಗಿತಗಳನ್ನು ಸ್ವಲ್ಪ ಮಟ್ಟಿಗಾದರೂ ಬೇರೆ

ಬೇರೆ ರೂಪಗಳಲ್ಲಿ ಸ್ಥಳನಾಮಗಳಲ್ಲಿ ಗುರುತಿಸಲು ಸಾಧ್ಯವಿದೆ. ಮೊಳಕಾಲ್ಮೂರು ತಾಲ್ಲೂಕಿನ ಕೆಲವು ಹಳ್ಳಿಗಳು ಭಾಗಶಃ ತೆಲುಗಿನ ಪ್ರಭಾವಕ್ಕೊಳಪಟ್ಟಿವೆ. ಈ ಕಾರಣದಿಂದಾಗಿ ಪರಸ್ಪರ ದ್ವಿಭಾಷಿಕ ವಲಯ ಪ್ರೇರಣೆ ಪ್ರಭಾವದಿಂದ ಸ್ಥಳನಾಮಗಳ ಮೇಲೆ ಸಾಕಷ್ಟು ಪ್ರಭಾವ ಬೀರಿದೆಯೆಂಬುದನ್ನು ಇಲ್ಲಿ ಗುರುತಿಸುವ ಪ್ರಯತ್ನವಿದೆ. ತೆಲುಗು ಭಾಷೆಯನ್ನು ಕರ್ನಾಟಕದ ಗಡಿಜಿಲ್ಲೆಗಳಲ್ಲಿ ಹೆಚ್ಚಾಗಿ ಬಳಸುವವರು ಇದ್ದಾರೆ. ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಹೆಚ್ಚಾಗಿ ತೆಲುಗು ಭಾಷೆಯನ್ನು ಬಳಸುವ ಜನಾಂಗವನ್ನು ಗುರುತಿಸಬಹುದು. ಭಾರತದಲ್ಲಿ ಹಿಂದಿ ಭಾಷೆಯ ನಂತರ ಬಹುಸಂಖ್ಯಾತರಿಂದ ಬಳಕೆಯಾಗುತ್ತಿರುವ ಭಾಷೆ ಎಂದರೆ ತೆಲುಗು. ಚಾರಿತ್ರಿಕವಾಗಿ ಅಧ್ಯಯನ ಮಾಡಿದಾಗ ತೆಲುಗು ಮತ್ತು ಕನ್ನಡ ಭಾಷೆಗಳು ರಚನೆಯಲ್ಲಿ ಸಮಾನತೆಗಳು ಹೆಚ್ಚು. ಮೊಳಕಾಲ್ಮೂರು ತಾಲ್ಲೂಕು ಪ್ರದೇಶದಲ್ಲಿ ನೆಲೆಸಿರುವ ಎಲ್ಲಾ ಜನಾಂಗಗಳಿಗೆ ತೆಲುಗು ಭಾಷೆಯ ಪರಿಚಯವಿದ್ದರೂ ವಿಶೇಷವಾಗಿ ತೆಲುಗು ಭಾಷೆ ಬುಡಕಟ್ಟು ಸಮುದಾಯದ ಮ್ಯಾಸನಾಯಕರಲ್ಲಿ ಹೆಚ್ಚಾಗಿ ಬಳಕೆಯಾಗುತ್ತದೆ. ಇವರು ಕೌಟುಂಬಿಕ ವಲಯದಲ್ಲಿ ತೆಲುಗು ಭಾಷೆಯನ್ನು ಬಳಸುತ್ತಾರೆ. ವ್ಯವಹಾರಿಕ ವಲಯದಲ್ಲಿ ಕನ್ನಡ ಭಾಷೆಯನ್ನು ಬಳಸುತ್ತಾರೆ. ವ್ಯವಹಾರಿಕ ವಲಯಗಳಾದ ಸಾರ್ವಜನಿಕ ಸ್ಥಳಗಳಲ್ಲಿ ಆಫೀಸು, ಶಾಲಾ ಕಾಲೇಜುಗಳು, ಮಾರುಕಟ್ಟೆಗಳಲ್ಲಿ, ಸಿನಿಮಾ ಮಂದಿರ, ಆಟದ ಮೈದಾನ, ಹೋಟಲ್ ಮುಂತಾದವುಗಳಲ್ಲಿ ಪ್ರಾದೇಶಿಕ ಭಾಷೆ ಕನ್ನಡವಾಗಿರುವುದು ಕನ್ನಡ ಭಾಷೆಯನ್ನು ಬಳಸುತ್ತಾರೆ. ದ್ವಿಭಾಷಿಕರು ಕನ್ನಡ ಮತ್ತು ತೆಲುಗು ಮಾತನಾಡುವರು. "ವಿಜಯನಗರ ಪ್ರಾರಂಭ ಕಾಲದ ರಾಜರುಗಳ ಆಳ್ವಿಕೆಯ ಕಾಲದಲ್ಲಿ ತೆಲುಗು ಮಾತನಾಡುವ ಪ್ರದೇಶವು ಕನ್ನಡ ಮಾತನಾಡುವ ಪ್ರದೇಶಗಳು ನಿಕಟ ಸಂಪರ್ಕ ಹೊಂದಿದ್ದವು. ಅದರ ರಾಜಧಾನಿಯು ದ್ವಿಭಾಷಾ ಪ್ರದೇಶದಲ್ಲಿ ನೆಲೆಗೊಂಡಿತ್ತು. ವಿಜಯನಗರ ಸಾಮ್ರಾಜ್ಯದಲ್ಲಿ ಅರ್ಧದಷ್ಟು ಭಾಗವು ತೆಲುಗು ಮಾತನಾಡುವ ಪ್ರದೇಶಗಳಿಂದ ಕೂಡಿತ್ತಾದರೂ ವಿಜಯನಗರದ ಮೊದಲನೆಯ ರಾಜವಂಶವು ಕನ್ನಡ ವಿದ್ವಾಂಸರಿಗೆ ಆಶ್ರಯ ನೀಡಿತ್ತೆಂದು ಕೆ. ಈಶ್ವರದತ್ತ ಅವರು ತಮ್ಮ ವಿಜಯನಗರ ಸಾಮ್ರಾಜ್ಯದ ಕಾಲದ ತೆಲುಗು ಸಾಹಿತ್ಯ, ಸ.ದೀಕ್ಷಿತ್ ಎಂಬ ಲೇಖನದಲ್ಲಿ ಹೇಳಿದ್ದಾರೆ." ವಿಜಯನಗರ ಕಾಲದಿಂದಲೇ ಈ ಪ್ರದೇಶದ ಮೇಲೆ ತೆಲುಗಿನ ಪ್ರಭಾವ ಬೀರಿದೆ ಎಂದು ಹೇಳಲಾಗುವುದು.

೨.೫. ಕವಿ ಕಾಳಿದಾಸನನ್ನು ಸ್ತುತಿಸಿದ ಶ್ಲೋಕ

ಮೊಳಕಾಲ್ಮೂರು ಬೆಟ್ಟದ ಮೇಲಿನ ಕೆರೆಯ ಬಳಿಯಿರುವ ಬಂಡೆಯಲ್ಲಿನ ಶಾಸನವು "ಶ್ರೀಮದ್ದ ಮಹಾನಾಯಕಚಾರ್ಯ ಹಟ್ಟಿ(ನಾಯಕನಹಟ್ಟಿ) ಕಸ್ತೂರಿ ಮಲ್ಲಪ್ಪನಾಯಕನು ತನ್ನ ತಾಯಿಯಾದ ಲಕ್ಷ್ಮಮ್ಮ ನಾಗತಿಯ ಹೆಸರಿನಲ್ಲಿ ಕ್ರಿ.ಶ.೧೬೨೦ರಲ್ಲಿ ಕೆರೆಯನ್ನು ನಿರ್ಮಿಸಿದ ವಿಚಾರವನ್ನು ಪ್ರಸ್ತಾಪಿಸುತ್ತದೆ".[೬] ಈಗಲೂ ಬೆಟ್ಟದ ಮೇಲೆ ಕೆರೆಯಿದೆ. ಕೆರೆಯ ಮಧ್ಯೆ ಇರುವ ಹುಟ್ಟು ಗುಂಡಿನ ಮೇಲೆ, ಒಂದು ಆನೆಯ ಚಿತ್ರವಿದೆ. ಆನೆಯ ಕಾಲಿನ ಮೇಲೆ ಕಾಳಿದಾಸನ ಒಂದು ಶ್ಲೋಕವನ್ನು ಸಂಸ್ಕೃತ ಹಾಗೂ ಕನ್ನಡದಲ್ಲಿ

ಬರೆಯಲಾಗಿದೆ. ಶ್ಲೋಕದ ವಿಶೇಷವೇನೆಂದರೆ, ಮೊದಲನೇಯ ಅಕ್ಷರದಿಂದ ಓದಿದರೆ ಏನು ಅರ್ಥಬರುತ್ತದೋ ಅದೇ ಅರ್ಥ ಕೊನೆಯ ಅಕ್ಷರದಿಂದ ಓದಿದರೂ ಬರುತ್ತದೆ.

ಶ್ಲೋಕ

ಕಂಜರಂ ಪುರತೇಂದ್ರಚಂ ಮಹೇಂದಾಳಿಸದಾಳಿಕಾ
ಕಾಳಿದಾಸಳಿದಾಂ ಹೇಮಚಂದ್ರಂ ತೇರ ಪುರಂಜಕಂ

ಶ್ಲೋಕದ ಅರ್ಥ ಹೀಗಿದೆ "ಹೇ ಆನಂದದಾತನಾದ ಕಾಳಿದಾಸನೇ, ಮನಸ್ಸಂತೋಷವನ್ನು ಉಂಟುಮಾಡುವ ನಿನ್ನ ಶ್ಲೋಕವು, ಸುಖವನ್ನು ಜಯವನ್ನು ಮತ್ತು ಐಶ್ವರ್ಯವನ್ನು ಕೊಡುತ್ತದೆ. ಅಲ್ಲದೆ ಶತೃಗಳಿಗೂ ಕೂಡಾ ಸಂತೋಷವನ್ನಿಯುತ್ತದೆ. ಈ ಪುರದಲ್ಲಿ ನಿನ್ನ ಮಮತೆಯು ತೋರಲ್ಪಡುತ್ತದೆ. ನೀನು ಕವಿ ವೃಂದದಲ್ಲಿ ಅಮಿತವಾಗಿ ಗೌರವಿಸಲ್ಪಟ್ಟವನು"[೭] ಎನ್ನುವ ಅರ್ಥದಿಂದ ಕೂಡಿದ ಈ ಶ್ಲೋಕವನ್ನು ಗಮನಿಸಿದಾಗ ಹುಲ್ಲೂರು ಶ್ರೀನಿವಾಸ ಜೋಯಿಸರು ಕಾಳಿದಾಸನು ಜಟಂಗಿ ರಾಮೇಶ್ವರ ಬೆಟ್ಟಕ್ಕೆ ಭೇಟಿ ನೀಡಿ ಒಂದು ವರ್ಷ ಕಾಲ ವಾಸವಾಗಿದ್ದನೆಂದು ಅಭಿಪ್ರಾಯಪಡುತ್ತಾರೆ. "ಈ ಕಾಳಿದಾಸನು ತನ್ನ ಮೇಘದೂತ ಕಾವ್ಯದಲ್ಲಿ ಜಟಂಗಿ ರಾಮೇಶ್ವರ ಬೆಟ್ಟವನ್ನು "ಜನಕತನಯಾಸ್ನಾವ ಪುಣ್ಯೋದಕೇಷುಃ ಸಿಗ್ದಚ್ಛಾಯಾತರಾಘುರಾಮಗಿ ರ್ಯಾಶ್ರಮೇಘು"[೮] ಎಂದು ವರ್ಣಿಸಿದ್ದಾರೆ.

೨.೬. ಮೊಳಕಾಲ್ಮೂರು ತಾಲ್ಲೂಕಿನ ಸಾಂಸ್ಕೃತಿಕ ವೀರರು

ಮಾನವ ಇತಿಹಾಸವನ್ನೊಮ್ಮೆ ಅವಲೋಕಿಸಿದರೆ, ಅವನ ಏಳು ಬೀಳಿನ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಕಾಣುತ್ತೇವೆ. ಮನುಷ್ಯನೇ ದೈವ ಸ್ವರೂಪವಾಗಿ ದೈವವೇ ಮನುಷ್ಯರೂಪವಾದ ಪರಿವರ್ತನೆಯಿಂದ ಪರಂಪರೆಯುದ್ದಕ್ಕೂ ಕೊಡುಕೊಳ್ಳುವಿಕೆಗಳನ್ನು ಗುರುತಿಸಬಹುದು. ಇಂತಹ ಸಾಧ್ಯತೆಗಳಿಂದಾಗಿಯೇ ಜನಪದರ ಸ್ಮೃತಿ ಪಟಲದಲ್ಲಿ ಸಾಂಸ್ಕೃತಿಕ ವೀರರನ್ನು ಕಾಣಬಹುದಾಗಿದೆ. ಸಾಂಸ್ಕೃತಿಕ ಸಂಘರ್ಷದ ಚಿತ್ರಣವನ್ನು ನೋಡಬಹುದಾಗಿದೆ.

ಯಾವುದೋ ಒಂದು ಕಾಲಘಟ್ಟದಲ್ಲಿ ಜನರನ್ನು ಹಿಂಸಿಸುತ್ತಿರುವ ರಾಕ್ಷಸರನ್ನು ಸಂಹಾರ ಮಾಡಿಯೋ ದೈತ್ಯ ಪ್ರಾಣಿಗಳನ್ನು ಕೊಲ್ಲುವ ಮೂಲಕ ಜನರ ಹಿತವನ್ನು ಕಾಪಾಡಿಯೋ ಆ ಜನರ ಪಾಲಿಗೆ ಭೂಮಿಯ ಮೇಲಿನ ಸಾಕ್ಷಾತ್ ದೈವವಾಗಿ ಬಿಡುತ್ತಾನೆ. ಅವನು ಮಾನವನಾಗಿದ್ದರೂ ಅತಿಮಾನುಷನಾಗಿ ಆ ಕ್ಷಣಕ್ಕೆ ಗೋಚರಿಸುತ್ತಾನೆ. ಆ ಅತಿಮಾನಷತೆಯೇ ಜನರಲ್ಲಿ ಭಯ-ಭಕ್ತಿ, ಸಮರ್ಪಣಾ ಭಾವವನ್ನು ಒಡಮೂಡಿಸುವ ಜೊತೆಗೆ ಅವನ ಮನದೊಳಗೆ ಮೆಲುಕು ಹಾಕುವ ಆಹಾರವಾಗಿ ಕಾವ್ಯ, ಕಥೆ, ಐತಿಹ್ಯ, ಪುರಾಣವಾಗಿ ಅವುಗಳ ನಾಯಕನಾಗುತ್ತಾನೆ. ಇಂತಹ ಸಾಂಸ್ಕೃತಿಕ ನಾಯಕರು (ವೀರರು) ನಮ್ಮ ಜನಪದರನೆನಪಿನ ತಿಜೂರಿ(ಆಳ)ಯಲ್ಲಿ ಅಚ್ಚಳಿಯದೇ ಉಳಿದಿದ್ದಾರೆ.

ಅಂತಹ ನಾಯಕರ(ವೀರರ) ಬಗೆಗೆ ಅಧ್ಯಯನ ಮಾಡುವುದು ಇಂದು ಎಂದಿಗಿಂತಲೂ ಅತ್ಯಾವಶ್ಯಕವಾಗಿದೆ. ಮೊಳಕಾಲ್ಮೂರು ಪರಿಸರದಲ್ಲಿ ಜನರ ಬಾಯಲ್ಲಿ ಮನದಲ್ಲಿ ನಿತ್ಯಜಪವಾಗಿರುವ 'ನುಂಕೇಮಲೆ ಸಿದ್ದೇಶ್ವರ'ನೂ ಅಂತಹ ಒಬ್ಬ ಶಕ್ತಿಶಾಲಿ ಸಾಂಸ್ಕೃತಿಕ ವೀರ(ನಾಯಕ) ಅಂತಹ ನಾಯಕ ಜನಮನದಲ್ಲಿ ದಾಖಲಾದದ್ದನ್ನು ಹೊರತುಪಡಿಸಿದರೆ, ಲಿಖಿತವಾಗಿ ದಾಖಲಾದದ್ದು ವಿರಳ. ಭೈರವಾರಾಧನೆ ಕೇವಲ ಕರ್ನಾಟಕದಲ್ಲಿ ಮಾತ್ರ ಕಂಡುಬರುವುದಿಲ್ಲ. ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡುಗಳಲ್ಲಿಯೂ ಬಹುತೇಕ ಭಾರತಾದ್ಯಂತ ಭೈರವಾರಾಧನೆಯ ಕುರುಹುಗಳನ್ನು ನೋಡಬಹುದಾಗಿದೆ. ''ಊರಿಗೊಂದು ಬೋರೇದೇವರ ಗುಡಿ' ಎಂಬ ಗಾದೆಯನ್ನು ನೋಡಿದರೆ, ಕರ್ನಾಟಕದಲ್ಲಿ ಭೈರವ ದೇವಸ್ಥಾನದ ಬಾಹುಳ್ಯವನ್ನು ಗಮನಿಸಬಹುದು. ನುಂಕೇಮಲೆ ಸಿದ್ದೇಶ್ವರನ ಮೌಖಿಕ ಚರಿತ್ರೆಯನ್ನು ಅವಲೋಕಿಸಿದರೆ, ಆತನೊಬ್ಬ ಸಾಂಸ್ಕೃತಿಕ ನಾಯಕ(ವೀರ)ನಾಗಿ ಸಾಮಾನ್ಯ ಜನರ ನೋವು-ನಲಿವಿಗೆ ಸ್ಪಂದಿಸಿದ ವ್ಯಕ್ತಿಯಾಗಿ ಮೊಳಕಾಲ್ಮೂರು ಪರಿಸರದ ಸಾಂಸ್ಕತಿಕ ನಾಯಕನಾಗಿ ಕಂಡುಬರುತ್ತಾನೆ. ಏಕೆಂದರೆ ರಾಕ್ಷಸರ ಹಾವಳಿಯಿಂದ ಸಾಮಾನ್ಯ ಜನರು ತತ್ತರಿಸಿ ಹೋಗುತ್ತಿದ್ದಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಜನಸಾಮಾನ್ಯರ ಉಳುವಿಗಾಗಿ ಕೈಲಾಸದಿಂದ ಕಾಲಭೈರವ ಭೂಲೋಕಕ್ಕೆ ಬಂದನು. ದೈತ್ಯ ರಾಕ್ಷಸರಾದ ರಸಾಸಿದ್ದ ಮತ್ತು ಅಂಗ್ಸರನ್ನು ಸಂಹಾರ ಮಾಡಿ ಜನಸಾಮಾನ್ಯರ ಕಷ್ಟವನ್ನು ಪಾರುಮಾಡಿದ. ಮೌಖಿಕ ಚರಿತ್ರೆಯಲ್ಲಿ ಈತನನ್ನು ಗೋವುಗಳನ್ನು ರಕ್ಷಿಸಿದ ಗೋರಕ್ಷಕ ನಾಥನೆಂತಲೂ ಕರೆಯುತ್ತಾರೆ. ಹಲವು ಜಾತಿ, ಜನಾಂಗವನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಇಂದಿಗೂ ನುಂಕೇಮಲೆಬೆಟ್ಟ ಸಾಮರಸ್ಯದ ಸಂಕೇತವಾಗಿದೆ. ದೇಶದಲ್ಲಿ ಕೋಮುದಳ್ಳುರಿಗಳು ನಡೆಯುತ್ತಿರುವ ಈ ಹೊತ್ತಿನಲ್ಲಿ ಇಂತಹ ಸಾಮರಸ್ಯದ ಸಾಂಸ್ಕೃತಿಕ ನಾಯಕರನ್ನು ಸ್ಮರಿಸುವುದು ಅವಶ್ಯಕವಾಗಿದೆ.

''ನುಂಕೇಮಲೆ ಬೆಟ್ಟದಲ್ಲಿ ಈಗಲೂ ನಾಥಪಂಥದ ಸ್ವಾಮಿಜಿಯೇ ನೇಮಕಗೊಳ್ಳುತ್ತಾರೆ. ಇದಕ್ಕೆ ಕಾರಣ ನಾಥಪಂಥದ ಕೇಂದ್ರವಾದ ಮಂಗಳೂರಿನ ಕದ್ರಿಯಲ್ಲಿ ನಾಥಪಂಥದ ದೇವಸ್ಥಾನಗಳ ಪಟ್ಟಿಯಲ್ಲಿ ನುಂಕೇ ಮಲೆಬೆಟ್ಟವೂ ಸೇರಿದೆ.''[೯] ಈ ಕಾರಣದಿಂದ ಈ ಕ್ಷೇತ್ರನಾಥ ಪಂಥದ ಆರಾಧನಾ ಕೇಂದ್ರವೂ ಆಗಿದೆ.

ಮೊಳಕಾಲ್ಮೂರು ತಾಲ್ಲೂಕಿನ 'ಕಪ್ಪಡ ಬಂಡಹಟ್ಟಿ'ಯಲ್ಲಿರುವ ಪೆದ್ದಯ್ಯನ ವೀರಗಲ್ಲು ೨೦ನೇ ಶತಮಾನದಲ್ಲಿ ಕೆತ್ತಿರುವುದಾಗಿದೆ. ಗೊಲ್ಲರಲ್ಲಿಯೂ ಚಿತ್ತಯ್ಯ ಸಿರಿಯಣ್ಣ, ಸಾಂಸ್ಕೃತಿಕ ವೀರರಾಗಿ ಕಂಡುಬರುತ್ತಾರೆ. ಪಶುಪಾಲಕರಾಗಿ ತಮ್ಮ ದನಗಳನ್ನು ಹುಲಿ, ಚಿರತೆ, ಸಿಂಹ, ಕಿರುಬಗಳಂಥ ಕಾಡು ಪ್ರಾಣಿಗಳಿಂದ ರಕ್ಷಿಸಲು ಪ್ರಾಣವನ್ನು ಮುಡುಪಾಗಿಟ್ಟು ಹೋರಾಡಿದ ಯರಮಂಚಯ್ಯನ ಮಗ ಪೆದ್ದಯ್ಯನ ಸಾಧನೆ ಅವಿಸ್ಮರಣೀಯ. ಕಪ್ಪಡ ಬಂಡೆಹಟ್ಟಿ, ಮೊಳಕಾಲ್ಮೂರು ತಾಲ್ಲೂಕಿನಲ್ಲಿರುವ ಸಾಮಾನ್ಯ 'ಸಮಾಧಿ ಕ್ಷೇತ್ರ' ನೇರ್ಲಹಳ್ಳಿ ಕೋನ ಸಾಗರದ ಮಧ್ಯೆ ಇರುವ ಕಪ್ಪಡ ಬಂಡಹಟ್ಟಿಯಲ್ಲಿ

ಇಪ್ಪತ್ತನೇಯ ಶತಮಾನದ ಯರಮಂಚಯ್ಯನ ಮಗ 'ಪೆದ್ದಯ್ಯ'ನೆಂಬ ವೀರನ ವೀರಗಲ್ಲಿದೆ. ಇದರ ವಿವರವೆಂದರೆ "ಚಿರತೆಯೊಡನೆ ಹೋರಾಡಿ ಸಮಾಧಿಯಾದ ಪೆದ್ದಯ್ಯನ ಸ್ಮಾರಕ ಇಂದು ಆರಾಧನಾ ದೇವತೆಯಾಗಿದೆ. ಪೂರ್ವಜರ ಪ್ರತೀಕವೆಂಬಂತೆ 'ಕರಿನಾಡು' ಬೆಡಗಿಯರು ಇದಕ್ಕೆ ಹಬ್ಬ, ಆಚರಣೆಗಳನ್ನು ಮಾಡುತ್ತಿರುವರು. ನಾಲ್ಕು ಬಂಡೆಗಳ ನಡುವೆ ವೀರಗಲ್ಲಿದ್ದು ಕಾಯಿ, ಹಣ್ಣು, ಎಡೆಯನ್ನು ನೈವೇದ್ಯ ಮಾಡಲಾಗುತ್ತದೆ. ಮ್ಯಾಸನಾಯಕರ ಮಂದಲ ಗೋತ್ರದ 'ಕರಿನಾರು' ಬೆಡಗಿಯರು ಪೂಜಿಸುತ್ತಿರುವ ಈ ವೀರಗಲ್ಲಿನ ಕಥೆಯನ್ನು ಕುರಿ ಮಂದೆಗೆ ದಾಳಿ ಮಾಡಿದ ಚಿರತೆಯನ್ನು ಕೊಂದದ್ದು. ಕೋಣಸಾಗರ ಗುಡ್ಡದಲ್ಲಿ ಈ ಘಟನೆ ಜರುಗಿದೆ."[೧೦] ಈ ಪ್ರದೇಶ ಅಷ್ಟೇ ಮಹತ್ವದ್ದಾಗಿದ್ದು ಇಲ್ಲಿರುವ ಬೆಟ್ಟಕ್ಕೂ ಪೂಜಿಸುವುದುಂಟು. ಇಲ್ಲಿಗೆ ಸಮೀಪದ ತಿಪ್ಪೇರುದ್ರಸ್ವಾಮಿ ಬಿಳಿನೀರು ಚಿಲುಮೆ ಇದೆ.

೨.೭. ಕಂಪಳರಂಗ ಕ್ಷೇತ್ರ

ಮೊಳಕಾಲ್ಮೂರು ತಾಲ್ಲೂಕಿನಲ್ಲಿರುವ ಕಂಪಳದೇವರ ಹಟ್ಟಿ ಮಹಾಕ್ಷೇತ್ರವು ಚಿನ್ನಹಗರಿ ನದಿ ದಂಡೆಯ ಮೇಲಿದೆ. ಪ್ರಾಚೀನ ಬೇಡರ ನೆಲೆಯಾದ ಇಲ್ಲಿ ಶಿಲಾಯುಗದ ನೆಲೆಗಳು, ಮಾನವಾಕೃತಿ ಕಲ್ಲುಗಳು (ರಾಕ್ಷಸ ಕಲ್ಲುಗಳು) ಮುಖ್ಯವೆನಿಸಿದೆ. ಸ್ಥಳೀಯರು ತಮ್ಮ ಪವಿತ್ರ ಭಾವನೆಗಳನ್ನು ಆಧ್ಯಾತ್ಮಿಕವಾಗಿ ಹಂಚಿಕೊಂಡಿದ್ದಾರೆ. ಇದಕ್ಕೆ ಚಿಕ್ಕ ಕುಮತಿ ಎಂಬ ಮತ್ತೊಂದು ಹೆಸರಿದೆ.

ನಾಯಕರ ಮೂಲನೆಲೆಯಾದ ಕಂಪಳ ಕ್ಷೇತ್ರ ಕರ್ನಾಟಕದ ತಿರುಪತಿಯಿದ್ದಂತೆ. ವೈಷ್ಣವ ಸಂಪ್ರದಾಯದ ಮಹಾಕ್ಷೇತ್ರಗಳಲ್ಲಿ ಇದು ಒಂದು. ಶ್ರೀಕೃಷ್ಣ ಇಲ್ಲಿ ಬೇಡರನ್ನು ಬೇಟೆಯಿಂದ ಸ್ಥಿತ್ಯಂತರಗೊಳಿಸಿದಂತೆ ಪ್ರಾಣಿ ಹಿಂಸೆಗೆ ವಿದಾಯ ಹೇಳಿದ ಬೇಡರಿಗೆ ಇದು ವರದಾನವಾದ ನೆಲೆ "ಶ್ರೀಕೃಷ್ಣನ ಸಂಹಾರವಾಗುವವರೆಗೆ ಒಂದು ಪಂಗಡದಲ್ಲಿದ್ದ ಬೇಡರು ಮತ್ತು ಗೊಲ್ಲರೆಂದು ಇಬ್ಭಾಗವಾಯಿತಂತೆ. ಇಲ್ಲಿ ಸಾಂಸ್ಕೃತಿಕ ಸಂಘರ್ಷ ನಡೆದು ಬೇಟೆಯ ಬೇಡ ಬೇಟೆ ತೊರೆದು ಪಶುಪಾಲನೆ ಕೈಗೊಂಡದ್ದು, ಗೊಲ್ಲರು ಗೋಪಾಲಕರಾಗಿ ಮುಂದುವರೆದದ್ದು, ಮೇಲಿನ ಘಟನೆ ದೃಢೀಕರಿಸುತ್ತದೆ. ಅಂದಿನಿಂದ ಬೇಡರು ಬೇಟೆ, ಪ್ರಾಣಿಹಿಂಸೆ ಕೈಬಿಟ್ಟು, ಮಾನವ ಕುಲದ ಒಳಿತಿಗಾಗಿ ಶ್ರಮಿಸಲು ಕರೆ ನೀಡಿ ಗೋಪಾಲನೆ ಮಾಡಲು ೧೨ ಸಾಲಿಗ್ರಾಮ, ಕೊಳಲು, ಮುತ್ತಿನಗೆಜ್ಜೆ (ಮುತ್ತಿನ ಕಾಲ್ಪೆಂಡೆ)ಗಳನ್ನು ಕೊಟ್ಟಿದ್ದರು."[೧೧] ಬೇಟೆ ಸಂಸ್ಕೃತಿಗೆ ಸೇರಿದ ಮ್ಯಾಸಬೇಡರು, ಒಂದು ಕಾಲಕ್ಕೆ ಪಶುಪಾಲಕ ಸಂಸ್ಕೃತಿಯ ಮೂಲಕ್ಕೆ ಸೇರಿದ್ದರು ಎಂಬುದನ್ನು ಈ ದೇವರ ಜಾತ್ರೆಯಲ್ಲಿ ನಡೆಯುವ ಆಚರಣೆಗಳು ಸಾಬೀತುಪಡಿಸುತ್ತವೆ. ಇಲ್ಲಿ ದೇವರ ಹೆಸರಿನಲ್ಲಿ ಬಿಟ್ಟ ನೂರಾರು ದನಗಳು ಇದ್ದು ಇವನ್ನು ಕಾಯುವ ಪವಿತ್ರ ಕಾಯಕ ಮಾಡುವವನನ್ನು 'ಕಿಲಾರಿ' ಎಂದು ಕರೆಯುತ್ತಾರೆ. ಬರಗಾಲದಲ್ಲಿ ಮಾತ್ರ ಊದಬಹುದಾದ ಒಂದು ವಿಶಿಷ್ಟಗಣೆಯೂ ಇಲ್ಲಿದೆ."[೧೨]

೨.೮. ಜೋಗಿ (ಗೋ ರಕ್ಷನಾಥ)

ನುಂಕಿಮಲೆ ಬೆಟ್ಟದಲ್ಲಿ ಕಾಲಭೈರವನ ದೇವಸ್ಥಾನದ ಎಡಭಾಗಕ್ಕೆ ಗೋರಕ್ಷನಾಥ ದೇವಸ್ಥಾನವನ್ನು ಕಾಣಬಹುದು. ಇಲ್ಲಿಗೋರಕ್ಷ ನಾಥನನ್ನು 'ಜೋಗಿ' ಎಂದು ಭಕ್ತಾದಿಗಳು ಕರೆಯುತ್ತಾರೆ. 'ಜೋಗಿ' ಎನ್ನುವ ಪದ 'ಯೋಗಿ' ಎನ್ನುವ ಪದದಿಂದ ಬಂದಿರಬಹುದೆಂದು ತಿಳಿಯಬಹುದು. ಈ ಓಂದೆ ದುರ್ಗಮವಾದ ಈ ಬೆಟ್ಟವು ಧ್ಯಾನಕ್ಕೆ ಯೋಗ್ಯವಾದ ಸ್ಥಳವಾಗಿದ್ದು ಇಲ್ಲಿ ನಾಥಪಂಥದ ಯೋಗಿಗಳು ಧ್ಯಾನಕ್ಕಾಗಿ ಈ ಸ್ಥಳಕ್ಕೆ ಬರುತ್ತಿದ್ದರು ಎಂದು ತಿಳಿದುಬರುತ್ತದೆ. ಈ ಹಿನ್ನಲೆಯಲ್ಲಿ ನೋಡುವುದಾದರೆ 'ಯೋಗಿ' ಎಂಬ ಪದವೇ ಇಲ್ಲಿ 'ಜೋಗಿ'ಯಾಗಿರಲು ಸಾಧ್ಯ ಎನ್ನುವುದನ್ನು ತಿಳಿಯಬಹುದು. ಇದಕ್ಕೆ ಪೂರಕವಾಗಿ ನಾಯಕನ ಹಟ್ಟಿ ಬಳಿಯಿರುವ ದೇವರಹಳ್ಳಿಯ ಕಿನ್ನರಿ ಜೋಗಿಗಳು ಪ್ರತಿವರ್ಷ ಜಾತ್ರೆಯ ಸಮಯದಲ್ಲಿ ಬಂದು ಕಪ್ಪ-ಕಾಣಿಕೆ ಕೊಡುವ ಸಂಪ್ರದಾಯವನ್ನು ಕಾಣಬಹುದು. ಹಾಗೂ ನುಂಕೇಮಲೆಯ ಬೆಟ್ಟಗಳಲ್ಲಿ ಒಂದು ಬೆಟ್ಟವನ್ನು "ಜೋಗಪ್ಪಗುಡ್ಡ" ಎಂತಲೂ ಕರೆಯುವ ವಾಡಿಕೆಯಿದೆ. ಮಾಖಿಕ ಚರಿತ್ರೆಯನ್ನು ಅವಲೋಕಿಸಿದರೆ, ಈ ಜೋಗಿ ಪರಿಕಲ್ಪನೆ ಬೇರೆಯದೇ ಆದ ಆಯಾಮವನ್ನು ಪಡೆದುಕೊಳ್ಳುತ್ತದೆ.

೨.೯. 'ಬಿಳಿ ನೀರು ಚಿಲುಮೆ' ಅವಧೂತ ಪರಂಪರೆಯ ನೆಲೆ

ಮೊಳಕಾಲ್ಮೂರು ತಾಲ್ಲೂಕಿನ 'ಬಿಳಿನೀರು ಚಿಲುಮೆ' ಎಂಬ ಸ್ಥಳನಾಮವು ಅವಧೂತ ಪರಂಪರೆಯ ನೆಲೆಯಾಗಿ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಈ ಹಿನ್ನಲೆಯಲ್ಲಿ ಅವಧೂತ ಪರಂಪರೆ ಎಂಬ ಅರ್ಥವನ್ನು ಒಳಹೊಕ್ಕು ನೋಡಿದಾಗ ಹುಟ್ಟನಿಂದ ಜಾತಿ, ಧರ್ಮ, ಪಂಥಕ್ಕೆ ಸೇರದೆ, ಅಂದಂದಿನ ಅನ್ನ ವಸ್ತ್ರಕ್ಕೆ ಮಾತ್ರ ಆಲೋಚಿಸಿ ಶ್ರವಿಸುವವರು ಅವಧೂತರೆನಿಸಿಕೊಂಡರು. ಬದುಕಿನ ಜಂಜಡದಿಂದ ತತ್ತರಿಸುತ್ತಿರುವ ಮಾನವ ಜನಾಂಗಕ್ಕೆ ಬದುಕು ಸುಲಲಿತ ಮತ್ತು ಸುಖದಾಯಕ ಎಂಬ ಮನುಷ್ಯ ಜೀವನದ ವೈಚಾರಿಕ ಪ್ರಜ್ಞೆಯನ್ನು ತನ್ನದೇ ಆದ ತತ್ವ ಹಾಡು, ನುಡಿಗಟ್ಟುಗಳ ಮೂಲಕ ಜೀವನ ಪ್ರಜ್ಞೆಯನ್ನು ಎಚ್ಚರಿಸುತ್ತಾರೆ. ಅವಧೂತರು ಒಂದೇ ಕಡೆ ನೆಲೆನಿಲ್ಲದೆ, ನಡೆದಾಡುವ ಚೇತನಗಳಂತೆ, ಸಂಚರಿಸಿ, ಐಹಿಕ ಪ್ರಪಂಚದ ಮೋಹವಿರುವ ಜನಗಳನ್ನು ಎಚ್ಚರಿಸಿ ಜೀವನದ ನಿಜದರ್ಶನವನ್ನು ತಿಳಿಸಿಕೊಡುತ್ತಾರೆ. ಈ ಹಿನ್ನೆಲೆಯಲ್ಲಿ ನಾಡಿನ ಮೂಲೆ ಮೂಲೆಯಲ್ಲಿ ಇಂತಹ ಅವಧೂತರನ್ನು ಕಾಣಬಹುದು. ಶಿಶುನಾಳ ಷರೀಫ, ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ ಹುಬ್ಬಳ್ಳಿಯ ಸ್ವಾಮಿಗಳು, ನವಲಗುಂದದ ನಾಗಲಿಂಗಯತಿ, ಕೈವಾರದ ನಾರಾಯಣಪ್ಪ, ಎಮ್ಮಿಗನೂರಿನ ಜಡಸಿದ್ಧ ಯತಿ, ಚೇಳಗುರ್ಕಿಯ ಯರ್ರಿತಾತ. ಅಗಡಿಯ ಶೇಷಾಚಲ, ಚಿದಂಬರ ದೀಕ್ಷಿತರು, ಯಡೆಯೂರು ಸಿದ್ಧಲಿಂಗಯತಿ ಗದಗದ ಮಡಿವಾಳಪ್ಪ - ಮುಂತಾಗಿ ಹತ್ತಾರು ಅವಧೂತರನ್ನು ಸೂಚಿಸುತ್ತಾ

ಹೋಗಬಹುದು. ಮೊಳಕಾಲ್ಮೂರು ಪರಿಸರವು ಸಹ ಅವಧೂತ ಪರಂಪರೆಯಿಂದ ಹೊರತಾಗಿಲ್ಲ. ಈ ಭಾಗದ ಪ್ರಾಂತೀಯ ಸಂಸ್ಕೃತಿಗೆ ವಿವೇಚನಾ ಪ್ರಜ್ಞೆ ಸಂದೇಶವನ್ನು ಕೊಟ್ಟಂತಹ ವ್ಯಕ್ತಿ ರೂಪದ ಶಕ್ತಿಸಂತ ಅವಧೂತ ಪರಂಪರೆಗೆ ಜೀವಂತ ಸಾಕ್ಷಿಯಾಗಿ ಉಳಿದಿರುವಂತಹ ಸ್ಥಳವೇ ಬಿಳಿನೀರುಚಿಲುಮೆ. ಉದಾಹರಣೆಗೆ ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿಗಳು. ಇವರು ಒಂದು ಕಡೆ ನೆಲೆನಿಲ್ಲದೆ, ಸಂಚರಿಸುತ್ತಿರುವಾಗ ಕೋನಸಾಗರದ ಹತ್ತಿರ ಬಂದು ನೆಲಸಿ ತಮ್ಮ 'ಪವಾಡ'ವನ್ನು ಮೆರೆದಿದ್ದಾರೆ. ಶ್ರೀ ತಿಪ್ಪೇರುದ್ರ ಸ್ವಾಮಿಗಳು ಪವಾಡ ಪುರುಷರು ಆಗಿರುವುದರಿಂದ ಆಗ ಅವರು ತಮ್ಮ ಬೆತ್ತವನ್ನು ಊರಿದ ಸ್ಥಳದಲ್ಲಿ ಈಗಲೂ ಜಲ ಒಸರುತ್ತಿದ್ದು ಈ ಸ್ಥಳಕ್ಕೆ 'ಬಿಳಿನೀರು ಚಿಲುಮೆ' ಎಂದು ಕರೆಯುತ್ತಾರೆ. ಕಾರ್ತಿಕ ಮಾಸದಲ್ಲಿ ಇಲ್ಲಿ ಉತ್ಸವ ಆಚರಿಸುತ್ತಾರೆ. ಈ ಸ್ಥಳದಲ್ಲಿ ನಾಯಕನ ಹಟ್ಟಿಯ ತಿಪ್ಪೇರುದ್ರಸ್ವಾಮಿಗಳು ಕಟ್ಟಿಸಿದ ದೇವಾಲಯವಿದೆ. ಪ್ರಮುಖವಾಗಿ ಅವಧೂತರು ಮಾಡಿದಷ್ಟು ನೀಡುಭಿಕ್ಷೆ ಎಂಬ ತತ್ವವನ್ನು ಪ್ರಚೋಧಿಸಿ ಅವಧೂತರು ಜನತೆಯಲ್ಲಿರುವ ಮೌಢ್ಯತೆಯ ಅಂಧಕಾರವನ್ನು 'ಪವಾಡಗಳು' ಎಂಬ ಉಪಯುಕ್ತ ಕೈಂಕರ್ಯದಿಂದ ಕಣ್ಣು ತೆರಸಿದರು ಎನ್ನಬಹುದು.

೨.೧೦. ಮೊಳಕಾಲ್ಮೂರು ಪರಿಸರದ ದೇವಾಲಯಗಳು

ಕರ್ನಾಟಕದಲ್ಲಿ ಕಂಡುಬರುವ ದೇವಾಲಯಗಳ ವೈವಿಧ್ಯತೆಯು ಭರತಖಂಡದ ಬೇರೆ ಯಾವ ಭಾಗದಲ್ಲಿಯೂ ಕಂಡುಬರುವುದಿಲ್ಲವೆನ್ನಬಹುದು. ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಕಂಡುಬರುವ ಕೆಲವು ಪ್ರಮುಖ ದೇವಾಲಯಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

೧. ಶೈವ ದೇವಾಲಯಗಳು

ಜಟಂಗಿ ರಾಮೇಶ್ವರ ದೇವಾಲಯವು ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಾಣವಾಗಿದೆ. ರಾಷ್ಟ್ರಕೂಟರು ಕಲ್ಲಿನ ದೇಗುಲವಾಗಿ ಜೀರ್ಣೋದ್ಧಾರ ಮಾಡುವ ಮೊದಲು ಈ ಜಟಂಗಿ ರಾಮೇಶ್ವರ ದೇವಾಲಯವು ಇಟ್ಟಿಗೆಗಳಿಂದ ನಿರ್ಮಿತವಾಗಿತ್ತು ಎಂಬುದು ಶಾಸನಗಳಿಂದ ದೃಢಪಡಿಸಿಕೊಳ್ಳಬಹುದು. ಕ್ರಿ.ಶ.೧೦೪೧ರ ಶಾಸನವು ನೊಳಂಬರ ಕಂಕಮಲ್ಲರಸನು ರಾಮೇಶ್ವರ ದೇವರಿಗೆ ದಾನ ನೀಡಿರುವುದನ್ನು ಉಲ್ಲೇಖಿಸುತ್ತದೆ. "ವೀರಕಂಪಲಿರಾಯ ಮತ್ತು ಗಂಡುಗಲಿ ಕುಮಾರರಾಮ ಇವರಿಬ್ಬರೂ ಈ ರಾಮೇಶ್ವರದ ಭಕ್ತರಾಗಿದ್ದರು" ಅಲ್ಲದೆ ಇವರ ಪೂರ್ವಿಕರ ನೆಲಯೂ ಮೂಲತಃ ಜಟಂಗಿ ರಾಮೇಶ್ವರವಾಗಿತ್ತು.[೨೩] ಎಂಬುದನ್ನು ಪ್ರಸ್ತುತಪಡಿಸುತ್ತದೆ.

ಹಿರೇಕೆರೆಹಳ್ಳಿಯ ಕನ್ನೇರಮ್ಮನ ದೇವಾಲಯವು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಿಸಲಾಗಿದೆ. ಚೌಕಾಕಾರದ ಗರ್ಭಗೃಹದಲ್ಲಿ ಶಿವಲಿಂಗವಿದ್ದು ಇದೊಂದು ಶೈವ ದೇವಾಲಯವಾಗಿದ್ದರೂ ಅಲ್ಲಿನ ಸ್ಥಳೀಯರು ಇದನ್ನು ಕನ್ನೇರಮ್ಮ ದೇವಾಲಯವೆಂದು ಕರೆಯುತ್ತಾರೆ. ಇದಕ್ಕೆ ನಿರ್ದಿಷ್ಟ ಕಾರಣ

ತಿಳಿದುಬಂದಿಲ್ಲ. ಇದರ ಬಗ್ಗೆ ಅಧ್ಯಯನ ಕೈಗೊಳ್ಳಬಹುದು. ನುಂಕೆಮಲೆಯಲ್ಲಿರುವ ಪೂರ್ವಾಭಿಮುಖವಾದ ಮಲ್ಲಿಕಾರ್ಜುನ ದೇವಾಲಯವನ್ನು ಗ್ರಾನೈಟ್ ಶಿಲೆಯಿಂದ ನಿರ್ಮಿಸಿದ್ದು ಇದೊಂದು ದ್ವಿಕೂಟಾಚಲ ರಚನೆಯಾಗಿದೆ. ಗರ್ಭಗೃಹದ ಪೀಠದ ಮೇಲೆ ಶಿವಲಿಂಗವಿದೆ. ೧೦-೧೧ನೇ ಶತಮಾನದಲ್ಲಿ ಕದಂಬ ಶಾಖಾಮನೆತನವೊಂದು ನುಂಕೆಮಲೆಯಲ್ಲಿ ಆಳ್ವಿಕೆ ನಡೆಸಿದ ಕುರುಹುಗಳಿವೆ. ಈ ಅವಧಿಯಲ್ಲಿ ಸಿದ್ದೇಶ್ವರ ಅಥವಾ ಗೋರಕ್ಷನಾಥ ಮತ್ತು ಕಾಲಭೈರವರ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಸಿದ್ದೇಶ್ವರ ದೇವಾಲಯವು ತೆರದ ಮಂಟಪವಾಗಿದೆ. ಇಲ್ಲಿನ ಪದ್ಮ ಪೀಠದ ಮೇಲೆ ಸಿದ್ದೇಶ್ವರ ಅಥವಾ ಗೋರಕ್ಷನಾಥನ ಮೂರ್ತಿಶಿಲ್ಪವಿದೆ. ಕದಂಬ ವಂಶದ ಬಂಚರಸದೇವನು ನುಂಕೆಮಲೆಯನ್ನು ಆಳುತ್ತಿರುವಾಗ ಈ ದೇವಾಲಯವನ್ನು ಕಟ್ಟಿಸಿ ಅನೇಕ ದಾನದತ್ತಿಗಳನ್ನು ನೀಡಿದ್ದಾನೆ ಎಂಬ ವಿಷಯ ಶಾಸನಗಳಿಂದ ತಿಳಿದುಬರುತ್ತದೆ. ಬ್ರಹ್ಮಗಿರಿಯ ಪಶ್ಚಿಮ ತಪ್ಪಲಿನಲ್ಲಿರುವ ಉತ್ತರಾಭಿಮುಖವಾಗಿರುವ ಅಕ್ಕನ ಹಾಗೂ ತಂಗಿಯ ದೇವಾಲಯವನ್ನು ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ. ಇದೊಂದು ಶೈವ ದೇವಾಲಯವಾಗಿದ್ದು, ಕಮ್ಮಟ ದುರ್ಗದ ಅರಸರಿಂದ ನಿರ್ಮಿಸಲಾಗಿದೆಯೆಂದು ಚರಿತ್ರೆಯಿಂದ ತಿಳಿದುಬರುತ್ತದೆ. ತಂಗಿ ದೇವಾಲಯವನ್ನು 'ಜೈನಬಸದಿ' ಎಂದು ಕರೆಯಲಾಗಿದೆ. ತ್ರಿಶಂಕೇಶ್ವರ ದೇವಾಲಯ ಚೌಕಾಕಾರ ಗರ್ಭಗೃಹದಲ್ಲಿ ಶಿವಲಿಂಗವಿದೆ. ರಾಯಾಪುರದ ಗುಡಿ ಕಪಿಲೆಯರ ಹೊಲದಲ್ಲಿ ವಿಜಯನಗರೋತ್ತರ ಕಾಲದ ಬಸವಣ್ಣನ ದೇವಾಲಯವನ್ನು ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ. ಗುಡ್ಡದಹಳ್ಳಿಯಲ್ಲಿ ಕೊಲ್ಲಾರಮ್ಮ ದೇವಾಲಯವು ಕೂಡ ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ. ಅಶೋಕ ಸಿದ್ಧಾಪುರದ ವೀರಭದ್ರದೇವಾಲಯ ಹಾಗೂ ಶಿರೇಕೊಳದಲ್ಲಿರುವ ಈಶ್ವರ ದೇವಾಲಯವು ಸಂಪೂರ್ಣ ಕಲ್ಲಿನಿಂದ ಕಟ್ಟಿದ ಮಂಟಪವಾಗಿದೆ. ಸಂತೇಗುಡ್ಡದಲ್ಲಿರುವ ನಗರೇಶ್ವರ ದೇವಾಲಯ ವಿಜಯನಗರೋತ್ತರ ಕಾಲದಲ್ಲಿ ನಿರ್ಮಿಸಲಾಗಿದ್ದು ಕಾಳಮ್ಮ ದೇವಾಲಯವೂ ಕೂಡ ಆ ಊರಿನಲ್ಲಿದೆ. ದೇವಸಮುದ್ರದ ಭೋಗೇಶ್ವರ ದೇವಾಲಯವು ಚೌಕಾಕಾರದ ಗರ್ಭಗೃಹವೊಂದಿದ್ದು ಇದರಲ್ಲಿ ಮೂರ್ತಿಯಿಲ್ಲ.

೨. ವೈಷ್ಣವ ದೇವಾಲಯಗಳು

ಮೊಳಕಾಲ್ಮೂರು ಪರಿಸರದಲ್ಲಿ ವಿಜಯನಗರೋತ್ತರ ಕಾಲದಲ್ಲಿ ವೈಷ್ಣವ ದೇವಾಲಯಗಳು ನಿರ್ಮಾಣವಾಗಿವೆ. ಚಿಕ್ಕೇರಹಳ್ಳಿಯ ರಾಮದೇವಾಲಯವು ದ್ವಿಕೂಟಚಲ ರಚನೆಯಾಗಿದೆ. ಪೂರ್ವಾಭಿಮುಖವಾಗಿರುವ ಚೌಕಾಕಾರದ ಗರ್ಭಗೃಹದಲ್ಲಿ ರಾಮ, ಲಕ್ಷ್ಮಣ, ಸೀತೆಯರ ಮೂರ್ತಿಶಿಲ್ಪಗಳಿವೆ. ಅಮುಕುಂದಿಯ ವೆಂಕಟರಮಣ ದೇವಾಲಯ ನಾಗಸಮುದ್ರದ ವೆಂಕಟೇಶ್ವರ ದೇವಾಲಯ ಹಾಗೂ ಅಶೋಕ ಸಿದ್ದಾಪುರದ ವೆಂಕಟರಮಣಸ್ವಾಮಿ ದೇವಾಲಯವು ವೈಷ್ಣವ ದೇವಾಲಯಗಳಾಗಿದ್ದು ಇವೆಲ್ಲಾ ವಿಜಯನಗರೋತ್ತರ ಕಾಲದಲ್ಲಿ ನಿರ್ಮಿಸಲಾಗಿದೆ ಎಂದು ತಿಳಿದುಬರುತ್ತದೆ.

ಈ ಪ್ರದೇಶದಲ್ಲಿ ಶೈವ-ವೈಷ್ಣವ-ಜೈನಧರ್ಮ ಮತ್ತು ಶಾಕ್ತ ಪಂಥಕ್ಕೆ ಸೇರಿದ ದೇವಾಲಯಗಳಿರುವುದರಿಂದ ಪ್ರಸ್ತುತ ಈ ಪ್ರದೇಶದಲ್ಲಿ ಮೊದಲಿನಿಂದಲೂ ಆಚರಣೆಯಲ್ಲಿದ್ದವೆಂದು ತಿಳಿಯುತ್ತದೆ.

ಮನುಷ್ಯನು ಮನೆಯಲ್ಲಿ ದೇವರಿಗೆ ಪೂಜೆ ಸಲ್ಲಿಸುವುದು ಸ್ವ ಅಭಿವೃದ್ಧಿಗಾದರೆ, ದೇವಾಲಯದಲ್ಲಿ ಪರಾರ್ಥಕ್ಕಾಗಿ ಪೂಜೆಯನ್ನು ನಡೆಸಲಾಗುತ್ತದೆ. ಇವರುಗಳು ಜನರಲ್ಲಿ ಐಕ್ಯತೆ ಹಾಗೂ ಸಮನ್ವಯತೆಯ ಮನೋಭಾವವನ್ನು ಮೂಡಿಸುತ್ತವೆ. ಮೊಳಕಾಲ್ಮೂರು ಪರಿಸರದ ಅಧ್ಯಯನದಲ್ಲಿ ಕಂಡುಬಂದ ವಿಶೇಷತೆಯೆಂದರೆ ದೇವಾಲಯಗಳಿಂದ ಧಾರ್ಮಿಕ ಇತಿಹಾಸವನ್ನು ನಿರ್ಮಿಸಬಹುದು. ಅಲ್ಲದೇ ಆ ದೇವಾಲಯಗಳಿಗೆ ನೀಡುತ್ತಿದ್ದ ದಾನ ದತ್ತಿಗಳಿಂದ ಹಾಗೂ ಇತರ ವಿಚಾರಗಳಿಂದ ಸ್ವಲ್ಪಮಟ್ಟಿಗಾದರೂ ಆರ್ಥಿಕ ಪರಿಸ್ಥಿತಿಯನ್ನು ವಿವರಿಸಲು ಸಾಧ್ಯವಾಗುತ್ತದೆ.

೨.೧೧. ಮೊಳಕಾಲ್ಮೂರು ಪರಿಸರದ ವೀರಗಲ್ಲುಗಳು

'ವೀರ' ಎಂಬ ಪದವು ಮೂಲತಃ ಸಂಸ್ಕೃತ ಭಾಷೆಯಿಂದ ಉತ್ಪತ್ತಿಯಾಗಿದ್ದು ಈ ಭಾಷೆಯಿಂದ ನೇರವಾಗಿ ಕನ್ನಡ ಮತ್ತು ಇತರ ಭಾಷೆಗಳಲ್ಲಿಯೂ ಈ ಪದವು ತನ್ನ ಮೂಲಾರ್ಥವನ್ನು ಉಳಿಸಿಕೊಂಡುಬಂದಿದೆ. ವೀರನೊಬ್ಬನು ರಣರಂಗದಲ್ಲಿ ಹೋರಾಡಿ ವೀರಮರಣ ಹೊಂದಿದರೆ ಅವನ ಶಾಶ್ವತ ನೆನಪಿಗಾಗಿ ಪ್ರತಿಷ್ಠಾಪಿಸುವ ಶಿಲೆಗಳನ್ನು ವೀರಗಲ್ಲುಗಳು ಎಂದು ಕರೆಯುವರು. ಆರಂಭಿಕ ಹಂತದಲ್ಲಿ ವೀರನಸ್ಮರಣಾರ್ಥ ಗುಂಡುಕಲ್ಲುಗಳನ್ನು, ಆ ಮೇಲೆ ನಿರ್ದಿಷ್ಟಪಡಿಸುವ ಶಿಲೆಯಲ್ಲಿ ಶಿಲ್ಪಗಳ ಉಬ್ಬು ಕೆತ್ತನೆಯನ್ನು, ನಂತರ ಕಾಲಗಳಲ್ಲಿ ವೀರಮರಣ ಹೊಂದಿದ ಹೆಸರಿನಲ್ಲಿ ದೇವಾಲಯಗಳನ್ನು ಕಟ್ಟಲಾಗುತ್ತಿತ್ತೆಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ರನ್ನನ ಗದಾಯುದ್ಧ ಅಥವಾ ಸಾಹಸಭೀಮ ವಿಜಯ ಎಂಬ ಕಾವ್ಯದಲ್ಲಿ "ತುರುಗೋಳಿನಲ್ಲಿ, ಪೆಣ್ಬಯ್ಯಲ್ ನಲ್ಲಿ, ಸ್ವಾಮಿ ಕಾರ್ಯದಲ್ಲಿ, ನೆಂಟರಿಗೆ ತೊಂದರೆ ಆದಾಗ, ಊರು ನಾಶವಾದಾಗ ಯಾವನು ದೃಢ ನಿರ್ಧಾರ ಮಾಡಿ ತನ್ನ ಗಂಡಸುತನವನ್ನು ಮರೆಯುವುದಿಲ್ಲವೋ ಅವನು ಗಂಡನಲ್ಲ ನಪುಂಸಕ"[೧೪] ಎಂಬ ಮಾತನ್ನು ದ್ರೌಪದಿಯ ಬಾಯಿಂದ ಆಡಿಸಿದ್ದಾನೆ.

ಮೊಳಕಾಲ್ಮೂರು ತಾಲೂಕಿನಲ್ಲಿ ವೀರಗಲ್ಲುಗಳ ಸಂಖ್ಯೆ ಗಣನೀಯವಾಗಿ ಸಾಕಷ್ಟಿವೆ. ಇತಿಹಾಸವನ್ನು ಮರುಕಳಿಸುತ್ತವೆ. ಭಾರತೀಯರಿಗೆ ಪ್ರಾಚೀನ ಕಾಲದಿಂದಲ್ಲಿ ಗೋವುಗಳು ಪವಿತ್ರ ಹಾಗೂ ಪೂಜ್ಯನೀಯ ವಾದವುಗಳಾಗಿವೆ. ಕೃಷಿ ಚಟುವಟಿಕೆಯಲ್ಲಿ ಪ್ರಮುಖ ಪಾತ್ರವಹಿಸುವ ಹಸುಗಳು ಆರ್ಥಿಕ ಹಾಗೂ ವಿನಿಮಯ ಸಾಧನಗಳಾಗಿವೆ. ಹಸುಗಳನ್ನು ಅಪಹರಿಸಿದ ಸಂದರ್ಭದಲ್ಲಿ ಹೋರಾಡಿ ವೀರಮರಣ ಹೊಂದಿದ ಕೆಲವು ವೀರಗಲ್ಲುಗಳು ಅಧ್ಯಯನ ಕ್ಷೇತ್ರ ಮುತ್ತಿಗಾರಹಳ್ಳಿ ಹಾಗೇ ಮಾಚೇನಹಳ್ಳಿಯಲ್ಲಿ ವೀರನಸುತ್ತ ಐದಾರು ದನಗಳು ಕೆತ್ತನೆಗಳಿರುವ ವೀರಗಲ್ಲುಗಳು ದೊರೆತಿವೆ. ಕಷ್ಟದಲ್ಲಿದ್ದ ಹೆಣ್ಣನ್ನು

ರಕ್ಷಿಸಿ ಮಾನ ಉಳಿಸಿ ಹೋರಾಡಿ ಮಡಿದ ವೀರಗಲ್ಲುಗಳು ಅಮುಕುಂದಿ'ಯ ವೀರಗಲ್ಲು ಒಬ್ಬ ಸ್ತ್ರೀ ಒಂದು ಮಗುವನ್ನು ಸೊಂಟದಲ್ಲಿ ಎತ್ತಿಕೊಂಡು ತನ್ನ ಸಹಾಯಕಿಯೊಂದಿಗೆ ಹೋರಾಟದ ದೃಶ್ಯವನ್ನು ನೋಡುತ್ತಾ ನಿಂತಿದ್ದಾಳೆ. ರಾಮಸಾಗರದ ವೀರಗಲ್ಲಿನಲ್ಲಿ ಏಳೆಂಟು ಸ್ತ್ರೀಯರು ಇರುವ ಚಿತ್ರಗಳನ್ನು ಕೆತ್ತಲಾಗಿದೆ. ಮೊಳಕಾಲ್ಮೂರು ತಾಲ್ಲೂಕಿನಲ್ಲಿ ವಿವಿಧ ಭಾಗಗಳಲ್ಲಿ ದೊರೆತ ವೀರಗಲ್ಲುಗಳನ್ನು ಬೇರೆ-ಬೇರೆ ಹೆಸರುಗಳಿಂದ ಕರೆಯಲಾಗಿದೆ. ಉದಾಹರಣೆಗೆ ಹನುಮನಗುಡ್ಡದಲ್ಲಿ 'ಆದಿರಾಯ' ಅಶೋಕ ಸಿದ್ಧಾಪುರ ಬಿ.ಜಿ.ಕೆರೆಗಳಲ್ಲಿ 'ಕಾಮಣ್ಣ' ಗೌರಸಮುದ್ರ ಹಾಗೆ ಉರುತಾಳಗಳಲ್ಲಿ ಈರಗಾರಲು(ವೀರಗಾರರು) ಎಂದು ಸಂಭೋದಿಸಲಾಗುತ್ತದೆ. ಕರಡಿ ಹಳ್ಳಿಯಲ್ಲಿ ತಾತ-ತಾತಪ್ಪರ ಕಲ್ಲುಗಳೆಂದು ಕರೆಯಲಾಗುತ್ತದೆ. ರಾಮಸಾಗರದಲ್ಲಿನ ವೀರಗಲ್ಲಿನಲ್ಲಿ ಸೊಂಟಕ್ಕೆ ಖಡ್ಗವನ್ನು ಸಿಕ್ಕಿಸಿಕೊಂಡು ತನ್ನ ಎರಡೂ ಕೈಗಳನ್ನು ಜೋಡಿಸಿ ಅಂಜಲಿ ಮುದ್ರೆಯ ಭಂಗಿಯಲ್ಲಿರುವ ವೀರನನ್ನು ಕೆತ್ತಲಾಗಿದೆ.'' ಬ್ರಹ್ಮಗಿರಿ ಬೆಟ್ಟದ ಪಶ್ಚಿಮ ತಪ್ಪಲಿನ ಅಕ್ಕ-ತಂಗಿಯರ ದೇವಾಲಯಗಳ ಬಳಿ ೧೦ ವೀರಗಲ್ಲುಗಳು ದೊರೆತಿವೆ. ಹಿರೇಕೆರೆಹಳ್ಳಿ, ಚಿಕ್ಕುಂತಿ, ಮಾಚೇನ ಹಳ್ಳಿಗಳಲ್ಲಿ ಕಂಡುಬರುವ ವೀರಗಲ್ಲುಗಳಲ್ಲಿ ಅಪ್ಸರೆಯರು ಮಡಿದ ವೀರನನ್ನು ಪುಷ್ಪಕ ವಿಮಾನದಲ್ಲಿ ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ಕೆತ್ತನೆಗಳಿವೆ. ನಾಗಸಮುದ್ರದ ವೀರಗಲ್ಲಿನಲ್ಲಿ ವೀರನು ಕುದುರೆ ಮೇಲೆ ಕುಳಿತ ತನ್ನ ಸಹಚರರ ಜೊತೆಗೂಡಿ ಹುಲಿಯೊಂದಿಗೆ ಹೋಗುತ್ತಿದ್ದಾನೆ ಹುಲಿಯ ಹಿಂಭಾಗವನ್ನು ನಾಯಿಕಚ್ಚಿದೆ - ಕಪ್ಪಡಬಂಡೆಯ ಹಟ್ಟಿಯಲ್ಲಿ ವೀರನಾದ ಎರ್ರಮಂಚಯ್ಯ ಚಿರತೆಯೊಂದಿಗೆ ಹೋರಾಡುವ ದೃಶ್ಯ ಕೆತ್ತಲಾಗಿದೆ.

ಮಾಸ್ತಿಗಲ್ಲು

ಒಬ್ಬ ವೀರನು ರಣರಂಗದಲ್ಲಿ ಹೋರಾಡಿ ವೀರಮರಣ ಹೊಂದುತ್ತಾನೆ. ಇದರಿಂದ ಅವನ ಹೆಂಡತಿಯು ವೀರ ಮರಣ ಹೊಂದಿ ಸ್ವರ್ಗವನ್ನು ಸೇರಿದರೆ, ಅವಳ ಶಾಶ್ವತ ಸ್ಮರಣೆಗಾಗಿ ನಿರ್ಮಿಸಿದ ಶಿಲೆಗಳನ್ನು ಮಾಸ್ತಿಕಲ್ಲುಗಳೆಂದು ಕರೆಯಲಾಗುತ್ತದೆ. ಅಧ್ಯಯನ ಕ್ಷೇತ್ರ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಹಲವಾರು ಮಾಸ್ತಿಗಲ್ಲುಗಳನ್ನು ಕಾಣಬಹುದಾಗಿದೆ. ನಾಗಸಮುದ್ರ, ದೇವಸಮುದ್ರ ಭಟ್ಟರಹಳ್ಳಿ - ಯರ್ಜೇನಹಳ್ಳಿಯಲ್ಲಿ ಇಂತಹ ಮಾಸ್ತಿಕಲ್ಲುಗಳನ್ನು ಕಾಣಬಹುದು. ಬಾಂಡ್ರಾವಿಯ ಮಾಸ್ತಿಕಲ್ಲಿನಲ್ಲಿ ಎತ್ತಿದ ಬಲಗೈಯಲ್ಲಿ ನಿಂಬೆಹಣ್ಣನ್ನು ಹಿಡಿದಿರುವ ಮಹಾಸತಿಯನ್ನು ಸ್ಥಳೀಯರು 'ಗರ್ಭಲಕ್ಷ್ಮಿ' ಎಂದು ಕರೆಯುತ್ತಾರೆ. ಈ ಊರಿನಲ್ಲಿ ಯಾವುದೇ ಗರ್ಭಿಣಿ ಸ್ತ್ರೀಗೆ ಹೆರಿಗೆಯು ಕಷ್ಟವಾದರೆ, ಈ ಶಿಲೆಯನ್ನು ಬೋರಲು ಹಾಕಿದಾಗ ಹೆರಿಗೆಯು ಸುಗಮವಾಗುತ್ತದೆಂದು ಅಲ್ಲಿನ ಜನರ ನಂಬಿಕೆಯಿದೆ. ಹೆರಿಗೆಯಾದ ತಕ್ಷಣ ಈ ಶಿಲೆಯನ್ನು ನೆಟ್ಟಗೆ ನಿಲ್ಲಿಸಿ ಪೂಜೆ ಪುನಸ್ಕಾರಗಳನ್ನು ಸಲ್ಲಿಸುತ್ತಾರೆ. ಹಾಗಾದರೆ ಈ ಮಾಸ್ತಿಗಲ್ಲಿನಲ್ಲಿರುವ ಮಹಾಸತಿಯು ಗರ್ಭಿಣಿಯಾಗಿದ್ದಳೇ ಎಂಬ ಪ್ರಶ್ನೆ ಉದ್ಭವವಾಗುತ್ತದೆ.[೨೫] ಇದೇ ರೀತಿಯ ಸಾಮಾನ್ಯ ಲಕ್ಷಣಗಳಿರುವ ಹಾಗೂ ಆಚರಣೆಗಳನ್ನು ಚಾಚು ತಪ್ಪದೇ ಪಾಲಿಸಿಕೊಂಡುಬರುತ್ತಿರುವ

ಗೌರಸಮುದ್ರ, ಮಾಚೇನಹಳ್ಳಿಗಳಲ್ಲಿ ಈ ತರಹದ ಮಾಸ್ತಿಗಲ್ಲುಗಳಿವೆ ಎಂಬುದು ಒಂದು ವಿಶಿಷ್ಟ ಹಾಗೂ ವೈವಿಧ್ಯಮಯವಾದ ಸಂಗತಿ ಎನ್ನಬಹುದು.

೨.೧೨. ಮೊಳಕಾಲ್ಮೂರು ಪರಿಸರದ ಕೋಟೆಗಳು

ಮನುಷ್ಯ ಸಂಘ ಮತ್ತು ಸಮಾಜ ಜೀವಿ, ಹಲವಾರು ಜನರು ಒಟ್ಟಾಗಿ ಬದುಕುತ್ತಿದ್ದು ಇದರಿಂದ ಕುಟುಂಬ ವ್ಯವಸ್ಥೆಯು ಬೆಳೆಯಿತು. ಅನೇಕ ಕುಟುಂಬಗಳು ಸೇರಿ ಗ್ರಾಮ, ಪಟ್ಟಣ, ನಗರಗಳಾಗಿ ಪರಿಣಮಿಸಿದವು. ಇವುಗಳೆಲ್ಲ ಮುಂದೆ ಒಂದು ರಾಜ್ಯ ವ್ಯವಸ್ಥೆಯಾಗಿ ಬೆಳೆಯಲು ಕಾರಣೀಭೂತವಾದವು. ಹೀಗೆ ಅವನು ಬೇರೆಯವರ ಆಕ್ರಮಣದಿಂದ ತನ್ನನ್ನು ತನ್ನ ಕುಟುಂಬವನ್ನು ಗ್ರಾಮ ಹಾಗೂ ರಾಜ್ಯವನ್ನು ರಕ್ಷಿಸಿಕೊಳ್ಳಲು ಕೋಟೆಗಳನ್ನು ಕಟ್ಟಿಕೊಂಡನು. ಕೋಟೆ ಎಂದರೆ ಗಟ್ಟಿಯಾದ ಸ್ಥಳ, ಜನರು ವಾಸಿಸುವ ಇಂತಹ ಗಟ್ಟಿಯಾದ ಸ್ಥಳದಲ್ಲಿ ರಕ್ಷಣೆ ಹಾಗೂ ಭದ್ರತೆಯನ್ನು ಒದಗಿಸುವುದು ಎಂದರ್ಥ, ಸಾಮಾನ್ಯವಾಗಿ ಕೋಟೆಯನ್ನು ದುರ್ಗ, ಕಿಲ್ಲೆ ಹಾಗೂ ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ. ಒಟ್ಟಿನಲ್ಲಿ ಕೋಟೆಗಳು ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿವೆ.

ಮೊಳಕಾಲ್ಮೂರು ತಾಲ್ಲೂಕಿನಲ್ಲಿ ವಿವಿಧ ಕಾಲಘಟ್ಟದಲ್ಲಿ ನಿರ್ಮಾಣವಾದ ಕೋಟೆಗಳು ಕಂಡುಬರುತ್ತವೆ. "ಆಯಾ ಕಟ್ಟಿನ ಸ್ಥಳವಾದ ನುಂಕೆ(ಲುಂಕೆ) ಮಲೆಯಲ್ಲಿ ಲುಂಕೆ ಕೋಟೆಯನ್ನು ಹೊಂದಿದ್ದರೆಂದು ಕದಂಬರ ದಾಖಲೆಗಳಲ್ಲಿ ಉಲ್ಲೇಖಿಸಲಾಗಿದೆ."[೧೬] ಕ್ರಿ.ಶ.೧೦ನೆಯ ಶತಮಾನದಲ್ಲಿ ನುಂಕಮಲೆಯನ್ನು ಕೇಂದ್ರವಾಗಿ ಮಾಡಿಕೊಂಡು ಕದಂಬ ಶಾಖಾ ಮನೆತನದ ಅಜವರ್ಮನು ಆಳ್ವಿಕೆ ಮಾಡುವಾಗ ಈಲುಂಕೆ ಕೋಟೆ ಕಟ್ಟಿರಬಹುದು. ಬ್ರಹ್ಮಗಿರಿಯ ಮೇಲಿರುವ ಕೋಟೆಯನ್ನು ಹನೆಯ ಕೋಟೆಯೆಂದು (ಹಾನೆಯ) ಕರೆಯಲಾಗುತ್ತದೆ. ನಿಡುಗಲ್ಲು ರಾಜಧಾನಿಯಾದ ಕ್ರಿ.ಶ.೧೩ನೆಯ ಶತಮಾನದ ಅಂತ್ಯದವರೆಗೆ ಆಳ್ವಿಕೆ ನಡೆಸಿದ ಚೋಳ ಮಹಾರಾಜನಿಗೆ 'ಹನೆಯ ಕೋಟೆ' ಉಪರಾಜಧಾನಿಯಾಗಿತ್ತು ಎಂದು ವ್ಯಕ್ತಪಡಿಸಿದ್ದಾರೆ.[೧೭] ಜೋಳ ಮಹಾರಾಜರಲ್ಲಿ ಹೆಸರಾದ ಬೊಮ್ಮಭೂಪಾಲದ ದಂಡನಾಯಕನಾದ ಬೈಚಪ್ಪ(ಬಿಚಣಂ)ನು ನಿರ್ಮಿಸಿದನು. ವೀರಬಲ್ಲಾಳನು ತನ್ನ ರಾಜ್ಯದ ಮೇರೆಯಲ್ಲಿದ್ದ ಹನೆಯ ಕೋಟೆಯನ್ನು ಜಯಿಸಿ 'ವಿಜಯಗಿರಿ' ಎಂಬ ಪಟ್ಟಣವನ್ನು ನಿರ್ಮಿಸಿದನು. ಮೊಳಕಾಲ್ಮೂರು ಉತ್ತರಕ್ಕಿರುವ ಬೆಟ್ಟದ ಮೇಲೆ ನಾಯಕನ ಹಟ್ಟಿಯ ಕಸ್ತೂರಿ ಮಲ್ಲಪ್ಪನಾಯಕನು ನಿರ್ಮಿಸಿದ ಕೋಟೆಯಿದೆ. ಹಾಲಗಲ್ಲು, ಹನುಮನಗುಡ್ಡ, ಸಂತೇಗುಡ್ಡಗಳಲ್ಲಿ ಗ್ರಾಮಗಳ ಪಕ್ಕದಲ್ಲಿ ಗುಡ್ಡಗಳಿದ್ದು ಇವುಗಳಲ್ಲಿ ಕೋಟೆ ಗೋಡೆಗಳು ಹಾಗೂ ಅಲ್ಲಲ್ಲಿ ಬೆಟ್ಟಗಳ ತುದಿಗಳಲ್ಲಿ ಕಾವಲು ಗೋಪುರಗಳಿರುವುದನ್ನು ನೋಡಬಹುದು.

೨.೧೩. ಶಾಸನಗಳು

ಶಾಸನ ಎಂದರೆ, ರಾಜರ ಅಪ್ಪಣೆ ಅಥವಾ ರಾಜಾಜ್ಞೆಯಾಗಿದೆ. ಕಲ್ಲಿನ ಮೇಲೆ ಕೆತ್ತಿದ ಅಥವಾ ಕೊರೆದ ಬರವಣಿಗೆ(ಲಿಪಿ)ಯನ್ನು ಶಿಲಾಶಾಸನವೆಂದು ಕರೆಯಲಾಗುತ್ತದೆ. ಭಾರತದ ಉಪಖಂಡದಲ್ಲಿ ಅಶೋಕನೇ ಪ್ರಥಮ ಬಾರಿಗೆ ಪೂರ್ಣಪ್ರಮಾಣದ ಶಾಸನಗಳನ್ನು ಹೊರಡಿಸಿದ್ದರಿಂದ ಅವನನ್ನು ಭಾರತೀಯ ಶಾಸನಗಳ ಆದ್ಯ ಪ್ರವರ್ತಕನೆಂದು ಕರೆಯಲಾಗಿದೆ. ಅಶೋಕನು ನಾನು ಹೊರಡಿಸಿದ ಶಾಸನಗಳಿಗೆ ಧರ್ಮಲಿಪಿ ಅಥವಾ ಧರ್ಮಶಾಸನಗಳೆಂದು ಕರೆದುಕೊಂಡಿದ್ದಾರೆ. ಅವನು ಶಾಸನಗಳನ್ನು ಬರೆಸಲು ಬ್ರಾಹ್ಮಿಲಿಪಿ, ಪ್ರಾಕೃತ ಹಾಗೂ ಬಲದಿಂದ ಎಡಕ್ಕೆ ಬರೆಯುವ ಖರೋಷ್ಠಿ ಲಿಪಿಯನ್ನು (ಕತ್ತೆ ಮುಖದ ಲಿಪಿ) ಬಳಸಿದ್ದಾನೆ.

ಅಧ್ಯಯನ ಕ್ಷೇತ್ರ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಜಟಂಗಿರಾಮೇಶ್ವರ ಅಶೋಕ ಸಿದ್ದಾಪುರ, ಬ್ರಹ್ಮಗಿರಿ ಈ ಶಾಸನಗಳು ೧೮೯೨ರಲ್ಲಿ ಲೂಯಿ ರೈಸ್ ಪತ್ತೆ ಹಚ್ಚಿದರು. ಚಿನ್ನ ಹಗರಿಯ ಎಡ-ಬಲ ದಂಡೆಬೆಟ್ಟಗಳಲ್ಲಿ ಮೂರು ಶಾಸನಗಳನ್ನು ಒರಟಾದ ಹುಟ್ಟು ಹೆಬ್ಬಂಡೆಗಳ ಮೇಲೆ ಕೆತ್ತಲಾಗಿದೆ. ಬ್ರಹ್ಮಗಿರಿ ಶಾಸನವನ್ನು ಸ್ಥಳೀಯರು 'ಅಕ್ಷರಗುಂಡು' ಎಂದು ಕರೆಯುತ್ತಾರೆ. ೧೩ ಸಾಲುಗಳನ್ನು ಒಳಗೊಂಡಿದ್ದು ಇದರಲ್ಲಿ ಎಲ್ಲಾ ಸಾಲುಗಳು ಬ್ರಾಹ್ಮಿಲಿಪಿಯಲ್ಲಿದ್ದು, ಕೊನೆಯಲ್ಲಿ "ಲಿಪಿಕರೇಣ ಚಪಡ" ಎಂಬ ಪದವನ್ನು ಮಾತ್ರ ಖರೋಷ್ಠಿ ಲಿಪಿಯಲ್ಲಿ ಬರೆಯಲಾಗಿದೆ. ಈ ಶಾಸನದಲ್ಲಿ ಉಲ್ಲೇಖವಾಗಿರುವ 'ಸುವರ್ಣಗಿರಿ' ಎಂಬುದು ವಿದ್ವಾಂಸರ ಗಮನ ಸೆಳೆದಿದೆ. 'ಇಸಿಲಾ' ಎಂಬ ಪದ ತಜ್ಞರಲ್ಲಿ ಕುತೂಹಲ ಕೆರಳಿಸಿದೆ. ಬ್ರಹ್ಮಗಿರಿ ಸಮೀಪದ ಸಿದ್ಧಾಪುರದಲ್ಲಿದ್ದ ಸಿದ್ಧ(ಋಷಿ)ರಿಂದ 'ಇಸಿಲ'ವಾಗುವ ಸಾಧ್ಯತೆ ಇದೆಯೆಂದು ರೈಸ್‌ರವರು ಅಭಿಪ್ರಾಯಪಟ್ಟಿದ್ದಾರೆ. ಬಹುಶಃ ಬೌದ್ಧ ಭಿಕ್ಷುಗಳು ಅಥವಾ ಬೌದ್ಧ ಧರ್ಮ ಪ್ರಚಾರಕರು ಇಲ್ಲಿ ನೆಲಸಿದ್ದರಿಂದ ಈ ನೆಲೆಗೆ ಸಿದ್ಧರಪುರ (ಸಿದ್ಧಪುರ) ಎಂಬ ಹೆಸರು ಬಂದಿರಬಹುದೆಂದು ಅವರ ಊಹೆಗೆ ಕಾರಣವಿರಬೇಕು. ಅಶೋಕ ಸಿದ್ಧಾಪುರದ ಶಾಸನ ಬಂಡೆಯನ್ನು 'ಎಮ್ಮೆತಮ್ಮನ ಗುಂಡು' ಎಂದೇ ಜಟಂಗಿ ರಾಮೇಶ್ವರ ಗುಡ್ಡದ ಶಾಸನವನ್ನು 'ಬಳೆಗಾರರ ಗುಂಡು' ಎಂದು ಜನ ಸಂಬೋಧಿಸುತ್ತಾರೆ. ಜಟಂಗಿ ರಾಮೇಶ್ವರ ಬೆಟ್ಟದಲ್ಲಿರುವ ಕ್ರಿ.ಶ.೯೬೧ರ ಶಿಲಾ ಶಾಸನವು ರಾವಣನು ಸೀತೆಯನ್ನು ಅಪರಿಸಿದಾಗ ಜಟಾಯು ಕಾದಾಡಿ ಸತ್ತಿಂತಹ ಸ್ಥಳದಲ್ಲಿ ರಾಮನ ಪ್ರತಿಷ್ಠೆಗಾಗಿ ಒಂದು ಲಿಂಗವನ್ನು ಪ್ರತಿಷ್ಠಾಪಿಸಿ ಅಲ್ಲಿ ಒಂದು ದೇವಾಲಯವನ್ನು ಕಟ್ಟಿಸಿ ಕಳಸವನ್ನಿಟ್ಟು ಆ ಬೆಟ್ಟದಲ್ಲಿ ಇನ್ನು ಅನೇಕ ಚಿಕ್ಕ-ಚಿಕ್ಕ ದೇವಾಲಯಗಳನ್ನು ನಿರ್ಮಿಸಿ ದತ್ತಿಯನ್ನು ನೀಡಿರುವುದನ್ನು ಉಲ್ಲೇಖಿಸುತ್ತದೆ. ಇದೇ ಬೆಟ್ಟದಲ್ಲಿ ಸುಮಾರು ೧೨ ಶಾಸನಗಳು ಈ ದೇವಾಲಯ ಜೀರ್ಣೋದ್ಧಾರಕ್ಕಾಗಿ ಹಾಗೂ ನೈವೇದ್ಯ ರಂಗಭೋಗದ ವೈಭವಕ್ಕಾಗಿ ಹಲವಾರು ಗ್ರಾಮಗಳನ್ನು ದತ್ತಿ ದಾನ ನೀಡಿದ ವಿವರಗಳು ದೊರೆಯುತ್ತವೆ. ನುಂಕೇಮಲೆ ಬೆಟ್ಟದ ಮಲ್ಲಿಕಾರ್ಜುನ ದೇವಾಲಯದ ಹಿಂದೆ ಪಶ್ಚಿಮದ

ಹುಟ್ಟುಗುಂಡಿನಲ್ಲಿರುವ ಶಾಸನ ಕದಂಬರ ಅಜವರ್ಮ ಅರಸರು ನುಂಕೇಶ್ವರ ದೇವರಿಗೆ ದಾನ (ಉಂಬಳಿ) ಬಿಟ್ಟ ವಿಚಾರವನ್ನು ಪ್ರಸ್ತಾಪಿಸುತ್ತದೆ. ಹೀಗೆ ಈ ಬೆಟ್ಟದಲ್ಲಿ ಇನ್ನೂ ಇತರ ಶಾಸನಗಳಿದ್ದು ರಾಜರ ಹಾಗೂ ದಾನ-ದತ್ತಿಗಳ ವಿಚಾರವನ್ನು ಸ್ಪಷ್ಟಪಡಿಸುತ್ತದೆ. ಹಳೇದಡಗೂರಿನ ಕ್ರಿ.ಶ.೧೦೭೧ರ ಶಾಸನ ದಡಗೂರಿನ ಕಲಿದೇವರಿಗೆ ನೀಲಕಂಠಜಿಯರಿಗೆ ೧೨ ಮಸ್ತರು ಭೂಮಿಯನ್ನು ದಾನ ಮಾಡಿರುವುದು ಉಲ್ಲೇಖಿಸುತ್ತದೆ.[೧೮] ಕ್ರಿ.ಶ.೧೨೯೦ರ ರೊಪ್ಪದ (ಬ್ರಹ್ಮಗಿರಿಬಳಿ) ಬಡಕಲುಕುಂಟೆ ಬಳಿಯಗುಂಡಿನ ಶಾಸನ ಬಿಜಣದೇವನು ಶ್ರೀ ಬ್ರಹ್ಮೇಶ್ವರ ಮತ್ತು ರೊದ್ದಗ್ರಾಮಗಳ ಗೋವುಗಳನ್ನು ದಾನ ಮಾಡಿರುವುದು ಉಲ್ಲೇಖಿಸುತ್ತದೆ. ಇದರಿಂದ ತಿಳಿಯುವ ಮಹತ್ವ ವಿಷಯವೆಂದರೆ, ಇಲ್ಲಿ ಪ್ರಸ್ತಾಪಿಸಿರುವ 'ಬ್ರಹ್ಮೇಶ್ವರ ಮತ್ತು ರೊದ್ದ' ಈಗಿನ ಬ್ರಹ್ಮಗಿರಿ ಮತ್ತು ರೊಪ್ಪಗಳಿರಬಹುದು ಎಂದು ಊಹಿಸಬಹುದು. ಕರಡಿಹಳ್ಳಿಯ ಪಟೇಲರ ವಶದಲ್ಲಿದ್ದ ತಾಮ್ರಶಾಸನವು ವಿಜಯನಗರದ ಹರಿಹರನನ್ನು (ಹಕ್ಕಭೂಪತಿ) ಕುರಿತು ವಿವರಿಸುತ್ತದೆ. ಹರಿಹರಪುರ ಎಂಬ ಪ್ರತಿನಾಮ ಧ್ಯೇಯ ಹೊಂದಿದ್ದು ಈ ಗ್ರಾಮದ ದಾನದತ್ತಿ ವಿವರಗಳನ್ನು ಸ್ಪಷ್ಟಪಡಿಸುತ್ತದೆ. ನಾಗಸಮುದ್ರದ ಊರಭಾಗಿಲ ಬಳಿಯಿರುವ ೧೫೫೫ರ ಶಿಲಾಶಾಸನ ಸದಾ ಶಿವರಾಯನ ಕಾಲದಲ್ಲಿ ನಾಗಸಮುದ್ರದ ತಿಮ್ಮನಗೌಡನು ಕೆಲವೊಂದು ದಾನದತ್ತಿಗಳನ್ನು ನೀಡಿದ್ದನ್ನು ತಿಳಿಸುತ್ತದೆ. ಕರಡಿಹಳ್ಳಿ ಹನುಮಂತ ದೇವರ ಗುಡಿಯ ಮುಂದಿರುವ ಕ್ರಿ.ಶ.೧೫೫೬ರ ಶಿಲಾಶಾಸನ ಸದಾಶಿವರಾಯನ ಆಳ್ವಿಕೆಗೆ ಸಂಬಂಧಿಸಿದ ಶಾಸನವಾಗಿದೆ. ಕ್ರಿ.ಶ.೧೫೫೬ರ ಮುರುಡಿ ಗ್ರಾಮದ ಬಸವನಗುಡಿಯ ಹಿಂದಿರುವ ಶಿಲಾಶಾಸನ 'ಮುರುಡಿ' ಗ್ರಾಮವನ್ನು ಅಗ್ರಹಾರವನ್ನಾಗಿ ಪರಿವರ್ತಿಸಿದ ವಿಷಯ ಪ್ರಸ್ತಾಪಿಸುತ್ತದೆ.

೧೬೬೫ರ ಸಂತೇಗುಡ್ಡದ ಈಶ್ವರಯ್ಯನವರಲ್ಲಿದ್ದ ತಾಮ್ರಶಾಸನ 'ಬಾಣರವಿ' ದೇವಸ್ಥಾನಕ್ಕೆ ಭೂಮಿಯನ್ನು ದಾನ ಮಾಡಿದ ವಿವರನ್ನು ಸ್ಪಷ್ಟಪಡಿಸುತ್ತದೆ. ಮೊಳಕಾಲ್ಮೂರು ಬೆಟ್ಟದ ಮೇಲಿರುವ ಶಾಸನ ಕಾಳಿದಾಸನನ್ನು ಸ್ತುತಿಸುವ 'ಯಮಕ ಶ್ಲೋಕ' ಕಂಡುಬರುತ್ತದೆ. ಮೊಳಕಾಲ್ಮೂರು ತಾಲ್ಲೂಕಿನಲ್ಲಿ ದೊರೆತ ಅಶೋಕನ ಶಿಲಾಶಾಸನಗಳು ಅಂದಿನ ಕಾಲದ ಸಾಮಾಜಿಕ ಸ್ಥಿತಿಯನ್ನು ಸ್ವಲ್ಪ ಮಟ್ಟಿಗಾದರೂ ಪರಿಚಯಿಸುತ್ತವೆ. ಒಂದು ದೇಶದ ಇತಿಹಾಸವನ್ನು ರಚಿಸಲು ಶಾಸನಗಳು ಪ್ರಮುಖ ಪಾತ್ರವಹಿಸುತ್ತವೆ. ಸಾಹಿತ್ಯ ಹಾಗೂ ಇತರ ಆಧಾರಗಳು ಇತಿಹಾಸವನ್ನು ರಚಿಸಲು ಮೌನ ತಾಳಿದಾಗ ಈ ಶಾಸನಗಳು ಸಹಾಯಕವಾಗುತ್ತದೆ. ಹಾಗೆಯೇ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ೪೭ ಶಾಸನಗಳು ಇದ್ದು ಆ ಕಾಲದ ಚರಿತ್ರೆ ಮತ್ತು ಸಾಂಸ್ಕೃತಿಕ ವೈಭವವನ್ನು ಕಣ್ಮುಂದೆ ಕಟ್ಟಿಕೊಡುತ್ತವೆ.

೨.೧೪. ಮೊಳಕಾಲ್ಮೂರು ಪರಿಸರದ ಪ್ರಮುಖ ಜಾತ್ರೆಗಳು

"ತೇರಾದ ಮೇಲೆ, ಜಾತ್ರೆ ನಡೆಯಿತು ತೇರು ಆಯಿತು. ಹೇರು ಮಾತ್ರ ವ್ಯರ್ಥ ತಂದೆ" ಎಂಬ ಗಾದೆಗಳನ್ನು ಅವಲೋಕಿಸಿದಾಗ ಜಾತ್ರೆಗಳು ಜನಪದ ಸಂಸ್ಕೃತಿಯ ವಿಶಿಷ್ಟ ಪ್ರಕಾರವೆನ್ನಬಹುದು. ಜಾತ್ರೆ,

ತೇರು, ಪರಿಷೆ, ರಥೋತ್ಸವ ಉಚ್ಚಾಯ, ಪಲ್ಲಕ್ಕಿ ಇತ್ಯಾದಿ ಯಾವ ಹೆಸರಿನಿಂದ ಕರೆದರೂ ಎಲ್ಲಾ ಜಾತ್ರೆಗಳ ಸ್ವರೂಪ ಒಂದೇ. ಅಪಾರ ಜನಜಂಗುಳಿ, ಗದ್ದಲ, ಮನೋರಂಜನೆ, ಆಟೋಟಗಳು ವಿವಿಧ ರೀತಿಯ ಸರಕುಗಳ ವ್ಯಾಪಾರ, ದೇವರನ್ನು ಮೆರೆಸುವಿಕೆ, ಭಕ್ತಿಭಾವ ಸಮರ್ಪಣೆಯ ಹರಕೆ. ಇವು ಎಲ್ಲಾ ಜಾತ್ರೆಗಳ ಸಾಮಾನ್ಯನೋಟ. ಮಾನವ ದೇವರು ಧರ್ಮಗಳಲ್ಲಿನ ನಂಬಿಕೆ, ನಂಬಿಕೆಗೆ ತಕ್ಕ ಆಚರಣೆಯ ಹಿನ್ನಲೆಯಲ್ಲಿ ಜಾತ್ರೆ ಪ್ರಮುಖ ಪಾತ್ರವಹಿಸುತ್ತದೆ. ಮೊಳಕಾಲ್ಮೂರು ಪರಿಸರದಲ್ಲಿ ಜರುಗುವ ಜಾತ್ರೆಗಳನ್ನು ಸಂಕ್ಷಿಪ್ತವಾಗಿ ವಿಶ್ಲೇಷಿಸಬಹುದಾಗಿದೆ.

ಶಿರೇಕೊಳದಲ್ಲಿ ನಡೆಯುವ ಉತ್ಸವವು ಎರಡನೇ ಮಂತ್ರಾಲಯವೆಂದೇ ಪ್ರಸಿದ್ಧ ಪಡೆದಿರುವ ಶ್ರೀರಾಘುವೇಂದ್ರ ಸ್ವಾಮಿಗಳ ಮಠವಿದೆ. ೧೭೩೫ರಲ್ಲಿ ಇಲ್ಲಿನ ಶ್ಯಾನುಭೋಗರಾದ, ಹಿರೇಮದ್ದೂರಾಯರ ಅಕಳಂಕ ಪ್ರಾರ್ಥನೆಯ ಮೇರೆಗೆ ಸಾಕ್ಷಾತ್ ಶ್ರೀರಾಘುವೇಂದ್ರ ಗುರುಗಳೇ ಇಲ್ಲಿಗೆ ದಯಮಾಡಿಸಿದ್ದು ಶ್ರೀಯುತರ ಮನೆಯಲ್ಲಿ ನೆಲಸಿ, ಭಕ್ತರ ಕಂಟಕ ಪರಿಹಾರ ಮಾಡುತ್ತಿದ್ದರೆಂಬ ಪ್ರತೀತಿಯಿದೆ. ಈ ಮಠದಲ್ಲಿ ಶ್ರಾವಣ ಮಾಸದಲ್ಲಿ ಮೂರು ದಿನಗಳ ಕಾಲ ಸ್ವಾಮಿಯ ಆರಾಧನೆ ನಡೆಯುತ್ತದೆ. ಶ್ರೀರಾಮನವಮಿ ಭಾರತದೇಶದಲ್ಲಿ ಆರ್ಯ ಸಂಸ್ಕೃತಿಗೆ ಸೇರಿದ ಎಲ್ಲಾ ಜನರು ಆತ್ಮೀಯತೆಯಿಂದ ಆಚರಿಸುವ ಹೆಗ್ಗಳಿಕೆಯ ಉತ್ಸವಗಳಲ್ಲಿ ಒಂದು. ಇಂತಹ ಉತ್ಸವಗಳನ್ನು ಈ ಪರಿಸರದ ಚಿಕ್ಕೇರಹಳ್ಳಿ ಹಾಗೂ ಬೊಮ್ಮದೇವರ ಹಳ್ಳಿಗಳಲ್ಲಿ ಶ್ರೀ ರಾಮೋತ್ಸವವನ್ನು ತುಂಬಾ ವಿಜೃಂಭಣೆಯಿಂದ ಆಚರಿಸುತ್ತಾರೆ. ''ಉಂಡಿದ್ದೇ ಉಗಾದಿ, ಮಿಂದಿದ್ದೇ ದೀಪಾವಳಿ'' ಎಂಬಂತೆ. ತಾಲ್ಲೂಕಿನಾದ್ಯಂತ ಸಡಗರ ಸಂಭ್ರಮದಿಂದ ಆಚರಿಸುವ ವರ್ಷಾರಂಭವ ಯುಗಾದಿ ಹಬ್ಬವನ್ನು ಜಾತ್ರೆ ಹಾಗೂ ರಥೋತ್ಸವ ಎಳೆಯುವುದರ ಮೂಲಕ ಗೌರಸಮುದ್ರ ಹಾಗೂ ದೇವಸಮುದ್ರ ಗ್ರಾಮಗಳಲ್ಲಿ ಬಹುಸೊಗಸಾಗಿ ಆಚರಿಸುತ್ತಾರೆ. ಕರ್ನಾಟಕದ ತಿರುಪತಿಯಂತೆ ಬೇಡರಿಗೆ ವರದಾನವಾದ ನೆಲೆ ಕಂಪಳರಂಗ ಕ್ಷೇತ್ರ ದೇವರ ಜಾತ್ರೆಯಲ್ಲಿ ನಡೆಯುವ ಆಚರಣೆ ದನಗಳ ಜಾತ್ರೆ ವಿಶಿಷ್ಠವಾಗಿ ಕಂಡುಬರುತ್ತದೆ. ಸಿಡಿ ಆಡುವುದು ಜಾತ್ರೆಯ ವಿಶಿಷ್ಟ ಆಚರಣೆ. ನುಂಕೇಮಲೆ ಬೆಟ್ಟದಲ್ಲಿ ಸಿಡಿ ಆಡುವುದು ತಾಲ್ಲೂಕಿನಲ್ಲಿ ಪ್ರಸಿದ್ಧ ಪಡೆದ ಜಾತ್ರೆಯಾಗಿದೆ ಹಾಗೂ ನಾಗಸಮುದ್ರದ ಗ್ರಾಮದಲ್ಲಿಯ ಮಾರಮ್ಮದೇವಿಯ ಸಿಡಿ ಜರುಗುತ್ತದೆ. ಕರಿಬಸವೇಶ್ವರ ಜಾತ್ರೆ, ಜಹಗೀರ ಬುಡ್ಡೇನಹಳ್ಳಿಯಲ್ಲಿ ಜರುಗುತ್ತದೆ. ಹಂಪಿ ಹುಣ್ಣಿಮೆಯ ದಿನ ರಾಂಪುರ ಗ್ರಾಮದಲ್ಲಿ ಪೇಟೆ ಬಸವೇಶ್ವರ ರಥೋತ್ಸವ ವಿಜೃಂಭಣೆಯಿಂದ ಜರುಗುವುದು. ಬಿಳಿ ನೀರು ಚಿಲುಮೆ ಸ್ಥಳದಲ್ಲಿ ತಿಪ್ಪೇರುದ್ರಸ್ವಾಮಿಯ ರಥೋತ್ಸವವನ್ನು ಕಾರ್ತಿಕ ಮಾಸದಲ್ಲಿ ಉತ್ಸವ ಆಚರಿಸುತ್ತಾರೆ. ತಾಲ್ಲೂಕಿನಾದ್ಯಂತ ಹಿಂದೂ ಮುಸ್ಲಿಂ ಎಂಬ ಭೇದವಿಲ್ಲದೆ. ಸಾಮರಸ್ಯ, ಭಾವೈಕ್ಯತೆಯ ಪ್ರತೀಕವೆಂಬಂತೆ `ಮೊಹರಂ ಹಬ್ಬ'ವನ್ನು ತುಂಬಾ ಆನಂದದಿಂದ ಕುಣಿದು ಕುಪ್ಪಳಿಸಿ, ಆಚರಿಸುತ್ತಾರೆ.

೨.೧೫. ಕಲೆ-ಸಾಹಿತ್ಯ

ಸಾಹಿತ್ಯ ಕ್ಷೇತ್ರದಲ್ಲಿ ದುಡಿದು ಖ್ಯಾತನಾಮರಾದ ತ.ರಾ.ಸು ದಾಶರಥಿ ದೀಕ್ಷಿತ್, ಟಿ.ಕೆ.ರಾಮರಾವ್ ಇವರುಗಳು ತಮ್ಮ ಬಾಲ್ಯ ಜೀವನದ ಸೊಗಸನ್ನು ಮೊಳಕಾಲ್ಮೂರುವಿನಲ್ಲಿ ಕಳೆದಿರುವುದು ಈ ತಾಲ್ಲೂಕಿನ ವಿಶೇಷತೆ. ಮೊಳಕಾಲ್ಮೂರು ತಾಲ್ಲೂಕಿನ ಜನಪದ ಸಾಹಿತ್ಯ ಸಂಗ್ರಹದಲ್ಲಿ ಅಭಿರುಚಿಯುಳ್ಳ ಕತೆಗಾರರಾದ ಕೋ.ಶ.ವಿಶ್ವನಾಥ ಅವರು ಈ ತಾಲ್ಲೂಕಿನ ಕೋನ ಸಾಗರದವರು. ೧೯೩೫-೩೬ರಲ್ಲೇ ಮೊಳಕಾಲ್ಮೂರುವಿನ ಪವಿತ್ರ ಕ್ಷೇತ್ರ ನುಂಕೇಮಲೆಯ ಮಹತ್ವದ ಬಗ್ಗೆ ಕೃತಿ ರಚನೆ ಮಾಡಿದ ಎಂ.ರಂಗಪ್ಪನವರು ಮೊಳಕಾಲ್ಮೂರು ಊರಿನವರು. ಕವಿತೆ, ನಾಟಕ, ಕಾದಂಬರಿ, ಆಧ್ಯಾತ್ಮಕೃತಿಗಳನ್ನು ಬರೆದ ಹಲವಾರು ಸಾಹಿತಿಗಳು ಇಲ್ಲಿದ್ದಾರೆ. ಮುಖ್ಯವಾಗಿ ವಸಂತ ಮಾಸ್ಟರ್, ಬಿ.ಜಿ.ಕೆರೆ ಪೆನ್ನಯ್ಯ, ಗುರುದಾಸ(ಕೆ.ನರಸಿಂಹ ಮೂರ್ತಿ) ಮೊಳಕಾಲ್ಮೂರು ಶ್ರೀನಿವಾಸ ಮೂರ್ತಿ, ಕೆ.ಎನ್.ಭೀಮಾರೆಡ್ಡಿ, ಮರಿಕುಂಟೆ ತಿಪ್ಪೇಸ್ವಾಮಿ ಮುಂತಾದವರು ಈ ತಾಲ್ಲೂಕಿನ ಪ್ರತಿಭಾವಂತ ಲೇಖಕರಾಗಿರುತ್ತಾರೆ.

''ಕನ್ನಡದಲ್ಲಿ 'ಅನುಭವಾಮೃತ' ವೆಂಬ ಶ್ರೇಷ್ಠ ಕೃತಿರಚನೆ ಮಾಡಿದ ಹಿರಿಯ ಕವಿ ಮಹಾಲಿಂಗರಂಗನ ಈ ತಾಲ್ಲೂಕಿನ ಉಚ್ಚಂಗಿ ದುರ್ಗ. ಅಥವಾ (ಹಿರೇ ಆರ್ಯರ ಗುಡ್ಡ)ದವನು''[೧೯] ತತ್ವ ಪದಗಳು, ಲಾವಣಿ, ಜನಪದ ಸಾಹಿತ್ಯ ರಚಿಸಿರುವ ಅನಾಮಧೇಯ ಪ್ರತಿಭಾವಂತರ ಸಂಖ್ಯೆ ಇಲ್ಲಿ ಸಾಕಷ್ಟಿದೆ. ನಾಟಕ, ಕಲೆ, ಜಾನಪದ ಕಲೆಗಳಿಗೆ ಈ ತಾಲ್ಲೂಕು ತುಂಬಾ ಪ್ರಸಿದ್ಧಿ ಪಡೆದಿದೆ. ಕಂಬಾರರ 'ಸಂಗ್ಯಾಬಾಳ್ಯ' ನಾಟಕವನ್ನು ಹೋಲುವ 'ಮಾಸ್ಟರ್ ಕಥೆ'' ಎಂಬ ಬಯಲಾಟ ಈ ತಾಲ್ಲೂಕಿನ ಹಳ್ಳಿಗಳಲ್ಲಿ ವಿಶೇಷವಾಗಿ ಪ್ರದರ್ಶಿತವಾಗುವುದು. ಹವ್ಯಾಸಿ ಕಲಾವಿದರು ಮಳೆ-ಬೆಳೆಗಳನ್ನು ಅವಲಂಬಿಸಿಕೊಂಡು ಸಾಮಾಜಿಕ ನಾಟಕ ಸ್ತ್ರೀಪಾತ್ರಧಾರಿಗಳನ್ನು ಕರೆಯಿಸಿಕೊಂಡು ಆಡುತ್ತಾರೆ. ಜೋಗೇಶ ಪದಗಳು, ಹಾಡುವಿಕೆ, ಗೋಷ್ಠಿಗಳು ಅಲ್ಲಲ್ಲಿ ನಡೆಯುತ್ತವೆ. ಗಣೇಶನ ಹಬ್ಬದಲ್ಲಿ ಸುಂದರವಾದ ಗಣಪತಿ ವಿಗ್ರಹಗಳನ್ನು ತಯಾರಿಸುವ ಕುಶಲಕರ್ಮಿಗಳು ತಾಲ್ಲೂಕಿನಲ್ಲಿ ಅಲ್ಲಲ್ಲಿ ಕಂಡುಬರುತ್ತಾರೆ. ತಿಮ್ಮಲಾಪುರ ಹಾಗೂ ಕಾಡುಸಿದ್ದಾಪುರದ ಕುರುಬರ ಸಂಘದವರು ಡೊಳ್ಳು ಕುಣಿತದಲ್ಲಿ ಪರಿಣತಿ ಪಡೆದವರಾಗಿದ್ದು, ಇಡೀ ತಾಲ್ಲೂಕಿನಾದ್ಯಂತ ಹೆಸರು ಪಡೆದಿದ್ದಾರೆ. ಜೋಗತಿಯವರು ತಮ್ಮ ಚೌಡಕಿಯೊಂದಿಗೆ ಸುಶ್ರಾವ್ಯವಾಗಿ ಹಾಡುತ್ತಾ ಅನೇಕ ಹಳ್ಳಿಗಳಲ್ಲಿ ಗೋಷ್ಠಿಗಳನ್ನು ನಡೆಸಿ, ಮನರಂಜನೆಯೊಂದಿಗೆ, ಜನಪದ ಗೀತೆಗಳನ್ನು ಪೋಷಿಸಿಕೊಂಡು ಬರುತ್ತಿರುವುದು ಸಂತಸದ ಸಂಗತಿಯಾಗಿದೆ. ಕೋಲಾಟ ಹಾಗೂ ಭಜನೆ ಕಾರ್ಯಕ್ರಮಗಳು ತೆಂಗಿನ ಗೌರಸಮುದ್ರದಲ್ಲಿ ವಿಶೇಷವಾಗಿ ಮೆರುಗನ್ನು ತಂದುಕೊಡುತ್ತವೆ. ಈ ತಾಲ್ಲೂಕು ಬಯಲು ಸೀಮೆಗೆ ಸೇರಿದ ಪ್ರದೇಶವಾಗಿದೆ. ಇಲ್ಲಿ ಪ್ರತಿಮೂರು ವರುಷಕ್ಕೊಮ್ಮೆ ತೀವ್ರ ಅಭಾವ ಪರಿಸ್ಥಿತಿಯುಂಟಾಗುತ್ತದೆ. ಈ ತಾಲ್ಲೂಕಿನಲ್ಲಿ ಮೊಳಕಾಲ್ಮೂರು ರಾಂಪುರ, ಹಾಗೂ ಬೊಮ್ಮಗೊಂಡನ ಕೆರೆಯಲ್ಲಿ ತಲಾ ಒಂದೊಂದು ಮಳೆ ಮಾಪನ ಕೇಂದ್ರಗಳಿವೆ.

ಮೊಳಕಾಲ್ಮೂರುವಿನಲ್ಲಿ ತಯಾರಾಗುವ ರೇಷ್ಮೆ ಸೀರೆಗಳು ಜಗದ್ವಿಖ್ಯಾತ ಪಡೆದಿವೆ. ಕುಸುರಿಕೆಲಸ, ಉಪಯೋಗಿಸುವ ಜರಿಯ ಗುಣಮಟ್ಟದಿಂದಾಗಿ ಬೇಡಿಕೆ ಬಹಳವಾಗಿದೆ. ಸೀರೆ ನೇಯ್ಗೆ ನೂರಾರು ಕುಟುಂಬಗಳ ಮುಖ್ಯ ಕುಸುಬಾಗಿದೆ. ಕೊಂಡ್ಲಹಳ್ಳಿ ಮೊಗಲಹಳ್ಳಿ ಮುಂತಾದ ಹಳ್ಳಿಗಳು ನಾಗಸಮುದ್ರ ಕಂಬಳಿ ನೇಯ್ಗೆಗೆ ಹೆಸರಾಗಿವೆ. ಹೊರ ರಾಜ್ಯಗಳಲ್ಲೂ ಇವುಗಳ ಬೇಡಿಕೆ ಇದೆ.

ಮೊಳಕಾಲ್ಮೂರು ತಾಲ್ಲೂಕಿನ ಮುಖ್ಯಕಸುಬು ವ್ಯವಸಾಯ, ಇಲ್ಲಿ ಹೆಚ್ಚಾಗಿ ಒಣ ಬೇಸಾಯದ ಕ್ಷೇತ್ರವಿರುತ್ತದೆ. ಇಲ್ಲಿನ ಮುಖ್ಯಬೆಳೆಗಳು, ಸಜ್ಜೆ, ಜೋಳ, ಶೇಂಗಾ, ರಾಗಿ, ಹತ್ತಿ, ಸ್ವಲ್ಪಮಟ್ಟಿಗೆ ದ್ವಿದಳ ಧಾನ್ಯಗಳು ಕಂಡುಬರುತ್ತವೆ. ಮೊಳಕಾಲ್ಮೂರು ಪರಿಸರದಲ್ಲಿ ಶೇಂಗಾ ಬೆಳೆಯನ್ನು ಅತಿ ಹೆಚ್ಚಾಗಿ ಬೆಳೆಯುತ್ತಾರೆ. ಶೇಂಗಾಬೆಳೆ ತಾಲ್ಲೂಕಿನ ಜೀವಬೆಳೆ, ಸತತ ಮಳೆಯ ಅಭಾವ ಹಾಗೂ ಬರದ ಬವಣೆಯಲ್ಲಿರುವ ಈ ತಾಲ್ಲೂಕಿನ ಆರ್ಥಿಕ ಚಟುವಟಿಕೆಯ ಮೂಲ ಶೇಂಗಾ ಬೆಳೆಯನ್ನೇ ಆಧರಿಸಿದೆ. ಕಡಿಮೆ ಮಳೆ ಹಾಗೂ ಬರದ ಛಾಯೆಯ ನಡುವೆಯಲ್ಲಿ ಬೆಳೆಯುವ ಬೆಳೆ ಶೇಂಗಾವೊಂದೇ ಎಂದು ಇಲ್ಲಿನ ಜನ ಸಾಮಾನ್ಯರ ನಂಬಿಕೆ. ಹೇಗೋ ಸೇಂಗಾ ಬಿತ್ತಿದಾಗ ಹಾಗೂ ಹುಂಡು ಇಳಿಯುವಾಗ ನಾಲ್ಕು ಮಳೆಹನಿಯಾದರೂ ಸಾಕು ಶೇಂಗಾಬೆಳೆ ಕೈಗೆ ದಕ್ಕಿ ಬಿಡುತ್ತದೆ ಎನ್ನುವ ನಂಬಿಕೆ ಇಲ್ಲಿನ ಜನತೆಯಲ್ಲಿ ಬೇರೂರಿದೆ. ಹೀಗಾಗಿ ಈ ಪರಿಸರದ ಜೀವನಾಧಾರಿತ ಬೆಳೆ ಎಂದರೆ, ಶೇಂಗಾ ಬೆಳೆಯೇ ಆಗಿಬಿಟ್ಟದೆ. ಶೇಂಗಾ ಬೆಳೆಯೇ ಜೀವ ಜಾಲದ ಮೂಲ.

೨.೧೬. ಮೊಳಕಾಲ್ಮೂರು ಪರಿಸರದ ಪ್ರೇಕ್ಷಣೀಯ ಸ್ಥಳಗಳು

ಮೊಳಕಾಲ್ಮೂರು ಪ್ರದೇಶವು ಐತಿಹಾಸಿಕ ಮಹತ್ವ ಪಡೆದ ತಾಲ್ಲೂಕಾಗಿದೆ. ದಕ್ಷಿಣ ಭಾರತದಲ್ಲಿ ಅಶೋಕನ ಶಿಲಾಶಾಸನಗಳಿಂದ ಪ್ರಸಿದ್ಧಿಪಡೆದಿದೆ. ಈ ಪರಿಸರದಲ್ಲಿ ಅನೇಕ ಸಾಂಸ್ಕೃತಿಕ ಹಾಗೂ ಪ್ರೇಕ್ಷಣೀಯ ಸ್ಥಳಗಳಿರುವುದು ವಿಶಿಷ್ಟ ಸಂಗತಿ. ಕನ್ನಡದ ಶಾಸನೋಕ್ತ ಪ್ರಥಮ ಗ್ರಾಮವಾದ 'ಇಸಿಲ'ವು ಮೊಳಕಾಲ್ಮೂರು ಪ್ರದೇಶದಲ್ಲಿರುವುದು ಹೆಮ್ಮೆಯ ಸಂಗತಿ. ತಾಲ್ಲೂಕಿನ ಹೆಗ್ಗಳಿಕೆ, ಅಲ್ಲದೆ ಅಶೋಕನ ಬ್ರಹ್ಮಗಿರಿ ಶಾಸನದಲ್ಲಿ ಪ್ರಸ್ತಾಪಿಸಿದ 'ಇಸಿಲ' ಸುವರ್ಣಗಿರಿ, ಪ್ರದೇಶಗಳು ಮೊಳಕಾಲ್ಮೂರು ಪರಿಸರದಲ್ಲಿವೆ. ಬಂಡೆಗಲ್ಲಿನ ಅಶೋಕನ ಶಾಸನ ಹಾಗೂ ಬ್ರಹ್ಮಗಿರಿಯು ಅನೇಕ ಪ್ರವಾಸಿಗರನ್ನು ಕೈಬೀಸಿ ಕರೆದು ಚರಿತ್ರೆಯನ್ನು ಸಾರುತ್ತದೆ. ಅಲ್ಲದೆ, ಸಾಂಸ್ಕತಿಕ ವೈಭವವನ್ನು ಸಾರುವ ಪೌರಾಣಿಕ ಕಥೆಯನ್ನು ಕಣ್ಮುಂದೆ ಕಟ್ಟಿಕೊಡುವ ಜಟಂಗಿ ರಾಮೇಶ್ವರ ಬೆಟ್ಟವು ಶ್ರೀರಾಮನು ಜಟಾಯುವಿಗೆ ಅಗ್ನಿಸಂಸ್ಕಾರ ಮಾಡಿದ ಪುಣ್ಯಕ್ಷೇತ್ರವಾಗಿ ಐತಿಹಾಸಿಕ ಮಹತ್ವ ಪಡೆದಿದೆ. ಕದಂಬರ ಮಯೂರವರ್ಮ ನಿರ್ಮಿಸಿರುವ ಶ್ರೀ ನುಂಕೇಮಲೆ ಭೈರವನ ಬೆಟ್ಟದ 'ಲುಂಕೆಕೋಟೆ' ಇಲ್ಲಿ ನಡೆಯುವ ಸಿಡಿ ಉತ್ಸವಕ್ಕೆ ರಾಜ್ಯದ ಮೂಲೆಗಳಿಂದ ಸಹಸ್ರಾರು ಜನರು ಆಗಮಿಸುವ ಕ್ಷೇತ್ರವಾಗಿದೆ. ಜೋಗಪ್ಪಗುಡ್ಡ ಇದನ್ನು

'ಕದಂಬಗುಡ್ಡ'ವೆಂತಲೂ ಕೂಗುಬಂಡೆ ಮೊಳಗುವ ಕಲ್ಲು ಎಂತಲೂ ನಾಮಕರಣಗೊಂಡು ಮೊಳಕಾಲ್ಮೂರು ಪ್ರದೇಶದಲ್ಲಿ ಐತಿಹಾಸಿಕ ಮಹತ್ವ ಪಡೆದಿದೆ. ಸಂತೇಗುಡ್ಡ ಕೋಟೆಯು ಪಾಳೇಗಾರರ ಗಡಿರಕ್ಷಣಾ ಕೋಟೆಯಾಗಿ ಪ್ರಸಿದ್ಧಯಾಗಿದೆ. ರೇಷ್ಮೆ ಸೀರೆ ತಯಾರಿಕೆಯಲ್ಲಿ ಮೊಳಕಾಲ್ಮೂರು ರಾಜ್ಯದಲ್ಲಿಯೇ ಹೆಸರನ್ನು ಪಡೆದುಕೊಂಡಿದೆ. ಶಿರೇಕೊಳದ ರಾಘುವೇಂದ್ರ ಸ್ವಾಮಿಗಳ ಮಠ. ದೇವಸಮುದ್ರ ಪರಮೇಶ್ವರ ಸ್ವಾಮಿಮಠ. ಕಂಪಳರಂಗ ಕ್ಷೇತ್ರ ಹೀಗೆ ಧಾರ್ಮಿಕವಾಗಿ ಮಹತ್ವ ಪಡೆದ ಸ್ಥಳಗಳಿವೆ. ಕಾಡುಸಿದ್ಧಾಪುರದಲ್ಲಿನ ಶವಸಂಸ್ಕಾರ ಪದ್ಧತಿ, ಕೋನಸಾಗರ ಬಳಿ ಇರು 'ಬಿಳಿನೀರು ಚಿಲುಮೆ' ಬ್ರಹ್ಮಗಿರಿಯ ತಪ್ಪಲಲ್ಲಿರುವ ರೊಪ್ಪಗ್ರಾಮದ ಮೋರ್ಯರ ಮನೆಗಳು, ಪೂರ್ವಿಕರ ಸಮಾಧಿಗಳು ಬಾಂಡ್ರಾವಿ ಅರಣ್ಯ ಪ್ರದೇಶ. ಸಂತೇ ಗುಡ್ಡದ ಪಾಳೆಗಾರರ ಸಂಸ್ಕೃತಿಯ ತಾಣಗಳು, ತಾಲ್ಲೂಕಿನಲ್ಲಿ ಹಾವಿನೋಪಾದಿಯಲ್ಲಿ ಹರಿಯುವ ಹಗರಿ, ಅಘಹರಿ - ಪಾಪನಾಶಿನಿ - ಹನೆಯನದಿ, ಚಿನ್ನಹಗರಿ ಎಂದು ನಾನಾ ಹೆಸರುಗಳಿಂದ ಪ್ರಸಿದ್ಧಿ ಪಡೆದಿದೆ. ಅಶೋಕನ ಶಿಲಾಶಾಸನಗಳು, ಬ್ರಹ್ಮಗಿರಿ, ಜಟಂಗಿ ರಾಮೇಶ್ವರದಲ್ಲಿರುವ ದೇವಾಲಯಗಳು ಸಾಂಸ್ಕೃತಿಕ ಸಂದೇಶವನ್ನು ಸಾರುತ್ತವೆ. ಹೀಗೆ ಮೊಳಕಾಲ್ಮೂರು ಪರಿಸರವು ಐತಿಹಾಸಿಕವಾಗಿ, ಸಾಂಸ್ಕೃತಿಕ, ಪ್ರೇಕ್ಷಣೀಯ ಸ್ಥಳಗಳು ಒಳಗೊಂಡಿರುವುದನ್ನು ಕಾಣುತ್ತೇವೆ. ಈ ತಾಲ್ಲೂಕಿಗೆ ಸಂಬಂಧಿಸಿದಂತೆ ಒಟ್ಟು ೪೭ ಶಾಸನಗಳು ದೊರೆತ್ತಿದ್ದು ತಾಲ್ಲೂಕಿನ ಬೌದ್ಧ, ಜೈನ, ಶೈವ, ವೈಷ್ಣವ, ಧಾರ್ಮಿಕತೆಯನ್ನು ಎತ್ತಿ ತೋರಿಸುತ್ತದೆ. ಅಲ್ಲದೆ ಪ್ರಾಚೀನ ಪುರಾತತ್ವ ಪರಿಸರವನ್ನು ನೆನಪಿಗೆ ತಂದುಕೊಡಬಲ್ಲದು.

ಅಡಿಟಿಪ್ಪಣಿಗಳು

೧. **ಕರ್ನಾಟಕ ರಾಜ್ಯಗ್ಯಾಸೆಟಿಯರ್ ಭಾಗ - ಮೂರು,** ಸಂ. ಸೂರ್ಯನಾಥ, ಯು.ಕಾಮತ್, ಪು.೫೮೧

೨. **ಮೊಳಕಾಲ್ಮೂರು ತಾಲ್ಲೂಕು ದರ್ಶನ,** ಕೆ.ಎನ್.ಭೀಮಾರೆಡ್ಡಿ, ಪು.೧೪

೩. **ಚಿತ್ರದುರ್ಗ ಜಿಲ್ಲಾ ದರ್ಶಿನಿ,** ಟಿ.ಗಿರಿಜ, ಪು.೨೪೩

೪. **ಮೊಳಕಾಲ್ಮೂರು ತಾಲ್ಲೂಕು ದರ್ಶನ,** ಕೆ.ಎನ್.ಭೀಮಾರೆಡ್ಡಿ, ಪು.೬

೫. ಅದೇ, ಪು.೧೩

೬. **ಎಪಿಗ್ರಾಫಿ ಕರ್ನಾಟಿಕಾ,** ಸಂ.೧೧, ಮೊಳಕಾಲ್ಮೂರು ಶಾ.ಸಂ.೩೭

೭. **ಮೊಳಕಾಲ್ಮೂರು ತಾಲ್ಲೂಕು ದರ್ಶನ,** ಕೆ.ಎನ್.ಭೀಮಾರೆಡ್ಡಿ, ಪು.೧೫

೮. **ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನಾ ಲೇಖನಗಳು,** ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ ಎಂ.ವಿ.ಸಂ., ಪು.೪೬೬

೯. **ಸುಂಕೇಮಲೆ ಭೈರವಾರಾಧನೆ ಹೊಳಹು.** ಸಿದ್ಧಣ್ಣ, ಎಂ.ಫಿಲ್.ಅಪ್ರಕಟಿತ ನಿಭಂದ, ಪು.೨

೧೦. **ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು,** ಡಾ.ವಿರೂಪಾಕ್ಷಿ ಪೂಜಾರಿಹಳ್ಳಿ, ಪು.೯೯

೧೧. ಅದೇ, ಪು.೫೨

೧೨. **ದುರ್ಗಸಿರಿ, ಸ್ಮರಣ ಸಂಚಿಕೆ,** ದುರ್ಗೋತ್ಸವ, ಪು.೯೮

೧೩. ಮೊಳಕಾಲ್ಮೂರು ತಾಲ್ಲೂಕಿನ ಪುರಾತತ್ವೀಯ ಪರಿಸರ, ಯು.ಜಯಣ್ಣ, ಪಿ.ಹೆಚ್ .ಡಿ.ಅಪ್ರಕಟಿತ ಪ್ರಬಂಧ., ಕ.ವಿ.ಹಂಪಿ, ಪು.೧೮೯

೧೪. ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು, ಎಂ.ಚಿದಾನಂದಮೂರ್ತಿ, ಪು.೭

೧೫. ಮೊಳಕಾಲ್ಮೂರು ತಾಲ್ಲೂಕಿನ ಪುರಾತತ್ವೀಯ ಪರಿಸರ, ಯು.ಜಯಣ್ಣ, ಪಿ.ಎಚ್ ಡಿ ಅಪ್ರಕಟಿತ ಪ್ರಬಂಧ, ಕ.ವಿ.ಹಂಪಿ, ಪು.೨೧೦

೧೬. ಕರ್ನಾಟಕ ರಾಜ್ಯ ಗ್ಯಾಜೆಟಿಯರ್, ಭಾಗ-೩, ಸಂ. ಸೂರ್ಯನಾಥ, ಯು.ಕಾಮತ್, ಪು.೫೮೧

೧೭. ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನಾ ಲೇಖನಗಳು, ಸಂ. ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ ಎ.ಎಂ., ಪು.೩೪೯

೧೮. ಎಪಿಗ್ರಾಫಿಯಾ ಕರ್ನಾಟಕ, ಸಂ.೧೧, ಮೊಳಕಾಲ್ಮೂರು, ೨೮

೧೯. ಮೊಳಕಾಲ್ಮೂರು ತಾಲ್ಲೂಕು ದರ್ಶನ, ಕೆ.ಎನ್.ಭೀಮಾರೆಡ್ಡಿ, ಪು.೩೩

ಅಧ್ಯಾಯ ೩

ಸ್ಥಳನಾಮಗಳು : ಭಾಷಿಕ ವಿವೇಚನೆ

೩

ಸ್ಥಳನಾಮಗಳು : ಭಾಷಿಕ ವಿವೇಚನೆ

ಪ್ರಾಚೀನ ಮಾನವ ತನ್ನಲ್ಲಿ ಹುದುಗಿರುವ ಭಾವನೆಗಳನ್ನು ಅಭಿವ್ಯಕ್ತಿಪಡಿಸುವ ಸಲುವಾಗಿ 'ಭಾಷೆ'ಯನ್ನು ಕಂಡುಕೊಂಡ, ತರುವಾಯ ತನ್ನ ಉದರ ಪೋಷಣೆಗಾಗಿ, ವನ್ಯ ಜೀವಿಗಳಂತೆ ಕಾಡಿನಿಂದ ಕಾಡಿಗೆ ಅಲೆದಾಡಿ ಆಹಾರ ಸಂಗ್ರಹಿಸುವುದನ್ನು ಕಲಿತನು. ಈ ರೀತಿಯಾಗಿ ಬದುಕುತ್ತಿದ್ದ ಮಾನವ ನಿಂತ ನೆಲೆಯಲ್ಲಿ ನಿಲ್ಲದೆ ಎಷ್ಟೋ ಶತಮಾನಗಳವರೆಗೆ ಅಲೆಮಾರಿಯಾಗಿ ಸಂಚರಿಸುತ್ತಾ ಕಾಲವನ್ನು ಸವೆಸುತ್ತಿದ್ದನು. ಈತನಿಗೆ ಭೌದ್ಧಿಕ ಚಿಂತನೆ ಹೆಚ್ಚಾದಂತೆಲ್ಲಾ ಕಾಲಕ್ರಮದಲ್ಲಿ ತನ್ನ ಜೀವನಕ್ಕೆ ಹೊಂದಿಕೆಯಾಗುವಂತಹ ಪರಿಸರವೊಂದರಲ್ಲಿ ನೆಲೆನಿಂತನು. ಹೀಗೆ ನೆಲೆನಿಂತ ಸ್ಥಳಗಳೇ ವಸತಿಗಳಾದವು. ಅವು ಮುಂದೆ ಹಟ್ಟಿಗಳಾಗಿ, ಹಳ್ಳಿ, ಊರು, ಗ್ರಾಮ, ನಗರ, ಪಟ್ಟಣ ಮೊದಲಾದವು ಸ್ಥಳನಾಮಗಳಾಗಿ ಮಾರ್ಪಟ್ಟವು.

'ಸ್ಥಳನಾಮ'ವೆಂದರೆ, ಊರ ಹೆಸರುಗಳು, ಗ್ರೀಕ್ ಭಾಷೆಯಲ್ಲಿ 'ಟೋ ಪೋಸ್' ಎಂದರೆ ಸ್ಥಳಗಳು 'ನೋಮೋಸ' ಎಂದರೆ ಹೆಸರುಗಳು. ಆದ್ದರಿಂದ ಸ್ಥಳಗಳ ಹೆಸರುಗಳನ್ನು ಅಧ್ಯಯನ ಮಾಡುವ ವಿಜ್ಞಾನಕ್ಕೆ 'ಟೋಪೋನೋಮಿ' ಎಂದು ಕರೆಯಲಾಗಿದೆ.[೧] 'ಟೋಪೋಸ್' ಮೂಲತಃ ಭೂವಿವರವನ್ನು ಸೂಚಿಸುವ ಅರ್ಥಹೊಂದಿದ್ದರೂ, ಇಲ್ಲಿ ಪಾರಿಭಾಷಿಕವಾಗಿ ಪ್ರಾಕೃತಿಕ ಮತ್ತು ಸಾಂಸ್ಕೃತಿಕ ವೈಲಕ್ಷಣ್ಯಗಳೆರಡನ್ನು ಇದು ಒಳಗೊಂಡಿದೆ. ಭಾರತದಲ್ಲಿ ಇಂಥ ಭೌಗೋಳಿಕ ನಾಮ ಅಥವಾ ದೇಶನಾಮಗಳಿಗೆ ಪ್ರಾದೇಶಿಕ ಭಾಷೆಗಳಲ್ಲಿ ಗ್ರಾಮನಾಮ. (ಹಿಂದೂಸ್ತಾನಿ) ಊರಪೇರ್ಲು(ತೆಲುಗು) ಇಡಂ ಪೆಯರ್ (ತಮಿಳು) ಊರ ಹೆಸರು (ಕನ್ನಡ) ಮುಂತಾದ ಪರ್ಯಾಯ ಪದಗಳನ್ನು ಬಳಸಲಾಗಿದೆ. ಊರು, ಪುರ, ಗ್ರಾಮ, ದೇಶ ಮುಂತಾದ ಪದಗಳಿಗೆ ಪಾರಂಪರಿಕವಾದ ಸೀಮಿತ ಅರ್ಥಗಳಿರುವುದರಿಂದ ಉಳಿದ ಸಮುದಾಯಿಕ ಮಾನವ ನೆಲೆಗಳ ಅರ್ಥವನ್ನು ಅವು ಒಳಗೊಳ್ಳುವುವು.

ಸ್ಥಳನಾಮಗಳ ಅಧ್ಯಯನಕ್ಕೂ, ಭಾಷೆಯ ಅಧ್ಯಯನಕ್ಕೂ ಪರಸ್ಪರ ನಿಕಟ ಸಂಬಂಧವಿದೆ. ಒಂದು ರೀತಿಯ ಅವಿನಾಭಾವ ಸಂಭಂದ ಹಾಗೂ ಕಳ್ಳುಬಳ್ಳಿ ಸಂಬಂಧವೆಂತಲೂ ಹೇಳಬಹುದು. ಸ್ಥಳನಾಮಗಳ ಖಚಿತತೆ(ಸ್ಪಷ್ಟತೆ)ಗೆ ಭಾಷೆ ಬಹುಮುಖ್ಯ ವಾಹಕವಾಗಿದೆ. ಸ್ಥಳನಾಮಗಳ ಶೋಧನೆಗೆ

ತೊಡಗಿದ ಅಧ್ಯಯನಕಾರನಿಗೆ ಭಾಷೆಯ ವಿವಿಧ ಮಗ್ಗಲುಗಳನ್ನು ಸ್ಪರ್ಶಿಸಿ ಪದರು ಪದರುಗಳನ್ನು ತೆರೆದು ನೋಡಿದಂತೆ, ಕೆಲವು ಸೂಕ್ಷ್ಮ ಒಳನೋಟಗಳ ಮೂಲಕ ಮಹತ್ವದ ಮಾಹಿತಿಯು ದೊರೆಯುತ್ತದೆ. ಹೀಗಾಗಿ ಸ್ಥಳನಾಮ ಶಾಸ್ತ್ರ ಮತ್ತು ಭಾಷಾಶಾಸ್ತ್ರ ಒಂದಕ್ಕೊಂದು ಅವಿನಾಭಾವ ಸಂಬಂಧ ಪಡೆದ ವಿಷಯಗಳಾಗಿವೆ. ''ಭಾಷಾ ವಿಜ್ಞಾನದ ದೃಷ್ಟಿಯಿಂದ ಸ್ಥಳನಾಮ ಸಂಶೋಧನೆಗೆ ಎತ್ತರದ ಸ್ಥಾನವಿದೆ.''[೭]

ಭಾಷೆಯೆನ್ನುವುದು ನಿಂತ ನೀರಲ್ಲ, ಹರಿಯುವ ನದಿ, ಭಾಷೆಯೆನ್ನುವುದು ಕೊನೆಯದ ಕೊರಡಲ್ಲ. ಕೊನೆಯುವ ಕೊರಡು. ಈ ಮಾತುಗಳು ಭಾಷೆಯ ನಿತ್ಯ ಪರಿವರ್ತನಾ ಶೀಲತೆಯನ್ನು ಧ್ವನಿಸುತ್ತವೆ. ''ಪರಿವರ್ತನೆ ಭಾಷೆಯೊಂದರ ಜೀವಂತಿಕೆಗೆ ಸಾಕ್ಷಿ'' ಭಾಷೆಯ ಪರಿವರ್ತನಾ ಶೀಲತೆಯಿಂದಾಗಿಯೇ ಎಂದೋ ಇಟ್ಟ ಸ್ಥಳನಾಮಗಳು ಇಂದು ಒಗಟಿನಂತೆ ಜಿಗುಟಾಗಿ ಕಾಣಬರುತ್ತವೆ. ಮೂಲಹೆಸರು ಕಗ್ಗಂಟಿನಂತೆ ಕಾಣಬರುತ್ತವೆ. ಸ್ಥಳನಾಮಗಳು ಭಾಷಿಕ ಘಟಕಗಳೇ ಆದ್ದರಿಂದ ಭಾಷಾ ವಿಜ್ಞಾನಿಗಳು ಸ್ಥಳನಾಮೇತರ ಭಾಷಾ ಘಟಕಗಳನ್ನು ಭಾಷಾ ಶಾಸ್ತ್ರದ ದೃಷ್ಟಿಯಿಂದ ಹೇಗೆ ಪರಿಶೀಲಿಸುತ್ತಾರೋ, ಅದೇ ರೀತಿಯಲ್ಲಿ ಸ್ಥಳನಾಮಗಳನ್ನು ಪರಿಶೀಲಿಸುತ್ತಾರೆ. ಭಾಷೆಯ ವಿಕಾಸ, ಸಜಾತಿಯ ಭಾಷೆಗಳೊಡನೆ ಅವುಗಳ ಸಂಬಂಧ, ಅನ್ಯಭಾಷೆಯ ಪ್ರಭಾವ, ಪ್ರಾಂತೀಯ ಭಾಷಾಲಕ್ಷಣಗಳು ಹಾಗೂ ಇತರ ಸೋದರ ಭಾಷೆಗಳೊಂದಿಗೆ ಬೆಳಸಿಕೊಂಡ ಸಾಮ್ಯತೆ, ಭಿನ್ನತೆ ಮುಂತಾದ ಲಕ್ಷಣಗಳನ್ನು ವಿಂಗಡಿಸಲು ಪೂರಕ ಆಕರಗಳಾಗಿ ನಾಮಗಳು ಸಹಾಯಕವಾಗಿವೆ. ದ್ವಿಭಾಷಿಕ ವಲಯದಲ್ಲಿನ ಭಾಷಿಕ ಚಹರೆಗಳನ್ನು ವರ್ಣನಾತ್ಮಕ, ಚಾರಿತ್ರಿಕ ಸಾಮಾಜಿಕ, ತುಲನಾತ್ಮಕ ಪದ್ಧತಿಗಳ ಮೂಲಕ ಸ್ಥಳನಾಮ ಸಂಶೋಧನೆ ಮುಖೇನ ಧ್ವನಿಮಾ ರಚನೆ(Phenology) ಆಕೃತಿಮಾ ವಿಜ್ಞಾನ, ನಿಘಂಟು ರಚನೆ, ಶಬ್ದಾರ್ಥ ವಿವರಣೆ ಮೊದಲಾದ ಭಾಷಾಶಾಸ್ತ್ರಗಳ ರಚನೆಗೆ ಸ್ಥಳನಾಮ, ಗ್ರಾಮನಾಮಗಳು ಸಹಾಯಕವಾಗಬಲ್ಲವು. ''ವಿವರಣಾತ್ಮಕ ಭಾಷಾವಿಜ್ಞಾನವೇ ನಿಜವಾಗಿ ಇಂದಿಗೂ ಭಾಷಾ ವಿಜ್ಞಾನದ ಬೆನ್ನೆಲುಬು. ತಾತ್ವಿಕ ದೃಷ್ಟಿಯಿಂದ ಇದನ್ನು ಸಾಮಾನ್ಯ ಭಾಷಾ ವಿಜ್ಞಾನದ ಗುಂಪಿಗೆ ಸೇರಿಸಿದ್ದರೂ, ಎಲ್ಲ ಭಾಷಾ ವಿಜ್ಞಾನ ವಿವೇಚನೆಗಳಿಗೂ ಇದೇ ಜೀವಾಳ. ಇದನ್ನುಳಿದ ಭಾಷಾ ವಿಶ್ಲೇಷಣೆ ಮಾಡುವುದು ದುಸ್ಸಾಹಸದ ಮಾತು. ಏಕೆಂದರೆ, ಭಾಷಾ ವಿಶ್ಲೇಷಣೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿರುವ ರೂಪಾಂತರ ವ್ಯಾಕರಣವನ್ನಾಗಲೀ, ಸಾಮಾಜಿಕ ಭಾಷಾ ವಿಜ್ಞಾನದ ಮಾದರಿಗಳಾಗಲೀ ಅವು ಎಷ್ಟೋ ನವ್ಯ ತಂತ್ರಗಳನ್ನು ಮೈಗೂಡಿಸಿಕೊಂಡಿದ್ದರೂ ಅವುಗಳ ವಿಶ್ಲೇಷಣೆಗೆ ಮೂಲ ದ್ರವ್ಯ ಸಾಧಿತವಾಗುವುದು. ವರ್ಣನಾತ್ಮಕ ಭಾಷಾ ವಿಜ್ಞಾನದಿಂದಲೇ'' ಡಾ.ಸೋಮಶೇಖರಗೌಡ ಭಾಷಾ ರಚನೆಬಳಕೆ, ಪು.೦೭'' ಎಂಬ ಮಾತನ್ನು ಒಪ್ಪಬಹುದು.[೩] ಆದರೂ ಇಂದು ಸಾಮಾಜಿಕ ಮನಸ್ಥಿತಿಯ ಮೂಲಕ ವರ್ಣನಾತ್ಮಕ ಮಾದರಿಯ ಅಗತ್ಯತೆಯನ್ನು ಕಂಡುಕೊಳ್ಳಬೇಕಾಗಿದೆ. ಕಾರಣ ಇಲ್ಲಿ ವಿವರಣಾತ್ಮಕ ಮಾದರಿಗಿಂತ ಭಿನ್ನವಾಗಿ ಸಾಮಾಜಿಕ ಪ್ರಸ್ತುತತೆಯ ಮೂಲಕ ಸ್ಥಳನಾಮಗಳನ್ನು ಭಾಷಿಕ ನೆಲೆಯಲ್ಲಿ ನೋಡುವ

ಪ್ರಯತ್ನವನ್ನು ಮಾಡಲಾಗಿದೆ. ಸ್ಥಳನಾಮಗಳ ರೂಪಾಂತರಗಳು ಎರಡು ಕಾರಣಗಳಿಂದ ಘಟಿಸುತ್ತವೆ. ಒಂದು ಉದ್ದೇಶಿತ ಬದಲಾವಣೆಯಾಗಿದ್ದರೆ, ಇನ್ನೊಂದು ಅನುದ್ದೇಶಿತ ಬದಲಾವಣೆಯಾಗಿರುತ್ತದೆ. ಆಯಾ ಪ್ರದೇಶಗಳ ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಕಾರಣಗಳಿಂದಾಗಿ ಸ್ಥಳನಾಮವೊಂದು ಬದಲಾವಣೆಗೊಂಡಿದ್ದರೆ, ಅದು ಉದ್ದೇಶಿತ ಬದಲಾವಣೆ ಎನಿಸುತ್ತದೆ. ಜನಪದರ ಸೌಲಭ್ಯಾಕಾಂಕ್ಷೆಗೆ ಅನುಗುಣವಾಗಿ ಇಲ್ಲವೇ ಭಾಷಿಕ ಕಾರಣಗಳಿಗಾಗಿ ತನ್ನಿಂದ ತಾನೇ ಬದಲಾವಣೆಗೊಂಡಿದ್ದರೆ, ಅದು ಅನುದ್ದೇಶಿತ ಬದಲಾವಣೆ ಎನಿಸುತ್ತದೆ. ಉದಾಹರಣೆಗೆ

೧. 'ಏಳು ಮಂಡಲ' ಎಂಬ ಸ್ಥಳ ಇಂದಿಗೂ ಜನಪದರ ಬಾಯಲ್ಲಿ ಉಚ್ಚರಣೆಗೊಳ್ಳುತ್ತಿದ್ದು ಈಗ 'ಚಿಕ್ಕನಹಳ್ಳಿ' ಎಂದು ಪುನರ್ ನಾಮಕರಣ ಮಾಡಲಾಗಿದೆ. (ಇದು ಉದ್ದೇಶಪೂರ್ವಕ ಬದಲಾವಣೆ)

೨. 'ಜೀಯರ ಹಳ್ಳಿ' ಎಂಬುದು ಶಾಸನೋಕ್ತ ಸ್ಥಳನಾಮ (ಹೂಗಾರರ ವಾಸಸ್ಥಾನ) ಅದು ಈಗ 'ರಾಮಸಾಗರ' ಎಂದು ಬಳಕೆಯಾಗುತ್ತದೆ. (ಸೌಲಭ್ಯಕಾಂಕ್ಷೆಯ ಕಾರಣಕ್ಕಾಗಿ ಆದ ಭಾಷಿಕ ಬದಲಾವಣೆ ಆಗಾಗಿ ಇದು ಅನುದ್ದೇಶಿತ ಬದಲಾವಣೆ)

ಯಾವ ಭಾಷೆಯು ತನ್ನ ಮಡಿವಂತಿಕೆಯನ್ನು ಬಹಳ ಕಾಲ ಕಾಯ್ದುಕೊಳ್ಳಲಾರದು. ರಾಜಕೀಯ ಕಾರಣಗಳಿಂದಾಗಿ ಆಳರಸರು ಸ್ಥಳೀಯ ಭಾಷೆಗೆ ಸಂಬಂಧಿಸಿರದಿದ್ದರೆ, ಕ್ರಮೇಣ ಆಡಳಿತಗಾರರ ಭಾಷೆ, ಸ್ಥಳೀಯ ಭಾಷೆಯ ಮೇಲೆ ಪ್ರಭಾವ ಬೀರತೊಡಗುತ್ತದೆ. ರಾಜಕೀಯ ಗಡಿಗಳನ್ನು ದಾಟಿ ಒಂದು ಭಾಷೆ ಬಳಕೆಗೊಳ್ಳುತ್ತಿರಬಹುದು. ಭಾಷಾಗಡಿ ಪ್ರದೇಶಗಳಲ್ಲಿಯೂ ಜನರು ಸ್ಥಳೀಯ ಭಾಷೆ, ಆಡಳಿತ ಭಾಷೆ, ಇವುಗಳಲ್ಲಿ ಮಾತೃಭಾಷೆಯೊಂದಿಗೆ ಕನಿಷ್ಠ ಪಕ್ಷ. ಒಂದನ್ನಾದರೂ ಬಲ್ಲವರಾಗಿರುತ್ತಾರೆ. ಹೀಗಾಗಿ ಆ ಪ್ರದೇಶ ದ್ವಿಭಾಷಾ ಇಲ್ಲವೇ ಬಹುಭಾಷಾ ಪ್ರದೇಶವೆನಿಸುತ್ತದೆ. ಯಾವುದೇ ಕಾರಣವಿರಲಿ ಅನ್ಯಭಾಷಾ ಪ್ರಭಾವ ಸುತ್ತಲಿನ ಪರಿಸ್ಥಿತಿಗೆ ಅನುಗುಣವಾಗಿ ಒಂದು ಪ್ರದೇಶದ ಸ್ಥಳೀಯ ಭಾಷೆಯ ಮೇಲೆ ಗಾಢವಾಗಿ ಆಗುತ್ತಾ ಹೋದಂತೆ ಅದರದೇ ಆದ ವಿಶಿಷ್ಟ ಭಾಷೆಗಿಂತ ಭಿನ್ನವಾಗಿ ತೋರಲಾರಂಭಿಸುತ್ತದೆ. ಅನ್ಯಭಾಷಾ ಪ್ರಭಾವವೆಂದರೆ, ಸಾಮಾನ್ಯವಾಗಿ ಸ್ಥಳೀಯ ಭಾಷೆಯನ್ನು ಹಲವು ಬಗೆಯಲ್ಲಿ ನಡೆಯುವ ಸ್ವೀಕರಣ, ಇದು ಸಹಜ ಮತ್ತು ಇದು ಜೀವಂತವಾದ ಎಲ್ಲಾ ಭಾಷೆಗಳಲ್ಲಿ ನಡೆಯುವ ಪ್ರಕ್ರಿಯೆಯಾಗಿದೆ. ತೆಲುಗಿನ ಪ್ರಭಾವ ಕೇವಲ ಈ ಭಾಗದ ಜನತೆಯ ದೈನಂದಿನ ಮಾತುಗಳಲ್ಲಿ ವಿವಿಧ ಧಾರ್ಮಿಕ ಆಚರಣೆಗಳಲ್ಲಿ ಅಷ್ಟೇ ಆಗದೆ ಆಭಾಗದ ಸ್ಥಳನಾಮಗಳ ಮೇಲೂ ಆದದ್ದನ್ನು ಗುರುತಿಸಬಹುದು.

ಭಾಷಿಕ ಅಧ್ಯಯನ

ಭಾಷಾ ವಿಜ್ಞಾನಿಗಳು ಊರ ಹೆಸರುಗಳನ್ನು ನಿರ್ಧಿಷ್ಟ ಮತ್ತು ವಾರ್ಗಿಕ (Specific and Generic) ಎಂಬೆರಡು ಘಟಕ(ಆಕೃತಿಮಾ)ಗಳಲ್ಲಿ ವಿಭಜಿಸಿ ಅಧ್ಯಯನ ಮಾಡುವುದುಂಟು. ಕೆಲ ಊರ

ಹೆಸರುಗಳು ಎರಡಕ್ಕಿಂತ ಹೆಚ್ಚು ಘಟಕಗಳನ್ನು ಹೊಂದಿರಲೂಬಹುದು. ಅವು ವಿಶಿಷ್ಟದ ಹಿಂದೆ (Prefix) ವಿಶೇಷಣ ಅಥವಾ ಯಾವುದೋ ವಿಷಯ ಸೂಚಕ ಪದಗಳಾಗಿ ಸೇರಿಕೊಂಡಿರುತ್ತವೆ. ಸ್ಥಳನಾಮದ ಮೊದಲನೆ ಘಟಕ ಸ್ಥಳಗಳ ಲಕ್ಷಣವನ್ನು ಹೇಳುತ್ತದೆ. ಹಾಗಾಗಿ ಅದನ್ನು ನಿರ್ದಿಷ್ಟ ಸ್ಥಳದ ಲಕ್ಷಣವನ್ನು ಹೇಳುತ್ತದೆ. ಹಾಗಾಗಿ ಅದನ್ನು ನಿರ್ದಿಷ್ಟ ಎಂದು ಕರೆಯುತ್ತೇವೆ. ಹೀಗೆ ಸೇರಿ ಕೊಂಡಂಥವುಗಳನ್ನು ನಿರ್ದಿಷ್ಟವೆಂದೇ ಪರಿಗಣಿಸುವುದುಂಟು. ಇಂಥ ಕ್ರಮವನ್ನೇ ಇಲ್ಲಿ ಅನುಸರಿಸಲಾಗಿದೆ. ನಿರ್ದಿಷ್ಟವೆಂದರೆ - ವಿಶಿಷ್ಟ(Specific) ಎಂದರ್ಥ. ಅಂದರೆ ಯಾವುದಾದರೂ ವಿಷಯವನ್ನು ಒಳಗೊಂಡಿರುವಂಥದ್ದು. ವಾರ್ಗಿಕ ಎಂದರೆ, ಊರುಗಳ ಹೆಸರುಗಳ ಉತ್ತರಾರ್ಧ ಘಟಕ. ಇದರಲ್ಲಿ ವಿಷಯ ಪ್ರಸ್ತಾಪವಿರದು. ವಾರ್ಗೀಕ (Generic)ವು ಸ್ಥಳದ ಭೌತಿಕ ನೆಲೆಯನ್ನು ಸೂಚಿಸುವ (ಸ್ಥಳನಿರ್ದೇಶಕ) ಘಟಕವಾಗಿರುತ್ತದೆ. ಹಾಗಾಗಿ ಅದನ್ನು ವಾರ್ಗಿಕ (Generic) ಎಂದು ಕರೆಯುತ್ತೇವೆ. ಊರುಗಳನ್ನು ವರ್ಗೀಕರಣಕ್ಕೆ ಒಳ ಪಡಿಸಬಹುದಾದ ಸಾಮಾನ್ಯ ಘಟಕ ಇದಾಗಿರುತ್ತದೆ. ಸಾಮಾನ್ಯವಾಗಿ ಸ್ಥಳನಾಮಗಳು ಕೂಡುನುಡಿಗಳೇ ಹೊರತು ಅಖಂಡ ಶಬ್ದಗಳಲ್ಲ. ಅಂತೆಯೇ ಕನ್ನಡ, ದ್ರಾವಿಡ ಮೂಲದ ಸ್ಥಳನಾಮಗಳು ಸಾಮಾನ್ಯವಾಗಿ ಎರಡು ಘಟಕ(ಆಕೃತಿ) (Morphemes)ಗಳಿಂದ ಕೂಡಿರುತ್ತವೆ.

ಉದಾ : ಊರು, ಹಳ್ಳಿ, ಪುರ, ಗ್ರಾಮ, ಗುಡ್ಡ, ಕೆರೆ, ಕುಂದ, ಕೋಟೆ ಈ ಮುಂತಾದ ಘಟಕಗಳಲ್ಲಿ ಒಂದನ್ನೊಳಗೊಂಡು ಕೊನೆಗೊಳ್ಳುವಂಥವು. ನಿರ್ದಿಷ್ಟ ಮತ್ತು ವಾರ್ಗಿಕ ಇವೆರಡೂ ಪ್ರತ್ಯೇಕ ಆಕೃತಿಮಾಗಳೇ ಈ ಆಕೃತಿಮಾಗಳು ಕೂಡುವಾಗ ಅಲ್ಲಿ ಧ್ವನಿವ್ಯತ್ಯಾಸವೂ ಆಗುತ್ತದೆ. ನಿಘಂಟು (Lexicography) ವಿಜ್ಞಾನಕ್ಕೂ ಈ ರೀತಿಯ ಸ್ಥಳನಾಮಾಧ್ಯಮಯನ ಮಹತ್ವದ ಕೊಡುಗೆಯಾಗುತ್ತದೆ. ಭಾಷಿಕ ದೃಷ್ಟಿಯಿಂದ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಬರುವ ಕೆಲವು ಊರುಗಳನ್ನು ಈ ಘಟಕಗಳನ್ವಯ ವಿಂಗಂಡಿಸಿರುವುದನ್ನು ಹಾಗೂ ಅವು ರೂಪ ಹಾಗೂ ಧ್ವನಿ ವ್ಯತ್ಯಾಸ ಪಡೆದುದನ್ನು ಇಲ್ಲಿ ಕೆಲವು ಉದಾಹರಣೆಗಳನ್ನು ನೋಡುವುದರ ಮೂಲಕ ತಿಳಿಯಬಹುದಾಗಿದೆ.

ಉದಾ : ನಿರ್ದಿಷ್ಟ + ವಾರ್ಗಿಕ > ಸ್ಥಳನಾಮ

ಮಂಗಳ + ಊರು > ಮಂಗಳೂರು

ನಿರ್ದಿಷ್ಟಗಳಿಗೆ ಕೆಲವೊಮ್ಮೆ ಪ್ರತ್ಯಯಗಳು ಅಂಟಿರುವುದು ಉಂಟು.

ಉದಾ : ನಿರ್ದಿಷ್ಟ + ಪ್ರತ್ಯಯ + ವಾರ್ಗಿಕ > ಸ್ಥಳನಾಮ

ನಾಯ್ಕ + ನ + ಹಟ್ಟಿ > ನಾಯ್ಕನಹಟ್ಟಿ

ನಿರ್ದಿಷ್ಟಗಳಿಗೆ ಕೆಲವೊಮ್ಮೆ ಉಪ ಆಕೃತಿಮಾಗಳು ಸೇರಿಸುವುದೂ ಉಂಟು.

ಉಪ ಆಕೃತಿಮಾ + ಆಕೃತಿಮಾ + ಪ್ರತ್ಯಯ + ವಾರ್ಗಿಕ > ಸ್ಥಳನಾಮ

ಚಿಕ್ಕ + ನಾಯ್ಕ + ನ + ಹಳ್ಳಿ > ಚಿಕ್ಕನಾಯ್ಕನ ಹಳ್ಳಿ

ಚಿಕ್ಕ + ಓಬ + ನ + ಹಳ್ಳಿ > ಚಿಕ್ಕೋಬನ ಹಳ್ಳಿ

ಒಟ್ಟಿನಲ್ಲಿ ನಿರ್ದಿಷ್ಟ ಹಾಗೂ ವಾರ್ಗಿಕದ ಮೂಲವನ್ನು ಮತ್ತು ಅರ್ಥವನ್ನು ಹೇಳುವುದಾದರೆ, ಸ್ಥಳನಾಮ ನಿಷ್ಪತ್ತಿಯ ಕೆಲಸ ಬಹುತೇಕ ಪೂರ್ಣಗೊಂಡಂತೆಯೇ ವಾರ್ಗಿಕವನ್ನು ಪತ್ತೆ ಹಚ್ಚುವುದು ಅರ್ಥ ಹೇಳುವುದು ನಿರ್ದಿಷ್ಟದಷ್ಟು ಕಷ್ಟವಾಗಲಾರದು. ಏನೇ ಆಗಿರಲಿ, ಎರಡೂ ಘಟಕಗಳನ್ನು ಹೇಳಿ ಅರ್ಥೈಸಿದರೆ ಸ್ಥಳನಾಮದ ನಿಷ್ಪತ್ತಿ ಮಾಡಿದಂತಾಗುತ್ತದೆ.

೧. ಊರು

'ಊರ್ ' - ಎಂಬ ವಾರ್ಗಿಕವು ದ್ರಾವಿಡ ಮೂಲದ 'ಇರ್ ' ಅಥವಾ 'ಉರ್ ' ಧಾತುವಿನಿಂದ ಬಂದಿದ್ದು 'ನೆಲಸುವಿಕೆ' 'ಇರುವಿಕೆ' ಎಂಬ ಅರ್ಥವನ್ನು ಕೊಡುತ್ತದೆ. ಊರು ಎಂಬ ಪದ ಅಥವಾ ಅದರ ವಿಭಿನ್ನ ಸಾಧಿತ ರೂಪಗಳು ಜನಸಂಬಂಧಿಯಾಗಿರುವುದಕ್ಕೆ ದೃಷ್ಟಾಂತಗಳಿರುವುದನ್ನು ವಿದ್ವಾಂಸರು ದೃಢಪಡಿಸಿದ್ದಾರೆ.''[೪] ಊರು - ಈ ವಾರ್ಗಿಕ ಅಚ್ಚ ದ್ರಾವಿಡ ಮೂಲದ್ದು ಹಾಗಾಗಿ ''ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಮತ್ತು ದ್ರಾವಿಡ ಭಾಷೆಗಳಾದ ಕೊಂಡ, ತೋಡ, ಕೊಡವ, ಕೋಲಾಮಿ, ನಾಯ್ಕಿಗಳಲ್ಲಿ ವ್ಯಾಪಕವಾಗಿ ಬಳಕೆಯಾಗಿರುವುದನ್ನು T.Burrow ಮತ್ತು M.B.Emennu ಅವರ 'Dravidian Etymological Dictionary'' ಖಚಿತಪಡಿಸುತ್ತದೆ.[೫] 'ಇದು ಅಚ್ಚದ್ರಾವಿಡ ಪದ ವಾಸಸ್ಥಳವನ್ನು ಸೂಚಿಸುತ್ತದೆ. ನಾಡು, ಗ್ರಾಮ, ಪಟ್ಟಣ, ತೊಡೆ, ನೆಡು,[೬] ''ಊರು ಕೊನೆಯಲ್ಲಿ ಬರುವ ಕೆಲವು ಹೆಸರುಗಳಾದರೂ ಮೂಲತಃ ಪುರದಿಂದ ಕೊನೆಯಾಗುತ್ತಿದ್ದವೆಂಬುದಕ್ಕೆ ಶಾಸನಾಧಾರಗಳಿವೆ.''[೭] ಜನವಾಸ ಮಾಡುವ ಸ್ಥಳ, An Inhabited Place a village a Town city.[೮]

ಊರುಗಳಿಂದ ಕೊನೆಗೊಳ್ಳುವ ಸ್ಥಳನಾಮಗಳು ಗಾತ್ರದಲ್ಲಿ ಚಿಕ್ಕವು. ಅಂಥ ವಿಶೇಷತೆಯೇನೂ ಒಳಗೊಂಡಿರುವುದಿಲ್ಲ. ಇಲ್ಲಿ ನಿರ್ದಿಷ್ಟ ಮತ್ತು ವಾರ್ಗಿಕ (ಆಕೃತಿಮಾ)ಗಳು ಸೇರುವಾಗ ಸ್ವರೈಕ್ಯ (Assimilalion)ಹೊಂದುವುದನ್ನು ಗುರುತಿಸಬಹುದು.

ಉದಾ : ಹೊಸ + ಊರು = ಹೊಸೂರು - ಅ

ಹೇರು + ಊರು = ಹೇರೂರು

ಗುಂಡ್ಲ + ಊರು = ಗುಂಡ್ಲೂರು

ಮೊಳಕಾಲ್ + ಊರು = ಮೊಳಕಾಲ್ಮೂರು

೨. ಏರಿ

ಜಲವಾಚಿಪದ, ಕೆರೆ ಕಟ್ಟೆಯನ್ನು ಹೇಳುವ ಪದ. ಮಣ್ಣಿನ ಸಾಲು ದಂಡೆ."

ಉದಾ : ಏರಿ + ಊರು = ಏರೂರು

೩. ಕಣಿವೆ

ಎರಡು ಬೆಟ್ಟಗಳ ಎಡೆಯ ತಗ್ಗು, ಕೊರಕಲು[೧೦]

ಉದಾ : ಮೇಗಳ ಕಣಿವೆ ಕೆಳಗಿನ ಕಣಿವೆ

೦೪. ಕಲ್ಲು : 'ನಿಸರ್ಗವಾಚಿ ವಾರ್ಗಿಕವಾದ ಇದು ಕಲ್ಲು ಬಂಡೆಗಳಿಂದ ಕೂಡಿರುವ ಪ್ರದೇಶ ಎಂದರ್ಥವನ್ನು ಕೊಡುತ್ತದೆ.'[೧೧] ಈ ವಾರ್ಗಿಕದಿಂದ ಕೊನೆಗೊಳ್ಳುವ ಸ್ಥಳಗಳು ಬಹುಪ್ರಾಚೀನವಾದವು. ಶಿಲಾಯುಗದ ಮಾನವನ ನಿವಾಸ ಸ್ಥಳವನ್ನು ಇವು ನಿರ್ದೇಶಿಸುತ್ತವೆ. "ನಿಸರ್ಗವಾಚಿ ಪದ, ಬಂಡೆ, ಶಿಲೆ"[೧೨] ಈ ಪದ 'ಕಲ್ ' ಎಂಬ ವ್ಯಂಜನಾಂತ ಪದವಾಗಿಯೂ ಕ>ಗ ಬದಲಾವಣೆಯಿಂದ ಗಲ್, 'ಗಲ್ಲು' ಎಂದೂ ಬಳಕೆಯಾಗಿದೆ. ದ್ರಾವಿಡ ಭಾಷೆಗಳಾದ ತಮಿಳು, ತೆಲುಗು, ಮಲೆಯಾಳಂ ಕನ್ನಡದಲ್ಲಿ ಇದಕ್ಕೆ 'ಶಿಲೆ'ಯೆಂದೇ ಅರ್ಥಗಳಿವೆ. ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಈ ಬಗೆಯ ವಾರ್ಗಿಕದಿಂದ ಕೊನೆಗೊಳ್ಳುವ ಪ್ರಾಚೀನ ಸ್ಥಳನಾಮಗಳಿದ್ದರೂ ಅವುಗಳ ಸಂಖ್ಯೆ ಕಡಿಮೆ.

ಉದಾ : ಹಾನಗಲ್ಲು

೫. ಕುಂದಿ

ಭೌಗೋಳಿಕ ಲಕ್ಷಣವನ್ನು ಸೂಚಿಸುವ ಪದ. "ಕಲ್ಲಿನಿಂದ ಮಾಡಿದ ಕಂಬ, ಚಿಕ್ಕಬೆಟ್ಟ, ಇದು ಕುಂದ, ಕುಂದಿ, ಎಂದೂ ಬಳಕೆಯಾಗುತ್ತದೆ. ಕುಂದಿ ತಗ್ಗು ಭೂಮಿ, ಬಾಗಿದ ನೆಲ"[೧೩] ಕುಂದಿ ಎಂಬ ವಾರ್ಗಿಕವಿರುವ ಊರಿನಲ್ಲಿ ಚಿಕ್ಕ ಬೆಟ್ಟವಿದೆ. ಕ > ಗ : ಬದಲಾವಣೆಯಿಂದ - ಗುಂದ - ಗುಂದಿ, ಗೊಂದಿ - ಗುಂದೆ ಎಂಬ ಪದಗಳು ಸ್ಥಳನಾಮಗಳಲ್ಲಿ ಬಳಕೆಗೊಂಡಿವೆ. ಕುಂದವೆಂದರೆ, ಬೆಟ್ಟ, ಗುಡ್ಡ, ದಿನ್ನೆ ಮುಂತಾದ ಎತ್ತರವಾದ ಪ್ರದೇಶಗಳ ಹತ್ತಿರವಿರುವ ಊರುಗಳು ತಮ್ಮ ಹೆಸರುಗಳ ಉತ್ತರಾರ್ಧದಲ್ಲಿ 'ಕುಂದ', 'ಗುಂದ' ಎಂಬ ವಾರ್ಗಿಕವನ್ನು ಸಾಮಾನ್ಯವಾಗಿ ಹೊಂದಿರುತ್ತವೆ. ತಾಲೂಕಿನಲ್ಲಿ ಬೆಟ್ಟ, ಗುಡ್ಡಗಳು ಹೆಚ್ಚಾಗಿ ಕುಂದಿ, ವಾರ್ಗಿಕವನ್ನುಳ್ಳ ಊರುಗಳು ಕಡಿಮೆ.

ಉದಾ : ಅಮುಕುಂದಿ

೦೬. **ಕುಪ್ಪೆ** : 'ಭೌಗೋಳಿಕ ಲಕ್ಷಣವನ್ನು ಸೂಚಿಸುವ ಪದ' ಎತ್ತರವಾದ ಸ್ಥಳ, ರಾಶಿ ಎಂಬರ್ಥಗಳಿವೆ.[೧೪] ಕ>ಗ ಬದಲಾವಣೆಯಿಂದ ಗುಪ್ಪೆ, ಗುಪ್ಪ ಎಂಬ ಬಳಕೆಯಾಗಿದೆ. ತೆಲುಗಿನಲ್ಲಿ ಕುಪ್ಪ-ಗುಪ್ಪ ಎಂದು ಅದೇ ಅರ್ಥದಲ್ಲಿ ಬಳಕೆಯಾಗಿದೆ.

ಉದಾ : ಕಣಕುಪ್ಪೆ

೦೭ **ಕೊಂಡ** : ಭೌಗೋಳಿಕ ಲಕ್ಷಣವನ್ನು ಸೂಚಿಸುವ ಪದ, ಸಂಸ್ಕೃತದ 'ಕುಂಡ' ಪದದಿಂದ ತದ್ಭವಗೊಂಡಿದೆ. ಬೆಂಕಿ ಉರಿಸುವ ಕುಣಿ, ಬೆಟ್ಟ, ಪರ್ವತ [೧೫], ಇದು ಕುಂದ ಪದಕ್ಕೆ ಸಮಾನವಾಗಿಯೇ ಬಳಕೆಯಾಗುತ್ತಿದೆ. ತೆಲುಗಿನಲ್ಲಿ ಕೊಂಡವೆಂದೇ ಬಳಕೆಯಾಗುತ್ತದೆ. "ಕುನ್ರ(ತಮಿಳು) ಕೆಲವು ಕಡೆ ಕ > ಗ ಪರಿವರ್ತನೆಯಿಂದ 'ಗೊಂಡ' ಎಂಬ ರೂಪ ಕಂಡುಬರುತ್ತದೆ."[೧೬]

ಉದಾ. ಕೆರೆ ಕೊಂಡಾಪುರ
ನಲ್ಲರೆಡ್ಡಿ ಕೊಂಡಾಪುರ
ಬೊಮ್ಮಗೊಂಡನ ಕೆರೆ
ಕೊಂಡ್ಲಹಳ್ಳಿ

೦೮. **ಕೋಟೆ** : ನಿರ್ಮಾಣವಾಚಿ. ಸೇನೆಯ ರಕ್ಷಣೆಗೆ ಕಟ್ಟಿದ ಪ್ರಾಕಾರ. ಬದಲಾದ ಗೋಡೆಯ ಆವರಣ. ದುರ್ಗ, ಗಡ, ಕಿಲ್ಲೆ,[೧೭] ತೆಲುಗಿನಲ್ಲಿ ಕೋಟ-ದುರ್ಗ ಎಂದು ಬಳಕೆಯಲ್ಲಿದೆ. ಕ > ಗ ಪರಿವರ್ತನೆಯಿಂದ ಗೋಟೆ-ಗೋಟ ಎಂದು ಬಳಕೆಯಾಗಿದೆ.

ಉದಾ. ಹೊಸಕೋಟೆ
ಸಿದ್ದಯ್ಯನ ಕೋಟೆ
ಸಂಜೀವರಾಯನ ಕೋಟೆ
ರಂಗಯ್ಯನ ದುರ್ಗ
ಉಚ್ಚಂಗಿ ದುರ್ಗ

೦೯. **ಗಿರಿ** : ಭೌಗೋಳಿಕ ಲಕ್ಷಣವನ್ನು ಸೂಚಿಸುವ ಪದ. ಬೆಟ್ಟ, ಪರ್ವತ,[೧೮] ಗಿರಿ(ಸಂಸ್ಕೃತ), ತೆಲುಗಿನಲ್ಲಿ ಗಿರಿ ಶಿಖರಂ ಎಂದು ಬಳಕೆಯಾಗಿದೆ.

ಉದಾ : ಬ್ರಹ್ಮಗಿರಿ, ಸುವರ್ಣಗಿರಿ

೧೦. **ಗುಡ್ಡ** : ಭೌಗೋಳಿಕ ಲಕ್ಷಣವನ್ನು ಸೂಚಿಸುವ ಪದ. ಬೆಟ್ಟ, ದಿನ್ನೆ, ಎತ್ತರ ಪ್ರದೇಶ ಎಂಬರ್ಥವಿದೆ. ತೆಲುಗಿನ 'ಕೊಂಡ' ಪದಕ್ಕೆ ಸಮಾನವಾದುದು.

ಉದಾ : ಗುಡ್ಡದ ಹಳ್ಳಿ, ಹನುಮನ ಗುಡ್ಡ, ಸಂತೇಗುಡ್ಡ, ಇರಾಣಗುಡ್ಡ (ಹಿರೇ ಆರ್ಯರ ಗುಡ್ಡ)

೧೧. **ಗುಂಡು :** ಶಿಲಾವಾಚಿ, ವರ್ತುಲ, ಗೋಳಕಾರ, ದಪ್ಪವಾಗಿರುವ ಕಲ್ಲು, ದೊಡ್ಡ ಕಲ್ಲು, ಗುಂಪು, ಸಮೂಹ ಎಂಬರ್ಥವನ್ನು ಸೂಚಿಸುತ್ತದೆ.

ಉದಾ : ಗುಂಡ್ಲೂರು

೧೨. **ದೊಡ್ಡಿ :** ವಾಸ್ತವ್ಯವಾಚಿ, ಹಟ್ಟಿ, ಕೊಟ್ಟಗೆ, ಯಜಮಾನರಿಲ್ಲದಂತಹ ದನಕರುಗಳನ್ನು ಕಟ್ಟುವ ಮನೆ, ಮೂಲದ ಮನೆ[೧೯], ತೆಲುಗಿನಲ್ಲಿ ಇದೇ ಅರ್ಥದಲ್ಲಿ ಬಳಕೆಯಲ್ಲಿದೆ.

ಉದಾ : ಅರವಿನ ದೊಡ್ಡಿ

೧೩. **ಪುರ :** ವಾಸ್ತವ್ಯ ವಾಚಿಪದ. ಸಂಸ್ಕೃತ ಪದ. ಪಟ್ಟಣ, ಮನೆ, ನಗರ, ನದಿ, ಕಾಲುವೆ.[೨೦] "ಪುರದಿಂದ ಕೊನೆಗೊಳ್ಳುವ ಸ್ಥಳನಾಮಗಳು ಊರಿಗಿಂತ ಗಾತ್ರದಲ್ಲಿ ದೊಡ್ಡವೆಂದೇ ಭಾವಿಸಲು ಅವಕಾಶವಿದೆ. ಸಾಮಾನ್ಯವಾಗಿ ಇವುಗಳ ಮಧ್ಯೆ ದೇವಾಲಯವಿರುತ್ತದೆ."[೨೧] 'ಪುರ'ವೇ ವರ-ವಾರ ಎಂಬ ರೂಪಾಂತರ ಹೊಂದುವುದನ್ನು ಡಾ. ಚಿದಾನಂದ ಮೂರ್ತಿಯವರು ಹೀಗೆ ತೋರಿಸಿದ್ದಾರೆ.[೨೨]

ಪುರ
- ಪುರ ವುರ > ವರ - ವಾರ
- ವುರ - ಹುರ > ಊರು

ಆದರೆ ಡಾ. ಎಂ.ಎಂ.ಕಲಬುರ್ಗಿಯವರು ವರ-ವಾರ ಎಂಬಿವು ಆಹಾರ(ದೇಶ-ಸ್ಥಳ) ಎಂಬ ಆಕೃತಿಮಾದ ಎರಡು ಉಪ-ಆಕೃತಿಮಾಗಳು ಎನ್ನುತ್ತಾರೆ.[೨೩] ಪುರ ವಾರ್ಗಿಕದಿಂದ ಕೊನೆಗೊಳ್ಳುವ ಸ್ಥಳನಾಮಗಳ ಕರ್ನಾಟಕ - ಆಂಧ್ರ ಮತ್ತು ತಮಿಳು ನಾಡುಗಳಲ್ಲಿ ವ್ಯಾಪಕವಾಗಿ ಕಂಡುಬರುತ್ತವೆ. ಮೊಳಕಾಲ್ಮೂರು ತಾಲೂಕಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ 'ಪುರ' ವಾರ್ಗಿಕದಿಂದ ಕೊನೆಗೊಳ್ಳುವ ಸ್ಥಳನಾಮಗಳನ್ನು ಈ ಕೆಳಗಿನಂತೆ ಗಮನಿಸಬಹುದಾಗಿದೆ.

ಉದಾ. ರಾಂಪುರ (ರಾಮಪುರ)	ಭೈರಾಪುರ
ಸಿದ್ದಾಪುರ	ಹನುಮಾಪುರ
ಕಾಡುಸಿದ್ದಾಪುರ	ತಿಮ್ಮಲಾಪುರ
ರಾಜಾಪುರ	ವೀರಾಪುರ

ಬಸಾಪುರ	ಓಬಳಾಪುರ
ನಲ್ಲರೆಡ್ಡಿಕೊಂಡಾಪುರ	ವಿಠಲಾಪುರ
ಕೆರೆಕೊಂಡಾಪುರ	ಅಡವಿ ಮಲ್ಲಾಪುರ
ವೆಂಕಟಾಪುರ	ಕೋನಾಪುರ

೧೪. **ಸಮುದ್ರ** : ''ಜಲವಾಚಿ, ಸಂಸ್ಕೃತ ಪದ, ಕಡಲು, ಸಾಗರ, ಮುದ್ರೆಯೊತ್ತಿದ''[೨೪] ತೆಲುಗಿನಲ್ಲಿ ಸಮುದ್ರಂ ಎಂದು 'ಮ' ಕಾರಾಂತ್ಯವಾಗಿ ಬಳಕೆಯಾಗುತ್ತದೆ. ಬಯಲು ಪರಿಸರದಲ್ಲಿ ಸಮುದ್ರವಿಲ್ಲದಿದ್ದರೂ ಈ ಬಗೆಯ ನಾಮ ನಿರ್ದೇಶನವಿದೆ. ಇದು ಸಂಸ್ಕೃತ ಭಾಷೆಯ ಪ್ರಭಾವವಿರಬೇಕು.

ಉದಾ : ಗೌರ ಸಮುದ್ರ, ನಾಗಸಮುದ್ರ, ದೇವಸಮುದ್ರ, ಕೋನಸಾಗರ

೧೫. **ಸಂತೆ** : ವಾಣಿಜ್ಯ ಕೇಂದ್ರ, ವ್ಯಾಪಾರ ನಡೆಯುವ ಸ್ಥಳ, ಪಟ್ಟಣ, ಸಂತೆಸ್ಥಳನಾಮ, ನಿರ್ದಿಷ್ಟ ಸ್ಥಾನದಲ್ಲಿ ಬಳಕೆಯಾಗಿದೆ.

ಉದಾ : ಸಂತೇಗುಡ್ಡ

೧೬. **ಹಟ್ಟಿ** : ಕೊಟ್ಟಿಗೆ, ದನದದೊಡ್ಡಿ ಗೋಶಾಲೆ, ಸಂತೆ[೨೫]

ಉದಾ : ಕೆಳಗಳ ಹಟ್ಟಿ, ಮೇಗಳ ಹಟ್ಟಿ, ಕಂಪಳ ದೇವರಹಟ್ಟಿ, ಪೂಜಾರಿ ಹಟ್ಟಿ, ಕೊಮ್ಮನಪಟ್ಟಿ, ಕುರಾಕಲ ಹಟ್ಟಿ

೧೭. **ಹಳ್ಳಿ** : ವಾಸ್ತವ್ಯವಾಚಿ, ಪಲ್ಲೀ (ಸಂಸ್ಕೃತ) ''ದ್ರಾವಿಡ ಮೂಲದ ವಾರ್ಗಿಕ ವಾದ ಇದು ಕನ್ನಡವೂ ಸೇರಿದಂತೆ ದಕ್ಷಿಣಾದ್ಯಂತ ಬಳಕೆಯಾಗಿದೆ. ಪಂಚ ದ್ರಾವಿಡ ಭಾಷೆಗಳಲ್ಲಿ ''ಪಳ್ಳಿ'' ಎಂಬ ಶಬ್ದರೂಪವೇ ಮೂಲ ರೂಪವಾಗಿದೆ. ಪಳ್ಳಿ ಶಬ್ದಕ್ಕೆ ಸಣ್ಣ ಊರು ಗುಡಿಸಲು, ಬೌದ್ಧ-ಜೈನ ದೇವಾಲಯ ಸ್ಥಳ ಮುಂತಾದ ಅರ್ಥಗಳಿವೆ.[೨೬] 'ಪಳ್ಳ' ಎಂಬುದಕ್ಕೆ ತಗ್ಗು, ಆಳ, ತೊರೆ ಎಂಬರ್ಥಗಳಿರುವುದರಿಂದ ತಗ್ಗಿನಲ್ಲಿರುವ, ನೀರಿನ ಆಶ್ರಯದಲ್ಲಿರುವ ನೆಲೆಯೇ ಹಳ್ಳಿ. ಹಳ್ಳಿಯಿಂದ ಕೊನೆಗೊಳ್ಳು ಸ್ಥಳಗಳು ಊರಿನಂತೆ ಗಾತ್ರದಲ್ಲಿ ಚಿಕ್ಕದಾಗಿರುತ್ತವೆ.

ಉದಾ. ಚಿಕ್ಕನಹಳ್ಳಿ	ನೇರ್ಲಹಳ್ಳಿ
ಹಿರೇಕೆರೆಹಳ್ಳಿ	ಮರ್ಲಹಳ್ಳಿ
ಚಿಕ್ಕೇರಹಳ್ಳಿ	ಮೊಗಲಹಳ್ಳಿ

ಭಟ್ರಹಳ್ಳೀ

ಕೊಂಡ್ಲಹಳ್ಳಿ

ಗುಡ್ಡದಹಳ್ಳಿ

ಮುತ್ತಿಗಾರಹಳ್ಳಿ

ಚಿಕ್ಕೋಬನಹಳ್ಳೀ

ಅಯ್ಯನಹಳ್ಳಿ

ಕಾಟನಾಯಕನಹಳ್ಳಿ

ಬೊಮ್ಮನಿಂಗನಹಳ್ಳಿ

ಕರಡಿಹಳ್ಳಿ

ತಮ್ಮೇನಹಳ್ಳಿ

ಸೋಮೇನಹಳ್ಳಿ

ಬುಡ್ಡೇನಹಳ್ಳಿ

ಯರಪೋತ ಜೋಗಿಹಳ್ಳಿ

ಯರಜಿನ್ನನಹಳ್ಳಿ

ಯರೇನಹಳ್ಳಿ

ವಡೇರಹಳ್ಳಿ, ಹೊಸ್ಸಳ್ಳಿ

ತುಮಕೂರ್ಲಹಳ್ಳಿ, ಸೂಲೇನಹಳ್ಳಿ

ಸ್ಥಳನಾಮಗಳ ವರ್ಗೀಕರಣ

ಸ್ಥಳ ನಾಮಗಳಲ್ಲಿ ಕಾಣಬರುವ ನಿರ್ದಿಷ್ಟ ಘಟಕಗಳನ್ನು ಒಂದೆಡೆ ಕಲೆ ಹಾಕುವುದು ಕಷ್ಟ. ಸ್ಥಳಗಳಿಗೆ ಹೆಸರಿಡುವ ಪ್ರಕ್ರಿಯೆ ಇತಿಹಾಸವನ್ನು ಗಮನಿಸಿದಾಗ ಸಾಮಾನ್ಯವಾಗಿ ಪ್ರಕೃತಿವಾಚಿ ಮೊದಲು ಅನಂತರ ಜನಾಂಗವಾಚಿ. ಅನಂತರ ವ್ಯಕ್ತಿವಾಚಿಗಳು ಬರುತ್ತವೆ. "ಗ್ರಾಮಗಳಿಗೆ ಮೊದಲು ಪ್ರಕೃತಿನಾಮ (ನವಿಲಗುಂದ), ಆಮೇಲೆ ಜನಾಂಗನಾಮ(ಹಂದರಾಳ), ಇನ್ನೂ ಆಮೇಲೆ ವ್ಯಕ್ತಿನಾಮ(ಬುಕ್ಕಸಾಗರ) ಗಳನ್ನಿಡುತ್ತಾ ಬರಲಾಗಿದೆಯೆಂದು ತಿಳಿದು ಬಂದಿರುವುದರಿಂದ ಜನಾಂಗ ನಾಮವಿಡುತ್ತಲಿದ್ದ ಕಾಲಘಟ್ಟದಲ್ಲಿ ಹುಟ್ಟಿದ 'ಧಾರವಾಡ' ತಕ್ಕಮಟ್ಟಿಗೆ ಹಳೆಯದೆಂದೇ ಹೇಳಬೇಕು."[೨೭] ಆದರೆ ವಾರ್ಗಿಕ ಆಕೃತಿಮಾಗಳ ಸಂಖ್ಯೆ ಸೀಮಿತವಾಗಿರುವುದರಿಂದ ಅವುಗಳನ್ನು ಒಂದೆಡೆ ಸಂಗ್ರಹಿಸುವುದು ಸುಲಭ ಸಾಧ್ಯ. ಸ್ಥಳನಾಮಗಳ ಘಟಕಗಳನ್ನು ಪ್ರತ್ಯೇಕಿಸಿ ಅವುಗಳ ಸ್ವರೂಪವನ್ನು ಖಚಿತಪಡಿಸಿ, ಅರ್ಥ ಗ್ರಹಿಕೆಯೊಡನೆ ಆ ಸ್ಥಳನಾಮ ಬರಲು ಆಧಾರಗಳೊಡನೆ ಒಂದು ನಿರ್ಧಾರಕ್ಕೆ ಬರುವುದಾದರೆ, ಅಲ್ಲಿ ನಿಷ್ಪತ್ತಿಯಂತಹ ಪ್ರಮುಖ ಘಟ್ಟವನ್ನು ತಲುಪಿದಂತಾಗುತ್ತದೆ.

ಮೊಳಕಾಲ್ಮೂರು ತಾಲ್ಲೂಕಿನ ಸ್ಥಳನಾಮಗಳ ವಾರ್ಗಿಕಗಳನ್ನು ಕುರಿತು ಚರ್ಚಿಸಬಹುದಾಗಿದೆ. ಮೊಳಕಾಲ್ಮೂರು ತಾಲ್ಲೂಕಿನ ಸ್ಥಳನಾಮಗಳಲ್ಲಿ ಬಳಕೆಯಾಗಿರುವ ವಾರ್ಗಿಕಗಳ ಆವರ್ತನೆಯನ್ನು ಇಲ್ಲಿ ಒಂದೊಂದಾಗಿ ಪರಿಶೀಲನೆಗೆ ಒಳಪಡಿಸಿ ವಿಶ್ಲೇಷಿಸಲಾಗಿದೆ.

ಸ್ಥಳನಾಮಗಳು

ಸ್ಥಳನಾಮಗಳು

- ಪ್ರಾಕೃತಿಕ ಸ್ಥಳನಾಮಗಳು
  - ಜಲವಾಚಿ
  - ಶಿಲಾವಾಚಿ
  - ಎತ್ತರದ ಭೂಪ್ರದೇಶ
  - ಬಯಲು ಪ್ರದೇಶ
  - ಸಸ್ಯ, ಗಿಡ, ಮರ ಇತ್ಯಾದಿ
  - ಕ್ಷೇತ್ರವಾಚಕ
  - ವರ್ಣ
  - ಇತರೆ[೨೮]
- ಸಾಂಸ್ಕೃತಿಕ ಸ್ಥಳನಾಮಗಳು
  - ವ್ಯಕ್ತಿವಾಚಿ
  - ದೈವವಾಚಿ
  - ಪ್ರಾಣಿ-ಪಕ್ಷಿ
  - ವೃತ್ತಿ-ಜಾತಿ
  - ಪಟ್ಟಣ, ನಗರ, ಬೀದಿ
- ಸಂಕೀರ್ಣ ಸ್ಥಳನಾಮಗಳು

೧. ಜಲವಾಚಿ ಸ್ಥಳನಾಮಗಳು

ಮಾನವ ಸಂಸ್ಕೃತಿಯ ವಿಕಾಸ ಹಂತದಲ್ಲಿ ಜಲಕ್ಕೆ ಅತಿಮುಖ್ಯ ಸ್ಥಾನವಿದೆ. ಬಹುತೇಕ ಜಗತ್ತಿನ ನಾಗರೀಕತೆಗಳೆಲ್ಲವೂ ನದಿಯ ದಂಡೆಯ ಮೇಲೆ ಜೀವನವನ್ನು ಆರಂಭಿಸಿದವೆಂದು ತಿಳಿಯುತ್ತದೆ. ಸದಾ ಸಂಚಾರಿಯಾಗಿದ್ದ ಮಾನವನು ಒಂದೆಡೆ ತಮ್ಮ ಅಸ್ತಿತ್ವವನ್ನು ಕಂಡುಕೊಂಡರು. ಆಗ 'ಜಲ' ಮುಖ್ಯವಾಗಿ ಬೇಕಿತ್ತು. ಈ ಕಾರಣಗಳಿಂದ ಕಾಡನ್ನು ತೊರೆದು ನೀರಿನ ಸಮೀಪ ತಮ್ಮ ನೆಲೆಗಳನ್ನು ಕಟ್ಟಿಕೊಂಡರು. ಅಥವಾ ಸಹಜವಾಗಿ ಹರಿಯುವ ನೀರಿಗೆ ಕೆರೆ, ಕೊಳ, ಕುಂಟೆಗಳಂತಹ ಕೃತಕ ಜಲಸಂಗ್ರಾಹಕಗಳನ್ನು ನಿರ್ಮಿಸಿಕೊಂಡರು.''[೨೯] ಇಂದಿಗೂ ಗ್ರಾಮಗಳ ನಿರ್ಮಾಣ ನೀರನ್ನು ಅವಲಂಬಿಸಿ ರಚನೆಯಾಗುತ್ತದೆ. ಹೀಗೆ ಜಲ ಮೂಲ ಸಂಸ್ಕೃತಿಯಿಂದ ಆರಂಭವಾದ ಸಂಸ್ಕೃತಿಯಲ್ಲಿ ಆ ಜಲವನ್ನು ಅವಲಂಬಿಸಿಯೇ ಕೆಲವು ಗ್ರಾಮಗಳಿಗೆ ಹೆಸರು ಕರೆದುಕೊಳ್ಳುವ ರೂಢಿ ಆರಂಭವಾಗಿರಬೇಕು. ಅಂತಹ ಭೂಸ್ಥಿತಿಯನ್ನು ಹೇಳುವ ಸ್ಥಳನಾಮಗಳು ಹೇರಳವಾಗಿ ದೊರೆಯುತ್ತವೆ.

ಉದಾ. ಚಿಕ್ಕಕೆರೆಹಳ್ಳಿ > ಚಿಕ್ಕೇರಹಳ್ಳಿ

ಹಿರೇಕೆರೆಹಳ್ಳಿ	ಕೆರೆಕೊಂಡಾಪುರ
ಬೊಮ್ಮಗೊಂಡನ ಕೆರೆ	ಸ್ವಾಮಿಕೆರೆ
ಗೌರಸಮುದ್ರ	ನಾಗಸಮುದ್ರ
ದೇವಸಮುದ್ರ	ಶಿರೇಕೊಳ
ಏರೂರು(ಹೇರೂರು)	ಏರು(ತೆಲುಗು)
ಕೋನಸಾಗರ	

ಕೆರೆ, ಸಮುದ್ರ, ಕೊಳ - ಎಂಬ ಜಲವಾಚಿ ವಾರ್ಗಿಕಗಳು ಈ ಭಾಗದಲ್ಲಿ ಬಳಕೆಯಾಗಿವೆ. ಮೊಳಕಾಲ್ಮೂರು ಪರಿಸರದಲ್ಲಿ ಸಮುದ್ರ, ಸಾಗರ ಎಂಬಂತಹ ಜಲಮೂಲ ಉತ್ತರ ಪದಗಳಾಗಿ ಸ್ಥಳನಾಮಗಳಲ್ಲಿ ಬಳಕೆಯಾಗಿರುವುದು ವಿಶೇಷವಾಗಿ ತೋರುತ್ತದೆ. ಕೆರೆ, ಕುಂಟೆಯಂತಹ ಜಲಸಂಗ್ರಾಹಕಗಳಿಗೆ ತಮ್ಮ ಕಲ್ಪನೆಯಲ್ಲಿ ಸಮುದ್ರ ಸಾಗರ ಎಂದು ಕರೆದುಕೊಂಡಿರಬೇಕು. ಜಲವಾಚಿ ಸ್ಥಳನಾಮಗಳಲ್ಲಿ ಬಳಕೆಯಾಗುವ ಕೆರೆ > ಗೆರೆ, ಕೇರಿ > ಗೇರಿ ಒಂದೆ ಎಂದು ಭಾವಿಸಲಾಗುತ್ತದೆ. ''ಅಚ್ಚ ದ್ರಾವಿಡ ವಾರ್ಗಿಕವಿದು. ದ್ರಾವಿಡ ಭಾಷೆಗಳಲೆಲ್ಲಾ ಬಳಕೆಯಲ್ಲಿದ್ದು ಅದರ ಜ್ಞಾತಿ ಶಬ್ದಗಳು ಹೀಗಿದೆ.''[೩೦]

ತಮಿಳು, ಮಲಯಾಳಂ : ಚೇರಿ

ಕನ್ನಡ : ಕೇರಿ, ಗೇರಿ

ತೆಲುಗು : ಗೇರಿ

ತುಳು : ಕೇರಿ

ಈ ವಾರ್ಗಿಕವು ಊರು, ಊರಿನ ಭಾಗ ಎಂಬರ್ಥವನ್ನು ಕೊಡುತ್ತದೆ. ''ಕೇರಿಯು ಜಲಾಶಯವನ್ನು ಸೂಚಿಸುವ ಮುಕ್ತ ಆಕೃತಿಮಾ (F ree Morpheme) 'ಕೆರೆ'ಯಿಂದ ಬಂದಿರಬೇಕೆಂದು ಡಾ.ಆರ್ .ಸಿ. ಹಿರೇಮಠ್ ಹೇಳುತ್ತಾರೆ.''[೩೧] ಜಲವನ್ನು ಸೂಚಿಸುವ ಪದಗಳು ಹೆಚ್ಚಾಗಿ ಸ್ಥಳನಾಮಗಳ ಉತ್ತರ ಭಾಗದಲ್ಲಿ ಕಂಡುಬಂದಿದೆ. ಪೂರ್ವಪದವಾಗಿ ವಿರಳವಾಗಿ ತೋರುತ್ತವೆ.

೨. ಶಿಲಾವಾಚಿ ಸ್ಥಳನಾಮಗಳು

ಸ್ಥಳನಾಮ ನಿರ್ದೇಶನದಲ್ಲಿ ಹೆಚ್ಚಾಗಿ ಪ್ರಕೃತಿಯನ್ನೇ ಅವಲಂಬಿಸಿದ ಪ್ರಾಚೀನರು ಕಲ್ಲನ್ನು ಅತಿಯಾಗಿ ಗಮನದಲ್ಲಿಟ್ಟುಕೊಂಡಿದ್ದಾರೆ ಎಂಬುದು ಸ್ಥಳನಾಮಗಳ ಅವಲೋಕನದಿಂದ ತಿಳಿಯುತ್ತದೆ.

ಉದಾ :	ಸಂತೇಗುಡ್ಡ	ಬ್ರಹ್ಮಗಿರಿ
	ಗುಡ್ಡದಹಳ್ಳಿ	ಗುಂಡ್ಲೂರು
	ಅಮುಕುಂದಿ,	ಹಾನಗಲ್ಲು
	ಜಿಲ್ಲದ ಗುಂಡಿ	ಕಣಕುಪ್ಪೆ
	ಹನುಮನ ಗುಡ್ಡ	ಇರಾಣಗುಡ್ಡ
	ಚಿನಿವಾಲದ ಗುಡ್ಡ	ದೇವರಗುಡ್ಡ

ಕುಂದ-ಗುಂದ-ಗೊಂದಿ ''ಇದು ದ್ರಾವಿಪ ಮೂಲದಿಂದ ಬಂದ ವಾರ್ಗಿಕ, ಇತರೆ ದ್ರಾವಿಪ ಭಾಷೆಗಳಲ್ಲಿ ಸಂವಾದಿ ರೂಪಗಳು ಕೆಳಕಂಡಂತಿವೆ.

ತಮಿಳು : ಕುನಮ್

ಕನ್ನಡ : ಕೊಂಡೆ

ತೆಲುಗು : ಕೊಂಡೆ

ಮಲಯಾಳಂ : ಕುನ್ನಮ್

ತುಳು : ಗುಡ್ಡೆ

ಈ ಎಲ್ಲಾ ಜ್ಞಾತಿ ಭಾಷೆಗಳಲ್ಲಿ ಇದು ಎತ್ತರದ ಸ್ಥಳ, ಗುಡ್ಡ, ಬೆಟ್ಟ ಮುಂತಾದ ಅರ್ಥಗಳನ್ನು ಕೊಡುತ್ತದೆ."[೨೨] ಬೆಟ್ಟಗಳು ಗುಡ್ಡಗಳ ಸಮೀಪ ಬೆಳೆದ ಊರುಗಳನ್ನು ಸೂಚಿಸಲು ಈ ವಾರ್ಗಿಕ ಬಳಕೆಯಾಗಿದೆ. ಈಚೆಗೆ 'ಹಳ್ಳಿ' ಎಂಬರ್ಥವನ್ನಷ್ಟೇ ಕೊಡುತ್ತದೆ.

ಉದಾ : ಗುಡ್ಡದ ಹಳ್ಳಿ, ಅಮುಕುಂದಿ, ಹಾನಗಲ್ಲು

ಬೆಟ್ಟ ಕಲ್ಲು, ಗುಡ್ಡ, ಗುಂಡು ಎಂಬ ಶಿಲಾವಾಚಿ ಪದಗಳಿಂದ ಸ್ಥಳನಾಮಗಳು ಈ ಪರಿಸರಕ್ಕೆ ಕಾರಣವಾಗಿದೆಯೆಂದು ಮೇಲ್ನೋಟಕ್ಕೆ ತಿಳಿಯುತ್ತದೆ. ಶಿಲಾವಾಚಿ ಸ್ಥಳನಾಮಗಳು ಹೆಚ್ಚಾಗಿ ಉತ್ತರಪದದಲ್ಲಿ ಸೂಚಿತವಾಗಿದೆ. ಅತಿ ವಿರಳವಾಗಿ ಅಲ್ಲೊಂದು-ಇಲ್ಲೊಂದರಂತೆ ಪೂರ್ವಪದದಲ್ಲಿಯೂ ಇರುವುದು ಕಂಡುಬರುತ್ತದೆ. ಕಲ್ -ಗಲ್ ಎಂಬ ಈ ವಾರ್ಗಿಕದಿಂದ ಕೊನೆಗೊಳ್ಳುವ ಸ್ಥಳಗಳು ಬಹುಪ್ರಾಚೀನವಾದವು. ಶಿಲಾಯುಗದ ಮಾನವನ ನಿವಾಸ ಸ್ಥಳವನ್ನು ನಿರ್ದೇಶಿಸುತ್ತವೆ. ನಿಸರ್ಗವಾಚಿ ವಾರ್ಗಿಕವಾದ ಇದು ಕಲ್ಲು, ಬಂಡೆಗಳಿರುವ ಪ್ರದೇಶ ಎಂಬ ಅರ್ಥವನ್ನು ಕೊಡುತ್ತದೆ.

ವರ್ಣಸೂಚಕ ಸ್ಥಳನಾಮಗಳು

ಉದಾ : ಯರಪೋತ ಜೋಗಿಹಳ್ಳೀ

ಯರೇನಹಳ್ಳಿ

ಯರಿ ಜೀನನಹಳ್ಳಿ

ಕೆಂಪು ಬಗೆಯ ಈ ಭಾಗದ ಸ್ಥಳನಾಮಗಳಿಂದ ಭೌಗೋಳಿಕ ಚಹರೆಯನ್ನು ಗುರುತಿಸುವ ಸಲುವಾಗಿ ಇಂತಹ ಹೆಸರುಗಳು ಬಂದಿರಬೇಕು.

ಯರ್ರ - ತೆಲುಗು

ಕೆಂಪು - ಕನ್ನಡ

ಯರ್ರ, ಎರ್ರಿ - ಎಂಬ ಪದಗಳು ತೆಲುಗು ಭಾಷೆಯ 'ಕೆಂಪು' ಎಂಬುದನ್ನು ಹೇಳುತ್ತವೆ. 'ಯರೆ, ಯರ್' ಎಂಬ ಪದಗಳು ಭೂಮಿಯ ಒಂದು ಮಣ್ಣಿನ ಗುಣದ ಸ್ವಭಾವವನ್ನು ತಿಳಿಸುವಂತಹವು.

ಒಟ್ಟಾರೆ ಪ್ರಾಕೃತಿಕ ಮೂಲದಿಂದ ಬಂದಂತಹ ಸ್ಥಳನಾಮಗಳು ಆಯಾ ಭೌಗೋಳಿಕ ಪರಿಸರದ ಚಹರೆಯನ್ನು ಗುರುತಿಸಲು ಯೋಗ್ಯವೆನಿಸುತ್ತದೆ. ಒಂದೊಂದು ಸ್ಥಳಕ್ಕೆ ಹೆಸರಿಡುವಾಗ ಅಲ್ಲಿ ಕಂಡುಬರುವ ನಿಸರ್ಗದ ವೈಶಿಷ್ಟತೆಯನ್ನು ಗುರುತಿಸಿ ಅದರೊಂದಿಗೆ ಗ್ರಾಮ ನಿರ್ಮಾಣ ನಡೆದಿರುವುದು ತಿಳಿಯುತ್ತದೆ. ಬೆಟ್ಟಗಳಲ್ಲಿ ನೈಸರ್ಗಿಕವಾಗಿ ನಿರ್ಮಿತವಾದ 'ಡೊಣೆ'ಗಳಿಂದಾಗಿ ಕೆಲವು ಸ್ಥಳನಾಮಗಳು ಬಂದಿವೆ. 'ಡೊಣೆ' ಗಳೆಂದರೆ ಬೆಟ್ಟಗಳಲ್ಲಿ ಮತ್ತು ಬಯಲು ನೆಲದಲ್ಲಿ ಕಲ್ಲಿನಿಂದ ಸಹಜವಾಗಿ ಉಂಟಾದ ನೀರಿನ ಕುಳಿ.

ಉದಾ. ಸೀತಾದೋಣಿ

ಕೆಳಗಿನ ಕಣಿವೆ

ಮೇಗಳ ಕಣಿವೆ

ಕೋಡ-ಕೋಡಿ

"ಈ ವಾರ್ಗಿಕವು ಶಿಖರ, ಬೆಟ್ಟದ ತುದಿ ಎಂಬರ್ಥವನ್ನು ಕೊಡುತ್ತದೆ."[೩೩] ದ್ರಾವಿಡ ಭಾಷೆಗಳಲೆಲ್ಲಾ ಸಮಾನವಾದ ರೂಪವಿದ್ದು ವ್ಯಾಪಕವಾಗಿ ಬಳಕೆಯಾಗಿದೆ. "ತಮಿಳಿನಲ್ಲಿ 'ಕೋಟೆ' ಮತ್ತು ಕನ್ನಡದ 'ಕೋಡು'ಗಳು ಬೆಟ್ಟದ ತುದಿ, ಶಿಖರ ಎಂಬ ಅರ್ಥದ ಜೊತೆಗೆ 'ತೊರೆ', 'ಹೊಳೆ', ಹೊಳೆಯ ಶಾಖೆ ಎಂಬರ್ಥ ನೀಡುವುದನ್ನು ದ್ರಾವಿಡ ವ್ಯುತ್ಪತ್ತಿ ಕೋಶ ಗುರುತಿಸಿದೆ."[೩೪]

ಉದಾ : ಕೋಡಿಹಳ್ಳಿ

ಭೌಗೋಳಿಕ ಸ್ವರೂಪಕ್ಕನುಗುಣವಾಗಿಯೇ ಇಲ್ಲಿನ ಸ್ಥಳನಾಮಗಳಿವೆ. ಸಮುದ್ರ, ಸಾಗರ ಎಂಬ ವಾರ್ಗಿಕಗಳಿಂದ ನಿರ್ದೇಶನಗೊಂಡ ಗ್ರಾಮನಾಮ ಪರಿಸರದಲ್ಲಿ ಸಮುದ್ರ ಸಾಗರಗಳಿಲ್ಲ. ಆದರೆ ಕೆರೆ, ಹಳ್ಳ ಮುಂತಾದ ಜಲಮೂಲಗಳಿವೆ. ಬಹುಶಃ ಇದಕ್ಕೆ ಕಾರಣ ಸಾಂಸ್ಕೃತಿಕ ಭಾಷೆಯ ಒಲವು ಹಾಗೂ ಮಳೆಯ ಆಧಾರಿತ ಭೂಮಿಯಾಗಿರುವ ಈ ಪರಿಸರದಲ್ಲಿಯೂ ಸಮುದ್ರ ಸಾಗರಗಳನ್ನು ಕಾಣುವ ದೃಷ್ಟಿಯೂ ಇರಬಹುದು. ಸ್ಥಳೀಯ ಭೂಮಿಯ ಗುಣ ಅಲ್ಲಿ ದೊರೆಯುವ ಸಂಪತ್ತು, ಬೆಳೆ, ಮರ, ಗಿಡಗಳು, ಪರ್ವತಗಳು ಸ್ಥಳನಾಮಗಳಿಗೆ ಕಾರಣವಾಗಿರುವುದು ಕಂಡುಬರುತ್ತವೆ. ಇದರಿಂದ ಪ್ರಕೃತಿ ನಿಷ್ಠ ಪ್ರಾಚೀನರ ಜೀವನ ವಿಧಾನ, ನಿಸರ್ಗದೊಂದಿಗಿನ ಅವರ ಗಾಢ ಸಂಬಂಧವನ್ನು ತಿಳಿಯಲು ಸಾಧ್ಯವಿದೆ.

೪. ಸಾಂಸ್ಕೃತಿಕ ಸ್ಥಳನಾಮಗಳು

ಬಹಳಷ್ಟು ಸ್ಥಳನಾಮಗಳು ವ್ಯಕ್ತಿವಾಚಿಯಾಗಿ, ಜಾತಿಯನ್ನು ಸೂಚಿಸುತ್ತಾ, ದೇವರನ್ನು ಸೂಚಿಸುವ ಸ್ಥಳನಾಮಗಳು ಸೇರಿವೆ ಪುರುಷ ಹೆಸರಿನ ಸ್ಥಳನಾಮಗಳು ಹಾಗೂ ಸ್ತ್ರೀ ಹೆಸರಿನ ಸ್ಥಳನಾಮಗಳು ಮೊಳಕಾಲ್ಮೂರು ತಾಲೂಕಿನಲ್ಲಿ ಕಂಡುಬಂದಿರುವುದು ವೈಶಿಷ್ಟ್ಯ.

ಪ್ರಾಣಿವಾಚಿ/ಪಕ್ಷಿವಾಚಿ ಸ್ಥಳನಾಮಗಳು

೧. ನಾಗರಪಡೆ ಗುಂಡು

ಶ್ರೀಜಟಂಗಿ ರಾಮೇಶ್ವರ ದೇವಾಲಯ ಹಿಂಭಾಗದಲ್ಲಿ ಒಂದು ಬೃಹತ್ ಬಂಡೆಗಲ್ಲಿದೆ. ಇದನ್ನು 'ನಾಗರಪಡೆ ಗುಂಡು' ಎಂದೇ ಸ್ಥಳೀಯರು ಕರೆಯುತ್ತಾರೆ. ಇದು ದಕ್ಷಿಣಾಭಿಮುಖವಾಗಿ ನಾಗರ ಹಾವಿನಂತೆ ಮುಂಚಾಚಿರುವುದರಿಂದ 'ನಾಗರಪಡೆ' ಎಂಬ ಹೆಸರು ಬಂದಿದೆ. 'ಈ ಬಂಡಗಲ್ಲಿನ ಮೇಲೆ ಪ್ರಾಚೀನ ಕಾಲದ ಐದು ಶಾಸನಗಳಿದ್ದು, ಹಸು, ಕರು, ಯತಿ ಮೊದಲಾದ ರೇಖಾಚಿತ್ರಗಳಿವೆ. ಈ ಬಂಡೆಗಲ್ಲಿನ ಮೇಲಿರುವ ಶಾಸನಗಳ ಕಾಲ ಕ್ರಿ.ಶ.೯೨. ೧೦೩೨, ೧೦೪೧, ೧೦೭೧ ಆಗಿದೆ. ಕ್ರಿ.ಶ.೯೭೨ರ ಶಾಸನವು ಇಟ್ಟಿಗೆಯಲ್ಲಿದ್ದ ರಾಮೇಶ್ವರ ದೇವಾಲಯವನ್ನು ಕಳೆದುಕಲ್ಲುದೇಗುಲವಾಗಿ ನಿರ್ಮಿಸಿದ ಬಗೆಗೆ ಹಾಗೂ ದೇವಾಲಯಕ್ಕೆ ನೀಡಿದ ದಾನ ದತ್ತಿಗಳನ್ನು ಒಳಗೊಂಡಿದೆ.''[೩೫]

೨. ಬಳೆಗಾರರ ಗುಂಡು

ಜಟಂಗಿರಾಮೇಶ್ವರ ಬೆಟ್ಟದ ಬಳೆಗಾರರ ಗುಂಡಿನ ಶಾಸನವು ಬ್ರಹ್ಮಗಿರಿ ಮತ್ತು ಸಿದ್ದಾಪುರದ ಶಾಸನಗಳ ಪ್ರತಿಯೇ ಆಗಿದೆ. ಈ ಶಾಸನವು ಬ್ರಾಹ್ಮಿಲಿಪಿಯಲ್ಲಿದ್ದು ಭಾಷೆ ಪ್ರಾಕೃತವಾಗಿದೆ. ರಾಮೇಶ್ವರ ದೇವರ ಉತ್ಸವ ಕಾಲದಲ್ಲಿ 'ಬಳೆಗಾರರು' ಈ ಬಂಡೆಯ ಮೇಲೆ ಕುಳಿತು ಬಳೆಗಳನ್ನು ಮಾರಾಟ ಮಾಡತ್ತಿದ್ದುದರಿಂದ 'ಬಳೆಗಾರರ ಗುಂಡು' ಎಂಬ ಹೆಸರುಬಂದಿದೆ. ಸ್ಥಳನಿರ್ದೇಶನದಲ್ಲಿ ಪ್ರಾಣಿಗಳು ತಮ್ಮ ಸ್ಥಾನವನ್ನು ಪಡೆದುಕೊಂಡಿವೆ. ಜನಪದರ ಅಥವಾ ಶಿಷ್ಟರ ಮನೋಭಾವನೆಯನ್ನು ಇದು ವ್ಯಕ್ತಪಡಿಸುತ್ತದೆ. ತಮ್ಮ ಜೀವನದೊಂದಿಗೆ ಬದುಕುವ ಅಥವಾ ತಮಗೆ ಅತಿಮಾನುಷವೆಂದು ತೋರುವ ಪ್ರಾಣಿಗಳ ಹೆಸರನ್ನೇ ತಮ್ಮ ವಾಸದ ನೆಲೆಗಳಿಗೆ ಕಂಡುಕೊಂಡಿದ್ದಾರೆ.

ಉದಾ : 'ಕರಡಿಹಳ್ಳಿ', ಎಮ್ಮಿಕೇರಿ, ಎಮ್ಮಿಗನೂರು

ಕರಡಿಹಳ್ಳಿ ಈಗ ಆಂಧ್ರಪ್ರದೇಶದ ಅನಂತರಪುರ ಜಿಲ್ಲೆಯ ರಾಯದುರ್ಗ ತಾಲ್ಲೂಕಿನ ಸೋಮಲಾಪುರ ಗ್ರಾಮಕ್ಕೆ ಕೂಗಳತೆಯ ದೂರದಲ್ಲಿದೆ. ಕರಡಿಗಳು ಹೆಚ್ಚಾಗಿ ಇರುವುದರಿಂದ 'ಕರಡಿಹಳ್ಳಿ' ಎಂದು ಭಾವಿಸಲಾಗಿದೆ. ಕರಡಿಹಳ್ಳಿಗೆ 'ಹರಿಹರ ರಾಯಪುರ'ವೆಂದು ಮೊದಲು ಹೆಸರಿದ್ದು, ಹಿಂದೆ ರಾಯದುರ್ಗ ಸೀಮೆಗೆ ಸೇರಿತ್ತು.

೩. 'ನಾಗಸಮುದ್ರ'

ಮೇಲ್ನೋಟಕ್ಕೆ 'ನಾಗ' ಎಂದರೆ, ಹಾವು ಎಂಬರ್ಥವು ತೋರುತ್ತದೆ. ಸ್ಥಳೀಯರು ಹಾವಿಗೆ ಸಂಬಂಧಿಸಿದ ಐತಿಹ್ಯಗಳನ್ನು ಹೇಳುತ್ತಾರೆ. ಹಾವಿನ ಹುತ್ತದಲ್ಲಿ ಒಂದು ಶಿವಲಿಂಗ ಇತ್ತು . ಹಸು

ಹಾಲನ್ನು ಆ ಹುತ್ತಕ್ಕೆ ಧಾರಿ ಎರೆಯುತ್ತಿತ್ತು. ನಂತರ ಅದು 'ನಾಗಲಿಂಗ' ಎಂದಾಯಿತು. ಊರಿನ ಪಕ್ಕದಲ್ಲಿ ಚಿನ್ನಹಗರಿ(ಹನೆಯನದಿ) ಹರಿಯುವುದರಿಂದ ನಾಗಸಮುದ್ರ ಎಂಬ ಹೆಸರು ಪ್ರಾಪ್ತವಾಗಿದೆ ಎಂದು ಸ್ಥಳೀಯ ಹೇಳುತ್ತಾರೆ.

ಪಕ್ಷಿವಾಚಿ, "ಜಟಂಗಿ"

ಹಿಂದೆ ರಾಮಾಯಣದ ಕಾಲದಲ್ಲಿ ಶ್ರೀರಾಮಚಂದ್ರನು ಸೀತೆ ಹಾಗೂ ಲಕ್ಷ್ಮಣರೊಂದಿಗೆ ಪಂಚವಟಿಗೆ ವನವಾಸಕ್ಕೆ ಬಂದಿದ್ದಾಗ ರಾವಣನು ಸೀತೆಯನ್ನು ಪುಷ್ಪಕ ವಿಮಾನದಲ್ಲಿ ಕರೆದೊಯ್ಯುತ್ತಾನೆ. ಆಗ ಜಟಾಯುವು ರಾವಣನನ್ನು ತಡೆದು ಕಾದಾಡಿ ಮಡಿದ ಸ್ಥಳವೇ ಈ ಜಟಂಗಿ ಪರ್ವತ ಸ್ಥಳ. ಈ ಸ್ಥಳದಲ್ಲಿ ಶ್ರೀರಾಮನು ಜಟಾಯುವಿಗೆ ಅಗ್ನಿ ಸಂಸ್ಕಾರ ಮಾಡಿ ಲಿಂಗ ಪ್ರತಿಷ್ಠೆ ಮಾಡಿದ್ದರಿಂದ ಈಶ್ವರನಿಗೆ ಜಟಂಗಿ ರಾಮೇಶ್ವರ ಲಿಂಗವೆಂದೇ ಹೆಸರಾಯಿತು.

ಈ ಮೇಲೆ ಚರ್ಚಿಸಲಾದ ಪ್ರಾಣಿ-ಪಕ್ಷಿವಾಚಿ ಸ್ಥಳನಾಮಗಳಲ್ಲಿ ಬಹುಮುಖ್ಯ ಎರಡು ಮಾರ್ಗಗಳನ್ನು ಅನುಸರಿಸಲಾಗಿದೆ. ಇಂದು ಪ್ರಾಮಾಣಿಕ ರೂಪಗಳೆಂಬಂತೆ ಬಳಕೆಯಾಗುತ್ತಿರುವ ಮೊಳಕಾಲ್ಮೂರು ಪರಿಸರದ ಸ್ಥಳನಾಮಗಳನ್ನು ಮೇಲ್ ರೂಪದಲ್ಲಿ ಪ್ರಾಣಿ-ಪಕ್ಷಿವಾಚಿಗಳೆಂದು ಗುರುತಿಸುವುದು ಒಂದು ಬಗೆ. ಅದೇ ರೂಪದಿಂದ ದ್ವಂದ್ವಾತ್ಮಕ ನೆಲೆಯಲ್ಲಿ ಅವುಗಳಿಗೆ ಕೊಡಬಹುದಾದ ಭಿನ್ನ ಅರ್ಥಗಳನ್ನು ವಿವರಿಸುವುದು ಮತ್ತೊಂದು ಬಗೆ. ಕ್ಷೇತ್ರ ಕಾರ್ಯದಲ್ಲಿ ಸ್ಥಳೀಯರು ನೀಡುವ ಮಾಹಿತಿ ಬಹುತೇಕ ಇಂದಿನ ರೂಪವನ್ನೇ ಅವಲಂಬಿಸಿದೆ. ಪ್ರಾಣಿ, ಪಕ್ಷಿ ಮುಂತಾದವು ಸ್ಥಳನಾಮಗಳಿಗೆ ನೀಡಿರಬಹುದಾದ ಪ್ರೇರಣೆ, ಆಮೂಲಕ ಸ್ಥಳದ ಹೆಸರಿಗೆ ಪಡೆದಿರುವ ಪ್ರಮಾಣವನ್ನು ಗುರುತಿಸಲು ಪ್ರಯತ್ನಿಸಿದೆ. 'ಹಾವು' ಶಿವನ ಕೊರಳಹಾರವೆಂದು ತಿಳಿದುಬಂದಿದೆ. ಆದರೆ ಭಾರತದಲ್ಲಿ ನಾಗಾರಾಧನೆಯು ತುಂಬಾ ಪ್ರಾಚೀನವಾದುದು. ಅಲ್ಲದೆ ವಿಷ ಜಂತುಗಳಿಂದ ತಮಗೊದಗುವ ಅಪಾಯದ ನಿವಾರಣೆಗೆ ಕೆಲವು ನಂಬಿಕೆಗಳಿಂದ ಪೂಜೆಗೊಳಗಾಗಿವೆ. ಅವು ಕ್ರಮೇಣ ಊರುಗಳಿಗೂ ಹೆಸರಾಗಿರುವ ಸಾಧ್ಯತೆಗಳಿವೆ.

೫. ವ್ಯಕ್ತಿವಾಚಿ ಸ್ಥಳನಾಮಗಳು

ಕುಟುಂಬಗಳು ಬೆಳೆದು ಗ್ರಾಮಗಳಾದಂತೆಲ್ಲಾ ಆದಿ ಮಾನವರು ನಾಗರೀಕರಾಗತೊಡಗಿದರು. ವೈವಿಧ್ಯಮಯ ಜೀವನ ಸಂಸ್ಕೃತಿಯನ್ನು ಆರಾಧನಾ ಪದ್ಧತಿಗಳನ್ನು ರೂಢಿಸಿಕೊಂಡರು. ಪರಿಣಾಮವಾಗಿ ಅನ್ವರ್ಥನಾಮಗಳಾಗಿ ಬದಲಾಗಿ, ದೈವ, ಸಾಂಸ್ಕೃತಿಕ ನಾಯಕರ ಹೆಸರು ಮತ್ತು ಪ್ರಕೃತಿನಿಷ್ಠ ವ್ಯಕ್ತಿನಾಮಗಳನ್ನು ನಿರ್ದೇಶನ ಮಾಡುವುದು ರೂಢಿಗೆ ಬಂದಿತು. ಹೆಸರು ಸಾಂಸ್ಕೃತಿಕ ಆಯಾಮ ಪಡೆದುಕೊಂಡಿದ್ದು, ಪ್ರಾಯಶಃ ಇದೇ ಸಂದರ್ಭದಲ್ಲಿ ಈ ಎಲ್ಲಾ ಸ್ಥಿತ್ಯಂತರಗಳು ಯಾವುದೇ ಒಂದು ಕಾಲಘಟ್ಟದಲ್ಲಿ ಆಗಿರುವ ಬದಲಾವಣೆಗಳಲ್ಲಿ ಹಂತ-ಹಂತವಾಗಿ ಬಳಕೆಗೆ ಬಂದಿದ್ದು ಒಂದೊಂದು

ಕಾಲಘಟ್ಟದ ಪ್ರತೀಕವಾಗಿದೆ. ನಾಮ ನಿರ್ದೇಶನದ ಉದ್ದೇಶ ವ್ಯಕ್ತಿಯನ್ನು ಸಮೂಹದಿಂದ ಬೇರ್ಪಡಿಸಿ (ಪ್ರತ್ಯೇಕಿಸಿ) ಹೇಳುವುದಾಗಿರುತ್ತದೆ. ಅಂದರೆ ವ್ಯಕ್ತಿಯ ಅಸ್ತಿತ್ವವನ್ನು ಗುರುತಿಸುವುದಾಗಿರುತ್ತದೆ. ವ್ಯಕ್ತಿಗೆ ಇಡುವ ಹೆಸರುಗಳು ಕೇವಲ ಭಾಷಿಕ ರಚನೆಗಳಾಗಿರುವುದಿಲ್ಲ. ಹೆಸರಿನಲ್ಲಿ ಸಾಂಸ್ಕೃತಿಕ ಅಂಶವು ಮಿಳಿತವಾಗಿರುತ್ತದೆ. ನಾಮಕರಣಗೊಂಡ ವ್ಯಕ್ತಿ ಅಥವಾ ಸ್ಥಳ ವಸ್ತುವಿನ ವೈಶಿಷ್ಟ್ಯತೆ ಮೊದಲಾದ ಅಂಶಗಳನ್ನು ಹೆಸರು ತನ್ನೊಳಗೆ ಗರ್ಭೀಕರಿಸಿ ಕೊಂಡಿರುತ್ತದೆ ಎಂಬುದು ಗಮನಾರ್ಹ ಸಂಗತಿಯಾಗಿದೆ.

ವ್ಯಕ್ತಿವಾಚಿ ಸ್ಥಳನಾಮಗಳನ್ನು ಒಳಗೊಂಡಿರುವ ಸ್ಥಳನಾಮಗಳು ಮೊಳಕಾಲ್ಮೂರು ತಾಲ್ಲೂಕಿನಲ್ಲಿ ವಿರಳವಾಗಿವೆ ಎನ್ನಬಹುದು.

ಉದಾ. ನಲ್ಲರೆಡ್ಡಿಕೊಂಡಾಪುರ

ಕಾಟನಾಯಕನಹಳ್ಳಿ	ವೆಂಕಟಾಪುರ
ಭಟ್ಟರಹಳ್ಳಿ	ವಿಠಲಾಪುರ
ಚಿಕ್ಕೋಬನಹಳ್ಳಿ	ಬೊಮ್ಮಗೊಂಡನಕೆರೆ
ಬಸಾಪುರ	ತುಪ್ಪದಕ್ಕನಹಳ್ಳಿ
ತಳವಾರಹಳ್ಳಿ	ಬೊಮ್ಮಲಿಂಗನಹಳ್ಳಿ

೬. ದೈವವಾಚಿ

ಸಂಸ್ಕೃತಿಯಲ್ಲಿ ದೇವರಪಾತ್ರ ಅನನ್ಯವಾದುದು. ಜೀವನದ ಹಲವಾರು ಸಂಗತಿಗಳಲ್ಲಿ ದೈವದ ಅಸ್ತಿತ್ವವನ್ನು ಕಂಡುಕೊಳ್ಳುವುದು ನಮ್ಮ ಸಂಸ್ಕೃತಿಯ ಪರಂಪರೆಯಾಗಿ ಮುಂದುವರೆಯುತ್ತದೆ. ಹಾಗೆಯೇ ಗ್ರಾಮ, ಊರುಗಳ ಹೆಸರುಗಳಿಗೂ ದೇವರನಾಮವನ್ನು ಆರೋಪಿಸುವುದು ವಾಡಿಕೆಯಾಗಿದೆ. ಸಮುದಾಯಗಳು ತಾವು ನಂಬಿದ ಕುಲದೈವ, ಮನೆದೈವ, ಗ್ರಾಮದೇವತೆ ಪ್ರಾದೇಶಿಕ ದೇವತೆ -ಹೀಗೆ ಹಲವಾರು ದೇವರುಗಳ ಹೆಸರನ್ನು ತಮ್ಮ ನೆಲೆಗಳಿಗೆ ಇಟ್ಟುಕೊಂಡರೆ ಶುಭವೆಂದು ನಂಬುತ್ತಾರೆ. ಈ ಮೂಲಕ ತಮ್ಮ ಸಂಸ್ಕೃತಿಯ ಒಂದು ಭಾಗವೆಂದು ದೇವರನ್ನು ಸ್ವೀಕರಿಸಿದ್ದೇವೆ. ಮೊಳಕಾಲ್ಮೂರು ತಾಲ್ಲೂಕಿನ ದೈವವಾಚಿ ಸ್ಥಳನಾಮಗಳನ್ನು ಕುರಿತು ಹೀಗೆ ವಿಶ್ಲೇಷಿಸಲಾಗಿದೆ.

೧. ಭೈರಾಪುರ : 'ಭೈರವ' ಎಂಬುದು ಶಿವನ ಇನ್ನೊಂದು ಅವತಾರ. ಈ ನೆಲೆಗಳು 'ನಾಥ ಸಂಪ್ರದಾಯದ ಸ್ಥಳಗಳೆಂದು ತಿಳಿಯುತ್ತದೆ.

೨. ಬೊಮ್ಮದೇವರಹಳ್ಳಿ : ದೈವವಾಚಿ ಸ್ಥಳನಾಮಗಳ ನಿರ್ದಿಷ್ಟ ಭಾಗದಲ್ಲಿ ಹೆಚ್ಚಾಗಿ ಸಂಸ್ಕೃತ ಪದಗಳು ಮತ್ತು ಸಂಸ್ಕೃತದಿಂದ ತದ್ಭವಗೊಂಡ ಪದಗಳು ಇವೆ. ಬಹುಶಃ ದ್ರಾವಿಡ ದೈವಗಳು ಇಲ್ಲಿ ಗೌಣಗೊಂಡಿವೆಯೆಂಬುದು ಗಮನಾರ್ಹ.

೩. **ಕಂಪಳದೇವರ ಹಟ್ಟಿ :** ಇದೊಂದು ಮ್ಯಾಸನಾಯಕರ ಹಟ್ಟಿ. ಕಂಪಳದೇವರ ಗುಡಿ ಇದೆ. ಚಿತ್ರದುರ್ಗ ಜಿಲ್ಲೆಯ ಮ್ಯಾಸನಾಯಕರು ತಮ್ಮ ದೇವರಾದ 'ಗಾದ್ರಿಮಲೆ ಮತ್ತು ಪಾಪನಾಯಕ' ದೇವರನ್ನು ಈ ಕಂಪಳ ದೇವರ ಹಟ್ಟಿಗೆ ಕರೆದೊಯ್ದು, ಪೂಜೆ ಸಲ್ಲಿಸುತ್ತಾರೆ.

ಚಿಕ್ಕಂಮ್ಮಿ - ಚಿಕ್ಕ ಮುತ್ತಿಯು - ಚಿಕ್ಕುಂಮ್ಮಿಯಾಗಿದೆ. ಪ್ರತಿವರ್ಷ ಜನವರಿಯಲ್ಲಿ ಕಂಪಳ ದೇವರ ಜಾತ್ರೆ ನಡೆಯುತ್ತೆ. ಮೊದಲು "ದೇವರ ಹಟ್ಟಿ" ಎನ್ನುತ್ತಿದ್ದರು. ಪುರಾತನ ಕಾಲದ ಅವಶೇಷಗಳಿಗೆ. ಮ್ಯಾಸನಾಯಕರಿಗೆ ಪವಿತ್ರ ಕ್ಷೇತ್ರ.

೪. **ರಾಂಪುರ(ರಾಮಪುರ) :** ರಾಮಾಯಣದ ಕತೆಗೂ - ರಾಂಪುರಕ್ಕೂ ಸಂಬಂಧವಿರುವುದರಿಂದ ರಾಮನ ಹೆಸರಿನಲ್ಲಿ ರಾಮಪುರ(ರಾಂಪುರ) ಎಂದು ಹೆಸರಾಗಿದೆ.

೫. **ಮಠದ ಜೋಗಿಹಳ್ಳಿ :** ಇದೊಂದು ಬೇಚರಾಕ್ ಗ್ರಾಮ. ಹಿಂದೆ ಈ ಪ್ರದೇಶದಲ್ಲಿ ಯಾವ ಜೋಗಿಯಾದರೂ ಮಠಕಟ್ಟಿಕೊಂಡಿದ್ದನೋ ಏನೋ? ಆದರೆ ಕಂದಾಯ ಇಲಾಖೆಯ ದಾಖಲಾತಿಗಳಲ್ಲಿರುವ ಜಮೀನುಗಳಿಗೆ ಮಠದ ಜೋಗಿಹಳ್ಳಿ ಜಮೀನುಗಳು ಎಂದೇ ಹೇಳುತ್ತಾರೆ.

೬. **ಪೂಜಾರಿಹಟ್ಟಿ :** ನುಂಕೇಮಲೆ ಸಿದ್ದೇಶ್ವರ ದೇವಸ್ಥಾನದ ಪ್ರಧಾನ ಅರ್ಚಕರನ್ನು 'ಪೂಜಾರಿಗಳು' ಎಂದು ಕರೆಯುವುದು ವಾಡಿಕೆ. ಅಂತಹ ಪೂಜಾರಿಗಳ ನೆಲೆವಾಸವಿರುವುದೇ 'ಪೂಜಾರಿಹಟ್ಟಿ'ಯಾಗಿದೆ ಎಂದು ಹೇಳಬಹುದು.

೭. **ದೇವರಗುಡ್ಡ :** ಇದೊಂದು ಬೇಚರಾಕ್ ಗ್ರಾಮ. ಈ ಗುಡ್ಡದಲ್ಲಿ ನುಂಕೇಮಲೆ ಸಿದ್ದೇಶ್ವರ ದೇವಾಲಯವಿದೆ.

೮. **ಸಿದ್ಧಾಪುರ :** ಸಿದ್ಧಮತವು ಉಪಕುಲವಾಗಿದ್ದು, ಸಿದ್ಧಾರ್ಥನ ಶಿಷ್ಯರಿಂದ ಸಿದ್ದರು ಇದ್ದ ಪುರವಾದುದರಿಂದ ಸಿದ್ಧಾಪುರವೆಂದು ಹೆಸರಾಯಿತು.

೯. **ಕಾಡುಸಿದ್ಧಾಪುರ :** ಈ ನೆಲೆಗಳೆಲ್ಲ ಸಾಧು ಸಂತರು, ಸಜ್ಜನರು, ಸಿದ್ಧರು, ಪರಮ ತಪಸ್ಸು ಮಾಡಿದ ಸ್ಥಳಗಳೆಂದು ಸ್ಥಳೀಯರು ಹೇಳುತ್ತಾರೆ.

ಹೀಗೆ ದೇವರು, ಪುರಾಣ ಪುರುಷರು, ಸಾಧು-ಸಂತರು, ಸಜ್ಜನರು, ತಪಸ್ವಿಗಳು ಮುಂತಾದವರು ನಮ್ಮ ಸಂಸ್ಕೃತಿಯಲ್ಲಿ ಜೀನದ ಅನನ್ಯ ಭಾಗವಾಗಿ ಅದರಲ್ಲಿಯೂ ಸ್ಥಳಗಳಿಗೆ ಹೆಸರುಗಳಾಗಿ ಬಂದಿರುವುದು ತಿಳಿಯುತ್ತದೆ. ದೇವರೊಂದಿಗಿನ ಸಂಬಂಧ, ಆ ಮೂಲಕ ಕಟ್ಟಿಕೊಂಡ ನಾಡವರ ಸಂಸ್ಕೃತಿಯಲ್ಲಿ ಈ ಸ್ಥಳನಾಮಗಳು ವೈಶಿಷ್ಟ್ಯತೆಯನ್ನು ಪಡೆದುಕೊಂಡಿವೆ. ದೈವವಾಚಿ ಸ್ಥಳನಾಮಗಳಿಂದ ಪ್ರಾದೇಶಿಕವಾಗಿರುವ ಶೈವ-ವೈಷ್ಣವ-ಬೌದ್ಧ-ಜೈನ, ಹೀಗೆ ಹಲವಾರು ಧಾರ್ಮಿಕ ಅಂಶಗಳತ್ತ ಗಮನಹರಿಸಲು ಸಾಧ್ಯವಾಗುತ್ತದೆ. " 'ಭೈರವ'ದಿಂದ ಆರಂಭವಾಗುವ ಗ್ರಾಮನಾಮಗಳಲ್ಲಿ 'ನಾಥ' ಸಂಪ್ರದಾಯ ಶೈವ

ಸಂಸ್ಕೃತಿಯ ನಿರ್ವಚನದಲ್ಲಿ ಇಂತಹ ಊರುಗಳಲ್ಲಿ ಅಧ್ಯಯನ ಕೈಗೊಂಡರೆ ಅನೇಕ ಮೂಲಾಧಾರಗಳು ದೊರೆಯುವ ಸಾಧ್ಯತೆಗಳಿರುತ್ತವೆ.''[೩೬] ಈ ನಿಟ್ಟಿನಲ್ಲಿ ದೈವವಾಚಿ ಸ್ಥಳನಾಮಗಳು ಮಹತ್ವ ಪಡೆದುಕೊಳ್ಳುತ್ತವೆ.

೨. ಜಾತಿವಾಚಿ ಸ್ಥಳನಾಮಗಳು

ಸ್ಥಳನಾಮಗಳಲ್ಲಿ ಜಾತಿ ಸಂಬಂಧಿ ಅಂಶಗಳು ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಜನಾಂಗಿಕ ಅಧ್ಯಯನಕ್ಕೆ ಈ ಬಗೆಯ ಹೆಸರುಗಳು ಮಹತ್ವದ ಆಕರಗಳಾಗಬಹುದು.

೧. ಭಟ್ಟರಹಳ್ಳಿ : ಒಂದು ಪಂಗಡ,[೩೭] ಸ್ತುತಿ, ಪಾಠಕ ವೃತ್ತಿಯವ, ಭಟ್ಟಂಗಿ, ಸ್ವಾಮಿತ್ವ, ಒಡೆತನ, ಶಾಸ್ತ್ರಗಳನ್ನರಿತ ಭಟ್ಟಾಚಾರ್ಯ[೩೮] ಮಾಧವ ಬ್ರಾಹ್ಮಣರ ಅಗ್ರಹಾರ. ಈ ಗ್ರಾಮದಲ್ಲಿ 'ಕೃಷ್ಣಪೌಳಿ' ಎಂಬುದು ಹಳೇಭಟ್ಟರ ಹಳ್ಳಿ ಗ್ರಾಮದಲ್ಲಿ ಕೋಟೆಯಿಂದ ಆವೃತ್ತ ಪ್ರದೇಶ. ಭಟ್ಟರಹಳ್ಳಿ, ಭಟರಹಳ್ಳಿ ವಾಡಿಕೆಯಲ್ಲಿ 'ಭಟ್ರಳ್ಳಿ'ಯಾಗಿದೆ. ಹಿಂದೆ ಇಲ್ಲಿ ಬ್ರಾಹ್ಮಣರು ವಿಶೇಷವಾಗಿ ವಾಸಿಸುತ್ತಿದ್ದುದರಿಂದ 'ಭಟ್ಟರಹಳ್ಳಿ' ಎಂದೂ ಮತ್ತೊಂದು ರೀತಿಯಲ್ಲಿ ಇಲ್ಲಿ ಯೋಧರು, ಭಟರು ಹೆಚ್ಚಾಗಿ ವಾಸಿಸುತ್ತಿದ್ದುದರಿಂದ 'ಭಟರಹಳ್ಳಿ'ಯೆಂದು (ಈಗಲೂ ಇಲ್ಲಿ ದಳಪತಿಗಳ ವಂಶೀಕರು ಇದ್ದಾರೆ) ಕರೆಯುವರು.

೨. ಜೀಯರ ಹಳ್ಳಿ(ರಾಮಸಾಗರ) : ಜಟಂಗಿ ರಾಮೇಶ್ವರ ದೇವಸ್ಥಾನದ ಪ್ರಧಾನ ಅರ್ಚಕರನ್ನು 'ಜೀಯರು' ಎಂದು ಕರೆಯುತ್ತಿದ್ದರು. 'ಅಮೃತ ಶಿವರಾಜ ಜೀಯ' ಇವರು ಜೈನರಾಗಿದ್ದರು ಎಂಬುದು ಶಾಸನಗಳಿಂದ ತಿಳಿದುಬರುತ್ತದೆ. ಮೊಳಕಾಲ್ಮೂರು ತಾಲ್ಲೂಕಿನ ಪ್ರಥಮ ಶಾಸನ. ಕ್ರಿ.ಶ.೯೯೨ (ಜ.ರಾ.ಬೆಟ್ಟ) ಪ್ರಕಾರ ಈ ಜೀಯರು ರಾಮೇಶ್ವರ ದೇವಾಲಯದ ಪ್ರಧಾನ ಅರ್ಚಕರಾಗಿದ್ದು ನೊಳಂಬ ಪೆರ್ಮಾಡಿಯ ಆಳ್ವಿಕೆಯಲ್ಲಿ ಅವರಿಗೆ ಪಕ್ಕದ ಗ್ರಾಮವನ್ನು 'ಜಹಗೀರು' ನೀಡಿದ ಬಗ್ಗೆ ಶಾಸನ ಮಾಹಿತಿ ಇದೆ. ಈ ಗ್ರಾಮವನ್ನು ಈಗ 'ಜೀಯರ ಹಳ್ಳಿ'(ರಾಮಸಾಗರ') ಎಂದು ಕರೆಯುತ್ತಾರೆ.

೩. ತಳವಾರ ಹಳ್ಳಿ : ಈ ಹಳ್ಳಿ ಜಾತಿಯನ್ನು ಪ್ರತಿನಿಧಿಸುತ್ತದೆ. ಪ್ರಾಚೀನ ಕಾಲದ ರಾಜರ ಆಳ್ವಿಕೆಯಲ್ಲಿ ಗೌಡ, ಗಾವುಂಡ, ಶಾನುಭೋಗ, ಕುಲಕರ್ಣಿಗಳ ಹಾಗೆ ಊರಿನ ಪ್ರಮುಖ ಕಾರ್ಯಗಳಲ್ಲಿ 'ತಳವಾರನ' ಪಾತ್ರವು ಬಹುಮುಖ್ಯ. ಈ ತಳವಾರನು ಊರಿನ ಜಾತ್ರೆ-ಉತ್ಸವ ಹಾಗೂ ಹಬ್ಬ ಹರಿದಿನಗಳಲ್ಲಿ ಊರಿನ ಪ್ರಮುಖ ವಿಷಯಗಳನ್ನು ಮಾತನಾಡುವಲ್ಲಿ ಎಲ್ಲರನ್ನು ಸೇರಿಸುವ ಪ್ರಮುಖ ಕಾಯಕ ತಳವಾರನದಾಗಿತ್ತು. 'ಊರಿಗೆ ತಳವಾರನಾಗಿ ಹುಟ್ಟಬೇಡ' ಎನ್ನುವ ಮಾತಿನ ಹಿಂದೆ ಅವನ ಕಾಯಕದ ಕಾರ್ಯವನ್ನು ಧ್ವನಿಸುತ್ತದೆ.

ನಗರ, ಪಟ್ಟಣವನ್ನು ಸೂಚಿಸುವ ನಾಮಗಳು

ವ್ಯಾಪಾರ ಮತ್ತು ವಾಣಿಜ್ಯ ಕೇಂದ್ರಗಳು

ಪ್ರಾಚೀನ ಕರ್ನಾಟಕದಲ್ಲಿ ಪಟ್ಟಣಗಳೇ ಬಹುಮಟ್ಟಿಗೆ ವ್ಯಾಪಾರ ಕೇಂದ್ರಗಳು. ಬಹುಶಃ ವ್ಯಾಪಾರದಿಂದಲೇ ಊರುಗಳು ಪಟ್ಟಣಗಳಾಗುತ್ತಿದ್ದವು.

ಸಂತೆ-ನಾಡು-ಗದ್ದೆ-ಪಟ್ಟಣ-ಕಾವಲು

'ಸಂತೆ' ವಾರ್ಗಿಕವು ಜನಸಂದಣಿಯ ನೆಲೆ. ವಿನಿಮಯ ಕೇಂದ್ರ ಎಂಬರ್ಥವನ್ನು ಕೊಡುತ್ತದೆ. ಊರುಪುರಗಳಿಗಿಂತ ದೊಡ್ಡದಾಗಿರುತ್ತದೆ. 'ನಾಡು' ಎಂಬುದು ಹಲವಾರು ಊರುಗಳ ಸಮೂಹವಾಗಿದ್ದು ವಿಸ್ತಾರ ಪ್ರದೇಶವನ್ನು ನಿರ್ದೇಶಿಸುತ್ತದೆ. 'ಗದ್ದೆ' ಎಂಬುದು ಉಳುಮೆಯ ಫಲವತ್ತಾದ ಭೂಮಿಯನ್ನು ಸೂಚಿಸುತ್ತದೆ. ''ಪಟ್ಟಣದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ 'ನಗರ' ಅಥವಾ 'ನಖರ' ಎಂಬ ವರ್ತಕ ಶ್ರೇಣಿಯ ಪ್ರಮುಖರಿದ್ದರು.''[೩೯] ''ಪ್ರಾಚೀನ ಕರ್ನಾಟಕದಲ್ಲಿ ಸಂತೆ ನಡೆಯುತ್ತಿರುವ ಯಾವುದೇ ಗ್ರಾಮ ಪಟ್ಟಣವೆನಿಸಿಕೊಳ್ಳುತ್ತಿತ್ತು ಎಂಬುದನ್ನು ಮೂಗೂರು ಶಾಸನ ಹೇಳುತ್ತದೆ.''[೪೦] ಕಾರಣ ನಗರ, ಪೇಟೆ, ಪಟ್ಟಣ, ಸಂತೆ ಮುಂತಾದ ವಾರ್ಗಿಕ ನಿರ್ದಿಷ್ಟದಿಂದ ಕೂಡಿದ ಸ್ಥಳನಾಮಗಳು ವ್ಯಾಪಾರಕೇಂದ್ರಗಳನ್ನು ಸೂಚಿಸುತ್ತವೆಂದು ಗುರುತಿಸಬಹುದು.

ಉದಾ : ಸಂತೇಗುಡ್ಡ, ಹೇರೂರು

ಸಂತೇಗುಡ್ಡ : ಗುಡ್ಡದ ಅಂಚಿನಲ್ಲಿರುವ ಈ ಗ್ರಾಮದಲ್ಲಿ ಸಂತೆ ನಡೆಯುವುದರಿಂದ ಈ ಗ್ರಾಮಕ್ಕೆ 'ಸಂತೆಗುಡ್ಡ'ವೆಂದೇ ಹೆಸರಾಗಿದೆ. ಗುಡ್ಡದ ಅಂಚಿನಲ್ಲಿ ಒಂದೆರಡು ಚಿಕ್ಕಪುಟ್ಟ ಗುಡಿಗಳಿವೆ. ಈ ಗ್ರಾಮಕ್ಕೆ 'ಸಂತೇಗೋವಿ' ಎಂದು ಹೆಸರಿದ್ದಿತೆಂದು ತಿಳಿದುಬರುತ್ತದೆ. ಹಿಂದೆ ಇಲ್ಲಿ ಮುತ್ತಿನ ವ್ಯಾಪಾರ ಮಾಡುತ್ತಿದ್ದರಂತೆ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯಲ್ಲಿ ಪಾತ್ರೆ ಸಾಮಾನು ತಯಾರಿಸುವಲ್ಲಿ ಪ್ರಸಿದ್ಧಿಯಾಗಿತ್ತು.

ಹೆಸರುಗಳನ್ನು ಕುರಿತಾದ ಅಧ್ಯಯನ ತುಂಬಾ ಕುತೂಹಲಕಾರಿ ಮಾತ್ರವಲ್ಲದೆ ಅತ್ಯಂತ ಪ್ರಯೋಜನಾಕಾರಿ ಕ್ಷೇತ್ರವಾಗಿದೆ. ವ್ಯಕ್ತಿನಾಮ ಸ್ಥಳನಾಮಗಳು ಭಾಷಾ ವಿಜ್ಞಾನಿ, ಸಮಾಜಶಾಸ್ತ್ರಜ್ಞ, ಇತಿಹಾಸ ತಜ್ಞರಿಗೆ ಅಧ್ಯಯನ ಮಾಡಲು ಭತ್ತದ ತೊರೆಗಳಾಗಿವೆ. ಒಂದೊಂದು ಸಮುದಾಯದ ಭಾಷೆಯು ತನ್ನ ಒಡಲಲ್ಲಿ ಸಂಸ್ಕೃತಿಯನ್ನು ಪ್ರತಿನಿಧಿಸುವ ವ್ಯಕ್ತಿನಾಮ, ಸ್ಥಳನಾಮಗಳನ್ನು ಗರ್ಭೀಕರಿಸಿ ಕೊಂಡಿರುತ್ತದೆ. ಇವುಗಳನ್ನು ಅರ್ಥೈಸಿಕೊಳ್ಳುವುದರಿಂದ ಭಾಷೆಯ ಪೂರ್ವದ ಅವಸ್ಥಾಂತರಗಳನ್ನು ಅರಿತಂತಾಗುತ್ತದೆ. ಈ ನಿಟ್ಟಿನಲ್ಲಿ ಸ್ಥಳನಾಮಗಳು ಸಮುದಾಯದ ಸಾಮಾಜಿಕ ಅಧ್ಯಯನಕ್ಕೆ ಪೂರಕ ಪರಿಕರಗಳೆಂದು ಪರಿಗಣಿಸಲಾಗುತ್ತದೆ.

ಅಡಿಟಿಪ್ಪಣಿಗಳು

೧. ಸಂಶೋಧನಾ ಲೇಖನಗಳು, ಸಂ.ಡಾ.ವ್ಹಿ.ಜಿ.ಪೂಜಾರ, ಪು.೭೨

೨. ಆಂಧ್ರ ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು, ಡಾ.ಜಾಜಿದೇವೇಂದ್ರಪ್ಪ, ಪು.೮೬

೩. ಅದೇ, ಪು.೮೭

೪. ತುಳುನಾಡಿನ ಸ್ಥಳನಾಮಗಳು, ಡಾ.ಕೆಮ್ತೂರ್ ರಘುಪತಿಭಟ್ , ಪು.೫೦

೫. ಕಡೂರು ತಾಲೂಕಿನ ಸ್ಥಳನಾಮಗಳು, ಪ್ರೊ.ಸಿ.ಎಂ.ವಿಶ್ವನಾಥಯ್ಯ, ಪು.೨೦

೬. ಸಿರಿಗನ್ನಡ ಅರ್ಥಕೋಶ, ಪು.೯೮

೭. ವಾಗಾರ್ಥ, ಪು.೧೫

೮. ಕನ್ನಡ-ಕನ್ನಡ ಇಂಗ್ಲೀಷ್ ನಿಘಂಟು, ಪು.೧೧೬

೯. ಸಿರಿಗನ್ನಡ ಅರ್ಥಕೋಶ, ಪು.೭೬

೧೦. ಅದೇ, ಪು.೯೦

೧೧. Dravidiam Etymalogical Dectionary, No. 1091, P.92

೧೨. ಕನ್ನಡ ರತ್ನಕೋಶ, ಪು.೪೬

೧೩. ಸಿರಿಗನ್ನಡ ಅರ್ಥಕೋಶ, ಪು.೧೨೬

೧೪. ಅದೇ, ಪು.೧೨೧

೧೫. ಅದೇ, ಪು.೧೪೦

೧೬. ಆಂಧ್ರ, ಕರ್ನಾಟಕ ಗಡಿಪ್ರದೇಶದ ಸ್ಥಳನಾಮಗಳು, ಜಾಜಿದೇವೇಂದ್ರಪ್ಪ, ಪು.೯೩

೧೭. ಸಿರಿಗನ್ನಡ ಅರ್ಥಕೋಶ, ಪು.೧೪೧

೧೮. ಅದೇ, ಪು.೧೬೧

೧೯. ಅದೇ, ಪು.೨೬೬

೨೦. ಅದೇ, ಪು.೩೪೦

೨೧. ಕನ್ನಡ ಸಾಹಿತ್ಯ ಸಂಬಂಧ, ಡಾ.ವ್ಹಿ.ಜಿ.ಪೂಜಾರ, ಪು.೧೯೦

೨೨. ಕಡೂರು ತಾಲೂಕಿನ ಸ್ಥಳನಾಮಗಳು, ಪ್ರೊ.ವಿಶ್ವನಾಥಯ್ಯ, ಪು.೨೪

೨೩. ಮಾರ್ಗಸಂಪುಟ ೨, ಡಾ.ಎಂ.ಎಂ.ಕಲಬುರ್ಗಿ, ಪು.೫೩೩

೨೪. ಸಿರಿಗನ್ನಡ ಅರ್ಥಕೋಶ, ಪು.೫೧೦

೨೫. ಅದೇ, ಪು.೫೪೧

೨೬. DE-No.300, P.269

೨೭. ಮಾರ್ಗ ಸಂಪುಟ-೨, ಡಾ.ಎಂ.ಎಂ.ಕಲಬುರ್ಗಿ, ಪು.೫೩೭

೨೮. ಆಂಧ್ರ-ಕರ್ನಾಟಕ ಗಡಿಪ್ರದೇಶದ ಸ್ಥಳನಾಮಗಳು, ಡಾ.ಜಾಜಿದೇವೇಂದ್ರಪ್ಪ, ಪು.೫೯

೨೯. ಅದೇ, ಪು.೫೯

೩೦. ಕಡೂರು ತಾಲೂಕಿನ ಸ್ಥಳನಾಮಗಳು, ಪ್ರೊ.ಸಿ.ಎಂ.ವಿಶ್ವನಾಥಯ್ಯ, ಪು.೨೧

೩೧. ಕುರಗೋಡ ಸಿಂಧರು, ಡಾ.ಚೆನ್ನಬಸವಯ್ಯ ಹಿರೇಮಠ, ಪು.೧೧೦

೩೨. ಕಡೂರು ತಾಲೂಕಿನ ಸ್ಥಳನಾಮಗಳು, ಪ್ರೊ.ಸಿ.ಎಂ.ವಿಶ್ವನಾಥಯ್ಯ, ಪು.೨೧

೩೩. ತುಳುನಾಡಿನ ಸ್ಥಳನಾಮಗಳು, ಡಾ.ಕೆಮ್ತೂರ್ ರಘುನಾಥಭಟ್, ಪು.೭೯

೩೪. **Dravidiam Etymalogical Diclicnary(DED),** T.Burrow and M.B.Emeneu, Oxford, 1961

೩೫. ಜಟಂಗಿ ರಾಮೇಶ್ವರ ಸಾಂಸ್ಕೃತಿಕ ದರ್ಶನ, ಡಾ.ವೈ.ಎಸ್.ಸೋಮಶೇಖರ್, ಪು.೫೬

೩೬. ಆಂಧ್ರ-ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು, ಡಾ.ಜಾಜಿ ದೇವೇಂದ್ರಪ್ಪ, ಪು.೭೯

೩೭. ಸ್ಥಳನಾಮ ಅಧ್ಯಯನಗಳು, ವಿ.ಗೋಪಾಲಕೃಷ್ಣ, ಪು.೬೦-೬೧

೩೮. ಸಿರಿಗನ್ನಡ ಅರ್ಥಕೋಶ, ಪು.೩೯೬

೩೯. ಗ್ರಾಮನಾಮಗಳ ಸಾಂಸ್ಕೃತಿಕ ಪರಿವೇಶ, ವಿಶ್ವನಾಥ, ಪು.೭೯

೪೦. ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಬಿ.ಕೆ.ಹಿರೇಮಠ, ಪು.೧೩೨

ಅಧ್ಯಾಯ ೪

ಸ್ಥಳನಾಮಗಳು : ಸಮಾಜ ಮತ್ತು ಮೌಖಿಕ ಪರಂಪರೆ

೪

ಸ್ಥಳನಾಮಗಳು : ಸಮಾಜ ಮತ್ತು ಮೌಖಿಕ ಪರಂಪರೆ

ಮಾನವನ ಬದುಕಿನೊಂದಿಗೆ ಸ್ಥಳನಾಮಗಳು ಅಸ್ತಿತ್ವಕ್ಕೆ ಬಂದವು. ಆಗ ಅವನು ಸಮಾಜ ಜೀವಿಯಾಗಿ, ಬದುಕುವ ಪರಿಸರದಲ್ಲಿ ಅನೇಕ ಕುಲಕಸುಬುಗಳೊಂದಿಗೆ ಜೀವನ ಮಾಡುವುದನ್ನು ಕಲಿತ. ಪ್ರಾಕೃತಿಕ ಪರಿಸರವೇ ಅವನ ಬದುಕಿನಲ್ಲಿ ಹಾಸುಹೊಕ್ಕಿತು. ನಮ್ಮ ಪರಿಸರದ ಸಮಾಜ ರಚನೆಯಲ್ಲಿ ಎರಡು ಪ್ರಧಾನ ವಿಂಗಡಣೆ ಅಥವಾ ಗುಂಪುಗಳು ಕಂಡುಬರುತ್ತವೆ. ಒಂದನೆಯದು ಧರ್ಮ ಮತ್ತು ಜಾತಿ. ಎರಡನೆಯದು ಆರ್ಥಿಕ ಮತ್ತು ಸಾಮಾಜಿಕ ಸ್ತರಗಳು. ಜಾತಿ ಧರ್ಮಗಳು, ನಂಬಿಕೆ, ಸಂಸ್ಕೃತಿ, ಪರಂಪರೆ ಆಚಾರಗಳನ್ನು ಒಳಗೊಂಡಿದ್ದರೆ, ವೃತ್ತಿ, ಆದಾಯ, ಸಾಮಾಜಿಕ ನಡವಳಿಕೆ ಸಮಾಜದಲ್ಲಿನ ವಿವಿಧ ಗುಂಪುಗಳು ಹೊಂದಿರುವ ಪರಸ್ಪರ ಸಾಮಾಜಿಕ ಸಂಬಂಧಗಳು ಮತ್ತು ಸಾಮಾಜಿಕ ಅಂತರಗಳನ್ನು ಅವಲಂಬಿಸಿ ಸ್ತರಗಳು ಅಥವಾ ವರ್ಗ ರಚನೆಯಾಗಿರುತ್ತವೆ. ಒಂದು ನಿರ್ದಿಷ್ಟ ಸಮಾಜದಲ್ಲಿ ಸಮುದಾಯಗಳ ನೆಲಸುವಿಕೆಯ ಚಹರೆಗಳನ್ನು ಗುರುತಿಸುವಾಗ ಪರಸ್ಪರ ಎರಡು ಭೌಗೋಳಿಕ ಪರಿಸರದಲ್ಲಿ ವಾಸಿಸುವ ಸಮುದಾಯಗಳಿಗೆ ಇರುವ ಭೌಗೋಳಿಕ ಅಂತರ್ ಸಂಬಂಧ ಅತ್ಯಂತ ಮಹತ್ವದ್ದಾಗುತ್ತದೆ. ಅಂದರೆ ಜಾತಿ ಅಥವಾ ವರ್ಗದ ನೆಲೆಯಲ್ಲಿ ಆಲೋಚಿಸುವಾಗ ವೃತ್ತಿಯನ್ನವಲಂಬಿಸಿ ಬದುಕುತ್ತಿದ್ದ ಸಮುದಾಯಗಳು ಪರಸ್ಪರ ವೃತ್ತಿಯನ್ನು ಕೊಡು-ಕೊಳೆಯನ್ನಾಗಿಟ್ಟುಕೊಂಡು ಒಂದೊಂದು ಗ್ರಾಮದಲ್ಲಿ ಒಂದೊಂದು ವಿಶಾಲ ಪ್ರದೇಶದಲ್ಲಿ ವಾಸಿಸಿದಂತಹ ಕುರುಹುಗಳನ್ನು ಸ್ಥಳಗಳ ಹೆಸರುಗಳಿಂದ ಅವು ಹೊಂದಿರುವ ಭೌಗೋಳಿಕ ಸಾಮಿಪ್ಯತೆಯಿಂದ ಕೂಡಿರುವುದು ತಿಳಿಯುತ್ತದೆ.

ಆಧುನಿಕತೆ ಸಾಮಾಜಿಕ ಜೀವನದ ಮೇಲೆ ಗಾಢವಾದ ಪ್ರಭಾವವನ್ನು ಬೀರಿದೆ. ಅಂತೆಯೇ ಸ್ಥಳನಾಮಗಳ ಮೇಲೆಯೂ ತನ್ನ ಪ್ರಭಾವವನ್ನು ಬೀರಿದೆ. ‘ಸ್ಥಳನಾಮ ಅಧ್ಯಯನವೆಂದರೆ, ಎಲ್ಲ ಸ್ಥಳನಾಮಗಳ ಪ್ರಾಮಾಣಿಕವಾದ ನಿಷ್ಪತ್ತಿಯನ್ನು ನೀಡುವುದು ಮತ್ತು ಭಾಷಾಶಾಸ್ತ್ರದ ಮೂಲಕ ಅವುಗಳ ರಚನೆಯ ಅಧ್ಯಯನವನ್ನು ಮಾಡುವುದು ಎಂಬ ಅಭಿಪ್ರಾಯಗಳನ್ನು ವಿದ್ವಾಂಸರು ನೀಡುತ್ತಾರೆ.’’[೧] ಆದರೆ ಇದು ಕೇವಲ ನಿಘಂಟಿನ ಅಧ್ಯಯನವಾಗಿ ಉಳಿಯುವ ಸಾಧ್ಯತೆಯಿದೆ. ಆದ್ದರಿಂದ ಸ್ಥಳನಾಮ ಅಧ್ಯಯನವನ್ನು ಸಮಾಜಮುಖಿಯಾಗಿ ನೋಡುವ ಅಗತ್ಯವಿದೆ.

ಸಾಮಾಜಿಕ ಪರಿಸರದ ಮೇಲೆ ವಿಸ್ತೃತವಾಗಿ ಸ್ಥಳನಾಮಗಳನ್ನು ಹರಡಿ, ಹೊಸಬಗೆಯ ಪ್ರಮೇಯಗಳಿಂದ ಅವುಗಳ ಸೈದ್ಧಾಂತಿಕ ಹಾಗೂ ಸಾಮಾಜಿಕ, ಸಾಂಸ್ಕೃತಿಕ ಆವರಣಗಳನ್ನು ಅನಾವರಣ ಗೊಳಿಸುವ ಪ್ರಯತ್ನವನ್ನು ಮಾಡಲಾಗಿದೆ. ಇದರ ಸಮಗ್ರ ಅಧ್ಯಯನವೂ ಈ ಬಗೆಯ ಮಾದರಿಯಿಂದ ಸಾಧ್ಯವೆಂದು ಹೇಳಬಹುದು.

ಮೊಳಕಾಲ್ಮೂರು ಪರಿಸರ ಏಕ ಮಾದರಿಯ ಆಡಳಿತವನ್ನು ಹೊಂದಿಲ್ಲ. ಅಚ್ಚಗನ್ನಡದ ಭಾಷಾದ್ವೀಪಗಳಾಗಿ ಕೆಲವು ಹಳ್ಳಿಗಳು ಆಂಧ್ರದ ರಾಜಕೀಯ ಆಡಳಿತಕ್ಕೆ ಒಳಪಟ್ಟಿವೆ. ಉದಾಹರಣೆಗೆ ಬೆಣಕಲ್ಲು ಕಣೇಕಲ್ಲು ಗ್ರಾಮಗಳು. ಅನೇಕ ಕನ್ನಡಿಗರು ಅವರ ಆಚರಣೆ, ಸಂಸ್ಕೃತಿಯು ಅಲ್ಲಿ ಉಳಿದುಕೊಂಡಿದೆ. ತೆಲುಗರ ವಲಸೆಯಿಂದ ತೆಲುಗಿನ ಭಾಷೆ ಕರ್ನಾಟಕದಲ್ಲಿ ಮೊಳಕಾಲ್ಮೂರು ಪರಿಸರದಲ್ಲಿ ನಿರ್ಮಾಣಗೊಂಡಿದೆ. ಕರ್ನಾಟಕದ ಆಡಳಿತಕ್ಕೆ ಅವು ಒಳಪಟ್ಟಿವೆ. ಏಕೆಂದರೆ, ಮೊಳಕಾಲ್ಮೂರು ತಾಲ್ಲೂಕು ಆಂಧ್ರಪ್ರದೇಶದ ಗಡಿಭಾಗದಲ್ಲಿರುವುದನ್ನು ಮನಗಾಣಬಹುದು. ಭೌಗೋಳಿಕ ಗಡಿಯನ್ನಾಧರಿಸಿ ವೈಪರೀತ್ಯವಿದ್ದರು ಅಲ್ಲಲ್ಲಿ ಏಕ ಮಾದರಿಯ ಸಾಮಾಜಿಕ ಜೀವನವಿದೆ ಎಂಬುದನ್ನು ಗಮನಿಸಬಹುದು. ಭಾಷಾವಾರು ಪ್ರಾಂತ್ಯ ರಚನೋತ್ತರ ಅವಧಿಯಲ್ಲಿ ಗಡಿಭಾಗದಲ್ಲಿ ಅನೇಕ ಸಾಂಸ್ಕೃತಿಕ ಪಲ್ಲಟಗಳು ಏಕ ಮುಖೀ ಸಂಸ್ಕೃತಿಯಿಂದ ಸ್ಥಿತ್ಯಂತರಕ್ಕೆ ಒಳಪಟ್ಟಿರುವುದು ಕಾಣುತ್ತೇವೆ. ಅಂದರೆ ಕನ್ನಡ ಸ್ಥಳನಾಮ ಗಳ ಮೇಲೆ ತೆಲುಗು ಭಾಷೆ, ತೆಲುಗು ಸ್ಥಳನಾಮಗಳ ಮೇಲೆ ಕನ್ನಡ ಭಾಷೆ, ಸಂಸ್ಕೃತಿಯ ಪ್ರಭಾವ, ಸಾಮಾಜಿಕ ಸಂಬಂಧಗಳನ್ನು ಹೇಳುವ ಕುರುಹುಗಳಾಗಿ ಉಳಿದಿವೆ.

ಸ್ಥಳನಾಮಗಳ ಸಾಮಾಜಿಕ ಆಯಾಮಗಳು

ಸ್ಥಳನಾಮಗಳ ಮೂಲಕ ಸಾಮಾಜಿಕವಾಗಿ ಉಂಟಾಗುವ ಸಾಂಸ್ಕೃತಿಕ ಪ್ರಕ್ರಿಯೆಗಳನ್ನು ತಿಳಿಯಲು ಸಾಧ್ಯವಿದೆ. ಸಮಾಜದಲ್ಲಿನ ವಿಭಿನ್ನ ರೀತಿಯ ಸಾಂಸ್ಕೃತಿಕ ಚಹರೆಗಳನ್ನು ಸ್ಥಳನಾಮಗಳು ಹೇಗೆ ಗುರುತಿಸಿ, ಮಾರ್ಗವನ್ನು ನಿರ್ಮಿಸುತ್ತಾ ಪ್ರತಿನಿಧಿಯಾಗಿ ಮೂಲಾಧಾರಗಳಾಗಿ ನಿಲ್ಲುತ್ತವೆಂಬುದನ್ನು ವಿವಿಧ ಸಾಮಾಜಿಕ ಆಯಾಮಗಳಿಂದ ಸ್ಥೂಲವಾಗಿ ಚರ್ಚಿಸಲಾಗಿದೆ.

೪.೧. ಜಾತಿಯಾಧಾರಿತ ಸ್ಥಳನಾಮಗಳು

ಭಾಷೆಯ ರಚನೆಯಲ್ಲಿ ಧ್ವನಿ, ಪದ, ವಾಕ್ಯ, ಅರ್ಥ ಮುಂತಾದ ಅಂಶಗಳಿರುವಂತೆ, ಸಾಮಾಜಿಕ ರಚನೆಯಲ್ಲಿ ಲಿಂಗ, ವರ್ಗ, ಜಾತಿ ಮುಂತಾದ ಅಂಶಗಳಿವೆ. ಈ ಮೂಲಕ ನಾಮಾಧ್ಯಯನ ಪ್ರಸ್ತುತತೆಯನ್ನು ಪಡೆದುಕೊಳ್ಳುತ್ತದೆ. ಇಲ್ಲಿ ಮುಖ್ಯವಾಗಿ ''ಲಿಖಿತ ಆಧಾರಗಳ ಕೊರತೆಯಿದ್ದಲ್ಲಿ ಒಂದು ಜನಾಂಗವು ನೆಲೆಸಿದ್ದ ಒಂದು ಪ್ರದೇಶದ ಸ್ಥಳನಾಮಗಳಲ್ಲಿದ್ದ ಸಮಾನ ರೂಪಗಳನ್ನು ಪರಿಶೀಲಿಸಬೇಕು.''[೨] ಇದರಿಂದ ಆಯಾ ನಾಡಿನ ಹಲವಾರು ''ಸಾಂಸ್ಕೃತಿಕ ಸ್ತರಗಳ ನಾನಾ ಜನಾಂಗಗಳ

ಅಸ್ತಿತ್ವವು ಸ್ಥಳನಾಮಗಳಲ್ಲಿ ಅಭಿವ್ಯಕ್ತಿಗೊಂಡಿರುವುದನ್ನು ಕಾಣಬಹುದಾಗಿದೆ.''[೩] ಇಂತಹ ನಾಮಗಳು ನೇರವಾಗಿ ಅಲ್ಲದಿದ್ದರೂ ''ಸಂಸ್ಕೃತಿಯ ಪಳೆಯುಳಿಕೆಗಳಂಥ ಅವಶೇಷಗಳಾಗಿರುವುದರಿಂದ ಅವು ಪರೋಕ್ಷವಾಗಿಯಾದರೂ ಜನತೆ ಮತ್ತು ನಿರ್ಧಿಷ್ಟ ಕಾಲದ ಸಮಾಜದ ಕುರಿತು ಅತ್ಯಂತ ಉಪಯುಕ್ತ ಮಾಹಿತಿಯನ್ನು ಒದಗಿಸುತ್ತವೆ.''[೪] ಕಾರಣ ಈ ಬಗೆಯ ಸಾಮಾಜಿಕ ಅಧ್ಯಯನದಿಂದ ''ಒಂದು ಸಮಾಜದಲ್ಲಿನ ವರ್ಣವ್ಯವಸ್ಥೆ, ನಾಗರಿಕತೆ, ಸಂಸ್ಕೃತಿಯನ್ನು ತಿಳಿಯಲು ಸಾಧ್ಯವಾಗುತ್ತದೆ.''[೫] ಸ್ಥಳನಾಮ ನಿರ್ದೇಶನವು ಜಾತಿ, ವರ್ಗದ ಪ್ರತಿನಿಧಿಯಾಗಿ ಕಾಣಿಸಿಕೊಂಡಿದ್ದು, ಎರಡನೇ ಘಟ್ಟದಲ್ಲಿ ಎಂದು ಹೇಳಬಹುದು. ಏಕೆಂದರೆ ಇದಕ್ಕಿಂತ ಮುಂಚೆ ನಿಸರ್ಗದೊಂದಿಗೆ ಸರಳವಾದ ಜೀವನವನ್ನು ಸಾಗಿಸುತ್ತಾ, ತನ್ನ ಕುಟುಂಬ ಅಥವಾ ಗುಂಪಿನೊಂದಿಗೆ ಅಲೆಯುತ್ತಿದ್ದ ಮನುಷ್ಯ ಕೃಷಿಯನ್ನು ಕಂಡುಕೊಂಡು, ಅದರ ರಕ್ಷಣೆ ಮತ್ತು ಉಪಯೋಗಕ್ಕಾಗಿ ಒಂದೆಡೆ ನೆಲೆ ನಿಲ್ಲುವಲ್ಲಿ ಗ್ರಾಮ ಪರಿಕಲ್ಪನೆ ಉಗಮವಾಯಿತೆನ್ನಬಹುದು. ಈ ಸಂದರ್ಭದಲ್ಲಿ ಮನುಷ್ಯರು, ನಿಸರ್ಗದತ್ತವಾದಂತಹ ಕಲ್ಲು, ಗುಡ್ಡ, ದಿನ್ನೆ, ಬೆಟ್ಟ, ಪೊಟರೆ ಮುಂತಾದವುಗಳೊಂದಿಗೆ ತಮ್ಮ ವಾಸದ ನೆಲೆಯನ್ನು ಗುರುತಿಸಿಕೊಂಡರು. ಆದುದರಿಂದ ಗ್ರಾಮನಾಮಗಳ ಇತಿಹಾಸದಲ್ಲಿ ನಿಸರ್ಗವಾಚಿ ಸ್ಥಳನಾಮಗಳು ಮೊದಲು ಉಗಮಗೊಂಡವು. ಇದು ಗ್ರಾಮ ಅಥವಾ ಸ್ಥಳನಾಮದ ಪ್ರಥಮಘಟ್ಟವೆಂದು ಕಲ್ಬುರ್ಗಿಯವರು ಅಭಿಪ್ರಾಯಪಡುತ್ತಾರೆ. (ನಾಮವಿಜ್ಞಾನ, ಪು.೫೫) ಕಾಲಕ್ರಮದಲ್ಲಿ ನಿಸರ್ಗಕ್ಕಿಂತ, ತನ್ನ ಜನಾಂಗದ ಬಗೆಗೆ ವ್ಯಕ್ತಿಗಳು ಮೋಹ ಬೆಳಸಿಕೊಂಡ ಸಂದರ್ಭದಲ್ಲಿ ಸಮುದಾಯಗಳು ರೂಪು ಪಡೆದವು. ''ಜನಾಂಗ ನಿಷ್ಠೆ ಗಟ್ಟಿಗೊಂಡ ಈ ಎರಡನೇ ಘಟ್ಟದಲ್ಲಿ ನಿಸರ್ಗವಾಚಿ ಬದಲು ಕ್ರಮೇಣ ಜನಾಂಗವಾಚಿ ಗ್ರಾಮನಾಮಗಳು ತಲೆದೋರಲಾರಂಭಿಸಿದವು.''[೬] ಹೀಗಾಗಿ ಜನಾಂಗ ಅಥವಾ ಜಾತಿಯ ನೆಲೆಯಲ್ಲಿ ನಿರ್ದೇಶನಗೊಂಡಿರುವ ಸ್ಥಳನಾಮಗಳನ್ನು ಆಯಾ ಸಮುದಾಯಗಳ ಹಿನ್ನಲೆಯಲ್ಲಿ ಗುರುತಿಸುವ ಪ್ರಯತ್ನವನ್ನು ಮಾಡಿ ವಿಶ್ಲೇಷಿಸಲಾಗಿದೆ.

೧. ಬ್ರಾಹ್ಮಣರು

ಮೊಳಕಾಲ್ಮೂರು ಪರಿಸರದಲ್ಲಿ ಬ್ರಾಹ್ಮಣರಿಗೆ ಪ್ರತ್ಯೇಕವಾದ ಅಗ್ರಹಾರಗಳು ಇಲ್ಲದೆ ಇದ್ದರೂ ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ಸದಾಶಿವರಾಯನು ಹಾಗೂ(ಹಕ್ಕಭೂಪತಿ) ಹರಿಹರನು ಕೆಲವು ಗ್ರಾಮಗಳನ್ನು ಅಗ್ರಹಾರಗಳನ್ನಾಗಿ ಪರಿವರ್ತಿಸಿದ ಬಗೆಯನ್ನು ಶಾಸನಗಳ ಮೂಲಕ ತಿಳಿಯಬಹುದು. ಉದಾಹರಣೆಗೆ ಕರಡಿಹಳ್ಳಿ ಗ್ರಾಮವನ್ನು 'ಹರಿಹರ ರಾಯಪುರ' ಎಂತಲೂ 'ಮುರುಡಿ' ಗ್ರಾಮವನ್ನು 'ಬುಕ್ಕರಾಯಪುರ'ವೆಂತಲೂ ಪ್ರತಿನಾಮಕರಣ ಮಾಡಿ ಅಗ್ರಹಾರವನ್ನಾಗಿ ದಾನ ದತ್ತಿ ನೀಡಿದ ಪ್ರಸಂಗಗಳು ಶಾಸನಗಳಲ್ಲಿ ಉಲ್ಲೇಖಿತ ಸಂಗತಿಯಾಗಿದೆ. ಪ್ರಾಚೀನ ಸಾಮಾಜಿಕ ಜೀವನದಲ್ಲಿ ತನ್ನ ಸ್ಥಾನಮಾನಗಳನ್ನು ಗರಿಷ್ಠವೆಂಬಂತೆ ಗುರುತಿಸಿಕೊಂಡು ತನ್ನದೇ ಆದಂತಹ ಅಸ್ತಿತ್ವವನ್ನು ಸ್ಥಳನಾಮಗಳ ಮೇಲೂ ಸ್ಥಾಪಿಸಿಕೊಂಡಿರುವುದು ತಿಳಿಯುತ್ತದೆ. ಸಾಮಾಜಿಕವಾಗಿ ಬಲಿಷ್ಠವಾದ ಸಮುದಾಯವಾಗಿತ್ತು. ಪ್ರತ್ಯೇಕ

ಗುಂಪುಗಳಲ್ಲಿ ವಾಸಿಸುತ್ತಿದ್ದ ವೈಧಿಕರು ತಮ್ಮ ಕೆಲವು ನೆಲೆಗಳಿಗೆ ವೈಷ್ಣವ ಸಂಬಂಧಿ ಹೆಸರುಗಳನ್ನು ನಿರ್ದೇಶಿಸಿಕೊಂಡಿದ್ದಾರೆ. ಕ್ಷತ್ರಿಯರು ಬ್ರಾಹ್ಮಣರಿಗೆಂದೇ ಅಗ್ರಹಾರಗಳನ್ನು ನಿರ್ಮಿಸಿಕೊಟ್ಟದ್ದು ಇತಿಹಾಸದಿಂದ ತಿಳಿಯುತ್ತದೆ. ಶಾಸನಗಳೂ ಅಗ್ರಹಾರಗಳ ಉಲ್ಲೇಖವನ್ನು ನೀಡುತ್ತವೆ. ರಾಜರು, ಮಂತ್ರಿಗಳು ಅಧಿಕಾರಿಗಳು ನೀಡಿದ ಕೊಡುಗೆಗಳು ಇವಾಗಿರುತ್ತಿದ್ದವು. ಬ್ರಾಹ್ಮಣೇತರರು ಅಗ್ರಹಾರಗಳಲ್ಲಿ ವಾಸಿಸುವಂತಿರಲಿಲ್ಲವೆಂಬುದು ಅತ್ಯಂತ ಗಮನಾರ್ಹ ಸಂಗತಿಯೆನ್ನಬಹುದು. "ಅಗ್ರಹಾರಗಳಲ್ಲದೇ - 'ಬ್ರಾಹ್ಮಣ' ಎಂಬ ಹೆಸರಿನಿಂದಲೂ ಹಾರುವ ಪಾರುವ ಬೊಮ್ಮ ಮುಂತಾದ ಹೆಸರುಗಳಿಂದಲೂ ಆರಂಭವಾಗುವ ಸ್ಥಳನಾಮಗಳು ಕರ್ನಾಟಕದಲ್ಲಿವೆ. ಬ್ರಹ್ಮವು ಸಂಸ್ಕೃತದಿಂದ ತದ್ಭವಗೊಂಡು 'ಬೊಮ್ಮ' ಆಗಿರಬೇಕು. ಮುಂದೆ ಕನ್ನಡ ನಾಡಿನಾದ್ಯಂತ ಇಂಥ ಬೊಮ್ಮ ಸಂಬಂಧಿ ಗ್ರಾಮ ರಚನೆಗಳಾಗಿರಬಹುದು. ಇದಕ್ಕೆ ಕಾರಣ ಆಳ ಅರಸರು ಬ್ರಾಹ್ಮಣರಿಗೆ ನೀಡಿದ ದಾನ-ದತ್ತಿ ಮತ್ತು ಪುರೋಹಿತ ವರ್ಗವು ಕಂಡುಕೊಂಡ ವಾಸ್ತವ್ಯದ ಹೆಸರನ್ನು ಪ್ರತಿನಿಧಿಸುತ್ತಿದೆ."[೨] ಭಟ್ಟರಿಗೆ ಸಂಬಂಧಿಸಿದ ಹೆಸರಿನ ಊರುಗಳು ದೊರೆಯುತ್ತವೆ. ಭಟ್ಟ ಎಂಬ ಪದ ಒಂದು ವೃತ್ತಿಯನ್ನು ಸೂಚಿಸುವ ಪದವಾಗಿದೆ. ಕೆಲವು ಪ್ರದೇಶಗಳಲ್ಲಿ ಅಡುಗೆ ಮುಂತಾದ ಕೆಲಸವನ್ನು ಮಾಡುವವರಿಗೆ ಈ ಪದವು ಬಳಕೆಯಾಗುತ್ತದೆ.

ಮೊಳಕಾಲ್ಮೂರು ಪರಿಸರದಲ್ಲಿ ಹಲವು ಊರುಗಳ ಹೆಸರುಗಳು ಭಟ್ಟರ ಹಳ್ಳಿ, ಅಯ್ಯನಹಳ್ಳಿ, ಪೂಜಾರಿಹಳ್ಳಿ, ಬೊಮ್ಮಲಿಂಗನಹಳ್ಳಿ, ಬೊಮ್ಮದೇವರ ಹಳ್ಳಿ -ಹೀಗೆ ಮುಂತಾದ ಹೆಸರುಗಳಿವೆ. ಇವು ಎಷ್ಟರಮಟ್ಟಿಗೆ ಬ್ರಾಹ್ಮಣ ಸಮುದಾಯವನ್ನು ಸೂಚಿಸುತ್ತವೆ ಎಂಬುದು ಕುತೂಹಲಕಾರಿ ಸಂಗತಿಯಾಗಿದೆ. ಬ್ರಾಹ್ಮಣರನ್ನು ಅಯ್ಯ, ಭಟ್ಟ, ಸ್ವಾಮಿ ಎಂತಲೂ ಕರೆಯುವ ರೂಢಿಯಿದೆ. ದೇವರ ಪೂಜೆ ಮುಂತಾದ ಪೌರೋಹಿತ್ಯ ಕಾರ್ಯಗಳನ್ನು ನಿರ್ವಹಿಸುತ್ತಿದ್ದರಿಂದ ಪೂಜಾರಿಗಳೆಂದೂ, ಶಿಕ್ಷಣ ಕೊಡುತ್ತಿದ್ದರಿಂದ ಅಯ್ಯ ಎಂದು ಕರೆಯುತ್ತಿದ್ದರು.

೧. ಭಟ್ಟ, ಪೂಜಾರಿ, ಅಯ್ಯ ನಿರ್ದಿಷ್ಟ ಹೊಂದಿದ ನೆಲೆಗಳು

   ೧. ಭಟ್ಟರ ಹಳ್ಳಿ
   ೨. ಅಯ್ಯನಹಳ್ಳಿ
   ೩. ಪೂಜಾರಿಹಟ್ಟಿ

೨. ಬೊಮ್ಮ ನಿರ್ದಿಷ್ಟವನ್ನು ಹೊಂದಿದ ವಾಸ್ತವ್ಯಗಳು

   ೧. ಬ್ರಹ್ಮಗಿರಿ
   ೨. ಬೊಮ್ಮದೇವರ ಹಳ್ಳಿ
   ೩. ಬೊಮ್ಮಲಿಂಗನಹಳ್ಳಿ
   ೪. ಬೊಮ್ಮಗೊಂಡನ ಕೆರೆ
   ೫. ಬೊಮ್ಮಕ್ಕನ ಹಳ್ಳಿ

ಕೇವಲ ಬ್ರಾಹ್ಮಣರ ನೆಲೆಗಳಾಗಿದ್ದ ಇಲ್ಲಿ ತಮ್ಮ ಬೌದ್ಧಿಕ ಶಕ್ತಿಯಿಂದ ಶಿಕ್ಷಣವನ್ನು ನೀಡುತ್ತಾ ರಾಜ್ಯದ ರಾಜಕೀಯದಲ್ಲಿ ತನ್ನದೇ ಆದಂತಹ ಅಸ್ತಿತ್ವವನ್ನು ಹೊಂದಿರುತ್ತಿದ್ದರು.

೨. ಕ್ಷತ್ರಿಯರು

'ಕ್ಷತ್ರಿಯ' ಎಂಬ ಪದವನ್ನೊಂದಿದ ಸ್ಥಳನಾಮಗಳು ಕಂಡುಬರುವುದಿಲ್ಲ. ಇಲ್ಲಿ ಕ್ಷಾತ್ರಗುಣವನ್ನು ಹೊಂದಿದ ಅಥವಾ ಅರಸರು, ಕೆಲವು ಪೌರಾಣಿಕ ವೀರರು, ಕ್ಷಾತ್ರಬಲವುಳ್ಳ, ವ್ಯಕ್ತಿಗಳನ್ನು ವೀರರು ಎಂದು ಕರೆದವರನ್ನು ಹೆಸರಿಸುತ್ತಾ ಕ್ಷತ್ರಿಯರಿಗೆ ಸಂಬಂಧಿಸಿದ ಸ್ಥಳನಾಮಗಳಾಗಿವೆ. ಮೊಳಕಾಲ್ಮೂರು ಪರಿಸರಕ್ಕೆ ಸಂಬಂಧಿಸಿದ ಸ್ಥಳನಾಮಗಳು ಈ ಕೆಳಕಂಡಂತಿವೆ.

ಉದಾ : ರಾಯಪುರ, ರಾಮಪುರ, ವೀರಾಪುರ, ರಾಜಾಪುರ

ಈ ಸ್ಥಳನಾಮಗಳಲ್ಲಿ ಬಂದಿರುವ ರಾಯ, ರಾಮ, ವೀರ, ರಾಜ (ರಾಮಾಯಣ-ಮಹಾಭಾರತದ ಹೆಸರುಗಳು) ಕೆಲವು ವ್ಯಕ್ತಿಗಳ ಹೆಸರುಗಳು ನೇರವಾಗಿ ಕ್ಷತ್ರಿಯರನ್ನು ಬಿಂಬಿಸಲಾರವಾದರೂ, ಕ್ಷಾತ್ರಗುಣವನ್ನು ಪ್ರತಿನಿಧಿಸುವ ದೃಷ್ಟಿಯಿಂದ ಇವುಗಳನ್ನು ಗುರುತಿಸಬಹುದು. ಆದರೂ ಇವು ಸಮರ್ಪಕವೆಂದು ಹೇಳಲಾಗದು. ಕೆಲವು ವ್ಯಕ್ತಿ ನಾಮವಾಚಕ ಸ್ಥಳನಾಮಗಳಾಗುತ್ತವೆ. ಇದು ಕೇವಲ ಒಂದು ಮಾದರಿ ಎಂದು ತಿಳಿಯಬಹುದು.

೩. ಲಿಂಗಾಯಿತರು(ಶೈವ)

ಲಿಂಗಾಯತರ ಊರುಗಳನ್ನು ಮುಖ್ಯವಾಗಿ ಎರಡು ರೀತಿಯಲ್ಲಿ ಗುರುತಿಸಬಹುದು. ೧೨ನೆಯ ಶತಮಾನದಲ್ಲಿ ಆರಂಭವಾಗಿ ವೀರಶೈವ ಧರ್ಮದಿಂದ ಉಂಟಾದ ಸ್ಥಳನಾಮಗಳು ಹಾಗೂ ಆ ಧರ್ಮಕ್ಕಿಂತ ಮುಂಚೆ ಇದ್ದ ಶೈವ ಪಂಥದಿಂದ ನಿರ್ದೇಶಿಸಲ್ಪಟ್ಟ ಸ್ಥಳನಾಮಗಳು, ಶೈವ ಪಂಥದ ದೈವಗಳಾದ ವೀರಭದ್ರ, ಶಿವ, ಪರಮೇಶ್ವರ, ಲಿಂಗ, ನಂದಿ ಮುಂತಾದ ಹೆಸರುಗಳಿಂದ ಶೈವಸ್ಥಳ ನಾಮಗಳಾಗಿವೆ. ವೀರಶೈವ ಪಂಥದ ಪ್ರಭಾವದಿಂದ ಗ್ರಾಮನಾಮಗಳಲ್ಲಿ ಅಯ್ಯ, ಜಂಗಮ, ಮಠ, ಬಸವ, ಸಿದ್ದರಾಮ ಮುಂತಾದ ಪದಗಳಿವೆ. ಅಂತಹ ಕೆಲವು ಉದಾಹರಣೆಗಳು ಇಲ್ಲಿವೆ.

ಅಯ್ಯನ ಹಳ್ಳಿ, ಬಸಾಪುರ, ಮಠದ ಜೋಗಿಹಳ್ಳಿ, ಹನುಮಾಪುರ, ಯರಪೋತಜೋಗಿಹಳ್ಳಿ, ಸಿದ್ದಾಪುರ, ಬೊಮ್ಮಲಿಂಗನಹಳ್ಳಿ, ಸಿದ್ದಯ್ಯನ ಕೋಟೆ, ಬೊಮ್ಮಗೊಂಡನಕೆರೆ

"ಲಿಂಗಾಯಿತರಿಗೆ ಸಮಬಂಧಿಸಿದ ಸ್ಥಳನಾಮಗಳನ್ನು ಹೇಳುವಾಗ ಎಚ್.ಎಸ್.ಬ್ರಹ್ಮಾನಂದ ಇವರು "ಇವರು ಕೇವಲ ಲಿಂಗಾರಾಧಕರು, ಲಿಂಗವನ್ನು ಪೂಜಿಸುತ್ತಾರೆ" ಎಂದು ಈ ರೀತಿ ಅಭಿಪ್ರಾಯಪಡುತ್ತಾರೆ."[೮]

೪. ಗೊಲ್ಲರು

ಗೊಲ್ಲರಲ್ಲಿ ಕಾಡುಗೊಲ್ಲರೆಂಬ ಪ್ರತ್ಯೇಕ ಸಮುದಾಯವಿದೆ. ಇವರನ್ನು 'ಗೋಪರು' ಎಂದು ಸಹ ಕರೆಯುವರು. ಇವರ ಮುಖ್ಯ ವೃತ್ತಿ ಪಶುಸಂಗೋಪನೆ, ದನಗಾರಿಕೆ ಗೊಲ್ಲ ಜನಾಂಗದ ಪಾರಂಪರಿಕ ವೃತ್ತಿ ಈ ದನಗಾರರ ಬಗ್ಗೆ ಶಂಬಾಜೋಶಿಯವರು ''ಹಾಲು ಮತ ದರ್ಶನ'' ಕೃತಿಯಲ್ಲಿ ಚರ್ಚಿಸುತ್ತಾರೆ. ಕುಟ>ಕುಟಿ>ಕುಡ>ಕುಳ, ಪಟ್ಟ>ಹಟ್ಟಿ>ಪಾಡಿ>ಹಾಡಿ ಇವುಗಳೆಲ್ಲಾ ಗೋವಳಿಗರ ವಸತಿಗಳೆಂದು ಶಂಬಾಜೋಶಿಯವರು ವಾದಿಸುತ್ತಾರೆ. ''ಪಟ್ಟಿಯು ಈ ನಾಡವರ ತೀರ ಆರಂಭ ಕಾಲದ ದನಗಾರಿಕೆಯ ಮಟ್ಟದ ಬಿಡಾರವೆಂದು ಶಂಬಾ ಅವರು ತೀರ್ಮಾನಿಸುವರು''[೯] ಇದನ್ನು ಒಪ್ಪಬಹುದು. ಮೊಳಕಾಲ್ಮೂರು ಪರಿಸರದಲ್ಲಿ ಗೊಲ್ಲರ ಜನಾಂಗದ ಸಂಖ್ಯೆ ಹೆಚ್ಚಾಗಿದ್ದರೂ ಪ್ರತ್ಯೇಕವಾದ ಹಟ್ಟಿಗಳು ಅತಿ ವಿರಳವೆಂದೇ ಹೇಳಬಹುದು. ಮೊಳಕಾಲ್ಮೂರು ಪಟ್ಟಣದ ಸಮೀಪವಿರುವ ''ಗೊಲ್ಲರಹಟ್ಟಿ'' ಇಲ್ಲಿ ಗೊಲ್ಲರ ವಾಸ್ತವ್ಯವಾಗಿದೆ. ಈ ಪರಿಸರದಲ್ಲಿ ಅಲ್ಲಲ್ಲಿ ಗೊಲ್ಲರ ಹಟ್ಟಿ ಇರುವುದನ್ನು ಗಮನಿಸಬಹುದು.

೫. ಗೊರವರು

ಗೊರವ ಸಂಪ್ರದಾಯವು ಮೈಲಾರಲಿಂಗನ ಸಂಪ್ರದಾಯದ ಸುತ್ತ ಹೆಣೆದುಕೊಂಡಿದೆ. ಪಶುಪಾಲನಾ ಸಂಸ್ಕೃತಿಯ ಹಂತದಲ್ಲಿ ಬುಡಕಟ್ಟು ಜನರು ತಮಗೆ ತಮ್ಮ ದನಕರುಗಳಿಗೆ ಆಸರೆಯಾದ ಬೆಟ್ಟ ಗುಡ್ಡ, ಅಡವಿಗಳ ಬಗ್ಗೆ, ಗೌರವ, ಭಯ, ಭಕ್ತಿಯನ್ನು ಹೊಂದಿದ್ದರು. ಮಲೆ = ಎಂದರೆ ಬೆಟ್ಟ, ಮಲೆಯ ಅಯ್ಯ ಮಲ್ಲಯ್ಯ. ಇವನು ಗೊರವರ ದೈವ. ಅವನ ಹೆಸರಿನೊಂದಿಗೆ ಮೊಳಕಾಲ್ಮೂರು ಪರಿಸರದಲ್ಲಿ ವಾಸ್ತವ್ಯವಿದೆ. ಉದಾ : ಅಡವಿ ಮಲ್ಲಾಪುರ ಬಳ್ಳಾರಿ ಜಿಲ್ಲೆಯ 'ಮೈಲಾರ' ಎಂಬುದು ಗೊರವರ ನೆಲೆಯನ್ನು ಹೇಳುತ್ತದೆ. ಆಲೂರು ತಾಲ್ಲೂಕಿನ 'ಆದಿ ಮೀನಗೊಂದಿ' (ದೇವರ ಗುಡ್ಡ) ಕ್ಷೇತ್ರ ಕಾಳಾಮುಖ ಗೊರವರ ಮೂಲ ನೆಲೆಯಾಗಿತ್ತು.

೪.೨. ವೃತ್ತಿಯಾಧಾರಿತ ಸ್ಥಳನಾಮ

ವೃತ್ತಿಯು ಬೆಳೆದು ಜಾತಿಯಾಗಿ ಮಾರ್ಪಟ್ಟಿತು. ಜಾತಿ ಮತ್ತು ವೃತ್ತಿಗಳು ಒಂದೇ ಬಿಂದುವಿನಲ್ಲಿ ಬರುತ್ತವೆ. ಉದಾ : 'ಮುತ್ತಿಗಾರ ಹಳ್ಳಿ' ಎಂಬ ಸ್ಥಳವು ಮೊಳಕಾಲ್ಮೂರು ಪರಿಸರದ ವೃತ್ತಿಯನ್ನವಲಂಬಿಸಿದ ವಾಸ್ತವ್ಯ ನೆಲೆಯಾಗಿದೆ.

೪.೩. ವ್ಯಕ್ತಿ ನಾಮಾಧರಿತ ಸ್ಥಳನಾಮಗಳು

ಕಾಲ, ದೇಶ, ಪರಿಸರಕ್ಕೆ ತಕ್ಕಂತೆ ಮಾನವನ ಆಲೋಚನಾ ವಿಧಾನ ಜೀವನ ಶೈಲಿಯು ಅನೇಕ ಸ್ಥಿತ್ಯಂತರ ಪ್ರಕ್ರಿಯೆಗೆ ಒಳಪಡುತ್ತಲೇ ಇರುತ್ತದೆ. ಈ ಎಲ್ಲ ಸ್ಥಿತ್ಯಂತರಗಳು ಜೀವನ ವಿಧಾನದ ಜೊತೆ-

ಜೊತೆಗೆ ಆಯಾ ಭೌಗೋಳಿಕ ಪರಿಸರದ ಮೇಲೆ ವಿಶೇಷವಾಗಿ ಪ್ರಭಾವ ಬೀರುತ್ತದೆ ಎನ್ನಬಹುದು. ಸಂಸ್ಕೃತಿಯ ಪರಿಚಲನೆಯಲ್ಲಿ ಈ ರೀತಿಯ ಬದಲಾವಣೆ ಅನಿವಾರ್ಯ. ಸ್ಥಳನಾಮ ನಿರ್ದೇಶನದ ಆರಂಭಿಕ ಹಂತ ನೈಸರ್ಗಿಕ ವಾತಾವರಣವನ್ನು ಅವಲಂಬಿಸಿತ್ತು. ಮುಂದೆ ಸಂಸ್ಕೃತಿಯ ವಿಕಸನದ ಹಾದಿಯಲ್ಲಿ ಜನಾಂಗಿಕ ನಿಷ್ಠೆಗೆ ಈ ಪ್ರವೃತ್ತಿ ಸಾಗಿಬಂತು. ಇದರೊಂದಿಗೆ ಅಂದಂದಿನ ಸಮಾಜದಲ್ಲಿ ಯಾವುದೋ ಕಾರಣಕ್ಕೆ ವಿಶೇಷವಾದ ಘಟನೆಯಿಂದ, ಹೆಸರಾದ ವ್ಯಕ್ತಿಯನ್ನು ಒಂದೊಂದು ಗ್ರಾಮಕ್ಕೆ ಕರೆದರು. ಮುಂದೆ ಸ್ತ್ರೀ ಮತ್ತು ಪುರುಷಾದಿಯಾಗಿ ಐತಿಹಾಸಿಕ, ಸಾಮಾಜಿಕ, ರಾಜಕೀಯ ಇತ್ಯಾದಿ ಕಾರಣಗಳಿಂದ ಸ್ಥಳನಾಮಗಳಿಗೆ ಹೆಸರಾಗಿ ನಿಂತುಕೊಳ್ಳಲಾರಂಬಿಸಿದರು. ಭೌಗೋಳಿಕ ಪರಿಸರಕ್ಕನುಗುಣವಾಗಿ ವ್ಯಕ್ತಿಯಾಧಾರಿತ ಸ್ಥಳನಾಮಗಳು ಬದಲಾಗುತ್ತಾ ದೈವವನ್ನೇ ನಂಬಿರುವ ನಮ್ಮ ಸಂಪ್ರದಾಯಿಕ ಸಮಾಜದಲ್ಲಿ ದೈವಕ್ಕೆ ಸಂಬಂಧಿಸಿದ ಸ್ಥಳನಾಮಗಳೇ ಬಹುತೇಕ ಕಂಡುಬರುತ್ತವೆ. ಮೊಳಕಾಲ್ಮೂರು ಪರಿಸರದ ವ್ಯಕ್ತಿನಾಮಾಧರಿತ ಸ್ಥಳನಾಮಗಳ ಪಟ್ಟಿಯನ್ನು ಈ ಕೆಳಗಿನಂತೆ ಗಮನಿಸಬಹುದು.

ದೇವಸಮುದ್ರ	ತಳವಾರಹಳ್ಳಿ
ಬೊಮ್ಮಗೊಂಡನಕೆರೆ	ಪುರಬೋರನಹಟ್ಟಿ
ರಾಮಸಾಗರ,	ಪೆನ್ನಮ್ಮನಹಳ್ಳಿ
ಹನುಮಗುಡ್ಡ	ತುಪ್ಪದಕ್ಕನ ಹಳ್ಳಿ
ರಂಗಯ್ಯನದುರ್ಗ	ತಿಮ್ಮಲಾಪುರ
ಸಂಜೀವರಾಯನಕೋಟೆ	ಸೂರಮ್ಮನಹಳ್ಳಿ
ಸಿದ್ದಯ್ಯನ ಕೋಟೆ	ಹನುಮಾಪುರ
ಯರಪೋತ ಜೋಗಿಹಳ್ಳಿ	ವಿಠಲಾಪುರ
ಕಾಟನಾಯಕನಹಳ್ಳಿ	ವೆಂಕಟಾಪುರ
ಬೊಮ್ಮಲಿಂಗನಹಳ್ಳಿ	ಬಸಾಪುರ
ನಲ್ಲಾರೆಡ್ಡಿ ಕೊಂಡಾಪುರ	ಬೊಮ್ಮದೇವರಹಳ್ಳಿ
ಚಿಕ್ಕೋಬನಹಳ್ಳಿ	ಮಾರಮ್ಮನಹಳ್ಳಿ

ಮೊಳಕಾಲ್ಮೂರು ಪರಿಸರದಲ್ಲಿ ಬಹಳಷ್ಟು ಸಂಖ್ಯೆಯ ಸ್ಥಳನಾಮಗಳು ವಾರ್ಗಿಕದಲ್ಲಿ 'ಪುರ' ಎಂದು ಹೆಚ್ಚಾಗಿ ಬಳಕೆಯಾದ ಸ್ಥಳನಾಮಗಳನ್ನು ಗಮನಿಸಬಹುದು. ಇದರ ವಿಶೇಷತೆಯೆಂದರೆ ಚಿನ್ನ ಹಗರಿ ಉತ್ತರ ಭಾಗದಲ್ಲಿ ಪುರದಿಂದ ಕೊನೆಗೊಳ್ಳುವ ಸ್ಥಳಗಳ ಸಂಖ್ಯೆ ಜಾಸ್ತಿಯಾಗಿದ್ದು, ಚಿನ್ನ ಹಗರಿ ದಕ್ಷಿಣ ಭಾಗದಲ್ಲಿ ಕೇವಲ ಎರಡು ಗ್ರಾಮಗಳು ಮಾತ್ರ ಪುರದಿಂದ ಕೊನೆಗೊಳ್ಳುವ ಗ್ರಾಮಗಳಿವೆ. ಚಿನ್ನ ಹಗರಿಯ ಉತ್ತರ ಭಾಗದಲ್ಲಿ ಶಿಷ್ಟ ಸಂಸ್ಕೃತಿ ಅನುಭಾವ ಪರಂಪರೆಯಿಂದ ಈ ಪ್ರದೇಶಗಳು

ಈ ಪುರವಂತಿಕೆಗಳಾಗಿರಬಹುದು. ಚಿನ್ನಹಗರಿಯ ದಕ್ಷಿಣಭಾಗವು ಜಾನಪದ ಸಂಸ್ಕೃತಿಯನ್ನು ಒಳಗೊಂಡಿತ್ತು ಎನ್ನಬಹುದು. ಉದಾಹರಣೆಗಳನ್ನು ಈ ಕೆಳಗಿನಂತೆ ಗಮನಿಸಬಹುದು.

ಚಿನ್ನಹಗರಿ

ಉತ್ತರಭಾಗ	ದಕ್ಷಿಣಭಾಗ
ಬಸಾಪುರ	ಬೈರಾಪುರ
ಕೊಂಡಾಪುರ	ರಾಯಾಪುರ
ರಾಜಾಪುರ	
ಕೋನಾಪುರ	
ರಾಮಪುರ	
ವೆಂಕಟಾಪುರ	
ವಿಠಲಾಪುರ	
ತಿಮ್ಮಲಾಪುರ	
ಸಿದ್ದಾಪುರ	

೪.೪. ನಿರ್ವಸತಿ ಹಾಗೂ ನಿರ್ವಸಿತ ಸ್ಥಳನಾಮಗಳು : ಸಾಮಾಜಿಕ ಅಂಶಗಳ ಕುರುಹುಗಳು

ಸ್ಥಳನಾಮಗಳ ಅಧ್ಯಯನವು ಗ್ರಾಮನಾಮಗಳ ಅಧ್ಯಯನದ ವ್ಯಾಪ್ತಿಯನ್ನು ದಾಟಿದಂತೆ ಕಾಣಿಸುವುದಿಲ್ಲ. ಅಲ್ಲೊಂದು ಇಲ್ಲೊಂದು ನಿರ್ವಸತಿ ನಾಮಗಳ ಬಗೆಗೆ ಪ್ರಸ್ತಾಪಿಸಿದ್ದು ಕಂಡುಬರುತ್ತದೆ. ಸಾಮಾಜಿಕ ಸಂಗತಿಗಳನ್ನು ತಮ್ಮೊಳಗೆ ಅಡಗಿಸಿಕೊಂಡ ಅನೇಕಾನೇಕ ಪಾಳುಬಿದ್ದ, ನಿರ್ವಸತಿ ಸ್ಥಳನಾಮಗಳ ಸಂಸ್ಕೃತಿಯ ಮೂಲ ಆಧಾರಗಳಾಗಿ ಕಂಡುಬರುತ್ತವೆ.

೧. ಬೇಚರಾಕ್ ಗ್ರಾಮಗಳು (ಸ್ಥಳಾಂತರವಾದ ಗ್ರಾಮನಾಮಗಳು)

೨. ಜನವಸತಿಯೇ ಇಲ್ಲದೆ, ಭೌಗೋಳಿಕ ಪರಿಸರದ ನಾಮಗಳು (ನಿರ್ವಸಿತ) ಈ ಎರಡು ರೀತಿಯ ಸ್ಥಳನಾಮಗಳ ರೂಪಗಳನ್ನು ಹೀಗೆ ವಿಶ್ಲೇಷಿಸಬಹುದು.

೧. **ಚಾಮಗೊಂಡನಹಳ್ಳಿ** : ಇದೀಗ ಬೇಚರಾಕ್ ಗ್ರಾಮ. ನುಂಕೆಮಲೆದೇವರ ರಂಗಭೋಗ ನೈವೇದ್ಯಕ್ಕೆಂದು ಕದಂಬರ ಬೆಂಚರಸ ದೇವನು ಚಾಮಗೊಂಡನ ಹಳ್ಳಿಯ ಹೊಲ ಸೀಮೆಗಳನ್ನು ದತ್ತಿ ಬಿಟ್ಟ ಬಗ್ಗೆ ನುಂಕೆಮಲೆಯ ಮಲ್ಲಿಕಾರ್ಜುನ ದೇವಾಲಯದ ಹಿಂದೆ ಹುಟ್ಟುಗುಂಡಿನ ಪಶ್ಚಿಮದ ಶಾಸನದಿಂದ ತಿಳಿದುಬರುತ್ತದೆ.

೨. ಮಠದ ಜೋಗಿ ಹಳ್ಳಿ : ಇದೊಂದು ಬೇಚರಾಕ್ ಗ್ರಾಮ. ಹಿಂದೆ ಈ ಪ್ರದೇಶದಲ್ಲಿ ಯಾವ ಜೋಗಿಯಾದರೂ ಮಠ ಕಟ್ಟಿಕೊಂಡಿದ್ದನೋ ಏನು? ಆದರೆ ಕಂದಾಯ ಇಲಾಖೆಯ ದಾಖಲಾತಿಗಳಲ್ಲಿರುವ ಜಮೀನುಗಳಿಗೆ ಮಠದ ಜೋಗಿಹಳ್ಳಿ ಜಮೀನುಗಳು ಎಂದೇ ಹೇಳುತ್ತಾರೆ. ಹಾನಗಲ್ ಪಂಚಾಯ್ತಿ ವ್ಯಾಪ್ತಿಗೆ ಬರುತ್ತದೆ.

೩. ಜಾಲಿಪೆಂಟೆ : ಇದೀಗ ಬೇಚರಾಕ್ ಗ್ರಾಮವಾಗಿದೆ. ಈಗ ಈ ಪ್ರದೇಶದಲ್ಲಿ ಜಾಲಿಯ ಮರಗಳು ಬೆಳೆದಿರುವುದರಿಂದ ಜಾಲಿಪೆಂಟ ಎಂಬ ಹೆಸರು ಅನ್ವರ್ಥವಾಗಿ ಬಂದಿದೆ.

ಹೀಗೆ ಮೊಳಕಾಲ್ಮೂರು ಪರಿಸರದಲ್ಲಿ ಬೇಚರಾಕ್ ಗ್ರಾಮಗಳು ಇವೆ. ಇವುಗಳ ಅಧ್ಯಯನದಿಂದ ನಮ್ಮ ಸಾಮಾಜಿಕ ಜೀವನವನ್ನು ಒಂದಲ್ಲ ಒಂದು ಬಗೆಯಲ್ಲಿ ವಿಶ್ಲೇಷಿಸಲು ಸಾಧ್ಯವಿದೆಯೆನ್ನಬಹುದು.

ಎರಡನೆಯದಾಗಿ 'ನಿರ್ವಸಿತ' ಸ್ಥಳನಾಮಗಳು

ಇವು ಬೇಚರಾಕ್ ಗ್ರಾಮಗಳಿಗಿಂತ ತುಂಬಾ ಭಿನ್ನವಾಗಿರುತ್ತವೆ. ಗ್ರಾಮ ಸಮಾಜದ ವ್ಯವಸ್ಥೆಯಲ್ಲಿ ಒಂದಲ್ಲ ಒಂದು ರೀತಿಯಲ್ಲಿ ತನ್ನ ಸುತ್ತಣ ಭೌಗೋಳಿಕ ಪರಿಸರದೊಂದಿಗೆ ಬೆಸೆದುಕೊಂಡ ಸಂಬಂಧದಿಂದ ಆ ಭೌಗೋಳಿಕ ಪರಿಸರವನ್ನು ಅಲ್ಲಿನ ಬೆಟ್ಟ, ನದಿ, ಕಣಿವೆ, ಕಲ್ಲು, ಕೊಳ, ಹಳ್ಳಿ, ಗಿಡ, ಮರ, ಕಾಡು ಇತ್ಯಾದಿಯನ್ನು ತನ್ನನ್ನು ಗುರುತಿಸಿಕೊಳ್ಳುವ ಪ್ರಕ್ರಿಯೆ ನಡೆದಿರುತ್ತದೆ. ಆ ಹೆಸರುಗಳ ದೈನಂದಿನ ಜೀವನದಲ್ಲಿ ಹಾಸುಹೊಕ್ಕಾಗಿ ಸಾರ್ವತ್ರಿಕವಾಗಿಯೂ ಒಪ್ಪಿತವಾಗಿರುತ್ತವೆ. ನಮ್ಮ ಗ್ರಾಮಸಮಾಜ, ಪ್ರತಿಯೊಂದು ವಸ್ತುವಿಗೂ, ಘಟನೆಗೂ, ತನ್ನ ಅರಿವಿನ ವ್ಯಾಪ್ತಿಯಲ್ಲಿ ಕಥೆ, ಐತಿಹ್ಯ ಚರಿತ್ರೆ, ಸತ್ಯ ಸಂಗತಿ ಮುಂತಾದ ಘಟನೆಯೊಂದಿಗೆ ಹೆಸರನ್ನು ನೀಡಿದ್ದು ತಿಳಿದುಬರುತ್ತದೆ. ಒಂದು ಸಮಾಜದ ಸಂಸ್ಕೃತಿಯ ಚಾರಿತ್ರಿಕ ಅಧ್ಯಯನ ಸಂದರ್ಭದಲ್ಲಿ 'ನಿರ್ವಸಿತ' ನಾಮಗಳ ಮಹತ್ವ ಬಹಳಷ್ಟಿದೆ. ಹೆಚ್ಚಾಗಿ ಈ ನಿರ್ವಸಿತ ಸ್ಥಳನಾಮಗಳಿಗೆ ಐತಿಹ್ಯಗಳು ರೂಪುಗೊಂಡಿರುವುದು ತಿಳಿಯುತ್ತದೆ. ಮೌಖಿಕ ಪರಂಪರೆಯ ಆಸ್ತಿಯೆನ್ನಬಹುದಾದ ನಿರ್ವಸಿತ ನಾಮಗಳು ಐತಿಹ್ಯದ ಮೂಲಕ ಸತ್ಯವನ್ನು ಹೊರಗೆಡೆಬಲ್ಲವು. ಈ ನಿರ್ವಸಿತ ಕೆಲವು ಸ್ಥಳನಾಮಗಳನ್ನು ಈ ರೀತಿ ವಿವರಿಸಿ ಹೇಳಬಹುದಾಗಿದೆ.

೧. ಅಕ್ಷರದ ಗುಂಡು : ಚಿನ್ನಹಗರಿ ಬಲದಡದ ಬ್ರಹ್ಮಗಿರಿಯ ತಪ್ಪಲಲ್ಲಿರುವ ಬಂಡೆ ಶಾಸನವು ಪ್ರಾಚೀನ ಕಾಲದಿಂದಲೂ 'ಅಕ್ಷರದಗುಂಡು' ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಈ ಬಂಡೆಯ ಮೇಲಿರುವ ಅಕ್ಷರಗಳನ್ನು ನೀರಿನಿಂದ ತೊಳೆದು, ಆ ತೀರ್ಥವನ್ನು ಸೇವಿಸಿದರೆ ಮಾನವರ ಮತ್ತು ಪ್ರಾಣಿಗಳ ಕಾಯಿಲೆಗಳು ಗುಣವಾಗುವುದೆಂಬ ನಂಬಿಕೆ ಸುತ್ತ-ಮುತ್ತಲಿನ ಜನರಿಗಿದೆ.

೨. ಏಕಾಂತ ತೀರ್ಥ : ಜಟಂಗಿ ರಾಮೇಶ್ವರ ಬೆಟ್ಟದ ಮೇಲೆ ಗುಡಿಯ ಉತ್ತರ ಭಾಗದಲ್ಲಿ ಬಂಡೆಗಳ ಕೆಳಗೆ ಇರುವ ತಣ್ಣೀರು ದೋಣೆಯನ್ನು 'ಏಕಾಂತತೀರ್ಥ'ವೆಂದು ಕರೆಯುವರು. ಈ ದೋಣೆಯ ಬಳಿ

ಶ್ರೀರಾಮನು ಜಟಾಯುವಿಗೆ ಅಗ್ನಿ ಸಂಸ್ಕಾರ ಮಾಡಿದ ನಂತರ ಕೆಲವು ದಿವಸಗಳ ಕಾಲ ಏಕಾಂತನಾಗಿ ವಾಸವಾಗಿದ್ದುದರಿಂದ ಆ ಹೆಸರು ಬಂತೆಂದು ಸ್ಥಳದ ಐತಿಹ್ಯ. “ಆದಿ ಬುದ್ಧನಿಗೆ ಏಕನಾಥ ಎಂದೂ, ಬೌದ್ಧ ಮತಕ್ಕೆ ಏಕನಾಥ ಮತ ಎಂದೂ ಹೆಸರಿದೆ.”[೧೦] ಏಕಾಂತ ತೀರ್ಥವು ಬೌದ್ಧರ ಒಂದು ಪುಣ್ಯ ತೀರ್ಥವಾಗಿರುವಂತೆ ತೋರುತ್ತದೆ. ಬೌದ್ಧ ಮತವು ನಶಿಸಿದ ಮೇಲೆ ವೇದ ಮತೀಯರು ಶ್ರೀರಾಮನ ‘ಏಕಾಂತ’ದ ತೀರ್ಥ ಎಂದು ಹೆಸರಿಸಿದಂತೆ ತೋರುತ್ತದೆ.

೩. **ಬಳೆಗಾರರ ಗುಂಡು :** ಜಿನಿಗಿ ಹಳ್ಳದ ಎಡದಲ್ಲಿರುವ ಜಟಂಗಿ ಗಿರಿಯ ಮೇಲೆ ಅಶೋಕನ ಮೂರನೇ ಶಾಸನವಿದೆ. ಇದನ್ನು “ಬಳೆಗಾರರ ಗುಂಡು” ಎಂದು ಕರೆಯುತ್ತಾರೆ. ರಾಮೇಶ್ವರ ದೇವರ ಉತ್ಸವ ಕಾಲದಲ್ಲಿ ಬಳೆಗಾರರು ಈ ಬಂಡೆಯ ಮೇಲೆ ಕುಳಿತು ಬಳೆಗಳನ್ನು ಮಾರುತ್ತಿದ್ದರಂತೆ.

೪. **ಎಮ್ಮೆತಮ್ಮನ ಗುಂಡು :** ಅಶೋಕನ ಅಕ್ಷರದಗುಂಡು ಎಂಬ ಹೆಸರಿನ ಬಂಡೆ ಶಾಸನದ ಪಶ್ಚಿಮಕ್ಕೆ ಸುಮಾರು ಒಂದು ಮೈಲು ದೂರದಲ್ಲಿ ಒಂದು ಶಿಲಾಶಾಸನವಿದೆ. ಇದರ ಅಕ್ಷರಗಳು ಬಹಳ ಸವೆದಿವೆ. ಇದನ್ನು ಯಮ್ಮೆ ತಮ್ಮನ ಗುಂಡು ಎಂದು ಕರೆಯುತ್ತಾರೆ. ಎಮ್ಮೆ ಕಾಯುವ ವ್ಯಕ್ತಿಯೊಬ್ಬ ಪ್ರತಿನಿತ್ಯ ಈ ಬಂಡೆಯ ಮೇಲೆ ಕುಳಿತು ಧ್ಯಾನಸ್ಥನಾಗುತ್ತಿದ್ದನಂತೆ.

೫. **ಸೀತಾದೋಣಿ :** ಜಟಂಗಿ ರಾಮೇಶ್ವರ ಬೆಟ್ಟದ ವಾಯುವ್ಯದಲ್ಲಿ ಸೀತೆ ಸ್ನಾನ ಮಾಡಿದಳೆಂದು ಹೇಳುವ ನೀರಿನ ಸೀತಾದೋಣಿ ಇದೆ. ಇಲ್ಲಿ ಎರಡು ಜೊತೆ ಪಾದಗಳಿದ್ದು, ಒಂದು ಜೊತೆ ಸೀತೆಯ ಪಾದಗಳೆಂದು, ಇನ್ನೊಂದು ಜೊತೆ ರಾಮನ ಪಾದಗಳೆಂದು ಹೇಳುತ್ತಾರೆ.

೬. **ಒನಕೆ ಕಿಂಡಿ :** ನುಂಕೆಮಲೆ ಬೆಟ್ಟದಲ್ಲಿ ಪಡ್ಡೆ ಹನುಮನ ಗುಡಿಯಿಂದ ಉತ್ತರದಿಕ್ಕಿನ ಬೆಟ್ಟ ಹತ್ತಿ, ಪೂರ್ವಕ್ಕೆ ತಿರುಗಿ, ಕಡಿದಾದ ಮೆಟ್ಟಲುಗಳನ್ನು ಹತ್ತಿ ಒಬ್ಬರು ಮಾತ್ರ ಸುಳಿದು ಹೋಗಬಹುದಾದ ಎರಡು ಬೃಹತ್ ಬಂಡೆಗಳ ಮಧ್ಯೆ ಇರುವ ಇಕ್ಕಟ್ಟಾದ ಸ್ಥಳಕ್ಕೆ “ಒನಕೆ ಕಿಂಡಿ” ಎಂದು ಹೇಳುತ್ತಾರೆ. ಈ ಕಿಂಡಿಯನ್ನು ದಾಟಿ ಹೋದರೆ ವಿಶಾಲ ಬಯಲು ಸಿಗುತ್ತದೆ. ಅಲ್ಲದೆ, ತುಪ್ಪದಮ್ಮದೇವಿ ತನ್ನ ದಾರಿಗೆ ಅಡ್ಡವಾಗಿದ್ದ ಗುಂಡುಕಲ್ಲನ್ನು ತನ್ನ ಒನಕೆಯಿಂದ ಒಡೆದು ದಾರಿ ಮಾಡಿದಳೆಂದು ಅದಕ್ಕಾಗಿ ‘ಒನಕೆಯ ಗಂಡಿ’ ಎಂದೂ ಒನಕೆಕಿಂಡಿ ಎಂದು ಹೆಸರಾಯಿತಂತೆ.

೭. **ಕೂಗುಬಂಡೆ :** ನುಂಕೆಮಲೆಬೆಟ್ಟದಲ್ಲಿ ಕವಿ ಕಾಳಿದಾಸನನ್ನು ಸ್ತುತಿಸುವ ಒಂದು ಶ್ಲೋಕವಿರುವ ಶಾಸನದ ಬಂಡೆಯಿಂದ ಪಶ್ಚಿಮದಲ್ಲಿ ಈ ಕೂಗುಬಂಡೆ ಇದೆ. ಈ ಬಂಡೆಯ ಎದುರಿಗೆ ನಿಂತುಕೂಗಿದರೆ ಕೂಗಿದ ನಮ್ಮ ಧ್ವನಿ ಅಲೆ-ಅಲೆಯಾಗಿ ಮಾರ್ದನಿಸುತ್ತದೆ. ವಿಶೇಷವಾಗಿ ಇಲ್ಲಿ ನಿಂತು ಕೂಗುವವರು ಜೋಗಪ್ಪ... ಜೋಗಪ್ಪಾ... ಎಂದು ಕೂಗುತ್ತಾರೆ. ಈ ಕೂಗುಬಂಡೆಯ ಗುಡ್ಡಕ್ಕೆ “ಜೋಗಪ್ಪನ ಗುಡ್ಡ”ವೆಂದೂ ಹೇಳುತ್ತಾರೆ. ಇದಕ್ಕೆ ‘ಮೊಳಗುವ ಕಲ್ಲು’ ಎನ್ನುತ್ತಾರೆ. ನಿಂತು ಕೂಗುವ ಸ್ಥಳಕ್ಕೆ ‘ಮೊಳಲರೆ’ ಎನ್ನುತ್ತಾರೆ.

೮. ಅಕ್ಕ-ತಂಗಿಯರ ಕುಂಟೆ : ಅಶೋಕನ ಶಾಸನ ಬಂಡೆಯ ಸಮೀಪದಲ್ಲಿಯೇ ಬೆಟ್ಟದ ತಪ್ಪಲಿನಲ್ಲಿ ನೀರಿನಿಂದ ತುಂಬಿದ ಅಕ್ಕತಂಗಿಯರ ಕುಂಟೆಗಳಿವೆ. (ಅಕ್ಕನ ಕುಂಟೆ ಬತ್ತುವುದಿಲ್ಲ. ತಂಗಿಯ ಕುಂಟೆ ಒಣಗಿ ಹೋಗಿರುತ್ತದೆ) ಈ ಕುಂಟೆಗಳ ಅಂಚಿನಲ್ಲೇ ಸುಂದರವಾದ ಸುಕನಾಸಿ, ಗರ್ಭಗುಡಿಗಳಿಂದ ಕೂಡಿದ ಗರ್ಭಗುಡಿಯಲ್ಲಿ ಪದ್ಮ ಪೀಠವಿದ್ದು ಮೂರ್ತಿಯಿಲ್ಲದ ಸುಂದರ ದೇವಾಲಯವಿದೆ. ಬೌದ್ಧದೇವಾಲಯವಿರಬೇಕೆಂದು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಇದರ ಪಕ್ಕದಲ್ಲೇ ಹಾಳು ಬಿದ್ದಿರುವ ದೇವಾಲಯದ ತಳಪಾಯವಿದೆ. ಇದಕ್ಕೆ ತಂಗಿಯ ಗುಡಿಯೆಂದೂ, ದೇವರಿಲ್ಲದ ಬೌದ್ಧದೇವಾಲಯಕ್ಕೆ ಅಕ್ಕನ ಗುಡಿಯೆಂದೂ ಹೇಳುತ್ತಾರೆ. ಹೀಗೆ ಪ್ರತಿಯೊಂದು ಗ್ರಾಮದಲ್ಲಿ ನೂರಾರು ನಿರ್ವಸಿತ ಸ್ಥಳನಾಮಗಳು ಹುಟ್ಟಿಕೊಂಡಿವೆ.

ನಿರ್ವಸತಿ - ಸ್ಥಳನಾಮಗಳು, ಈ ಮುಂಚೆ ಇಲ್ಲಿ ಜನವಸತಿಯಿದ್ದು, ನೆರೆಹಾವಳಿ, ಕೈಗಾರಿಕೆ, ಅಣೆಕಟ್ಟು ಇತ್ಯಾದಿಗಳ ನಿರ್ಮಾಣ, ರೋಗ-ರುಜಿನಗಳ ತೊಂದರೆ ಮುಂತಾದ ಕಾರಣಗಳಿಂದ ಜನರು ವಾಸಿಸದೇ ಸ್ಥಳಾಂತರಗೊಂಡಂತಹ ಬೇಚ್ ರಾಕ್ ಗ್ರಾಮಗಳಾಗಿವೆ.

ನಿರ್ವಸಿತ ಎಂದರೆ ಭೌಗೋಳಿಕ ಪರಿಸರದಲ್ಲಿರುವ ಯಾವುದೇ ವಸ್ತುವಿಗೆ ಇಟ್ಟಹೆಸರು. ಬಹುಮುಖ್ಯವಾಗಿ ಇಂತಹ ನಾಮಗಳಿಗೆ ಹೆಚ್ಚು ಆಸಕ್ತಿ ವಹಿಸುವವರು ಹಾಗೂ ಅವುಗಳಿಗೆ ಐತಿಹ್ಯ ಕಥೆಯಂತಹ ಕಥನವನ್ನು ಕಟ್ಟುವುದು ಗ್ರಾಮೀಣ ಜನತೆಯೆನ್ನಬಹುದು.

ಹೀಗೆ ''ಸ್ಥಳನಾಮಗಳು ನಮ್ಮ ಸಂಸ್ಕೃತಿಯ ಪಳೆಯುಳಿಕೆಯಂಥ ಅವಶೇಷಗಳಾಗಿರುವುದರಿಂದ ಅವು ಪರೋಕ್ಷವಾಗಿಯೂ, ಜನತೆ ಮತ್ತು ನಿರ್ದಿಷ್ಟ ಕಾಲದ ಸಮಾಜದ ಕುರಿತು ಅತ್ಯಂತ ಉಪಯುಕ್ತ ಮಾಹಿತಿಯನ್ನು ಒದಗಿಸುತ್ತವೆ''[೧೧] ಈ ಕಾರಣದಿಂದಾಗಿ ಸ್ಥಳನಾಮಗಳು ಸಾಮಾಜಿಕ ಅಧ್ಯಯನ ಒಂದು ಪ್ರತ್ಯೇಕ ಸಂಶೋಧನಾಧ್ಯಯನವನ್ನು ಬಯಸುತ್ತದೆ.

ಮೌಖಿಕ ಪರಂಪರೆ

ಮೌಖಿಕ ಪರಂಪರೆಯಲ್ಲಿ ಜನಪದರು ಗ್ರಹಿಸಿಕೊಂಡಿರುವ ಬಗೆ ವಿಶಿಷ್ಟ ಹಾಗೂ ವಿನೂತನವಾದದ್ದು. ಒಂದು ಸಾಂಸ್ಕೃತಿಕ ಪರಿಸರದ ಚರಿತ್ರೆಯನ್ನು ಕಟ್ಟುವಾಗ ಲಿಖಿತ ಆಕರಗಳು ಭೌತಿಕ ಸ್ಮಾರಕಗಳೊಂದಿಗೆ ಸ್ಥಳೀಯ ಜನಸಮುದಾಯದ ಸ್ಪಂದನವನ್ನು ಅರಿಯಲು ಅಲ್ಲಿನ ಮೌಖಿಕ ಆಕರಗಳು ಬಹುಮುಖ್ಯ ಪಾತ್ರವಹಿಸಿವೆ. ರಾಜ ಮಹಾರಾಜರ ಅಧಿಕಾರಿಗಳ ಶಾಸನಗಳಲ್ಲಿ ಬಿರುದಾವಳಿಗಳನ್ನು ದಾಟಿಕೊಂಡು ದಾನದ ಭಾಗಕ್ಕೆ ಬಂದರೆ, ಸಾಮಾನ್ಯರು ಹಾಕಿಸಿದ ಶಾಸನಗಳ ಕಡೆಗೆ ಸೂಕ್ಷ್ಮ ದೃಷ್ಟಿ ಹರಿಸಿದರೆ, ಅವು ಆನುಷಂಗಿಕವಾಗಿ ನೀಡಿರುವ ಅಂದಿನ ಜನ ಸಮುದಾಯದ ಸಾಂಸ್ಕೃತಿಕ ಜೀವನದ ಒಳನೋಟಗಳು ಗೋಚರಿಸುತ್ತವೆ. ಬರಹವಿಲ್ಲದ ಅನೇಕ ಸ್ಮಾರಕಶಿಲ್ಪಗಳು ಬರಹ ಉಳ್ಳವುಗಳಿಗಿಂತ ಹೆಚ್ಚಿನ ಆಪ್ತತೆಯನ್ನು

ಜನಪದರೊಂದಿಗೆ ಹೊಂದಿವೆ. ಅವರ ಬದುಕಿನ ಆಚರಣೆಗಳ ಭಾಗವಾಗಿವೆ. ಅವುಗಳನ್ನು ಕುರಿತು ಹುಟ್ಟಿಕೊಂಡಿರುವ ಕಥೆಗಳು, ಹಾಡು, ಜಾತ್ರೆಗಳು ಇಂದಿಗೂ ಆ ಕಾಲದ ಮೌಲ್ಯಗಳಿಗೆ ಜನರು ಸೇರಿದ ಪ್ರತಿಕ್ರಿಯೆಯನ್ನು ಸ್ಪಷ್ಟಪಡಿಸುತ್ತದೆ. ಜನಪದರಿಗೂ, ಹೆಸರುಗಳಿಗೂ ಗಾಢ ಸಂಬಂಧವಿದೆ. ಕಾರಣ ಸ್ಥಳನಾಮಗಳನ್ನು ಕೇವಲ ಶಿಷ್ಟ ಭಾಷಿಕ ಘಟಕಗಳೆಂದು ಅಧ್ಯಯನ ಮಾಡದೇ ಮೌಖಿಕ ಘಟಕಗಳನ್ನಾಗಿ ಮಾಡಿಕೊಂಡು ಮತ್ತೊಂದು ದೃಷ್ಟಿಕೋನದಿಂದ ಅಧ್ಯಯನ ಮಾಡುವ ಅಗತ್ಯವಿದೆ. ಮುಖ್ಯವಾಗಿ ಐತಿಹ್ಯ, ಸ್ಥಳಪುರಾಣ, ಗಾದೆ, ಒಗಟು, ಕಥೆಗಳು ಮುಂತಾದ ಮೌಖಿಕ ಪರಂಪರೆಯಲ್ಲಿ ದಾಖಲಾದ ಮಾಹಿತಿಯಿಂದ ಸ್ಥಳನಾಮಗಳ ಸಾಮಾಜಿಕ ಸಂಗತಿಗಳ ಕಡೆ ಗಮನಹರಿಸಬಹುದು. ಸ್ಥಳನಾಮ ಅಧ್ಯಯನದಲ್ಲಿ ಮೌಖಿಕ ಪರಂಪರೆಯೂ ತುಂಬಾ ಮಹತ್ವದ ಪಾತ್ರವನ್ನು ವಹಿಸುತ್ತದೆ. ಅತ್ಯಂತ ಎಚ್ಚರಿಕೆಯಿಂದ ಮೂಲ ಭಾಷೆ ಮುಕ್ಕಾಗದಂತೆ ದಾಖಲಿಸಿಕೊಳ್ಳುವುದು ಅಧ್ಯಯನಗಳಿಗೆ ತುಂಬಾ ನೆರವಾಗುತ್ತದೆ. ಜೀವಂತವಾದ ಆಡು ಮಾತಿನಲ್ಲಿ ಭಾಷೆಯ ವಿಶಿಷ್ಟವಾದ ಪ್ರಯೋಗಗಳು, ಅದರಲ್ಲೂ ಅವರಿಟ್ಟುಕೊಂಡ ಸ್ಥಳನಾಮಗಳಲ್ಲಿ ಹೇರಳವಾಗಿ ಹುದುಗಿವೆ. ಕಥೆ, ಐತಿಹ್ಯ, ಪುರಾಣ, ಗಾದೆ, ಒಗಟು, ಒಡಪು ಮುಂತಾದ ಮೌಖಿಕ ದಾಖಲೆಗಳಲ್ಲಿ ವಿವಿಧ ಪ್ರದೇಶದ ಶಬ್ದಗಳ ದೊಡ್ಡ ಭಂಡಾರವೇ ಲಭ್ಯವಾಗುತ್ತದೆ.

“ಊರಿಗೆ ಹುಟ್ಟುಗಾರನ ಹಾಗೆ ಆಡಬೇಡ - ಎಂಬ ಮಾತುಗಳನ್ನು ಗಮನಿಸಿದರೆ, ಇಲ್ಲಿ ಹುಟ್ಟುಗಾರ ಎಂಬ ಶಬ್ದಕ್ಕೆ ಆ ಊರಿನ ಪ್ರಾಚೀನತೆಯನ್ನು ಹೇಳುವಲ್ಲಿ ವಿಶೇಷವಾದ ಅರ್ಥ ದೊರೆಯುತ್ತದೆ.”[೧೨] ಅಂದರೆ ಮೂಲತಃ ಕಾಡು ನೆಲದಲ್ಲಿ ತರೆಗಲೆಗಳನ್ನು ಗುಡಿಸಿ ಮನೆಕಟ್ಟಿಕೊಂಡು ಒಂದು ಊರನ್ನು ಕಟ್ಟಿದವರಿರುತ್ತಾರೆ. ಅದಕ್ಕೆ ಒಂದು ಹೆಸರು ನೀಡಿದ ಅವರ ಬಗೆಗೆ “ಊರಿಗೆ ಹುಟ್ಟುಗಾರ” ಎಂಬ ನುಡಿಯು ಬೆಳೆದುಬಂದಿದೆ. ನಮ್ಮಲ್ಲಿ ಎಷ್ಟೋ ಸ್ಥಳಗಳ, ಊರುಗಳ ಪ್ರಾಚೀನತೆ ಮತ್ತು ನಿಷ್ಪತ್ತಿಯನ್ನು ಖಚಿತವಾಗಿ ಗುರುತಿಸುವುದು ಕಷ್ಟ. ಅದಕ್ಕೆ ತಕ್ಕ ಚಾರಿತ್ರಿಕ ಸಾಕ್ಷಾಧಾರಗಳು ದೊರೆಯುವುದಿಲ್ಲ. ಈ ಸಂದರ್ಭದಲ್ಲಿ ಮೌಖಿಕ ಪರಂಪರೆಯನ್ನು ಗಮನಿಸಬೇಕಾಗುತ್ತದೆ. ಭೌತಿಕವಾಗಿ ವೈಜ್ಞಾನಿಕವಾಗಿ ನಿಂತುಕೊಂಡು, ಮುಂದಿನ ಅತ್ಯಾಧುನಿಕ ಶತಮಾನಕ್ಕೆ ದಾಪುಗಾಲಿಡಲು ಪ್ರೇರಣೆಗೊಳ್ಳುತ್ತಿರುವ ಜನತೆಯ, ಈಗಿನ ಮತ್ತು ಹಿಂದಿನ ಆಚಾರ-ವಿಚಾರ, ನಂಬಿಕೆ-ನಡವಳಿಕೆಗಳೇನು? ಅವರ ಮನಸ್ಸನ್ನು ಆಳುತ್ತಿರುವ ಶಕ್ತಿಗಳಾವುವು? ಹೊರಗಿನ-ಒಳಗಿನ ಈ ಒತ್ತಡದಿಂದ ಏರ್ಪಟ್ಟಿರುವ ದ್ವಂದ್ವ ಎಂತದ್ದು? ಇದರಿಂದ ಸ್ಥಳನಾಮಗಳ ಮೇಲೆ ಆಗಿರುವ ಪರಿಣಾಮಗಳೇನು? ಇಂಥ ಅಧ್ಯಯನ ಪ್ರಸ್ತುತ ನೀಡುವ ಕೊಡುಗೆಗಳೇನು? ಎಂಬ ಬಗೆಗೆ ಆಲೋಚಿಸಬೇಕಾಗಿದೆ. ಅದರಲ್ಲಿ ಮೌಖಿಕ ಪರಂಪರೆಯನ್ನು ಎಂದೂ ಕಳಚಿಕೊಳ್ಳಲಾರದು. ಈ ಹಿನ್ನೆಲೆಯೊಂದಿಗೆ ಸ್ಥಳನಾಮಗಳನ್ನು ಮೌಖಿಕ ಪರಂಪರೆಯ ಐತಿಹ್ಯ, ಪುರಾಣ, ಗಾದೆ-ಒಗಟು, ಒಡಪು ಕಥೆ ಮುಂತಾದ ಮೌಖಿಕ ದಾಖಲೆಗಳ ಮೂಲಕ

ಅಧ್ಯಯನ ಮಾಡಿ ಅದರಿಂದ ಸ್ಥಳನಾಮಗಳಿಗಿರುವ ವಿಭಿನ್ನ ಆಯಾಮಗಳನ್ನು ಮೊಳಕಾಲ್ಮೂರು ಪರಿಸರದಲ್ಲಿ ಕಾಣಿಸುವ ಸ್ಥಳನಾಮಗಳ ವಿಶ್ಲೇಷಣೆಯ ಮೂಲಕ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

೧. ಐತಿಹ್ಯ ಮತ್ತು ಸ್ಥಳನಾಮಗಳು

ಒಂದು ನಿರ್ದಿಷ್ಟ ಸ್ಥಳಕ್ಕೆ ಅಂಟಿಕೊಂಡಿರುವ ವಿಶಿಷ್ಟ ರೂಪದ ಕಥಾನಕವೇ ಐತಿಹ್ಯ. ಕೇವಲ "ಸ್ಥಳಕ್ಕಷ್ಟೇ ಅಲ್ಲ, ವ್ಯಕ್ತಿ ಅಥವಾ ಘಟನೆಯೊಂದನ್ನು ಕುರಿತಂತೆ ಸಾಂಪ್ರದಾಯಿಕ ಮೂಲ ವಸ್ತುಗಳೊಡನೆ ನಿಜಾಂಶವೊಂದರ ಮೇಲೆ ಆಧಾರಿತವಾಗಿದೆಯೆಂದು ಭಾವಿಸುವ ಕಥೆಯೇ ಆಗಿದೆ"[೧೩] ಐತಿಹ್ಯಗಳು ಬೆಟ್ಟ, ಗುಡ್ಡ ಮುಂತಾದ ಸ್ಥಳಗಳಿಗೆ ವಿಶೇಷವಾಗಿ ಅನೇಕ ಪ್ರಸಿದ್ಧ ವ್ಯಕ್ತಿಗಳ ಹೆಸರಿನಲ್ಲಿಯೂ ಐತಿಹ್ಯಗಳು ಆರೋಪಿತವಾಗಿರುತ್ತವೆ. ಅವು ನಿಜವಾಗಿ ನಡೆದ ಘಟನೆಗಳೇ ಎಂಬಂತೆ ಸಾಂಪ್ರದಾಯಿಕ ವಿಷಯಗಳನ್ನೊಳಗೊಂಡು ರೂಪಿತವಾಗಿ ನಿರೂಪಿಸಲ್ಪಡುತ್ತವೆ. ಮೊಳಕಾಲ್ಮೂರು ಪರಿಸರದ ನೆಲೆಯಲ್ಲಿ ವಿವಿಧ ಬಗೆಯಲ್ಲಿ ಚಿತ್ರಿತವಾಗಿರುವುದನ್ನು ಮನಗಾಣಬಹುದು.

೧. ಯಾವುದಾದರೂ ಬಂಡೆಯ ಮೇಲೆ ಪ್ರಕೃತಿ ಸಹಜವಾದ ಕೊಳ ನೀರಿನ ದೋಣಿ ಇದ್ದರೆ, ಅವು ಮೌಖಿಕರ ಕಲ್ಪನೆಯಲ್ಲಿ ಪುರಾಣ-ಪುರುಷರ ನಿರ್ಮಾಣಗಳೇ ಆಗಿರುತ್ತದೆ. ಉದಾ : ಸೀತಾದೋಣಿ, ಏಕಾಂತತೀರ್ಥ, ನಾಗರಪಡೆ, ಒನಕೆ ಕಿಂಡಿ, ಕೂಗುಬಂಡೆ, ಬಳೆಗಾರರ ಗುಂಡು, ಎಮ್ಮೆತಮ್ಮನ ಗುಂಡು, ಅಕ್ಕತಂಗಿಯರ ಕುಂಟೆ.

೨. ಯಾವಾಗಲೂ ಗುಡ್ಡದಲ್ಲಿ ನೀರು ಹರಿಯುತ್ತಿದ್ದರೆ, ಅದು ಗಂಗಾದೇವಿಯ ಮೂಲ ವಾಸಸ್ಥಾನ ಎಂದು ಭಾವಿಸುತ್ತಾರೆ. ಉದಾ : ಗಂಗಮ್ಮನ ಗುಡ್ಡ, ಸೀತೆಯ ಹೊಂಡ

ಮೊಳಕಾಲ್ಮೂರು ಪರಿಸರದ 'ಬೊಮ್ಮದೇವರ ಹಳ್ಳಿ' ಎಂಬ ಗ್ರಾಮಕ್ಕೆ ಐತಿಹ್ಯ ಹೀಗಿದೆ : "ಒಬ್ಬ ಬಾಲಕನು ಪ್ರತಿನಿತ್ಯ ಕರಡಿಹಳ್ಳಿಯಿಂದ ದನಗಳನ್ನು ಮೇಯಿಸಲಿಕ್ಕೆ ಬೊಮ್ಮದೇವರಹಳ್ಳಿಗೆ ಬರುತ್ತಿದ್ದನು. ಅದರಲ್ಲಿ ಒಂದು ಬಿಳಿ ಬಣ್ಣದ ಹಸು ಹಟ್ಟಿಯಿಂದ ರಾತ್ರಿ ವೇಳೆಯಲ್ಲಿ ತನ್ನ ಕರುವಿಗೆ ಹಾಲುಣಿಸದೆ ಅರಣ್ಯಕ್ಕೆ ಬಂದು ಒಂದು ಕಲ್ಲು ಗುಂಡಿಗೆ ಹಾಲನ್ನು ಕರೆಯುತ್ತಿತ್ತು. ಒಂದು ದಿನ ದನ ಕಾಯುವ ಬಾಲಕನು ಆಕಳು ಕರುವಿಗೆ ಹಾಲು ಉಣಿಸದೆ ಇರುವುದನ್ನು ಕಂಡುಸಂಶಯದಿಂದ ಒಂದು ದಿನ ರಾತ್ರಿ ಹಸುವನ್ನು ಪರೀಕ್ಷಿಸಲು ಹಿಂಬಾಲಿಸಿದನು. ಪ್ರತಿದಿನದಂತೆ ಹಸು ಕಲ್ಲುಗುಂಡಿಗೆ ಹಾಲನ್ನು ಕರೆಯುತ್ತಿತ್ತು. ಈ ದೃಶ್ಯವನ್ನು ಕಣ್ಣಾರೆ ಕಂಡ ಬಾಲಕನು ತನ್ನ ಮನೆಯ ಹಿರಿಯರಿಗೆ ತಿಳಿಸಿದನು. ಮನೆಯ ಹಿರಿಯರು ಅದನ್ನು (ಕಲ್ಲನ್ನು) 'ಲಿಂಗ'ವೆಂದು ಭಾವಿಸಿ ಪೂಜಿಸಿದರು. ಮುಂದೆ ಈ ಲಿಂಗವನ್ನು ಬೊಮ್ಮಲಿಂಗ-ಬ್ರಹ್ಮಲಿಂಗ ಎಂದು ಕರೆದು ಪೂಜಿಸುತ್ತಾ ಇಲ್ಲಿಯೇ ಬಂದು ನೆಲೆಸಿದರು. ಇವರ ವಾಸಸ್ಥಳಕ್ಕೆ ದೇವರ ಹೆಸರನ್ನೇ ಇಟ್ಟು ಈ ಗ್ರಾಮವನ್ನು ಬೊಮ್ಮದೇವರ ಹಳ್ಳಿ ಎಂದು ನಾಮಕರಣ ಮಾಡಿಕೊಂಡರು.

ಇಂದಿಗೂ ಬೊಮ್ಮ ಲಿಂಗೇಶ್ವರ ದೇವಸ್ಥಾನ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಪ್ರಸಿದ್ಧಿಯನ್ನು ಪಡೆದುಕೊಂಡಿದೆ.''[೧೪]

ಜಟಂಗಿ ರಾಮೇಶ್ವರ ಎಂಬುದಕ್ಕೆ ಐತಿಹ್ಯ

ಮೊಳಕಾಲ್ಮೂರು ತಾಲ್ಲೂಕಿನ ಜಟಂಗಿ ರಾಮೇಶ್ವರ ಬೆಟ್ಟದ ಮೇಲಿರುವ ಶಾಸನ ಮತ್ತು ಐತಿಹ್ಯಗಳಿಂದ ರಾಮಾಯಣ ಕಾಲದಿಂದಲೂ ಪ್ರಸಿದ್ಧಿಹೊಂದಿತ್ತೆಂಬುದಕ್ಕೆ ಆಧಾರಗಳಿಂದ ತಿಳಿದುಬರುತ್ತದೆ. ಈ ಬೆಟ್ಟದ ಮೇಲೆ ಜಟಂಗಿ ರಾಮೇಶ್ವರ ದೇವಾಲಯವಿದ್ದು, ರಾವಣನು ಸೀತೆಯನ್ನು ಕದ್ದು ಒಯ್ಯುತ್ತಿದ್ದಾಗ ಜಟಾಯು ಎಂಬ ಪಕ್ಷಿ ರಾವಣನನ್ನು ತಡೆದು ಹೋರಾಡಿ ಸತ್ತಿತೆಂಬ ಪ್ರತೀತಿ ಇದೆ. ಆಗ ಶ್ರೀರಾಮಚಂದ್ರನು ಜಟಾಯುವಿಗೆ ಅಗ್ನಿ ಸಂಸ್ಕಾರ ಮಾಡಿ ಅವನ ಹೆಸರಿನಲ್ಲಿ ಲಿಂಗ ಪ್ರತಿಷ್ಠೆ ಮಾಡಿದನೆಂಬುದು ಆ ಸ್ಥಳದ ಐತಿಹ್ಯ. ಆದ್ದರಿಂದ ಜಟಾಯು, ರಾಮ, ಈಶ್ವರ ಈ ಮೂರರ ಹೆಸರಿನಲ್ಲಿಯೇ ಈ ದೇವರಿಗೆ ''ಜಟಂಗಿ ರಾಮೇಶ್ವರ''ವೆಂದು ಈ ಗುಡ್ಡವು ''ಜಟಂಗಿ ರಾಮಗಿರಿ'' ಎಂದೇ ಪ್ರಸಿದ್ಧಿ ಪಡೆದಿದೆ.

ಹೀಗಾಗಿ ಗ್ರಾಮನಾಮ ಅಥವಾ ಸ್ಥಳನಾಮ ಐತಿಹ್ಯಗಳಿಂದಲೂ ಕರ್ನಾಟಕದ ಸಂಸ್ಕೃತಿಯೆಡೆಗೆ ಗಮನ ಹರಿಸುವುದು ಅಗತ್ಯ ಮತ್ತು ಮುಖ್ಯವೆನಿಸುತ್ತದೆ. ಇಂಥಹ ಐತಿಹ್ಯಗಳನ್ನು ಪರಿಶೀಲಿಸಿದಾಗ ನಿಜಕ್ಕೂ ಜೀವನ ದೃಷ್ಟಿಯನ್ನು ಪ್ರಸ್ತುತಪಡಿಸುತ್ತಿರುತ್ತವೆ. ಒಂದು ನಾಡಿನ ಚರಿತ್ರೆಯ ಸಂಸ್ಕೃತಿಯ ಅಧ್ಯಯನಕ್ಕೆ ಅಪಾರ ನೆರವನ್ನು ನೀಡುತ್ತವೆಯೆಂಬುದು ಗಮನಾರ್ಹ ಸಂಗತಿಯಾಗಿದೆ.

೨. ಪುರಾಣ ಮತ್ತು ಸ್ಥಳನಾಮಗಳು

''ಪುರಾಣ ಎನ್ನುವುದು ಚರಿತ್ರೆಯ ಮಾತೃಕೆ'' ಐತಿಹ್ಯ ತನ್ನ ಸುತ್ತಲಿನ ಜನಸಾಮಾನ್ಯರನ್ನು, ವಿಶೇಷ ವ್ಯಕ್ತಿಗಳನ್ನು ಒಳಗೊಂಡು ಹೆಣೆದುಕೊಂಡಿದ್ದಾದರೆ ಪುರಾಣ ದೈವೀಪುರುಷರನ್ನು ಹೆಣೆದುಕೊಂಡಿರುತ್ತದೆ. ಕಾರಣ ಐತಿಹ್ಯ ಮತ್ತು ಮತಧರ್ಮಗಳೊಡನೆ ಪುರಾಣದ ಸಂಬಂಧವನ್ನು ಅತ್ಯಂತ ನಿಕಟವೆಂದು ಹೇಳಬಹುದು. ''ಚರಿತ್ರೆಯ ಅಂಶ ಐತಿಹ್ಯಕ್ಕೆ ಆಧಾರವಾದರೆ, ಐತಿಹ್ಯ ಪುರಾಣಕ್ಕೆ ಆಧಾರ''[೧೫] ಇವೆರಡರ ನಡುವೆ ಎಳೆಯಷ್ಟು ಭಿನ್ನತೆಯಿದೆಯಷ್ಟೆ. ಇದರಿಂದ ಪೌರಾಣಿಕ ಸ್ಥಳನಾಮಗಳ ಅಧ್ಯಯನ ಕುತೂಹಲಕರವಾಗುತ್ತದೆ.

ಮೊಳಕಾಲ್ಮೂರು ಪರಿಸರದಲ್ಲಿ ಕಂಡುಬರುವ ಪುರಾಣ ಪ್ರಸಿದ್ಧ ಸ್ಥಳನಾಮಗಳ ಮಾದರಿಯನ್ನು ಇಲ್ಲಿ ಗಮನಿಸಬಹುದು.

‘ಬಿಳಿನೀರು ಚಿಲುಮೆ’ಯ ಸ್ಥಳಪುರಾಣ

ಮೊಳಕಾಲ್ಮೂರು ತಾಲ್ಲೂಕಿನ ಕೋನಸಾಗರ ಸಮೀಪವಿರುವ ಈ ಸ್ಥಳವು ಪುರಾಣ ಪ್ರಸಿದ್ಧ ಸ್ಥಳವಾಗಿದೆ. ಹಿಂದೆ ಈ ಸ್ಥಳದಲ್ಲಿ ಅವಧೂತರಾದ ಶ್ರೀನಾಯಕನ ಹಟ್ಟಿ ತಿಪ್ಪೇರುದ್ರಸ್ವಾಮಿಗಳು ಕಟ್ಟಿಸಿದ ದೇವಾಲಯವಿದೆ. ಸ್ವಾಮಿಗಳು ಪವಾಡ ಪುರುಷರಾದ್ದರಿಂದ ಆಗ ಅವರು ತಮ್ಮ ಬೆತ್ತವನ್ನು ಊರಿದ ಸ್ಥಳದಲ್ಲಿ ಈಗಲೂ ಜಲ ಒಸರುತ್ತಿದ್ದು, ಈ ಸ್ಥಳಕ್ಕೆ “ಬಿಳಿನೀರು ಚಿಲುಮೆ” ಎನ್ನುತ್ತಾರೆ. ಇಲ್ಲಿ ಪ್ರತಿವರ್ಷ ಕಾರ್ತಿಕ ಮಾಸದಲ್ಲಿ ಉತ್ಸವ ಆಚರಿಸುತ್ತಾರೆ.

ಕೊಂಡ್ಲಹಳ್ಳಿ : ‘ಕೊಂಡಾಲಮ್ಮ’ ಎನ್ನುವ ದೇವತೆಯ ಹೆಸರಿನಿಂದ ಕೊಂಡ್ಲ ಹಳ್ಳಿ ಎಂದು ಹೆಸರಾಗಿದೆ.

ಬೊಮ್ಮಗೊಂಡನ ಕೆರೆ : ಬೊಮ್ಮಗೌಡ ಎಂಬುವರು ಕೆರೆಯನ್ನು ಕಟ್ಟಿಸಿದ ಕಾರಣದಿಂದ ಈ ಗ್ರಾಮವನ್ನು ಬೊಮ್ಮಗೊಂಡಸ ಕೆರೆ ಎಂದು ಕರೆಯುವರು.

ಮಠದ ಜೋಗಿಹಳ್ಳಿ : ಇದೊಂದು ಬೇಚರಾಕ್ ಗ್ರಾಮವಾಗಿದೆ. ಹಿಂದೆ. ಈ ಪ್ರದೇಶದಲ್ಲಿ ಯಾವ ಜೋಗಿಯಾದರೂ ಮಠಕಟ್ಟಿಕೊಂಡಿದ್ದನೋ ಏನೋ? ಅದಕ್ಕೆ ಮಠದ ಜೋಗಿಹಳ್ಳಿ ಎಂದು ಕರೆಯುವರು.

ಸಿದ್ದಾಪುರ : ಬ್ರಹ್ಮಗಿರಿ ಸಮೀಪದ ಸಿದ್ದಾಪುರದಲ್ಲಿದ್ದ ಸಿದ್ಧ(ಋಷಿ)ರಿಂದ ಸಿದ್ದಾಪುರ ಆಗಿದೆ ಎಂದೂ, ಬಹುಶಃ ಬೌದ್ಧ ಭಿಕ್ಷುಗಳು ಅಥವಾ ಬೌದ್ಧಧರ್ಮದ ಪ್ರಚಾರಕರು ಇಲ್ಲಿ ನೆಲೆಸಿದ್ದರಿಂದ ಈ ನೆಲೆಗೆ ಸಿದ್ಧರಪುರ ಸಿದ್ದಾಪುರ ಎಂಬ ಹೆಸರು ಬಂದಿರಬಹುದೆಂಬ ಕಾರಣವಿರಬಹುದು.

ಮ್ಯಾಸರಹಟ್ಟಿ : ಮ್ಯಾಸಬೇಡ ನಾಯಕರು ವಾಸಿಸುವ ವಾಸ್ತವ್ಯದ ನೆಲೆಯೇ ಮ್ಯಾಸರಹಟ್ಟಿ ಎಂಬುದಾಗಿದೆ.

ಜಹಗೀರು ಬುಡ್ಡೇನಹಳ್ಳಿ

ಪ್ರಾಚೀನ ರಾಜರ ಕಾಲದಲ್ಲಿ ಬ್ರಾಹ್ಮಣರಿಗೆ ದಾನದತ್ತಿ ಕೊಡುವ ಗ್ರಾಮಗಳಾಗಿದ್ದವು. ಜಹಗೀರು ಎಂದರೆ ಮಾನ್ಯವಾಗಿ ದೊರೆತ ಭೂಮಿ ಗ್ರಾಮ, ಜಹಗೀರಿಗೆ ಸಂಬಂಧಿಸಿದ ವಿಷಯವಾಗಿದೆ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಈ ಗ್ರಾಮವನ್ನು ಜಟಂಗಿ ರಾಮೇಶ್ವರ ದೇವಸ್ಥಾನಕ್ಕೆ ಜಹಗೀರು ಕೊಟ್ಟಿದ್ದರು ಎಂಬ ಸ್ಥಳದ ಐತಿಹ್ಯ.

ಕಾಡುಸಿದ್ದಾಪುರ ಸ್ಥಳ ಪುರಾಣದ ಐತಿಹ್ಯ

ಮೊಳಕಾಲ್ಮೂರು ತಾಲ್ಲೂಕಿನ ಬ್ರಹ್ಮಗಿರಿಯ ತಪ್ಪಲಲ್ಲಿ ಇರುವ ಒಂದು ಪುಟ್ಟ ಗ್ರಾಮ. ಕಾಡು ಸಿದ್ದಾಪುರ. ಇಲ್ಲಿ ಹೆಚ್ಚಾಗಿ ಕುರುಬ ಜನಾಂಗವೇ ಅತಿ ಹೆಚ್ಚಿನ ಕುಟುಂಬಗಳು ವಾಸಿಸುವ ಗ್ರಾಮ. ಈ ಊರಿನ ಬಗ್ಗೆ ಸ್ವಾರಸ್ಯಕರವಾದ ಕತೆಯೊಂದಿದೆ. ಈಗಾಗಲೇ ‘TV9’ ದೂರದರ್ಶನದಲ್ಲಿ ‘ಹೀಗೂ ಉಂಟಾ’ ಎಂಬ ಕಾರ್ಯಕ್ರಮದಲ್ಲಿ ಈ ಸ್ಥಳದ ಶವಸಂಸ್ಕಾರ ಪದ್ಧತಿಯ ಬಗ್ಗೆ ಪ್ರಚಾರ ಮಾಡಿದ್ದಾರೆ.

ಈ ಸ್ಥಳದ ಮಹಿಮೆ ಏನೆಂದರೆ "ಕಾಡುಸಿದ್ದ ಎಂಬ ವ್ಯಕ್ತಿ ಇದ್ದ. ಈತ ಮೂಲತಃ ಎಲ್ಲಿಂದ ಬಂದವನೋ ಗೊತ್ತಿಲ್ಲ. ಈ ಕುಗ್ರಾಮಕ್ಕೆ ಸುಮಾರು ವರ್ಷಗಳು ಹಿಂದೆ ಬಂದ ಕಾಡುಸಿದ್ದ ಇಲ್ಲಿಯೇ ವಾಸ್ತವ್ಯ ಹೂಡಿದ. ಮದುವೆಯೂ ಆದ. ದನ ಕಾಯುವ ಹುಡುಗರಿಗೆ ಮಳೆ ಬರುತ್ತದೆ ದನಗಳನ್ನು ಮನೆಗೆ ಹೊಡೆದುಕೊಂಡು ಹೋಗಿ ಎಂದು ಆ ಹುಡುಗರಿಗೆ ತಿಳಿಸಿದ. ಆದರೆ ಆ ಹುಡುಗರು ಅ ಕಾಡು ಸಿದ್ದನ ಮಾತನ್ನು ಧಿಕ್ಕರಿಸಿದರು. ಆದರೂ ಕಾಡುಸಿದ್ದ ಹೇಳಿದ ಮಾತಿಗೆ ತಕ್ಕಂತೆ ಆ ದಿನ ಸಂಜೆಯ ವೇಳೆಗೆ ಗುಡುಗು ಸಹಿತ ಮಳೆಯೂ ಬಂತು. ಇದನ್ನರಿತ ದನ ಕಾಯುವ ಬಾಲಕರು ವಿಸ್ಮಯರಾದರು. ಈ ಸಂಗತಿ ಎಲ್ಲಾ ಜನರಿಗೂ ಹಬ್ಬಿತು. ಹೀಗೆ ಜೀವಿಸುತ್ತಿರುವಾಗ ಒಂದು ದಿನ ಹೆಂಡತಿಯು ತೀರಿಹೋದಳು. ಶವವನ್ನು ಸುಡುಗಾಡಿನಲ್ಲಿ ಹೂಳಲು ಶವವನ್ನು ಎತ್ತಿದಾಗ ಇದ್ದಕ್ಕಿದ್ದ ಹಾಗೆ ಶವ ಕಣ್ಮರೆಯಾಯಿತಂತೆ. ಮತ್ತೆ ನೋಡಿದರೆ ಆ ಕಾಡು ಸಿದ್ದನ ಬಳಿಯಲ್ಲಿ ಮಲಗಿತ್ತಂತೆ. ಆಗ ಕಾಡುಸಿದ್ದ ನನ್ನ ಹೆಂಡತಿ ನನ್ನನ್ನು ಬಿಟ್ಟು ಹೋಗಲು ಮನಸಿಲ್ಲ. ನನ್ನ ಈ ವಾಸ್ತವ್ಯದ ಎದುರಿಗೆ ಶವಸಂಸ್ಕಾರ ಮಾಡಿ ಎಂದು ಆದೇಶಿಸಿದನಂತೆ. ಹಾಗೆ ಮಾಡಿದರು. ಮುಂದೊಂದು ದಿನ ನಾನು ಸತ್ತರೇ ಹಾಗೂ ನನ್ನ ಮನೆತನದವರೂ ಸತ್ತರೆ ಇದೇ ಸ್ಥಳದಲ್ಲಿ ನನ್ನನ್ನು ಶವಸಂಸ್ಕಾರ ಮಾಡಬೇಕು ಎಂದು ಆದೇಶಿಸಿದನಂತೆ. ಹಾಗೆಯೇ ಕುರುಬ ಜನಾಂಗದ ಮನೆತನದವರು ಸತ್ತರೇ ಒಂದೇ ಸಮಾಧಿಯಲ್ಲಿ ಸತ್ತವನ್ನು ಹಾಕುತ್ತಿದ್ದರು. ಇಂದಿಗೂ ಜೀವಂತ ಸಾಕ್ಷಿ ಎಂಬಂತೆ ಕಾಡುಸಿದ್ದಪುರದ ಕುರುಬ ಮನೆತನದವರು ಕಾಡುಸಿದ್ದನ ಸಮಾಧಿಯಲ್ಲಿಯೇ ಶವಸಂಸ್ಕಾರ ಪದ್ಧತಿ ಮಾಡುತ್ತಾರೆ. ಇದರ ವಿಶೇಷತೆ ಏನೆಂದರೆ, ಅಂಗವಿಕಲತೆ ಇರುವವರನ್ನು ಆ ಸಮಾಧಿಯಲ್ಲಿ ಶವಸಂಸ್ಕಾರ ಮಾಡುವುದಿಲ್ಲ. ಮತ್ತು ಸಹಜವಾಗಿ ಸಾವು ಬಂದು ಸತ್ತಂತಹ ವ್ಯಕ್ತಿಗಳನ್ನು ಮಾತ್ರ ಆ ಸಮಾಧಿಯಲ್ಲಿ ಹಾಕುತ್ತಾರೆ. ಈ ಸಮಾಧಿಯನ್ನು ಅಗೆದಾಗ ಯಾವುದೇ ತರಹದ ದುರ್ವಾಸನೆ ಬರುವುದಿಲ್ಲ. ಪರಿಮಳಯುಕ್ತ ಸುಗಂಧದ ವಾಸನೆ ಬರುತ್ತದೆ. ಹಾಗೂ ಈ ಸಮಾಧಿ ಬಿರುಕು ಬಿಟ್ಟಾಗ ಈ ದಿನ ಅಥವಾ ನಾಳೆಯೇ ನಮ್ಮ ಮನೆತನದ ವರಲ್ಲಿ ಸಾವು ಬರುತ್ತದೆ ಎಂಬ ಬಲವಾದ ನಂಬಿಕೆಯಿದೆ. ಈ ರೀತಿಯ ಪವಾಡ ಪುರುಷನ ನಾಮವನ್ನು ಹೊತ್ತ ಈ ಸ್ಥಳ ಕಾಡುಸಿದ್ದನಿಂದ ನಿರ್ಮಿತವಾದ ಈ ಸ್ಥಳ ಅವನ ಹೆಸರಿನಿಂದಲೇ ಮೈಗೂಡಿಸಿಕೊಂಡು ಕಾಡು ಸಿದ್ದಾಪುರ ಎಂದು ನಾಮಕರಣಗೊಂಡಿದೆ ಎಂಬುದು ಅಲ್ಲಿನ ಜನರ ಸ್ಥಳಪುರಾಣದ ಐತಿಹ್ಯ."[೬]

೩. ಗಾದೆಗಳು ಮತ್ತು ಸ್ಥಳನಾಮಗಳು

ಸಾರ್ವತ್ರಿಕ ಜಾನಪದ ಲಕ್ಷಣಗಳಲ್ಲಿ ಗಾದೆಗಳೂ ಒಂದು. ಈ ಕಾರಣದಿಂದ ಸಾಂಸ್ಕೃತಿಕ, ಸಾಮಾಜಿಕ, ಐತಿಹಾಸಿಕ ಅಧ್ಯಯನಗಳಿಗೆ ಗಾದೆಗಳು ಮೂಲ ಸಾಮಗ್ರಿಯಾಗಿ ನೆರವಾಗುತ್ತವೆ. ಗಾದೆಯ ಹಿನ್ನಲೆ, ಮೂಲಗಳನ್ನು ಶೋಧಿಸ ಹೊರಟರೆ ಹಲವಾರು ಹೊಸ ಸಂಗತಿಗಳು ತಿಳಿಯುತ್ತವೆ.

ಮೊಳಕಾಲ್ಮೂರು ಸುತ್ತಮುತ್ತ ಬಾಳೆಕಾಯೋಟಬರ
ರಾಂಪುರದ ಸುತ್ತಮುತ್ತ ಕುಂಬಳ ಕಾಯೋಟುಬರ

ಪ್ರಾದೇಶಿಕವಾಗಿ ಬಯಲು ಭೂಮಿಯಿಂದ ಕೂಡಿದ ಮೊಳಕಾಲ್ಮೂರು ಭೌಗೋಳಿಕ ಪರಿಸರವನ್ನು ಮತ್ತು ಸ್ಥಳನಾಮವನ್ನು ಈ ಗಾದೆ ನಿರೂಪಿಸುತ್ತದೆ. ಬಾಳೆಕಾಯಿ ಮತ್ತು ಕುಂಬಳ ಕಾಯಿಗಳು ಬರದ ಗಾತ್ರವನ್ನು ಆಯಾ ಪ್ರದೇಶಕ್ಕೆ ಸೀಮಿತಗೊಳಿಸುತ್ತವೆ.

೪. ಒಗಟುಗಳು ಮತ್ತು ಸ್ಥಳನಾಮ

ಒಗಟು ಜನಪದ ಸಾಹಿತ್ಯದ ಬಹುಮುಖ್ಯ ಪ್ರಕಾರಗಳಲ್ಲೊಂದು. ಇಂಥ ಜನಪದ ಅಂಶವೊಂದರೊಳಗಡೆ ಒಂದು ಭಾಷೆ, ಭಾವನೆ, ಜನರು ವಾಸಿಸುವ ನೆಲೆಗಳು, ಊಟ ಉಪಚಾರ, ನಡುವಳಿಕೆ, ಆಚಾರ ವಿಚಾರ, ಅನೇಕ ವಸ್ತು ವೈವಿಧ್ಯವನ್ನು ಹೊಂದಿದ ಒಗಟುಗಳಲ್ಲಿ ಸ್ಥಳನಾಮಗಳು ನಿರೂಪಿತವಾಗಿವೆ.

ಉದಾ. 'ವೀರಾಪುರ'ದ ದಿನ್ನೆಮ್ಯಾಲೆ
ರಾಂಪುರದ ತಿಮ್ಮಕ್ಕಳ
ಸಿಟುಗುಟ್ಟಿದರೆ ಕರಕಂಬಾ
ಇಲ್ಲದಿದ್ರೆ ಬಿಟ್ಬಬಾ''[೧೭] (ಔಡಲ ಕಾಯಿ)

೫. ಒಡಪುಗಳು ಮತ್ತು ಸ್ಥಳನಾಮಗಳು

ಜನಪದ ಸಾಹಿತ್ಯವು ಗ್ರಾಮ ಜೀವನದ ವಿವಿಧ ಅನುಭವಗಳ ಸುಂದರ ಮತ್ತು ಪ್ರಾಮಾಣಿಕವಾದ ಅಭಿವ್ಯಕ್ತಿ. ಜನಪದ ಸಾಹಿತ್ಯದ ಒಂದು ಪ್ರಕಾರವಾಗಿ ಬೆಳೆದು-ಉಳಿದು ಬಂದಿರುವ ಒಡಪು, ಉತ್ತರ ಕರ್ನಾಟಕದ ಪ್ರಾದೇಶಿಕ ವೈಶಿಷ್ಟವಾಗಿದೆ. ಈ ಒಡಪುಗಳನ್ನು ಎದುರಿಗಿಟ್ಟುಕೊಂಡು ಸೂಕ್ಷ್ಮವಾಗಿ ಅವಲೋಕಿಸಿದರೆ, ಹಳ್ಳಿಗರ ಭಾವಸ್ಪಂದನದಿಂದ ಬಂದ ಕೆಲವು ಸ್ಥಳನಾಮಗಳನ್ನು ಗುರುತಿಸಬಹುದು.

''ಮುತ್ತಿಗಾರಹಳ್ಳಿ' ಅಂಬೋದು ಬಡಿವಾರ
ಮುತ್ತಿನಂಥ ಬಜಾರ
ಒಂಟಿ ಮ್ಯಾಲ ಕುಂತಾನ
ಕಂಠೀಸರ ಹಿಡಿದಾನ
ಬಾಗಲಾಗ ನಿಂತಾನ
ಬಾಳೆಗೊನೆ ಹಿಡಿದಾನ''[೧೮]

೬. ಜಾನಪದ ಕಥೆ ಮತ್ತು ಸ್ಥಳನಾಮಗಳು

ಕಥೆಗಳು ಊರ ಹೆಸರಿನ ಮೇಲೆ ಅತ್ಯಂತ ಪ್ರಭಾವ ಬೀರುವ ಅಂಶಗಳಾಗಿವೆ. ಇವು ಹೆಚ್ಚಿನಂಶ ವಸ್ತುಸ್ಥಿತಿಯನ್ನು ಕುರಿತವುಗಳಾಗಿದ್ದು, ವ್ಯಕ್ತಿಗತ ಭೌಗೋಳಿಕ ಪರಿಸರ ಮತ್ತು ಘಟನಾತ್ಮಕ ವಿಶಿಷ್ಟತೆಯನ್ನು

ಪಡೆದುಕೊಂಡಿರುತ್ತವೆ. ಈ ಕಥೆಗಳು ಒಂದು ಜನಾಂಗದ ನಡುವಳಿಕೆ, ನಂಬಿಕೆಗಳನ್ನು ಪ್ರತಿನಿಧಿಸುತ್ತಿದ್ದು ಪುನಾರಾವರ್ತನೆಯ ಮೂಲಕ ಪರಂಪರೆಯ ಉಳಿಯುವಿಕೆಗೆ ನೆನಕೆಗೆ ಕಾರಣವಾಗುತ್ತವೆ. ಗಾಳಿ, ಪಿಶಾಚಿ, ಭಯಂಕರ ರೋಗ ರುಜಿನಗಳು ಗ್ರಾಮಕ್ಕೆ ಊರಿಗೆ ಬಡಿದಾಗ ಮಧ್ಯ ಸಂಭವಿಸುವ ಆಶ್ಚರ್ಯಕರ ಘಟನೆಗಳನ್ನು ಬಾಯಿಂದ ಬಾಯಿಗೆ ಹರಡುವುದರ ಮೂಲಕ ಪರಂಪರೆಯ ರಕ್ಷಣೆಯ ಕಾರ್ಯವನ್ನು ಅವು ನಿರ್ವಹಿಸುತ್ತವೆ. ಕಥೆಗಳು ಸ್ಥಳನಾಮ ಅಧ್ಯಯನಕ್ಕೆ ನೆರವಾಗಿದೆ ಎನ್ನಬಹುದು.

ಮೊಳಕಾಲ್ಮೂರು ಪರಿಸರದ ಕೆಲವು ಗ್ರಾಮಗಳ ಜಾನಪದ ಕಥೆಗಳೊಂದಿಗೆ ಸ್ಥಳನಾಮಗಳನ್ನು ಕುರಿತು ಚರ್ಚಿಸಲಾಗಿದೆ. ರಾಮಪುರ ಎಂಬ ಗ್ರಾಮಕ್ಕೆ ದೇವಲಾಪುರ ಎಂಬ ಹೆಸರು ಇತ್ತು. ಹುಚ್ಚ ಮಲ್ಲೇಶ್ವರ ದೇವಸ್ಥಾನದ ಹತ್ತಿರ ಹಾಗೂ ಗುಡ್ಡದ ಹತ್ತಿರ ಜನರು ವಾಸಿಸುತ್ತಿದ್ದರು. ಒಮ್ಮೆ ಕಾಲರಾ ರೋಗಬಂದು ಜನ ಭಯಭೀತರಾಗಿ ಊರದೇವರಾದ ಜಟಂಗಿ ರಾಮೇಶ್ವರನ ಮೊರೆ ಹೋದಾಗ ದೇವರು ಒಂದು ಕಲ್ಲನ್ನು ಎಸೆದಾಗ ಆ ಕಲ್ಲು ಬಿದ್ದ ಜಾಗದಲ್ಲಿ ಜನರು ಊರನ್ನು ಕಟ್ಟಿದರು. ಆಗಿನಿಂದ ಆ ಊರಿಗೆ ರಾಮಪುರ ಎಂದಾಯಿತು.

"ನುಂಕೇ ಮಲೆಭೈರವ ನೆಲೆಗೊಂಡಿರುವ ಬಗೆಗಿನ ಕಥೆ"

ಭೂಲೋಕದಲ್ಲಿ ರಾಕ್ಷಸರ ಹಾವಳಿ ಹೆಚ್ಚಾದಾಗ ನರಮಾನವರು ಭಯಗೊಂಡು ಪರಮಾತ್ಮನನ್ನು ಸ್ಮರಣೆ ಮಾಡಿದರು ಹಾಗೂ ದೇವತೆಗಳು ಸಹ ಪರಮಾರ್ಥದಲ್ಲಿ ಮೊರೆ ಹೊಕ್ಕರು. ಇದನ್ನರಿತ ಶಿವನು ತನ್ನ ಬೆವರಿನಿಂದ ಕಾಲ ಭೈರವನನ್ನು ಇವನ ಸಹಾಯಕ್ಕಾಗಿ ಅಕ್ಕಳಾಗಿ ಕರ್ಪೂರದಮ್ಮನನ್ನು ಸೃಷ್ಟಿಸಿ ಭೂಲೋಕದಲ್ಲಿ ನಡೆಯುವ ಅನ್ಯಾಯವನ್ನು ಸುಧಾರಿಸಲು ಅಥವಾ ದುಷ್ಟರನ್ನು ಶಿಕ್ಷಿಸುತ್ತಾ ಶಿಷ್ಟರನ್ನು ರಕ್ಷಣೆ ಮಾಡಲು ಮುಂದಾದನು. ಹೀಗೆ ಭೂಲೋಕದಲ್ಲಿ ಸಂಚರಿಸುತ್ತಿರುವಾಗ ಕೂಡ್ಲಿಗಿ ತಾಲ್ಲೂಕಿನ 'ಉಜ್ಜಿನಿ' ಎಂಬಲ್ಲಿಗೆ ಬಂದು ಅಲ್ಲಿ ಬರಗಾಲದಿಂದ ತತ್ತರಿಸಿದ ಜನಗಳಿಗೆ ತನ್ನ ಮಹಿಮೆಯನ್ನು ತೋರಿಸಿದ. ಮರುಳನ್ನು ಕುಪ್ಪೆ ಮಾಡಿ ಮರುಳ ಸಿದ್ದೇಶ್ವರನೆಂದೂ ಹೆಸರಿಟ್ಟು ಇದನ್ನು ಪೂಜಿಸುತ್ತಾ ಹೋಗಿ ನಿಮಗೆ ಒಳ್ಳೆಯದಾಗುತ್ತದೆ ಎಂದು ಹೇಳಿ ಹೋದನು. ಅಲ್ಲಿಂದ ಅದು ಮರುಳ ಸಿದ್ದೇಶನ ಪ್ರಮುಖ ಕ್ಷೇತ್ರವಾಯಿತು. ಅಲ್ಲಿಂದ ಮುಂದೆ ಚಳ್ಳಕೆರೆ ತಾಲ್ಲೂಕು ನಾಯಕನ ಹಟ್ಟಿಯ ಹತ್ತಿರ ಡೊಣ ಮಾಂಡ್ಲಹಟ್ಟಿಯಲ್ಲಿ ಬೇಡರಾದ ಕಾಟಣ್ಣ ಬೋಸಯ್ಯ ಎಂಬುವವರು ಪರಮಭಕ್ತರಾದರು. ಇವರು ಬೇಟೆಯಾಡುವುದರಲ್ಲಿ ನಿಸ್ಸೀಮರಾಗಿದ್ದರು. ದುಷ್ಟಶಕ್ತಿಗಳನ್ನು ಸದೆಬಡಿಯುತ್ತಿದ್ದರು. ಹೀಗೆ ಉತ್ತರದ ಕಡೆಗೆ ಸಂಚರಿಸುತ್ತಾ ಕುಮತಿಯ ಬಳಿ ತಂಪಾದ ಜಿನಗಿಹಳ್ಳದ ದಡದಲ್ಲಿ ಬೀಡು ಬಿಟ್ಟರು. ಹೀಗಿರುವಾಗ ರಸಾಸಿದ್ದನ ವಾಹನವಾದ ಕೋಣವನ್ನು ಹುಡುಕುತ್ತಾ ಬಂದ ರಕ್ಕಸರಿಂದ ನುಂಕೇಮಲೆಯ ಬೆಟ್ಟದಲ್ಲಿ ವಾಸವಾಗಿರುವ ರಾಕ್ಷಸರ ರಹಸ್ಯವನ್ನು ಗಮನಿಸಿದನು. ಹೀಗಿರುವಾಗ ಬಲ್ಲಾಳ ಕಾಯುನೂ ಹರಳಯ್ಯನೂ ಪರಮ ಭಕ್ತರಾದರು. ಅಲ್ಲಿಂದ ಪೂರ್ವದಿಕ್ಕಿನ ಕಡೆಯಿಂದ ಮೊಳಕಾಲ್ಮೂರು ನುಂಕೇಮಲೆಯ ಬೆಟ್ಟಗಳು

ಆತನಿಗೆ ಘನಘೋರವಾಗಿ ಕಂಡವು. ಉತ್ಸಾಹ ಭರಿತನಾದ ಭೈರವನು ಅಕ್ಕನ ಅಪ್ಪಣೆಯನ್ನು ಪಡೆದು ಈ ಬೆಟ್ಟಕ್ಕೆ ಪ್ರಯಾಣ ಬೆಳಸಿದನು. ಮೇಲುಗಿರಿಯಲ್ಲಿ ರಕ್ಕಸರು ವಾಸ ಮಾಡುವುದನ್ನು ಗಮನಿಸಿ ತನ್ನ ಮಾಯಾಕುದುರೆಯೊಂದಿಗೆ ಬೆಟ್ಟವನ್ನು ಹತ್ತಿಸುವನು.

ಹೀಗೆ ಭೈರವನು ಬೆಟ್ಟವನ್ನು ಹತ್ತಿಸುವಾಗ ಮಾರ್ಗ ಮಧ್ಯೆದಲ್ಲಿ ಕುದುರೆಯ ಲಗಾಮು ಹರಿಯುತ್ತದೆ. ಅದೇ ಸಂದರ್ಭದಲ್ಲಿ ಹರಳಯ್ಯನು ಆ ಬೆಟ್ಟದ ತಪ್ಪಲಿನ ಪ್ರದೇಶದಲ್ಲಿ ಸೌದೆಗಳನ್ನು ಸಂಗ್ರಹಿಸುತ್ತಿದ್ದನು. ಸಂಕಷ್ಟಕ್ಕೆ ಸಿಲುಕಿದ ಭೈರವನು ತನ್ನ ತಂದೆಯಾದ ಪರ ಶಿವನನ್ನು ಸ್ಮರಿಸುತ್ತಿರುವಾಗ ಅಂತಹ ಕಷ್ಟವನ್ನರಿತ ಹರಳಯ್ಯನು ಸಹಾಯ ಮಾಡಲು ಮುಂದಾದನು. ಕುದುರೆಯ ಲಗಾಮಾಗಿ ತನ್ನ ಚರ್ಮವನ್ನೇ ಕಿತ್ತುಕೊಟ್ಟನಂತೆ. ಭೈರವನು ಅದನ್ನು ಲಗಾಮಾಗಿ ಮಾಡಿಕೊಂಡು ಮುಂದಿನ ಪ್ರಯಾಣ ಬೆಳೆಸುತ್ತಾನೆ. ಇದರ ಕೃತಜ್ಞತೆಗಾಗಿ ಭೈರವನು ಹರಳಯ್ಯನ ಎರಡು ಬೇಡಿಕೆಗಳನ್ನು ನೆರವೇರಿಸಿಕೊಡುತ್ತಾನೆ. ಅದೇನೆಂದರೆ : ಈ ಕ್ಷೇತ್ರ ನಿನ್ನ ಕೈವಶವಾದರೆ, ಈ ಹೊಂಡದಲ್ಲಿ ಜಾತಿ-ಭೇದವಿಲ್ಲದೆ ನೀರನ್ನು ಬಳಸಬೇಕೆಂದು ಮತ್ತು ಇಲ್ಲಿಗೆ ಬರುವ ಭಕ್ತರಿಂದ ಮೊದಲು ಪೂಜೆ ನನಗೆ ಸಲ್ಲಬೇಕೆಂದು. ಹೀಗೆ ಹರಳಯ್ಯನ ಸಹಾಯದಿಂದ ಭೈರವನು ಮುಂದೆ ಪ್ರಯಾಣ ಬೆಳೆಸಿ ಮೇಲುಗಿರಿಯಲ್ಲಿ ರಸಾಸಿದ್ದ ಅಂಗ್ಸರೆಂಬ ರಾಕ್ಷಸರಿರುವರೆಂದೂ ಅವರಲ್ಲಿ ಏಳು ಕೊಪ್ಪರಿಗೆ ವಿಷವುಂಟೆಂದು ಹರಳಯ್ಯನಿಂದ ತಿಳಿಯುತ್ತದೆ. ಅವರನ್ನು ಜಯಿಸಲು ಸುಲಭದ ಮಾತಲ್ಲ. ಅವರೊಡನೆ ಕಾದಾಡಿ ಮೂರ್ಚಿತನಾಗಿರುತ್ತಾನೆ. ಇತ್ತ ಅಕ್ಕಳಾದ ಕರ್ಪೂರದಮ್ಮನು ತಮ್ಮನಿಗೆ ಯಾವುದೋ ಕಷ್ಟ ಒದಗಿ ಬಂದಿರಬಹುದೆಂದು ಗಾಬರಿಯಿಂದ ಕುಮತಿಯಿಂದ ಬೇಡರಾದ ಕಾಟಣ್ಣ-ಬೋಸಯ್ಯ ನೂರಾ ಒಂದು ನಾಯಿಗಳ ಜೊತೆ ಕಂಪಳದೊಂದಿಗೆ ಬರುತ್ತಾಳೆ. ಆಗ ಕೋಟೆಯೊಳಗೆ ಹೋಗಲು ಹಾದಿಯೇ ಇರುವುದಿಲ್ಲ. ತನ್ನ ಒನಕೆಯ ಸಹಾಯದಿಂದ ದಾರಿ ಮಾಡಿಕೊಂಡು ಒಳಹೋಗುತ್ತಾರೆ. ಅಲ್ಲಿ ರಕ್ಕಸನೊಂದಿಗೆ ಕಾದು ಮೂರ್ಚಿತನಾದ ತಮ್ಮನ ಹತ್ತಿರ ಹೋಗಿ ತನ್ನ ತಂದೆಯನ್ನು ಸ್ಮರಿಸಿ ತನ್ನ ತಮ್ಮನಿಗೆ ಸೆರಗಿನಿಂದ ನೀರು ಹಿಂಡಿ ಎಬ್ಬಿಸಿ ರಕ್ಕಸರು ಅಸಾಧ್ಯವಾದವರು ಅವರ ಗೋಜಿಗೆ ಏಕೆ ಹೋದೆಯಾ ಎಂದು ಬುದ್ಧಿ ಮಾತುಗಳನ್ನು ಹೇಳುತ್ತಾಳೆ. ರಕ್ಕಸರ ರಹಸ್ಯವನ್ನು ತಿಳಿದು ಆ ವಿಷವನ್ನು ಖಾಲಿ ಮಾಡಲು ಜೋಗಿಯ ವೇಷವನ್ನು ಧರಿಸಿ ಅವರು ಇಲ್ಲದ ವೇಳೆಯಲ್ಲಿ ರಾಕ್ಷಸರ ದಾಸಿಯರ ಹತ್ತಿರ ಭಿಕ್ಷೆಗೆಂದು ಹೋಗುತ್ತಾನೆ. ಅವರು ನಮ್ಮ ಹತ್ತಿರ ಆಹಾರವಿಲ್ಲ ವಿಷವೇ ನಮಗೆ ಆಹಾರವೆಂದರು. ನೀನು ಅಷ್ಟು ಸುಲಭವಾಗಿ ಇಲ್ಲಿಗೆ ಹೇಗೆ ಬಂದಿರಿ ಇಲ್ಲಿಗೆ ನರ ಮಾನವರು ಅಷ್ಟು ಸುಲಭವಾಗಿ ಬರಲು ಸಾಧ್ಯವಿಲ್ಲ. ಇವನ್ಯಾರೋ ದೈವ ಪುರುಷನಿರಬೇಕೆಂದೂ ಅವರಿಗೆ ಅನುಮಾನವಾಯ್ತು. ಆದರೂ ಸಹ ನಿಮಗೆ ಗಂಡಂದಿರಿಲ್ಲದೆ ಸಂತಾನ ಭಾಗ್ಯ ನೀಡುತ್ತೇನೆಂದು ಅವರಲ್ಲಿ ಆಸೆ ಹುಟ್ಟಿಸಿ ತನ್ನ ಒಂದು ಉಪಾಯದಿಂದ ವಿಷವನ್ನೆಲ್ಲಾ ಖಾಲಿ ಮಾಡಿ ಮುಂದೆ ಘೋರವಾದ ಭೈರವನ ರೂಪತಾಳಿ ರಕ್ಕಸರನ್ನು ಸಂಹಾರ ಮಾಡಲು ಮುಂದಾದನು.

ರಸಾಸಿದ್ಧ ಎಂಬ ರಕ್ಕಸನನ್ನು ಸಂಹರಿಸಿದ. ಆದರೆ ಅಂಗ್ಸನೆಂಬ ದೈತ್ಯನನ್ನು ಜಯಿಸಲು ಸುಲಭದ ಮಾತಲ್ಲ. ಅವನ ಒಂದು ರಕ್ತದ ಹನಿ ನೆಲಕ್ಕೆ ಬಿದ್ದರೆ ಕೋಟಾನುಗಟ್ಟಲೆ ರಾಕ್ಷಸರ ಸಮೂಹವಾಗುತ್ತದೆ. ಹಾಗೇ ಇವನು ರಕ್ತ ಬೀಜಾಸುರನಾಗಿರುತ್ತಾನೆ. ಬೇಡರಾದ ಕಾಟಣ್ಣ-ಬೋಸಯ್ಯನವರ ನೂರಾ ಒಂದು ನಾಯಿಗಳ ಸಹಾಯದಿಂದ ಅಂಗ್ಸನ ಸಂಹಾರವಾಗುತ್ತದೆ. ಭಯಗೊಂಡ ರಕ್ಕಸರ ದಾಸಿಯರು ಭೂಲೋಕದ ಮಾರ್ಗವಾಗಿ ಇಳಿದು ಹೋಗುತ್ತಿರುವವರನ್ನು ಕಂಡು ಭೈರವನು ಅವರ ಜುಟ್ಟು ಹಿಡಿದು ಮೇಲಕ್ಕೆತ್ತಿ ನಿಮ್ಮಿಂದ ನನಗೆ ತುಂಬಾ ಉಪಕಾರವಾಯ್ತು. ನಮ್ಮಿಂದೇನಾದರೂ ಉಪಕಾರ ಬೇಕೇ ಎಂದಾಗ ನುಂಕವ್ವ-ಮಲಿಯವ್ವ ಇವರೀರ್ವರೂ ತಮ್ಮ ಈ ಕ್ಷೇತ್ರಕ್ಕೆ ತಮ್ಮ ಹೆಸರು ನಿಮ್ಮ ಹೆಸರೊಡನೆ ಸೇರಿಸಿ ಇಡಬೇಕೆಂದು ಕೇಳಿಕೊಂಡಾಗ ಈ ಕ್ಷೇತ್ರಕ್ಕೆ ನುಂಕೆಮಲೆಸಿದ್ದೇಶ್ವರ ಎಂದು ಹೆಸರಿಸಲಾಯಿತು. ಇಂದಿಗೂ ಸಹ ಈತನ ದೇವಾಲಯದೊಳಗೆ ನುಂಕವ್ವ-�ಲಿಯವ್ವ ಇವರ ವಿಗ್ರಹಗಳನ್ನು ನೋಡಬಹುದು."[೯]

ಈ ಪ್ರದೇಶದ ಸ್ಥಳನಾಮ ಅಧ್ಯಯನವು ಆ ಪ್ರದೇಶದ ಸಾಮಾಜಿಕ ಅಧ್ಯಯನಕ್ಕೆ ಈ ಅಧ್ಯಯನ ಆಕರವಾಗುತ್ತದೆ. ಈ ಅಧ್ಯಯನದ ಸಂದರ್ಭದಲ್ಲಿ ಸಾಮಾಜಿಕ ಭಾಷಾಶಾಸ್ತ್ರದ ಅಧ್ಯಯನದ ವಿಧಾನ ಗಳನ್ನು ಅಳವಡಿಸಿಕೊಳ್ಳಲಾಗಿದೆ.

ಅಡಿಟಿಪ್ಪಣಿಗಳು

೧. ಆಂಧ್ರ-ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು, ಡಾ.ಜಾಜಿದೇವೇಂದ್ರಪ್ಪ, ವಿಕಾಸ ಪ್ರಕಾಶನ, ಹೊಸಪೇಟೆ, ೨೦೦೪, ಪು.೨೧೯

೨. ತುಳುನಾಡಿನ ಸ್ಥಳನಾಮಗಳು, ಕೆಮ್ಮೂರುರಘುಪತಿಭಟ್ಟ, ಪು.೨

೩. ಸ್ಥಳನಾಮ ವ್ಯಾಸಂಗ, ದೇಜಗೌ, ಪು.೨೩

೪. ಹೆಸರಲ್ಲೇನಿದೆ?, ಆರ್ಕೆ ಮಣಿಪಾಲ, ಪು.೧೫

೫. ಸಕಲೇಶಪುರದ ಸ್ಥಳನಾಮಗಳು, ಡಾ.ವಿಶ್ವನಾಥ, ಪು.೪೯

೬. ನಾಮ ವಿಜ್ಞಾನ, ಎಂ.ಎಂ.ಕಲ್ಬುರ್ಗಿ, ಪು.೫೯

೭. ಆಂಧ್ರ-ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು, ಡಾ.ಜಾಜಿದೇವೇಂದ್ರಪ್ಪ, ವಿಕಾಸ ಪ್ರಕಾಶನ, ಹೊಸಪೇಟೆ, ೨೦೦೪, ಪು.೨೨೩

೮. ಅದೇ, ಪು.೨೨೯

೯. ಶಂಬಾಕೃತಿ ಸಮೀಕ್ಷೆ, ಸಂ.ಮಲ್ಲೇಪುರಂ ಜಿ.ವೆಂಕಟೇಶ, ಪು.೮೧

೧೦. Qurterly Jourinal of Mythic Society, P.235, 1940

೧೧. ಹೆಸರಲ್ಲೇನಿದೆ? ಆರ್ಕೆ ಮಣಿಪಾಲ, ಪು.೧೫

೧೨. ಆಂಧ್ರ-ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು, ಡಾ.ಜಾಜಿದೇವೇಂದ್ರಪ್ಪ, ವಿಕಾಸ ಪ್ರಕಾಶನ, ಹೊಸಪೇಟೆ, ೨೦೦೪, ಪು.೧೩೬

೧೩. **ಕನ್ನಡ ವಿಶ್ವಕೋಶ,** ಸಂ.೩, ಪು.೨೫೨

೧೪. ರಾಜಣ್ಣ ಶಿಕ್ಷಕರು, ಬೊಮ್ಮದೇವರಹಳ್ಳಿ, ವಯಸ್ಸು-೫೦, ಸಂದರ್ಶನ ಜೂನ್ ೧೦, ೨೦೦೮

೧೫. **ಆಂಧ್ರ-ಕರ್ನಾಟಕ ಗಡಿಪ್ರದೇಶದ ಸ್ಥಳನಾಮಗಳು,** ಡಾ.ಜಾಜಿದೇವೇಂದ್ರಪ್ಪ, ವಿಕಾಸ ಪ್ರಕಾಶನ, ಹೊಸಪೇಟೆ, ೨೦೦೪, ಪು.೧೪೭

೧೬. **ಕಾಡುಸಿದ್ದಾಪುರ ಕಾಡುಸಿದ್ದ ಮನೆತನದವರು,** ಹಗಲೂರಪ್ಪ ನಾಗರಾಜ, ಸಂದರ್ಶನ ಜುಲೈ ೫, ೨೦೦೮, ವಯಸ್ಸು ೫೫

೧೭. ನಿಂಗಮ್ಮ, ಗೌರಸಮುದ್ರ, ಸಂದರ್ಶನ ಆಗಸ್ಟ್ ೮, ೨೦೦೮, ವಯಸ್ಸು ೪೦

೧೮. ರಾಜಕ್ಕ, ರಾಂಪುರ, ಸಂದರ್ಶನ ಆಗಸ್ಟ್ ೧೦, ೨೦೦೮, ವಯಸ್ಸು ೩೫

೧೯. **ನುಂಕೇಮಲೆ ಭೈರವಾರಾಧನೆ, ಹೊಳಹು,** ಸಿದ್ದಣ್ಣ, ಎಂ.ಫಿಲ್ ಅಪ್ರಕಟಿತ ಪ್ರಬಂಧ, ಪು.೦೪, ಕ.ವಿ.ಹಂಪಿ

ಅಧ್ಯಾಯ ೫

ಸ್ಥಳನಾಮಗಳು : ಚರಿತ್ರೆ ಮತ್ತು ಸಂಸ್ಕೃತಿ

೫

ಸ್ಥಳನಾಮಗಳು : ಚರಿತ್ರೆ ಮತ್ತು ಸಂಸ್ಕೃತಿ

ಒಂದು ದೇಶದ ಇತಿಹಾಸವನ್ನು ಒಬ್ಬ ವ್ಯಕ್ತಿಯು ಸಮಗ್ರವಾಗಿ ಅಧ್ಯಯನ ಮಾಡುವುದು ಕಷ್ಟಸಾಧ್ಯ. ಹಿಂದೊಮ್ಮೆ ರಾಜವಂಶ, ಅವರ ಕಾಲಮಾನ, ಯುದ್ಧ ಹಾಗೂ ಸಾಂಸ್ಕೃತಿಕ ಬದುಕನ್ನು ಗಮನದಲ್ಲಿಟ್ಟುಕೊಂಡು ಇತಿಹಾಸವನ್ನು ರಚಿಸುವ ಕಾಲವೊಂದಿತ್ತು. ಆದರೆ ಆಧುನಿಕ ಇತಿಹಾಸ ಲೇಖನ ಕಲೆಯು ಸಂಪೂರ್ಣ ಬದಲಾಗಿದೆ. ಇಂದು ಇತಿಹಾಸವನ್ನು ವಿವಿಧ ದೃಷ್ಟಿಕೋನಗಳಿಂದ ವಿಶ್ಲೇಷಣೆ ಮಾಡಲಾಗುತ್ತದೆ. ಅಂದರೆ, ಜನ-ಇತಿಹಾಸ, ಜಾನಪದ-ಇತಿಹಾಸ, ಪರಿಸರ-ಇತಿಹಾಸ, ಮೌಖಿಕ-ಇತಿಹಾಸ ಹಾಗೂ ಇನ್ನು ಅನೇಕ ವಿವಿಧ ಇತಿಹಾಸದ ಬಗೆಗೆ ಸಮಗ್ರ ಹಾಗೂ ಸೂಕ್ಷ್ಮ ಅಧ್ಯಯನ ಗಳಾಗುತ್ತವೆ. ಅದರಲ್ಲಿ ಪ್ರಾದೇಶಿಕ ಮಟ್ಟದಲ್ಲಿ ಇಂತಹ ಸಮಗ್ರ ಮತ್ತು ಸೂಕ್ಷ್ಮ ಅಧ್ಯಯನಗಳನ್ನು ನಡೆಸುವುದರ ಮೂಲಕ ಆ ಪ್ರದೇಶದ ಮಾನವನ ಜೀವನಕ್ರಮವನ್ನು ಅರಿಯಲು ಸಾಧ್ಯವಾಗುತ್ತದೆ. ಮಾನವನ ಪುರಾತನ ಕಾಲದ ಜೀವನ, ನಾಗರೀಕತೆಯಿಂದ, ಪರಿವರ್ತನೆ ಗೊಂಡ ಬಗೆ, ಹಳ್ಳಿ-ಊರು, ಪಟ್ಟಣ, ನಗರ ಇನ್ನು ಮುಂತಾದ ವಸತಿ ನೆಲೆಗಳನ್ನು ತಿಳಿಯಲು ಸ್ಥಳನಾಮಗಳ ಸಮುದ್ರದಲ್ಲಿ ಈಜಬೇಕಾಗುತ್ತದೆ. ಈ ಸ್ಥಳನಾಮಗಳು ಮನುಕುಲದ ಗತಕಾಲದ ಜೀವನ ಚರಿತ್ರೆ ಮತ್ತು ಮಾನವನ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುವ ಪಳೆಯುಳಿಕೆಗಳೇ ಆಗಿವೆ.

ಸ್ಥಳನಾಮ ಅಧ್ಯಯನವು ಮಬ್ಬುಕವಿದ ಹಲವಾರು ಕ್ಷೇತ್ರಗಳಿಗೆ ಹೊಸ ಬೆಳಕಿನ ಪ್ರವಾಹವನ್ನು ಹರಿಸಬಲ್ಲದು. ನಮ್ಮ ಇತಿಹಾಸದ ಕಪ್ಪು ಹಾದಿಯನ್ನು ಬೆಳಗಿಸಬಲ್ಲದು. "ಚರಿತ್ರೆ ನಿರುತ್ತರವಾದಲ್ಲಿ ಸ್ಥಳನಾಮ ಉಸುರುತ್ತದೆ" ಎಂಬ ಮಾತು ಅಕ್ಷರಶಃ ಸತ್ಯ. ಚರಿತ್ರೆ ಮತ್ತು ಸಂಸ್ಕೃತಿ ಒಂದು ನಾಣ್ಯದ ಎರಡು ಮುಖಗಳಿದ್ದಂತೆ ಚರಿತ್ರೆ ಮಾನವನ ಸರ್ವ ವಿಕಾಸಗಳ ಮಜಲುಗಳನ್ನು ಅದರ ವಿಶಿಷ್ಟ ಹಾಗೂ ಸತ್ಯಸ್ಸ ಸತ್ಯ ಘಟನಾವಳಿಗಳನ್ನು ವಾಸ್ತವ ಸತ್ಯಕ್ಕೆ ಹತ್ತಿರವಾಗಿ ನಿರೂಪಿಸುವ ಒಂದು ಪ್ರಮಾಣಬದ್ಧ ದಾಖಲೆಯಾಗಿದೆ. ಒಂದು ಜನಾಂಗದ, ಒಂದು ಸಂಸ್ಕೃತಿ, ಒಂದು ರಾಷ್ಟ್ರದ ಸಮಗ್ರ ಇತಿಹಾಸದ ನೈಜ ನಿರೂಪಣೆಯ ಕಠಿಣ ಮತ್ತು ಪ್ರಾಮಾಣಿಕ ಕಾಯಕದಲ್ಲಿ ಒಂದು ವ್ಯಕ್ತಿಯ ಮನೆತನದ, ಊರಿನ ಜನಾಂಗಗಳ ಏಳು ಬೀಳು, ಸೋಲು ಗೆಲುವುಗಳು ವಿಶಿಷ್ಟತೆಗಳು ಇತಿಹಾಸದ ಜ್ವಲಂತ ಮತ್ತು ಜೀವಂತ ರೇಖೆಗಳಾಗುತ್ತವೆ. ಇವುಗಳನ್ನು ಆಯಾಯಾ ಸ್ಥಳಗಳಿಗೆ ಹೋಗಿ, ಆ ಜನಾಂಗಗಳೊಡನೆ ಸಂಸ್ಕೃತಿಯೊಡನೆ,

ವಿವಿಧ ವಯೋಮಾನದ ಅನುಭವಶೀಲ ವಕ್ತೃಗಳೊಡನೆ ಬೆರೆತು ಅಭಿಪ್ರಾಯ ವಿನಿಮಯ ಮಾಡಿಕೊಂಡು ಸ್ವಂತಃ ಅವುಗಳನ್ನು ಅವುಗಳ ಬೆನ್ನೆಲುಬಾಗಿ ಉಳಿದಿರಬಹುದಾದ ಕಣ್ಸತ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಯಾವುದೇ ಜಾತಿ, ಪಂಗಡ, ಭಾಷೆ, ಸಾಮಾಜಿಕ ಸ್ತರಗಳ ಹಂಗಿಗೆ ಒಳಗಾಗದೇ ವೈಜ್ಞಾನಿಕವಾಗಿ, ನಿಷ್ಪಕ್ಷಪಾತವಾಗಿ ವಿಷಯ ಸಂಗ್ರಹಣೆ ಮಾಡಿ ಅವುಗಳ ಮೂಲಕ ಅತಿ ಎಚ್ಚರದಿಂದ ಕಟ್ಟಿಕೊಡುವ ವಿವಿಧ ಕಾಲಮಾನಗಳ ಚರಿತ್ರೆಯಲ್ಲಿ ಸ್ಥಳನಾಮಗಳು ಅಡಗಿರುತ್ತವೆ ಎಂಬುದು ಗಮನಾರ್ಹ ಸಂಗತಿ ಎನ್ನಬಹುದು.

ಚರಿತ್ರೆಯೊಂದಿಗೆ ಸ್ಥಳನಾಮ ಅಧ್ಯಯನವೆಂದರೆ, ಬಹುತೇಕ ನಮ್ಮ ಮಾರ್ಗ ಇತಿಹಾಸ ಹೇಳುವುದು ಎಂದು ಭಾವಿಸುವಂತೆ ಮಾಡುತ್ತದೆ. ಸ್ಥಳನಾಮಗಳನ್ನು ನಾವು ವಿಶಿಷ್ಟ ಐತಿಹಾಸಿಕ ಆಕರಗಳಾಗಿ ಪರಿಗಣಿಸಲು ಸಾಧ್ಯವಿದೆ. ಸ್ಥಳನಾಮಗಳ ಚಾರಿತ್ರಿಕ ಅಧ್ಯಯನದಲ್ಲಿ ಎರಡು ಬಗೆಯ ವಿಶ್ಲೇಷಣೆ ಸಾಧ್ಯವಾಗುತ್ತದೆ. ಒಂದು - ಸ್ಥಳನಾಮಗಳ ಮೂಲಕ ಭಾಷೆಯ ಚಾರಿತ್ರಿಕ ಅಧ್ಯಯನ ಹಾಗೂ ಸ್ಥಳನಾಮಗಳಿಂದ ಚರಿತ್ರೆಯ ನಿರ್ವಚನ. ಎರಡು - ಇತಿಹಾಸದ ಮೂಲಕ ಸ್ಥಳನಾಮಗಳನ್ನು ಅವಲೋಕಿಸುವುದು. ಒಂದು ಸ್ಥಳದ ಹೆಸರನ್ನು ಅಥವಾ ಅದರ ರೂಪವನ್ನು ನೋಡಿ ಪ್ರಾದೇಶಿಕ ಚರಿತ್ರೆಯನ್ನು ಊಹಿಸುವುದು ಅದರಂತೆ ಆ ಸ್ಥಳನಾಮಗಳಲ್ಲಿ ಉಂಟಾದಂತಹ ಕಾಲಾಂತರದ ಭಾಷಿಕ ಬದಲಾವಣೆಗಳನ್ನು ಗುರುತಿಸುವುದು. ಈ ಎರಡೂ ಕ್ರಮಗಳಲ್ಲಿ ಮಾಡಬೇಕಾದ ಅತಿ ಮುಖ್ಯ ಅಂಶಗಳಾಗಿರುತ್ತವೆ.''[೧] ಇತಿಹಾಸದ ಮೂಲಕ ಸ್ಥಳನಾಮಗಳನ್ನು ಅಧ್ಯಯನ ಮಾಡಬಹುದು. ಅಂದರೆ ಈ ಮಾದರಿಯಲ್ಲಿ ಒಂದು ನಿರ್ಧಿಷ್ಟ ಪ್ರದೇಶದಲ್ಲಿ ನಡೆದಂತಹ ರಾಜ್ಯಪ್ರಭುತ್ವ, ಯಜಮಾನಿಕೆ, ಆಡಳಿತ ವಿಭಾಗಗಳು, ಆಯಾ ರಾಜಪ್ರಭುತ್ವದಲ್ಲಿ ನಡೆದಂತಹ ಬದಲಾವಣೆ, ಅವರ ನಾಡಿನ ಬದಲಾವಣೆ, ಉದ್ಭವವಾದ ನಾಡಿನ ವಿಭಾಗಗಳು, ಅವುಗಳಿಗೆ ಇಟ್ಟ ಕಾಲಕ್ರಮದ ಹೆಸರುಗಳು, ಇಟ್ಟ ಹೆಸರು ಅಳಿಸಿ ಪ್ರತಿನಾಮಗಳ ಮಾಡಿದ ಬಗೆ, ಹೊಸ ಹೊಸ ಗ್ರಾಮಗಳ ನಿರ್ಮಾಣ, ಗ್ರಾಮಗಳಿಗೆ ನೀಡಿದ ದಾನ-ದತ್ತಿಗಳ ವಿವರ ಹೀಗೆ ಹಲವಾರು ಸಂದರ್ಭಗಳು, ಆಯಾ ಕಾಲದ ಸಾಮಾಜಿಕ ಜನಜೀವನವನ್ನು ಚಿತ್ರಿಸುವ ಪ್ರಾತಿನಿಧಿಕ ಸ್ಥಳನಾಮಗಳಿವೆ. ಐತಿಹಾಸಿಕ ಮಹತ್ವವುಳ್ಳ ಸ್ಥಳನಾಮಗಳ ಚಾರಿತ್ರಿಕ ಅಧ್ಯಯನವೆಂದರೆ, ಅದೊಂದು ರೀತಿಯಲ್ಲಿ ಸಾಂಸ್ಕೃತಿಕ ಅಧ್ಯಯನ ಎಂದು ಭಾವಿಸಬಹುದು. ''ಒಂದು ಗ್ರಾಮದ ಅಥವಾ ಸ್ಥಳದ ಹೆಸರು, ಅದರ ನಿರ್ಮಾಣ ಬೆಳವಣಿಗೆಯಲ್ಲಿ ಐತಿಹಾಸಿಕ, ಭಾಷಿಕ, ಸಾಮಾಜಿಕ ಸಾಮಗ್ರಿಯಿರುತ್ತದೆ. ಇದರಿಂದ ಒಂದು ಸಂಸ್ಕೃತಿಯ ಅನಾವರಣ ಸಾಧ್ಯವಾಗುತ್ತದೆ. ದೇಶದ ಸಾಂಸ್ಕೃತಿಕ ಇತಿಹಾಸ ರಚನೆಯಲ್ಲಿ ಗ್ರಾಮಗಳ ಪಾತ್ರಬಹುಪಾಲು ಇದೆ. ವಿಶಿಷ್ಟ ಪರಿಸರ. ವಿಶೇಷ ಘಟನೆ, ಅದರ ಹಿನ್ನೆಲೆಯಲ್ಲಿ ರಚಿತಗೊಂಡ ಪ್ರತಿಗ್ರಾಮವೂ ಇತಿಹಾಸ ಕೋಶವನ್ನು ನೇಯುತ್ತವೆ.''[೨] ಐತಿಹಾಸಿಕವಾಗಿ ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಬೆಳೆದುನಿಂತ ಗ್ರಾಮಗಳ ಅಧ್ಯಯನ ಇಂದು ಅತ್ಯವಶ್ಯ ಹಾಗೂ ಅನಿವಾರ್ಯವೂ ಆಗಬೇಕಿದೆ.

ಸ್ಥಳನಾಮಗಳು ಪ್ರಾಚೀನ ಸಾಂಸ್ಕೃತಿಕ ಅಧ್ಯಯನಕ್ಕೆ ಬಹುಮುಖ್ಯ ಆಕರಗಳಾಗಿವೆ. ಸಾಂಸ್ಕೃತಿಕ ಇತಿಹಾಸ ರಚನೆಗೆ ಶಾಸನಗಳು ಮತ್ತು ಕಾವ್ಯಗಳು ಕ್ರಮವಾಗಿ ಪ್ರಥಮ ಹಾಗೂ ಅನುಷಂಗಿಕ ಆಕರಗಳಾಗಿವೆ. ಇವುಗಳಂತೆ ಸ್ಥಳದ ಹೆಸರುಗಳೂ ಮೂಲ ಆಕರಗಳಾಗಿ ಪ್ರಬಲ ಆಧಾರಗಳನ್ನು ನೀಡುತ್ತವೆ. ‘‘ಸ್ಥಳನಾಮಗಳಂತಹ ಸಾಮಾನ್ಯ ವಿಷಯದಲ್ಲಿ ಅಪೂರ್ವವಾದ ಸಂಗತಿಗಳು ಹುದುಗಿಸಿಕೊಂಡಿವೆ. ಅದೆಷ್ಟೋ ಅಜ್ಞಾತ ವಿಷಯಗಳು ಬೆಳಕಿಗೆ ಬರಲಿವೆ. ಸೂಕ್ಷ್ಮವಾಗಿ ವಿಮರ್ಶಿಸಿದಷ್ಟು ಹಿಂದೆ ಆಗಿಹೋದ ಅನೇಕ ಪ್ರಾಚೀನ-ಐತಿಹಾಸಿಕ ಘಟನೆಗಳಿಗೆ ಶಾಸನಾಧಿಗಳಲ್ಲಿ ದೊರೆಯದ ಆಧಾರಗಳು ಎಡೆಗಳ ಹೆಸರಿನಲ್ಲಿ ಸಿಕ್ಕುತ್ತವೆ. ಇತಿಹಾಸವು ಯಾರ ಹೆಸರನ್ನು ಕಡೆಗಣಿಸಿ ತೀರಾ ಸಾಮಾನ್ಯರೆಂದು ಅವರನ್ನು ಉಲ್ಲೇಖಿಸುವುದಿಲ್ಲವೋ ಅಂತಹ ಅನೇಕಾನೇಕ ಅರಸರು, ನಾಯಕರು, ಗೌಡರು, ಗೌಡತಿಯರು, ಕುರುಬರು, ಗೊಲ್ಲರು ಮೊದಲಾದವರು ತಮ್ಮ ಹೆಸರಿನ ಹಟ್ಟಿ-ಊರುಗಳನ್ನು ಕಟ್ಟಿಕೊಂಡು ತಮ್ಮ ಮಟ್ಟಿಗೆ ಅಜರಾಮರರಾಗಿದ್ದಾರೆ. ಪುರಾಣಗಳಿಗೆ ಪೂರಕವಾಗಿ ಪೋಷಕವಾಗಿ ಇರುವ ಹಲವು ಕತೆಗಳಿಗೆ ಆಧಾರವಾದ ಯಾತ್ರಾತೀರ್ಥ ಗ್ರಾಮಗಳ ಹೆಸರುಗಳಿವೆ. ನಮ್ಮ ನಾಡಿನಲ್ಲಿ ಬಂದು ಹೋದ ಹಲವು ಧರ್ಮ-ಸಂಸ್ಕೃತಿಗಳ ಮಹಾಪ್ರವಾಹದ ಕುರುಹುಗಳನ್ನು ತೋರುವ ಎಡೆಗಳಿಂದ ತಿಳಿದುಕೊಳ್ಳಬಹುದು.’’[೩] ಎನ್ನುವಲ್ಲಿ ಸ್ಥಳನಾಮಗಳನ್ನು ಸಾಮಾನ್ಯ ವಿಷಯ ಎಂದು ಶಂಬಾ ಜೋಶಿಯವರು ಕರೆದಿರುವುದು ಅವುಗಳನ್ನು ಹಾಗೆ ಭಾವಿಸಲಾಗಿದೆ ಎಂಬ ಅರ್ಥದಲ್ಲಿ ಹೇಳಲಾಗಿದೆ. ಇತಿಹಾಸಕಾರರ ಅವಜ್ಞೆಗೆ ಒಳಗಾದ ಈ ರೀತಿಯ ಸಾಮಾನ್ಯ ವಿಷಯವೆಂದು ಭಾವಿಸಲಾದ ಮಾಹಿತಿಗಳಿಂದ, ಚರಿತ್ರೆಯನ್ನು, ಸಂಸ್ಕೃತಿಯನ್ನು ಕಟ್ಟುವುದು ತುಂಬಾ ಸಫಲವಾಗಿ ಫಲಿತ ನೀಡಿದ್ದು ಶಂಭಾ ಜೋಶಿಯವರಲ್ಲಿ ಎಂದು ಹೇಳಬಹುದು. ಒಂದು ಪ್ರಾದೇಶಿಕ ಚರಿತ್ರೆ ಅಲ್ಲಿನ ನಾಯಕರು, ಪಾಳೆಗಾರರು, ಹಲವಾರು ಸಮುದಾಯಗಳು ಕಟ್ಟಿಕೊಂಡ ಊರುಗಳು, ನಿರ್ಮಿಸಿದ ಕೋಟೆ-ಕೊತ್ತಲ ಕೆರೆ-ಕುಂಟೆ-ಕಾಲುವೆ ಮುಂತಾದವು ಅವರ ಬದುಕಿನ ಅಂಗವಾಗಿ. ಅವರು ಅವುಗಳಿಗೆ ತಮ್ಮದೇ ಆದ ಪ್ರಾದೇಶಿಕ ಪ್ರಾತಿನಿಧಿಕ ನಾಮಕರಣ ಮಾಡಿದ್ದಾರೆ. ಸಾಂಸ್ಕೃತಿಕ ಬದುಕಿನ ಒಟ್ಟುನೋಟವನ್ನು ಸ್ಥಳನಾಮಗಳ ಇತಿಹಾಸದಿಂದಲೇ ಅಳೆಯುವುದು ಸಾಧ್ಯವಿಲ್ಲವಾದರೂ, ಪ್ರಾಮಾಣಿಕವಾಗಿ ತನ್ನ ಮಟ್ಟಿನ ಬೆಳಕನ್ನು ಚರಿತ್ರೆಯ ಮೇಲೆ ಬೀರುತ್ತದೆ. ಒಂದು ದೇಶದ ಇತಿಹಾಸ ನಿರ್ವಚನ ಸಂದರ್ಭದಲ್ಲಿ ಈವರೆಗೆ ಇತಿಹಾಸಕಾರರ ಗಮನಕ್ಕೆ ಸ್ಥಳನಾಮಗಳು ಮಹತ್ವದ ಆಕರಗಳಾಗಿ ತೋರಿಬಂದಿಲ್ಲವೆಂದರೆ ತಪ್ಪಾಗಲಾರದು. ಬಹುಶಃ ಇಂತಹ ಸಾಮಗ್ರಿಯನ್ನು ಮೂಲ ಆಕರಗಳಾಗಿ ಭಾವಿಸಿಲ್ಲವೆಂದು ಮನಗಾಣಬಹುದು. ಆದರೆ ಇತ್ತೀಚಿನ ಕಾಲಘಟ್ಟದಲ್ಲಿ ಭಾಷಾತಜ್ಞರು ಸ್ಥಳನಾಮಗಳ ಅಧ್ಯಯನವನ್ನು ಆರಂಭಿಸಿದ್ದಾರೆ. ಇದರಿಂದ ಒಂದು ಕಡೆಭಾಷಿಕ ಅಧ್ಯಯನ ಅದೇ ವೇಳೆಗೆ ನಾಡಿನ ‘ಸಾಂಸ್ಕೃತಿಕ ಅಧ್ಯಯನಕ್ಕೆ ಬಹುಮುಖ್ಯ ಫಲಿತ ನೀಡಬಲ್ಲ ಆಕರಗಳೆಂದು ಪರಿಗಣಿಸಿದ್ದಾರೆ. ಈ ಹಿನ್ನೆಲೆಯಿಂದ ಚರಿತ್ರೆಯೊಂದಿಗೆ ಬೆಸೆದುಕೊಂಡ ಸ್ಥಳನಾಮಗಳನ್ನು ಚಾರಿತ್ರಿಕ ಅಧ್ಯಯನ ದೃಷ್ಟಿಕೋನದಿಂದ ವಿಶ್ಲೇಷಿಸಿ ಚರ್ಚಿಸಲು ಪ್ರಯತ್ನಿಸಲಾಗಿದೆ.

ಮೊಳಕಾಲ್ಮೂರು ತಾಲ್ಲೂಕಿನ ಚಾರಿತ್ರಿಕ ಹಿನ್ನಲೆಯನ್ನು ಅವಲೋಕಿಸುವ ಸಂದರ್ಭದಲ್ಲಿ ಈ ಪ್ರದೇಶವನ್ನು ಪ್ರತ್ಯೇಕವಾಗಿ ಯಾವರಾಜ ಮನೆತನವೂ ಆಳ್ವಿಕೆ ನಡೆಸಿಲ್ಲ. ವಿವಿಧ ಕಾಲಘಟ್ಟಗಳಲ್ಲಿ ಕರ್ನಾಟಕವನ್ನು ಆಳಿದ ಪ್ರಮುಖ ರಾಜಮನೆತನಗಳ ಸಾಮ್ರಾಜ್ಯದೊಳಗೆ ಈ ಭಾಗವು ಸೇರಿತ್ತು. ಅಲ್ಲದೇ ಅನೇಕ ಸಾಮಂತರು ಇಲ್ಲಿ ಆಡಳಿತ ನಡೆಸಿರುವುದು ಆಧಾರಗಳಿಂದ ದೃಢಪಡುತ್ತದೆ.

ಭೌಗೋಳಿಕ ವ್ಯಾಪ್ತಿಯಿಂದ ಮೊಳಕಾಲ್ಮೂರು ಪ್ರದೇಶ(ಪರಿಸರ)ದ ಸ್ಥಳನಾಮ ಚರಿತ್ರೆಯನ್ನು ಸಂಕ್ಷಿಪ್ತವಾಗಿ ವಿಶ್ಲೇಷಿಸಲಾಗಿ ಅಧ್ಯಯನ ಕೈಗೊಳ್ಳಲಾಗಿದೆ.

೫.೧. ಮೌರ್ಯರು

ಮೊಳಕಾಲ್ಮೂರು ತಾಲ್ಲೂಕಿನ ಬ್ರಹ್ಮಗಿರಿ, ಅಶೋಕ ಸಿದ್ದಾಪುರ, ಜಟಂಗಿ ರಾಮೇಶ್ವರಗಳಲ್ಲಿ ಅಶೋಕನ ಶಿಲಾ ಶಾಸನಗಳಿಂದ ಮೌರ್ಯರ ನೇರ ಆಡಳಿತ ಇದ್ದಿದ್ದು ತಿಳಿಯುತ್ತದೆ. ಬ್ರಹ್ಮಗಿರಿಯ ಸಮೀಪದಲ್ಲಿ ಇಟ್ಟಿಗೆಗಳಿಂದ ನಿರ್ಮಿಸಿದ ಚೈತ್ಯಾಲಯವಲ್ಲದೆ ಮೌರ್ಯರ ಕಾಲದ ಅನೇಕ ಅವಶೇಷಗಳು ದೊರೆತಿದ್ದು ಶೇಷಾದ್ರಿ ಮತ್ತಿತರ ಪ್ರಾಕ್ತನ ಶಾಸ್ತ್ರಜ್ಞರು ಹಾಗೂ ಇತಿಹಾಸಕಾರರು ಬ್ರಹ್ಮಗಿರಿ ಶಾಸನದಲ್ಲಿ ಉಲ್ಲೇಖನಾದ 'ಇಸಿಲ' ಎಂಬ ನಗರ ಬ್ರಹ್ಮಗಿರಿಯೇ ಆಗಿದ್ದಿತ್ತೆಂದು ಅಭಿಪ್ರಾಯ ಪಡುತ್ತಾರೆ. 'ಇಸಿಲ' ಎಂಬ ಸ್ಥಳವಾಚಿ ಪದವು ಅತ್ಯಂತ ಪ್ರಾಚೀನ ಕನ್ನಡ ಪದವೆಂದು ಡಿ.ಎಲ್ .ನರಸಿಂಹಾಚಾರ್ಯರು ಅಭಿಪ್ರಾಯಪಡುತ್ತಾರೆ. ಅವರು ಮುಂದುವರೆದು 'ಇಸಿಲ'ವು ಬಹುತೇಕ ಆರ್ಯೇತರ ಪದ. ದ್ರಾವಿಡವೇ ಆಗಿರಬೇಕು. ತಮಿಳಿನಲ್ಲಿ 'ಇಸಿಲ'ಕ್ಕೆ ಸಂವಾದಿಯಾದ 'ಎಯಿಲ್' ಪದವಿದೆ. 'ಎಯಿಲ್' ಎಂದರೆ, ಕೋಟೆ, ಕೋಟೆಯ ಗೋಡೆ ಎಂದರ್ಥ. ಆದ್ದರಿಂದ 'ಇಸಿಲ' ಕನ್ನಡ ಪದ. ಅದರ ಅರ್ಥ ಕೋಟೆ ಅಥವಾ ಕೋಟೆಯೊಳಗಿನ ಊರು.

ಬ್ರಹ್ಮಗಿರಿ ಶಾಸನದಲ್ಲಿ ಹೇಳಿರುವ ಮಹಾಮಾತ್ರರು ಮತ್ತು ಆರ್ಯಪುತ್ರರು 'ಇಸಿಲ'ದ ಮಹಾಮಾತ್ರರಿಗೆ ರಾಜಾಜ್ಞೆಗಳನ್ನು ತಿಳಿಸಿದ ಉಲ್ಲೇಖವಿದೆ. ಇಲ್ಲಿ ಆರ್ಯಪುತ್ರ ಎಂದರೆ, ಯುವರಾಜನಿಗೆ ಸಂಬಂಧಿಸಿದ ಪದವಾಗಿದ್ದು, ಸಹಜವಾಗಿಯೇ ಈ ಭಾಗ ಸಾಮ್ರಾಜ್ಯದ ಆಡಳಿತದ ಪ್ರಾಂತ್ಯಗಳೊಂದಾಗಿತ್ತು. ಈ ಆಡಳಿತ ವಿಭಾಗಕ್ಕೆ ಮಹಾಮಾತ್ರರೆಂಬ ಅಧಿಕಾರಿಯು ನೇಮಕಗೊಂಡಿದ್ದನು. ಅಶೋಕನ ಶಾಸನದಲ್ಲಿ ಉಲ್ಲೇಖಿತವಾದ 'ಸುವರ್ಣಗಿರಿ'ಯು ಹಿರಿಯ ಆಡಳಿತ ವಿಭಾಗವಾಗಿದ್ದು, ಇದು ಬ್ರಹ್ಮಗಿರಿಯೇ ಆಗಿರಬಹುದೆಂಬ ಅಭಿಪ್ರಾಯವನ್ನು ಬಹುಮಟ್ಟಿಗೆ ಒಪ್ಪಲಾಗಿದೆ. ಅಲ್ಲದೆ, ಕರ್ನಾಟಕದ ಬೌದ್ಧಧರ್ಮದ ಅತ್ಯಂತ ಪ್ರಾಚೀನ ಕುರುಹುಗಳು ಸಿಕ್ಕಿದ್ದು, ಸಿದ್ದಾಪುರ, ಜಟಂಗಿ ರಾಮೇಶ್ವರ ಮತ್ತು ಬ್ರಹ್ಮಗಿರಿಯಲ್ಲಿ ಎಂದು ಚಿದಾನಂದಮೂರ್ತಿಯವರು ಅಭಿಪ್ರಾಯಪಟ್ಟಿದ್ದಾರೆ. ಬ್ರಹ್ಮಗಿರಿ ಪರಿಸರದಲ್ಲಿನ 'ಇಸಿಲ' ಎಂಬ ಊರು ಆ ಪ್ರದೇಶದಲ್ಲಿ ಈಗ ಇಲ್ಲ. ಆದರೆ ಬ್ರಹ್ಮಗಿರಿಗೆ ಕೂಗಳತೆಯ ದೂರದಲ್ಲಿರುವ 'ಹೊಸಕೋಟೆ'

ಎಂಬ ಗ್ರಾಮವು 'ಇಸಿಲ'ವೇ ಆಗಿರಬಹುದೆಂದು ಊಹಿಸಬಹುದಾಗಿದೆ. ಇಲ್ಲಿ ದೊರೆಯುವ ಒಂದು ಶಾಸನದಲ್ಲಿ 'ಇಸಿಲ' ಎಂಬ ಪದವು ಪ್ರಯೋಗವಿದೆ. ಇದು ಒಂದು ಗ್ರಾಮವೆಂದು ತಿಳಿಯುತ್ತದೆ. ಇದು ಕನ್ನಡ ಶಾಸನೋಕ್ತ ಪ್ರಥಮ ಗ್ರಾಮವೆಂದು ಹೇಳಬಹುದು. ಹಾಗೆಯೇ ಅಶೋಕನು ಆಳಿದ ಈ ಪ್ರದೇಶಕ್ಕೆ ಈಗಲೂ ಅಶೋಕ ಸಿದ್ದಾಪುರ ಎಂದು, ಅವನ ಹೆಸರನ್ನೇ ನಾಮಕರಣಗೊಳಿಸಿ 'ಅಶೋಕ ಸಿದ್ದಾಪುರ' ಎಂದು ಕರೆದಿದ್ದಾರೆ. ಈಗಲೂ ಬ್ರಹ್ಮಗಿರಿಯ ತಪ್ಪಲಲ್ಲಿ ಅಶೋಕ ಸಿದ್ಧಾಪುರ ಎಂಬ ಗ್ರಾಮವಿದೆ.

ಒಟ್ಟಾರೆ ಮೊಳಕಾಲ್ಮೂರು ಪರಿಸರವು ಮೌರ್ಯರ ಆಡಳಿತಕ್ಕೆ ಒಳಪಟ್ಟಿದ್ದು ಇದರಿಂದ ಬಂದ ಉದಾತ್ತ ಧ್ಯೇಯ, ಆಡಳಿತ ಪದ್ಧತಿ ಹಾಗೂ ಧಾರ್ಮಿಕ ಸಹಿಷ್ಣುತೆಯನ್ನು ಮುಂದೆ ಈ ಭಾಗದಲ್ಲಿ ಏಳಿಗೆಗೆ ಬಂದ ರಾಜಮನೆತನದವರು ಮುಂದುವರಿಸಿಕೊಂಡು ಹೋದರೆಂದು ಹೇಳಬಹುದು.

೫.೨. ಶಾತವಾಹನರು

ಮೌರ್ಯ ಸಾಮ್ರಾಜ್ಯ ಪತನಾನಂತರ ಶಾತವಾಹನರು ರಾಜಕೀಯ ರಂಗ ಪ್ರವೇಶಿಸಿದರು. ಇವರನ್ನು ಆಂಧ್ರರು, ಆಂಧ್ರ ಬೃತ್ಯರು, ಶಾತಕರ್ಣಿಗಳು ಇನ್ನು ಮುಂತಾದ ಹೆಸರುಗಳಿಂದ ಕರೆಯಲಾಗಿದೆ.

ಮೊಳಕಾಲ್ಮೂರು ಪರಿಸರದ ಕೆಲವೊಂದು ಭಾಗಗಳಲ್ಲಿ ಶಾತವಾಹನ ಕಾಲದ ಅವಶೇಷಗಳು ಕಂಡುಬಂದಿವೆ. ೧೯೪೭ರಲ್ಲಿ ಸರ್ ಮಾರ್ಟಮರ್ ವೀಲ್ಹರ್ ರವರು ಬ್ರಹ್ಮಗಿರಿ ನೆಲೆಯನ್ನು ಉತ್ಖನನ ಮಾಡಿದರು. ಮೇಲಿನ ಒಂದರಿಂದ ಆರು ಪದರುಗಳಲ್ಲಿ ಇಟ್ಟಿಗೆ ಚೂರುಗಳು, ಕಬ್ಬಿಣ ಮತ್ತಿತರ ಲೋಹದ ವಸ್ತುಗಳು, ಕಲ್ಲು, ಮಣ್ಣು, ದಂತ ಹಾಗೂ ಲೋಹದ ಬಳೆಗಳು, ಮಣಿಗಳು, ಬಿಳಿಬಣ್ಣದ ರೇಖಾಚಿತ್ರವುಳ್ಳ ಕಪ್ಪು-ಕೆಂಪು ಬಣ್ಣದ ಮಡಿಕೆಗಳು ದೊರೆತವು. 'ವೀಲ್ಹರ್ 'ರವರು ಇದನ್ನು 'ಆಂಧ್ರ ಸಂಸ್ಕೃತಿ' ಎಂದು ಕರೆದಿದ್ದಾರೆ. ಶಾತವಾಹನರ ಕಾಲಕ್ಕೆ ಸಂಬಂಧಿಸಿದ ಯಾವ ಶಾಸನಗಳು ಮೊಳಕಾಲ್ಮೂರು ಪರಿಸರದಲ್ಲಿ ದೊರೆತಿಲ್ಲ.

೫.೩. ಕದಂಬರು

ಮೊಳಕಾಲ್ಮೂರು ಪ್ರದೇಶವನ್ನು ಆಳಿದ ಪ್ರಮುಖ ರಾಜಮನೆತನಗಳಲ್ಲಿ ಕದಂಬರ ಮನೆತನವೂ ಒಂದಾಗಿದೆ. ಅಷ್ಟೇ ಅಲ್ಲ ಈ ನಾಡನ್ನಾಳಿದ ಪ್ರಥಮ ಕನ್ನಡದ ರಾಜಮನೆತನ ಇದಾಗಿದೆ. ಕದಂಬ ದೊರೆಗಳಾದ ಅಜವರ್ಮ, ಬೆಂಚರಸ ದೇವರೆಂಬ ರಾಜರು ಇಲ್ಲಿ ಆಳಿದಂತೆ ಶಾಸನಗಳಿಂದ ತಿಳಿದುಬಂದಿದೆ. ಕದಂಬರು ಬ್ರಾಹ್ಮಣರು ಇವರ ಮೂಲ ಪುರುಷ ಮಯೂರಶರ್ಮ. ಈತನು ಸೊರಬ ತಾಲ್ಲೂಕು ತಾಳಗುಂದದವನು. ಕಂಚಿಗೆ ವೇದಾಧ್ಯಯನ ಮಾಡಲು ಹೋದಾಗ ಅಲ್ಲಿಯ ಪಲ್ಲವ ಅರಸನಿಂದ ಅವಮಾನಿತನಾಗಿ ಆ ಛಲದ ಮೇಲೆ ಕ್ಷಾತ್ರಧರ್ಮವನ್ನು ಸ್ವೀಕರಿಸಿ "ಮಯೂರವರ್ಮ"ನೆಂದು

ಹೆಸರಿಟ್ಟುಕೊಂಡನು. ಮೊಳಕಾಲ್ಮೂರಿನ ಬಳಿ ಇರುವ ಉಚ್ಚಂಗಿದುರ್ಗ (ಹಿರೇಆರ್ಯರ ಗುಡ್ಡ-ಹಿರಾನನಗುಡ್ಡ) ಅವನ ಉಪರಾಜಧಾನಿಗಳಲ್ಲಿ ಒಂದಾಗಿತ್ತು. ತಾಳಗುಂದದ ಶಾಸನದಲ್ಲಿ ಶ್ರೀಪರ್ವತದ ಬಳಿ ಪಲ್ಲವರ ಗಡಿ ರಕ್ಷಣಾ ಪಡೆಯನ್ನು ಸೋಲಿಸಿ ಅಲ್ಲಿನ ಘೋರಾರಣ್ಯದಲ್ಲಿ ಠಾಣ್ಯಹೂಡಿ, ಪಲ್ಲವರ ಅಧೀನರಾಗಿದ್ದ ಬೃಹದಾಣರು ಇನ್ನು ಮುಂತಾದವರಿಂದ ಕಪ್ಪುಕಾಣಿಕೆಯನ್ನು ಪಡೆದದ್ದು ಅಲ್ಲದೆ ಪಶ್ಚಿಮ ಸಮುದ್ರದಿಂದ ಪೇಹಾರದವರೆಗಿನ ಪ್ರದೇಶವನ್ನು ಪಲ್ಲವರಿಂದ ಪಡೆದುಕೊಂಡನೆಂದು ಉಕ್ತವಾಗಿದೆ. ಈ ಶಾಸನದಲ್ಲಿನ 'ಶ್ರೀ ಪರ್ವತ'ವೆಂಬುದಕ್ಕೆ 'ತ್ರಿಪರ್ವತ'ವೆಂಬ ಭಿನ್ನಪಾಠವಿರುವಂತೆ ತೋರುತ್ತದೆಯೆಂದು ಶ್ರೀಗೋವಿಂದ ಪೈಗಳು ಅಭಿಪ್ರಾಯಪಡುತ್ತಾರೆ. ಈ ತ್ರಿಪರ್ವತವನ್ನು ಅವರು ಮೊಳಕಾಲ್ಮೂರು ತಾಲ್ಲೂಕಿನ ನುಂಕೆಮಲೆಯ ಹತ್ತಿರವಿರುವ ಉಚ್ಚಂಗಿದುರ್ಗ (ಹಿರಾಣಗುಡ್ಡ) ಎಂಬ ಬೆಟ್ಟಗಳೊಂದಿಗೆ ಸಮೀಕರಿಸಿದ್ದಾರೆ. "ಮೊಳಕಾಲ್ಮೂರುವಿನ ಉತ್ತರದಲ್ಲಿ ಉದ್ದಕ್ಕೂ ಗೋಡೆಯಂತೆ ಹಬ್ಬಿರುವ ಪರ್ವತ ಶ್ರೇಣಿಗೆ 'ಕದಂಬಗುಡ್ಡ'ವೆನ್ನುತ್ತಾರೆ. ಕದಂಬರ ಮೂಲ ಪುರುಷನಾದ ಮಯೂರಶರ್ಮನು ಬ್ರಾಹ್ಮಣನಾಗಿದ್ದು, ವಿದ್ಯಾಭ್ಯಾಸಕ್ಕಾಗಿ ಕಂಚಿಗೆ ಹೋದಾಗ ಪಲ್ಲವ ಅರಸರಿಂದ ಅವಮಾನಗೊಂಡು ಛಲದಿಂದ ಕ್ಷತ್ರಿಯ ಧರ್ಮ ಸ್ವೀಕರಿಸಿ 'ಮಯೂರವರ್ಮ'ನೆಂದು ನಾಮಾಂಕಿತನಾಗಿ, ಮೊಳಕಾಲ್ಮೂರು ತಾಲ್ಲೂಕಿನ ಉಚ್ಚಂಗಿ ದುರ್ಗದ ಒರಾರಗುಡ್ಡ (ಹಿರೇ ಆರ್ಯರ ಗುಡ್ಡ)ದಲ್ಲಿ ರಾಜ್ಯ ಸ್ಥಾಪನೆ ಮಾಡಿದ ಸ್ಥಳಕ್ಕೆ 'ಹಿರೇ ಆರ್ಯರ ಗುಡ್ಡ'ವೆಂದೂ ನುಂಕೇದೇವರು ನೆಲಸಿದ ಸ್ಥಳಕ್ಕೆ ನುಂಕಪ್ಪಗುಡ್ಡವೆಂದು 'ಕದಂಬಗುಡ್ಡ' 'ಹಿರೇ ಆರ್ಯರ ಗುಡ್ಡ', 'ನುಂಕಪ್ಪನಗುಡ್ಡ' ಈ ಮೂರು ಗುಡ್ಡಗಳಿಗೆ ತ್ರಿಕೂಟಾದ್ರಿ ಅಥವಾ ತ್ರಿಪರ್ವತವೆಂದಿದ್ದಾರೆ."[೪]

೫.೪. ರಾಷ್ಟ್ರಕೂಟರು

ಮೊಳಕಾಲ್ಮೂರು ಪರಿಸರದಲ್ಲಿ ರಾಷ್ಟ್ರಕೂಟರ ಆಳ್ವಿಕೆಗೆ ಸಂಬಂಧಿಸಿದ ಕುರುಹುಗಳು ದೊರೆತಿವೆ. ಜಟಂಗಿ ರಾಮೇಶ್ವರ ಬೆಟ್ಟದಲ್ಲಿರುವ ಕ್ರಿ.ಶ.೯೬೧ರ ಶಿಲಾಶಾಸನವು ರಾಷ್ಟ್ರಕೂಟರ ಮೂರನೆಯ ಕೃಷ್ಣ ಆಳ್ವಿಕೆಗೆ ಸಂಬಂಧಿಸಿದ್ದಾಗಿದೆ. ಕ್ರಿ.ಶ.೯೬೧ರ ಶಾಸನವು ರಾವಣ ಸೀತೆಯನ್ನು ಕದ್ದೊಯ್ಯುತ್ತಿದ್ದಾಗ ಜಟಾಯು ಅವನನ್ನು ತಡೆದು ಹೋರಾಡಿ ಸತ್ತಿತ್ತೆಂಬ ಪ್ರತೀತಿಯನ್ನು ಈ ಶಾಸನ ಉಲ್ಲೇಖಿಸುತ್ತದೆ. ಜಟಂಗಿ ರಾಮೇಶ್ವರ ದೇವಾಲಯವಿರುವುದರಿಂದ ರಾಮನ ಹೆಸರನ್ನು ಒಳಗೊಂಡ ಸ್ಥಳ ರಾಮಪುರ(ರಾಂಪುರ) ಎಂದು ನಾಮಕರಣಗೊಂಡಿರುವುದನ್ನು ಗಮನಿಸಬಹುದು.

೫.೫. ಕಲ್ಯಾಣ ಚಾಲುಕ್ಯರು

ಮೊಳಕಾಲ್ಮೂರು ಪರಿಸರದಲ್ಲಿ ಚಾಲುಕ್ಯರ ಮನೆತನಕ್ಕೆ ಸಂಬಂಧಿಸಿದ ಶಾಸನಗಳು ದೊರೆತಿಲ್ಲ. ನುಂಕೇಮಲೆಯ ಮಲ್ಲಿಕಾರ್ಜುನ ದೇವಾಲಯ ಹಾಗೂ ಹಿರೇಕೆರೆಹಳ್ಳಿಯ ಕನ್ನೇರಮ್ಮನ ದೇವಾಲಯಗಳು ಇವರ ವಾಸ್ತುಶಿಲ್ಪ ಶೈಲಿಯನ್ನು ಹೋಲಿವೆ. ಆ ಕಾಲದ ನಿರ್ಮಾಣವಾಗಿವೆ ಎನ್ನಬಹುದು.

೫.೬. ನೊಳಂಬರು

ಮೊಳಕಾಲ್ಮೂರು ಪರಿಸರದಲ್ಲಿ ನೊಳಂಬರ ಆಳ್ವಿಕೆಗೆ ಸಂಬಂಧಿಸಿದ ಶಾಸನಗಳು ದೊರೆತಿವೆ. "ಕ್ರಿ.ಶ.೧೦೪೧ರ ಜಟಂಗಿರಾಮೇಶ್ವರ ಭೋಗೇಶ್ವರ ದೇವಾಲಯದ ಶಾಸನವು "ಕನಕಮಲ್ಲರಸ"ನೆಂಬುವನು ರಾಮೇಶ್ವರ ದೇವಾಲಯಕ್ಕೆ ದತ್ತಿ ನೀಡಿದನೆಂದು ಹೇಳುವುದು".[೫] ಕ್ರಿ.ಶ.೧೦೨೨ರ ಅಶೋಕ ಸಿದ್ದಾಪುರ ರಾಮಚಂದ್ರೇಶ್ವರ ದೇವಾಲಯದಲ್ಲಿರುವ ಶಾಸನ ಹಾಗೂ ಕ್ರಿ.ಶ.೧೦೭೧ರ ಜಟಂಗಿ ಬೆಟ್ಟದಲ್ಲಿರುವ ಶಾಸನವು ನೊಳಂಬ ಪಲ್ಲವ ಪೆರ್ಮಾಡಿ ಜಯಸಿಂಹನು ಗೊಂದವಾಡಿ ಪರವೀಡಿನಲ್ಲಿ ರಾಜ್ಯವಾಳುತ್ತಿದ್ದ ವಿಚಾರವನ್ನು ಪ್ರಸ್ತಾಪಿಸುತ್ತದೆ.

೫.೭. ಹೊಯ್ಸಳರು

ಸಿದ್ದಾಪುರದ ಕ್ರಿ.ಶ.೧೨೧೫ರ ಜಾಲಿಹೊಲದ ವೀರಗಲ್ಲು ಶಾಸನವು ಹೊಯ್ಸಳರ ಸಾಮಾಜಿಕ ಪದ್ಧತಿಯನ್ನು ತಿಳಿಸುತ್ತದೆ. ಮುಮ್ಮಡಿ ಬಲ್ಲಾಳನು ಹನೆಯ ಕೋಟೆಯನ್ನು ಆಕ್ರಮಿಸಿ ಅಲ್ಲಿ 'ವಿಜಯಗಿರಿ'ಯೆಂಬ ಪಟ್ಟಣ ನಿರ್ಮಿಸಿದ್ದನ್ನು ಹೊನ್ನಿ ಎಂಬುವಳು ಈ ವೇಳೆಯಲ್ಲಿ ಆತ್ಮಾರ್ಪಣೆ ಮಾಡಿಕೊಂಡ ಘಟನೆ ವಿವರಿಸುತ್ತದೆ. ಹುಲಿವಾನಸಾವನ್ತ ಸಿವೋದನಾಯಕನ ತಾಯಿ ಹೊನ್ನಕ್ಕ ನಾಯಕಿತ್ತಿಯು ಮರಣ ಹೊಂದಲು, ಹೊನ್ನಿ ಎಂಬ ಸೇವಕಿಯು ತನ್ನ ಒಡತಿಗಾಗಿ ಆತ್ಮರ್ಪಣೆ ಮಾಡಿಕೊಂಡಳೆಂದು ಈ ಶಾಸನವು ಹೇಳುತ್ತದೆ.

೫.೮. ವಿಜಯನಗರದ ಅರಸರು

ಮೊಳಕಾಲ್ಮೂರು ಪರಿಸರದಲ್ಲಿ ವಿಜಯನಗರ ಅರಸರು ಆಳ್ವಿಕೆ ನಡೆಸಿದ್ದ ಬಗ್ಗೆ ಅನೇಕ ಶಾಸನಗಳು ದೊರೆತಿವೆ. ವಿಜಯನಗರದ ಅರಸರು ಅನೇಕ ದೇಗುಲಗಳ ಜೀರ್ಣೋದ್ಧಾರ ಮಾಡಿದರಲ್ಲದೆ, ದಾನದತ್ತಿಗಳನ್ನು ನೀಡಿ ಅರಸರ ಹಾಗೂ ರಾಣಿಯರ ಹೆಸರಿನಲ್ಲಿ ಕೆರೆಗಳನ್ನು ನಿರ್ಮಿಸಿರುವುದು ಈ ಪ್ರದೇಶದಲ್ಲಿ ಕಂಡುಬರುತ್ತವೆ. ಉದಾ. ದೇವಸಮುದ್ರ, ಗೌರಸಮುದ್ರ, ನಾಗಸಮುದ್ರ

೫.೯. ಪಾಳೇಗಾರರು

ಮೊಳಕಾಲ್ಮೂರು ಪರಿಸರವು ಪಾಳೇಗಾರರ ಆಳ್ವಿಕೆಗೆ ಒಳಪಟ್ಟಿತ್ತು. ಕ್ರಿ.ಶ.೧೩೮೭ರ ತಾಮ್ರಶಾಸನ ವೀರಭೂಪತಿ ಒಡೆಯನನ್ನು ಕುರಿತು ವಿವರಿಸುತ್ತಿದ್ದು ಜಟಂಗಿ ರಾಮೇಶ್ವರ ದೇವರಿಗೆ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಈ ಪಾಳೇಗಾರರ ವಂಶಸ್ಥರಿಗೆ ವಿಜಯನಗರದ ಅರಸ ಸದಾಶಿವರಾಯನು ರಾಯದುರ್ಗ ಸೀಮೆಯನ್ನು ಉಂಬಳಿಯಾಗಿ ನೀಡಿದ್ದನು. ಮಲ್ಲನಾಯಕನು ರಾಯದುರ್ಗ ಪಾಳೇಗಾರ ಬೊಮ್ಮನಾಯಕನ ಪ್ರಾರ್ಥನೆಯಂತೆ ೨೦೦೦ ಕೆಂಪು ಮತ್ತು ೧೦೦೦ ಬಿಳಿ ಹಸುಗಳನ್ನು ನೀಡಿದ್ದಕ್ಕೆ ಪ್ರತಿಯಾಗಿ ಬೊಮ್ಮ

ನಾಯಕನು ಮೊಳಕಾಲ್ಮೂರುನ್ನು ಮಲ್ಲನಾಯಕನಿಗೆ ಬಿಟ್ಟುಕೊಟ್ಟನು. ಇವನು ಮೊಳಕಾಲ್ಮೂರು ಬೆಟ್ಟದ ಕೋಟೆಯನ್ನು ಕಟ್ಟಿಸಿದನು. ಮೊಳಕಾಲ್ಮೂರು ಬೆಟ್ಟದ ಮೇಲಿನ ಕೆರೆಯ ಬಳಿ ಬಂಡೆ ಶಾಸನವು ಶ್ರೀಮಹಾನ್ ನಾಯಕಚಾರ್ಯ ಕಸ್ತೂರಿ ಮಲ್ಲಪ್ಪ ನಾಯಕನು ಈ ಬೆಟ್ಟದ ಮೇಲೆ ತನ್ನ ತಾಯಿಯ ಹೆಸರಿನಲ್ಲಿ ಒಂದು ಕೆರೆಯನ್ನು ನಿರ್ಮಿಸಿದ ಬಗ್ಗೆ ಪ್ರಸ್ತಾಪವಿದೆ. ಕಸ್ತೂರಿ ಮಲ್ಲಪ್ಪ ನಾಯಕನ ಮಗನ ಆಳ್ವಿಕೆಯಲ್ಲಿ ಪಾಳೇಗಾರ ಬಿಚ್ಚುಗತ್ತಿ ಭರಮಣ್ಣನಾಯಕನು ಮೊಳಕಾಲ್ಮೂರನ್ನು ಆಕ್ರಮಿಸಿಕೊಂಡು ನಾಯಕನ ಹಟ್ಟಿಯನ್ನು ಅವನಿಗೆ ಬಿಟ್ಟುಕೊಟ್ಟನು. ಚಿತ್ರದುರ್ಗದ ಕೊನೆಯ ಮದಕರಿ ನಾಯಕನವರೆಗೂ, ಚಿತ್ರದುರ್ಗದವರ ಆಳ್ವಿಕೆಗೆ ಒಳಪಟ್ಟಿದ್ದು, ಚಿತ್ರದುರ್ಗದ ಪತನಾ ನಂತರ ಹೈದರಾಲಿಗೆ ಸೇರಿ, ಮುಂದೆ ಟಿಪ್ಪುವಿನಿಂದ ಆಂಗ್ಲರಿಗೆ ಇವರಿಂದ ಮೈಸೂರು ಒಡೆಯರಿಗೆ ಸೇರಿತು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಸ್ಥಾಪಿಸಿದ್ದ ಫೌಜುದಾರಿಯಲ್ಲಿ ಮೊಳಕಾಲ್ಮೂರು ಒಂದಾಗಿದ್ದು, ೧೮೮೬ರಲ್ಲಿ ಚಿತ್ರದುರ್ಗ ಜಿಲ್ಲೆಯನ್ನು ಒಳಗೊಂಡಿತು.

೧. ಶಾಸನೋಕ್ತ ಸ್ಥಳನಾಮಗಳು

ಸೃಷ್ಟಿಯ ಪ್ರತಿಯೊಂದು ಪದಾರ್ಥಕ್ಕೂ ಒಂದು ಹಿನ್ನಲೆ, ಇತಿಹಾಸವಿರುತ್ತದೆ. ಪ್ರತಿಯೊಬ್ಬ ವ್ಯಕ್ತಿಗೂ, ಪ್ರತಿಯೊಂದು ಊರಿಗೂ ಚರಿತ್ರೆಯಿರುತ್ತದೆ. “ವ್ಯಕ್ತಿಯ ಹೆಸರು, ಊರಿನ ಹೆಸರು ಬರಿಯ ಹೆಸರುಗಳಲ್ಲ, ಆ ಹೆಸರುಗಳ ಉಸಿರಲ್ಲಿ, ಬಸಿರಲ್ಲಿ ಆತ್ಮ ಚರಿತ್ರೆ ಇರುತ್ತದೆ.”[೬] ಅಂತಹ ಆತ್ಮಚರಿತ್ರೆಯನ್ನು ಸಂಗ್ರಹಿಸುವಲ್ಲಿ ಶಾಸನಗಳಿಗೆ ಮಹತ್ವವಿದೆ. “ಶಾಸನಗಳು ಐತಿಹಾಸಿಕ ದಾಖಲೆಗಳಷ್ಟೇ ಅಲ್ಲ, ಸ್ಥಳನಾಮಗಳ ಕೋಶಗಳೂ ಅಹುದು.”[೭] ಸ್ಥಳನಾಮಗಳು ಶಾಸನಗಳಿಗಿಂತ ಸಾವಿರಾರು ವರ್ಷದ ಪೂರ್ವದ ಇತಿಹಾಸವನ್ನು ಕಟ್ಟಿಕೊಡುತ್ತವೆ. ಇಂತಹ ಸ್ಥಳನಾಮಗಳ ಸಂಪೂರ್ಣ ಮಾಹಿತಿಯು ನಂತರದ ತಲೆಮಾರಿನ ಜನರಿಗೆ ಇಲ್ಲದೇ ಹೋಯಿತು. ಇದಕ್ಕೆ ಕಾರಣ ಅವರು ಈ ಕಡೆಗಮನ ಹರಿಸದೇ ಹೋದರು. ನಂತರ ತಮ್ಮ ವಾಸದ ನೆಲೆಯ ಹೆಸರುಗಳ ಕುರಿತಾದ ಜ್ಞಾನ ಮೂಡಿದಾಗಿನಿಂದ ಅಧಿಕೃತವಾಗಿ ಅವರವರ ಹಟ್ಟಿ, ಗ್ರಾಮ, ಊರು, ಪಟ್ಟಣ, ನಗರಗಳ ಚರಿತ್ರೆಯೂ ವಿಕಸನ ಹೊಂದುತ್ತಾ ಬಂದುದು ನಮ್ಮೆದುರಿಗಿರುವ ಸತ್ಯ. ಇದು ಆರಂಭವಾದ ತದನಂತರದಲ್ಲಿ ಪ್ರಭುತ್ವದ ಚೌಕಟ್ಟಿನೊಳಗೆ ಬದುಕನ್ನು ನಿರ್ಮಿಸಿಕೊಂಡ ಜನತೆಯು ಇತಿಹಾಸದ ಸ್ಪಷ್ಟ ದಾಖಲೆಗಳ ಕಡೆ ಗಮನಹರಿಸಿದರು. ರಾಜ, ಸಾಮಂತ, ಮಂತ್ರಿ, ಗಾವುಂಡಾದಿಗಳು ವಿಶೇಷವೆನಿಸಬಹುದಾದ ಅಥವಾ ಆಜ್ಞೆಯ ರೂಪದ ಕುರುಹಿನ ಸವಿನೆನಪಿನ ಸಲುವಾಗಿ ಶಾಸನ, ಕಾವ್ಯಾದಿಗಳಲ್ಲಿ ಚರಿತ್ರೆಯನ್ನು ಕಟ್ಟುವ ಪ್ರಯತ್ನ ಮಾಡಿದರು. ಇಲ್ಲಿಂದಲೇ ಸ್ಥಳನಾಮಗಳು ಅಧಿಕೃತ ದಾಖಲಾತಿಯು ಆರಂಭವಾಯಿತು. ಈ ಮುಂಚೆ ಮೌಖಿಕ ಪರಂಪರೆಯಲ್ಲಿ ಗರ್ಭೀಕರಿಸಿಕೊಂಡಿದ್ದ ಹೆಸರುಗಳು, ಕಾಲಕ್ರಮದಲ್ಲಿ ನಾಶವಾಗುವ ಹಂತದಿಂದ,

ಬರವಣಿಗೆಯಲ್ಲಿ ರಕ್ಷಿಸುವ ಕೆಲಮಟ್ಟಿನ ಕೆಲಸ ಆರಂಭವಾಯಿತು. ಈ ಕಾರಣದಿಂದಲೇ ಶಾಸನ ಮತ್ತು ಸ್ಥಳನಾಮಗಳಿಗೆ ಅವಿನಾಭಾವ ಸಂಬಂಧವಿದೆ ಎಂದು ಹೇಳಬಹುದು.

"ಶಾಸನಗಳಿಲ್ಲದ ಊರುಗಳು ಅಪರೂಪವಾಗಿ ಸಿಗಬಹುದಾದರೂ ಊರುಗಳ ಉಲ್ಲೇಖಗಳಿಲ್ಲದ ಶಾಸನಗಳು ಇಲ್ಲವೆಂದೇ ಹೇಳಬೇಕು. ರಾಜ್ಯಾಡಳಿತ, ಯುದ್ಧ, ದೇವಾಲಯ ನಿರ್ಮಾಣ, ದಾನಧರ್ಮ ಇವೇ ಮೊದಲಾದ ಹಲವಾರು ವಿಷಯಗಳ ಬದಲಾವಣೆ ಸಾಧ್ಯವಿಲ್ಲದ್ದರಿಂದ ಅನೇಕ ಭೌಗೋಳಿಕ ಹಾಗೂ ಚಾರಿತ್ರಿಕ ಅಂಶಗಳು ಶಾಸನಗಳಲ್ಲಿ ದೊರೆಯುವುದರಿಂದ, ಸ್ಥಳನಾಮ ಅಧ್ಯಯನಕ್ಕೆ ಶಾಸನಗಳು ತುಂಬಾ ನೆರವಾಗುತ್ತವೆ. ಅವುಗಳ ಸಹಾಯದಿಂದ ಊರುಗಳ ಗಡಿಗಳನ್ನು ಸಂದೇಹಕ್ಕೆಡೆಯಿರದಂತೆ ನಿರ್ಣಯಿಸಬಹುದು. ರಾಜರ ಇತಿಹಾಸದ ಜತೆಗೆ ಊರುಗಳ ಇತಿಹಾಸಕ್ಕೂ ಅವೇ ಆಕರವೆನ್ನಬಹುದು. ಅವುಗಳ ಸ್ಥಾನಮಾನ, ಏರಿಳಿತಗಳೂ ಕಾಲ-ಕಾಲಕ್ಕೆ ಅವು ಪಡೆದ ಪ್ರತಿನಾಮಗಳ ವಿವರಗಳೂ ಆಗಾಗ್ಗೆ ಪ್ರಾಪ್ತವಾದ ಉಚ್ಚರಣಾ ವ್ಯತ್ಯಾಸಗಳೂ ಶಾಸನಗಳಿಂದ ತಿಳಿಯುತ್ತವೆ."[೮] ಕಾಲಾನುಕ್ರಮದಲ್ಲಿ ರಚಿಸಿ, ರಕ್ಷಿಸಲ್ಪಟ್ಟ ಶಿಲಾಶಾಸನ, ಲೋಹಶಾಸನಗಳಲ್ಲಿ ದಾಖಲಾದ ಮೊಳಕಾಲ್ಮೂರು ಪ್ರದೇಶದ ಸ್ಥಳನಾಮಗಳಲ್ಲಿ ವಿಶೇಷತೆಗಳಿವೆ. ಭೂತಕಾಲದ ದಾಖಲೆಗಳಾಗಿ ಉಳಿದ ಈ ಶಾಸನಗಳಲ್ಲಿ ಉಕ್ತವಾದ ಸ್ಥಳನಾಮಗಳು ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುತ್ತವೆ. ಅಧ್ಯಯನ ಕ್ಷೇತ್ರ ಮೊಳಕಾಲ್ಮೂರು ತಾಲ್ಲೂಕಿನ ಶಾಸನಗಳಲ್ಲಿ ಉಕ್ತವಾದ ಸ್ಥಳನಾಮಗಳ ಅಧ್ಯಯನದ ಮಾದರಿಯನ್ನು ನೀಡುವ ಪ್ರಯತ್ನ ಮಾಡಿ ವಿಶ್ಲೇಷಿಸಿ ಚರ್ಚಿಸಲಾಗಿದೆ.

ಅಧ್ಯಯನ ಕ್ಷೇತ್ರ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಬ್ರಹ್ಮಗಿರಿ, ಅಶೋಕ ಸಿದ್ದಾಪುರ, ಜಟಂಗಿ ರಾಮೇಶ್ವರದಲ್ಲಿ ದೊರೆತ ಶಿಲಾಶಾಸನಗಳನ್ನು ೧೮೯೨ರಲ್ಲಿ ಲೂಯಿರೈಸ್ ಪತ್ತೆ ಹಚ್ಚಿದರು. ಚಿನ್ನಹಗರಿಯ ಎಡ-ಬಲದಂಡೆ ಬೆಟ್ಟಗಳಲ್ಲಿ ಈ ಮೂರು ಶಾಸನಗಳನ್ನು ಒರಟಾದ ಹುಟ್ಟು ಹೆಬ್ಬಂಡೆಗಳ ಮೇಲೆ ಕೆತ್ತಲಾಗಿದೆ. ಬ್ರಹ್ಮಗಿರಿ ಶಾಸನವನ್ನು ಸ್ಥಳೀಯರು 'ಅಕ್ಷರಗುಂಡು' ಎಂದು ಕರೆಯುತ್ತಾರೆ. ೧೩ ಸಾಲುಗಳನ್ನು ಒಳಗೊಂಡಿದ್ದು, ಇದರಲ್ಲಿ ಎಲ್ಲಾ ಸಾಲುಗಳು ಬ್ರಾಹ್ಮಿಲಿಪಿಯಲ್ಲಿದ್ದು, ಕೊನೆಗೆ "ಲಿಪಿಕರೇಣ ಚಪಡ" ಎಂಬ ಪದವನ್ನು ಮಾತ್ರ ಖರೋಷ್ಠಿ ಲಿಪಿಯಲ್ಲಿ ಬರೆಯಲಾಗಿದೆ. ಈ ಶಾಸನದಲ್ಲಿ ಉಲ್ಲೇಖವಾಗಿರುವ "ಸುವರ್ಣಗಿರಿ' ಎಂಬುದು ವಿದ್ವಾಂಸರ ಗಮನ ಸೆಳೆದಿದೆ. 'ಸುವರ್ಣಗಿರಿ' ಎಂಬ ನೆಲೆ ಎಲ್ಲಿದೆ? ಎಂಬುದರ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಹಾಗೆಯೇ 'ಇಸಿಲ' ಎಂಬ ಪದ ತಜ್ಞರಲ್ಲಿ ಕುತೂಹಲ ಕೆರಳಿಸಿದಂತಹದ್ದಾಗಿದೆ. ಬ್ರಹ್ಮಗಿರಿ ಸಮೀಪದ ಸಿದ್ದಾಪುರದಲ್ಲಿದ್ದ ಸಿದ್ದ(ಋಷಿ)ರಿಂದ 'ಇಸಿಲ'ವಾಗುವ ಸಾಧ್ಯತೆ ಇದೆ ಎಂದು ಹೇಳಿರುವರು ಲೂಯಿಸ್ . ಬಹುಶಃ ಬೌದ್ಧ ಭಿಕ್ಷುಗಳು ಅಥವಾ ಬೌದ್ಧಧರ್ಮ ಪ್ರಚಾರಕರು ಇಲ್ಲಿ ನೆಲೆಸಿದ್ದರಿಂದ ಈ ನೆಲೆಗೆ ಸಿದ್ಧರಪುರ(ಸಿದ್ದಾಪುರ) ಎಂಬ ಹೆಸರು ಬಂದಿರಬಹುದೆಂಬ ಅವರ ಊಹೆಗೆ ಕಾರಣವಿರಬೇಕು. ಅಶೋಕ ಸಿದ್ದಾಪುರದ ಶಾಸನ

ಬಂಡೆಯನ್ನು 'ಎಮ್ಮೆ ತಮ್ಮನ ಗುಂಡು' ಜಟಂಗಿ ರಾಮೇಶ್ವರ ಗುಡ್ಡದ ಶಾಸನವನ್ನು 'ಬಳೆಗಾರರ ಗುಂಡು' ಎಂದು ಜನ ಸಂಬೋಧಿಸುತ್ತಾರೆ. ಜಟಂಗಿ ರಾಮೇಶ್ವರ ಬೆಟ್ಟದ ಮೇಲಿರುವ ಕ್ರಿ.ಶ.೯೬೧ರ ಶಿಲಾಶಾಸನವು ರಾಮಾಯಣ ಕಾಲದಿಂದಲೂ ಪ್ರಸಿದ್ಧಿ ಹೊಂದಿತ್ತೆಂಬುದಕ್ಕೆ ಆಧಾರಗಳಿಂದ ತಿಳಿದುಬರುತ್ತದೆ. ಈ ಬೆಟ್ಟದ ಮೇಲೆ ಜಟಂಗಿ ರಾಮಶ್ವೇರ ದೇವಾಲಯವಿದ್ದು, ಇಲ್ಲಿ ಶ್ರೀರಾಮಚಂದ್ರನು ಜಟಾಯುವಿಗೆ ಅಗ್ನಿಸಂಸ್ಕಾರ ಮಾಡಿ, ಅವನ ಹೆಸರಿನಲ್ಲಿ ಲಿಂಗ ಪ್ರತಿಷ್ಠೆ ಮಾಡಿದನೆಂಬುದು ಸ್ಥಳದ ಐತಿಹ್ಯ. ಆದ್ದರಿಂದ 'ಜಟಾಯು' ರಾಮ ಮತ್ತು ಈಶ್ವರ ಈ ಮೂವರ ಹೆಸರಿನಲ್ಲಿಯೇ ಈ ದೇವರಿಗೆ 'ಜಟಂಗಿರಾಮೇಶ್ವರ'ನೆಂದೂ ಈ ಗುಡ್ಡವು 'ಜಟಂಗಿ ರಾಮಗಿರಿ' ಎಂದೇ ಪ್ರಸಿದ್ಧಿ ಪಡೆದಿದೆ. ಅಶೋಕನ ಶಿಲಾಶಾಸನದಲ್ಲಿ ಉಕ್ತವಾದ ಸುವರ್ಣಗಿರಿಯು ಜಟಂಗಿ ರಾಮಗಿರಿಯೇ ಸುವರ್ಣಗಿರಿ ಆಗಿತ್ತೆಂಬುದನ್ನು ದೃಢಪಡಿಸಲು ವಿದ್ವಾಂಸರು ಅಧ್ಯಯನ ಕೈಗೊಳ್ಳುವ ಅವಶ್ಯಕತೆಯಿದೆ ಎಂದು ಹೇಳಬಹುದು.

"೧೦೭೩ರ ಕಲ್ಯಾಣಿ ಚಾಲುಕ್ಯರ ಕಾಲದ ಶಾಸನ ಚಿತ್ರದುರ್ಗದಲ್ಲಿ ಆಗಲೇ ಕೋಟೆ ಇದ್ದ ಬಗ್ಗೆ ಮಾಹಿತಿ ನೀಡುತ್ತದೆ. ನಿಡುಗಲ್ಲು ಚೋಳರಲ್ಲಿ ಹೆಸರಾದ ಬೊಮ್ಮ ಭೂಪಾಲನು ರಾಜಧಾನಿ ನಿಡುಗಲ್ಲಿನಿಂದ ಉಪರಾಜಧಾನಿಯಾದ ಹನೆಯದವರೆಗೂ ಕೋಟೆಯ ಸಾಲನ್ನು ೧೨೭೮ರಲ್ಲಿ ನಿರ್ಮಿಸಿದನು. ಈ ಕೋಟೆಯ ಸಾಲುಗಳು ಸಿಗ್ ಫ್ರೀಡ್ ಕೋಟೆಯಂತೆ ಅಭೇದ್ಯವಾಗಿದ್ದವು. ಈ ಕೋಟೆಯನ್ನು ಕ್ರಿ.ಶ.೧೨೧೫ರಲ್ಲಿ ಹೊಯ್ಸಳ ದೊರೆ ಮೂರನೇ ಬಲ್ಲಾಳನು ಗೆದ್ದು ಅಲ್ಲಿ 'ವಿಜಯಗಿರಿ' ಎಂಬ ಪಟ್ಟಣವನ್ನು ನಿರ್ಮಿಸಿ ಮೊದಲಿದ್ದ ಕೋಟೆಯನ್ನು ವಿಸ್ತರಿಸಿ ಬಲಪಡಿಸಿದನು."[೬] ಕ್ರಿ.ಶ.೧೨೭೮ರ ಶಾಸನದಲ್ಲಿ 'ಹನೆಯ ಕೋಟೆ' ಎಂಬ ಉಲ್ಲೇಖವಿದೆ. ಬ್ರಹ್ಮಗಿರಿಗೆ "ಇಸಿಲ, ಹನೆಯ, ವಿಜಯಗಿರಿ" ಮುಂತಾದ ಹೆಸರುಗಳಿದ್ದಂತೆ ತೋರುತ್ತದೆ.

ನುಂಕೆ ಮಲೆಯ ಮಲ್ಲಿಕಾರ್ಜುನ ದೇವಾಲಯದ ಹಿಂದೆ ಪಶ್ಚಿಮದ ಹುಟ್ಟು-ಗುಂಡಿನಲ್ಲಿರುವ ಕ್ರಿ.ಶ.೯೮೮ರ ಶಿಲಾಶಾಸನವು ಕದಂಬರ ಅಜವರ್ಮ ಅರಸನು ನುಂಕೇಶ್ವರ ದೇವರಿಗೆ ದಾನ (ಉಂಬಳಿ) ಬಿಟ್ಟಿರುವುದನ್ನು ಉಲ್ಲೇಖಿಸುತ್ತದೆ. ಹಾಗೂ ಬೆಂಚೆರಸ ದೇವನು "ಚಾಮಗೊಂಡನಹಳ್ಳಿ"ಯ ಹೊಲ ಸೀಮೆಗಳನ್ನು ದತ್ತಿ ಬಿಟ್ಟ ಬಗ್ಗೆ ಉಲ್ಲೇಖವಿದೆ. ಆದರೆ ಇಂದೂ ಚಾಮಗೊಂಡನ ಹಳ್ಳಿ ಒಂದು ಬೇಚರಾಕ್ ಗ್ರಾಮವಾಗಿದೆ. ಸಿದ್ಧಾಪುರದ ರಾಮಚಂದ್ರೇಶ್ವರ ದೇವಾಲಯದಲ್ಲಿರುವ ಕ್ರಿ.ಶ.೧೦೨೨ರ ಶಾಸನವು ಕಲ್ಯಾಣಿ ಚಾಲುಕ್ಯರ ದೊರೆ ಜಗದೇಕಮಲ್ಲನು 'ಕಂಪಲಿ' ಪ್ರಾಂತ್ಯವನ್ನು ಆಳುತ್ತಿದ್ದನು ಎಂದು ತಿಳಿಸುತ್ತದೆ. "ಕ್ರಿ.ಶ.೧೦೬೪ರ ಜಟಂಗಿ ರಾಮೇಶ್ವರ ಬೆಟ್ಟದ ಶಾಸನ ಪೃಥ್ವೀ ವಲ್ಲಭ, ಶ್ರೀತ್ರೈಲೋಕ್ಯಮಲ್ಲ ಚಕ್ರವರ್ತಿ ಅಹವಮಲ್ಲನು ರಾಜ್ಯಭಾರ ನಡೆಸುತ್ತಿದ್ದಾಗ ಶ್ರೀ ವಿಷ್ಣುವರ್ಧನ ಮಹಾರಾಜ ವಿಜಯಾದಿತ್ಯನು ನೊಳಂಬವಾಡಿ ೩೨೦೦೦ ನಾಡನ್ನು ಕಂಪಲಿ(ಕಂಪ್ಲಿ) ನೆಲೆ ವೀಡಿನಲ್ಲಿ ಸುಖವಾಗಿ ರಾಜ್ಯವಾಳುವಾಗ ಬಲ್ಲೂಡಿ ತೀರ್ಥದ ರಾಮೇಶ್ವರ ದೇವರ ನೈವೇದ್ಯ-ದೀಪ-ಧೂಪಕ್ಕಾಗಿ ರಂಗಭೋಗಕ್ಕಾಗಿ ಅಲ್ಲಿರುವ

ವಿದ್ಯಾಪಂಡಿತರಿಗೆ ಕಣೇಕಲ್ಲು ೩೦೦ರೊಳಗಿನ ಬದಂಡಾ(ಗ್ರಾಮ) ಕಿವುಡುಳಿಕೆ ೭೦ರೊಳಗಣ ಕಿರಿಯ ಕಿವುಡುಳಿಕೆ ಹೊರಗಿನ ೩೦ ಮತ್ತರು ಭೂಮಿಯನ್ನು ಧಾರಾಪೂರ್ವಕವಾಗಿ ದಾನ ನೀಡಲಾಯಿತ್ತೆಂದು ಉಲ್ಲೇಖಿಸುತ್ತದೆ.''[೧೦] ಈ ಶಾಸನದಲ್ಲಿ ಉಕ್ತವಾದ ಕಣೇಕಲ್ಲು, ಬದಂಡಾ(ಬಂಡೂರು) ಗ್ರಾಮಗಳು ಆಂಧ್ರ ಪ್ರದೇಶದ ರಾಯದುರ್ಗ ತಾಲ್ಲೂಕಿಗೆ ಸಂಬಂಧಿಸಿದ ಗ್ರಾಮಗಳಾಗಿವೆ. ಹಳೇ ದಡಗೂರಿನ ಕ್ರಿ.ಶ.೧೦೭೧ರ ಶಾಸನ ಕಲಿದೇವರಿಗೆ ನೀಲಕಂಠ ಜಿಯರಿಗೆ ೧೨ ಮತ್ತರು ಭೂಮಿಯನ್ನು ದಾನ ಮಾಡಿರುವುದನ್ನು ಉಲ್ಲೇಖಿಸುತ್ತದೆ.

ಲುಂಕೆ ಕೋಟೆ

''ಚಾರಿತ್ರಿಕವಾಗಿ ನೋಡುವುದಾದರೆ, ಐದನೆಯ ಶತಮಾನದಲ್ಲಿ ಕದಂಬ ವಂಶದ ಅಜವರ್ಮನೆಂಬ ರಾಜನು 'ಲುಂಕೇ' ಎಂಬ ಕೋಟೆಯನ್ನು ಕಟ್ಟಿಸಿ, ಲುಂಕಪ್ಪನನ್ನು ಪ್ರತಿಷ್ಠಾಪಿಸಿದನೆಂದು ತಿಳಿದುಬರುತ್ತದೆ. ಆದರೆ ಕದಂಬರು ಈ ಪ್ರದೇಶಕ್ಕೆ ಬರುವುದಕ್ಕೆ ಮುಂಚೆಯೇ ನುಂಕಪ್ಪ ನುಂಕೆ ಎಂಬ ಪದಗಳು ಜನಪದರ ಮೌಖಿಕ ಪರಂಪರೆಯಲ್ಲಿ ಕಂಡುಬರುತ್ತಿದ್ದವು. ಆದರೆ ನಂತರ ಬಂದ ಕದಂಬರು 'ನುಂಕಪ್ಪ'ನನ್ನು ಲುಂಕಪ್ಪ, ಲುಂಕೇಶ ಎಂದು ಕರೆದಿರಬಹುದು. ಲಂಕ-ಲೆಂಕ ಎಂಬ ಶಬ್ದಗಳು 'ಲುಂಕೆ' ಎಂಬ ಕ್ಷೇತ್ರದ ಮೂಲನಾಮಕ್ಕೆ ಹತ್ತಿರ ಶಬ್ದಗಳಾಗಿವೆ. ಕವಿಗಳಿಗೆ ಕೆಲವು ಸಂದರ್ಭಗಳಲ್ಲಿ ಱ.ಳ.ಲಗಳು ವಿನಿಮಯ ಅಕ್ಷರಗಳಾಗಿರಬಹುದು. ಹಾಗೂ ಇಲ್ಲಿನ ಯೋಗಿಗಳ ಮಠವೂ, ತಿರುಕರೂ ಆದ ಕಿನ್ನರಿ ಜೋಗಿಗಳಿಗೆ ಉಪಜೀವನ ಮಾರ್ಗದ ಊರುಗೋಲು ಆಗಿಯೂ ಇದೆ. ಆದ್ದರಿಂದ ಲಂಕ-ಲೆಂಕ-ಲೊಂಕೆ ಎಂಬ ಪದಗಳು ತಿರುಕನೆಂಬ ಅರ್ಥಕೊಡುತ್ತವೆ. ನಂತರ 'ಲುಂಕೆ' ಎಂಬ ಪದವು ನುಂಕೆಯಾಗಿ ಮೌಖಿಕ ಚಲನಶೀಲತೆಯನ್ನು ಹೊಂದಿರಬಹುದು.''

ಕ್ರಿ.ಶ.೧೪೦ರ ರೊಪ್ಪದ (ಬ್ರಹ್ಮಗಿರಿಬಳಿ) ಬಡಕಲುಕುಂಟೆಯ ಗುಂಡಿನ ಮೇಲಿರುವ ಶಾಸನವು ನಿಡುಗಲ್ಲು ಜೋಳ, ಮಲ್ಲಬೊಮ್ಮದೇವನಿಗೆ ಬಿಜಣದೇವ, ಬೈರದೇವ, ಇರುಂಗಳ ದೇವ, ಬವಂತಿಗ ದೇವಾರೆಂಬ ನಾಲ್ವರು ಮಕ್ಕಳಿದ್ದು, 'ಆರುಂಬಡ' ಗ್ರಾಮದ ರಾಜಗುರುವಾದ' ಧರ್ಮಸುಕುಮಾರ ಪಂಡಿತ ಶ್ರೀದೇವೇಂದ್ರ ಗುರುವಿಗೆ ಆ ನಾಲ್ವರು ಮಕ್ಕಳಲೊಬ್ಬನಾದ ಸುಕುಮಾರ ಬಿಜಣದೇವನು ಶ್ರೀ 'ಬ್ರಹ್ಮೇಶ್ವರ ಮತ್ತು ರೊದ್ದ'' ಗ್ರಾಮಗಳ ಗೋವುಗಳನ್ನು ದಾನ ಮಾಡಿರುವುದನ್ನು ಉಲ್ಲೇಖಿಸುತ್ತದೆ.

ಇಲ್ಲಿ ಪ್ರಸ್ತಾಪಿಸಿರುವ ''ಬ್ರಹ್ಮೇಶ್ವರ ಮತ್ತು ರೊದ್ದ''ಗಳು ಈಗಿನ ಬ್ರಹ್ಮಗಿರಿ ಮತ್ತು ರೊಪ್ಪಗಳಿರಬಹುದು. ಆದರೆ ಈ ಶಿಲಾಶಾಸನದಲ್ಲಿ ಕಾಲಮಾನದ ಉಲ್ಲೇಖವಿಲ್ಲದಿದ್ದರೂ, ಹುಲ್ಲೂರು ಶ್ರೀನಿವಾಸ ಜೋಯಿಸರು ಕ್ರಿ.ಶ.೧೪೦ರಲ್ಲಿ ಇದನ್ನು ರಚಿಸಿರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ.''[೧೧]

ಕ್ರಿ.ಶ.೧೩೮೨ರ ತಾಮ್ರಶಾಸನವು ಜಟಂಗಿರಾಮೇಶ್ವರ ದೇವಾಲಯದ ಅರಮನೆಗೆ ಬರಬೇಕಾಗಿದ್ದ ರಾಯದುರ್ಗದ ಹೊನ್ನೆ ನಾಡಿನ ಜೀಯರಹಳ್ಳಿಗೆ(ರಾಮಸಾಗರ) ಸೇರಿದ ೪೦೦ ಕಮ್ಮ ಭೂಮಿಯಿಂದ ಬರುವ ಒಂದು ವರ್ಷದ ಉತ್ಪನ್ನ ಮತ್ತು ಬಂಗಾರವನ್ನು ವೀರಭೂಪತಿ ಒಡೆಯರು ಜಟಿಂಗ ರಾಮಯ್ಯ ದೇವ ದೇವರ ಅಮೃತಪಡಿ ಮತ್ತು ಅಂಗರಂಗವೈಭೋಗಕ್ಕೆ ಕಾಣಿಕೆ ನೀಡಿರುವುದನ್ನು ವಿವರಿಸುತ್ತದೆ. ಈ ಶಾಸನದಲ್ಲಿ ಉಲ್ಲೇಖಿತವಾದ 'ಜೀಯರಹಳ್ಳಿ' ಎಂಬುದು ಈಗ ರಾಮಸಾಗರ ಎಂದು ನಾಮಕರಣ ಗೊಂಡಿದೆ. ಈಗಲೂ ಜನಪದರು ಜೀಯರಹಳ್ಳಿ ಎಂದೇ ಸಂಬೋಧಿಸುವುದನ್ನು ಮನಗಾಣಬಹುದು.

ಕರಡಿಹಳ್ಳಿಯ ಹನುಮಂತದೇವರ ಗುಡಿಯ ಮುಂದಿರುವ ಕ್ರಿ.ಶ.೧೫೫೬ರ ಸದಾಶಿವರಾಯನ ಆಳ್ವಿಕೆಗೆ ಸಂಬಂಧಿಸಿದ ಶಾಸನವಾಗಿದೆ. ರಾಯದುರ್ಗ ಸೀಮೆಯ ''ಹರಿಹರ ಪುರ''ವೆಂದು ಪ್ರತಿನಾಮಧ್ಯೇಯವುಳ್ಳ 'ಕರಡಿಹಳ್ಳಿ'ಯನ್ನು ಮಹಾಮಂಡಲೇಶ್ವರವಾದ ರಾಮರಾಜ, ವಿಠಲರಾಜ, ತಿರುಮಲ ದೇವರಿಗೆ ದಾನ ನೀಡಲಾಗಿತ್ತು. ಕರಡಿಹಳ್ಳಿಯ ಪಟೇಲರ ವಶದಲ್ಲಿದ್ದ 'ತಾಮ್ರಶಾಸನವು' ವಿಜಯನಗರದ ಹರಿಹರನನ್ನು (ಹಕ್ಕಭೂಪತಿ) ಕುರಿತು ವಿವರಿಸುತ್ತದೆ. ''ಸಂಗಮ ವಂಶದ ಹಕ್ಕಭೂಪತಿಗೆ ಅವನ ತಮ್ಮನಾದ ಬುಕ್ಕರಾಯನು ರಾಮನಿಗೆ ಲಕ್ಷ್ಮಣನಿದ್ದಂತೆ, ಎಲ್ಲಾ ಮೃಗಗಳಿಗೆ ಸಿಂಹದಂತೆ, ನಕ್ಷತ್ರಗಳಿಗೆ ಚಂದ್ರನಂತೆ, ಮಣಿಗಳಿಗೆ ಕೌಸ್ತಭನಂತಿದ್ದು, ರಾಜನಾದ ಹರಿಹರ ಮಧ್ಯೆ ತಮ್ಮ ಬುಕ್ಕರಾಯ ಘನತೇಜೋದಿತನಾಗಿದ್ದನು. ಈ ಹರಿಹರ ಮಹಾರಾಜನು ತುಂಗಾಭದ್ರ ನದಿಯ ತಟದಲ್ಲಿರುವ ಭಾಸ್ಕರಸ್ಥಾನದ ಹೇಮಕೂಟ ಶ್ರೀ ವಿರುಪಾಕ್ಷನ ಸನ್ನಿಧಿಯಲ್ಲಿ ಆಳ್ವಿಕೆ ನಡೆಸಿತ್ತಿದ್ದನು. ಈ ವೇಳೆಯಲ್ಲಿ ರಾಯದುರ್ಗ ಸೀಮೆಯ ಉತ್ತರ ಭಾಗದಲ್ಲಿರುವ 'ಹರಿಹರ ಪುರ'ವೆಂಬ ಪ್ರತಿನಾಮಧ್ಯೇಯವುಳ್ಳ ಗಿರಿವರದ ರಾಜ ಗ್ರಾಮ, ಹಾಗೇ ಇದರ ಸಮೀಪವಿರುವ 'ಬೆಣ್ಣೆಕಲ್ಲು' 'ಕರಡಿಹಳ್ಳಿ' ಎಂಬ ಗ್ರಾಮಗಳನ್ನು ಭೂಸುರ ತ್ರಿವಿಕ್ರಮನೆಂಬ ವಿದ್ವಾಂಸ ಪುತ್ರನಾದ ಗುಣಶಾಲಿ ಮಾಯಿಭಟ್ಟನೆಂಬುವನಿಗೆ ಹರಿಹರ ಮಹಾರಾಯನು ದಾನ ನೀಡಿದನು. ನಂತರ ಹರಿಹರ ಪುರ ಅಗ್ರಹಾರವಾಗಿ ಪರಿವರ್ತಿಸಲಾಯಿತು''[೧೨] ಎಂಬುದನ್ನು ಸ್ಪಷ್ಟಪಡಿಸುತ್ತದೆ. ಶಾಸನದಲ್ಲಿ ಉಕ್ತವಾದ ಬೆಣೆಕಲ್ಲು ಗ್ರಾಮವು ಈಗ ಆಂಧ್ರ ಪ್ರದೇಶಕ್ಕೆ ಸೇರಿದ ಗ್ರಾಮವಾಗಿದೆ.

ಮುರುಡಿ ಗ್ರಾಮದ ಬಸವನ ಗುಡಿಯ ಹಿಂದಿರುವ ೧೫೫೬ರ ಶಿಲಾಶಾಸನವು ಈ ರೀತಿ ಹೇಳುತ್ತದೆ. ಮಹಾರಾಜಾಧಿರಾಜ ವೀರ ಪ್ರತಾಪ ಸದಾಶಿವರಾಯನು ವಿದ್ಯಾನಗರದಲ್ಲಿ ಆಡಳಿತ ನಡೆಸುತ್ತಿರುವಾಗ ಮಹಾಮಂಡಲೇಶ್ವರರಾದ ರಾಮರಾಯ, ವಿಠಲರಾಯ, ತಿರುಮಲದೇವ ಎಂಬ ಮೂವರು ತಮ್ಮ ಕಾರ್ಯದಲ್ಲಿ ನಿರತರಾಗಿದ್ದರು. ಆಗ ರಾಯದುರ್ಗ ಸೀಮೆಗೆ ಸಲ್ಲುವ 'ಮುರುಡಿ' ಗ್ರಾಮದ ಅಗ್ರಹಾರವನ್ನು ವಿದ್ವನ್ಮಣಿಗಳಾದ ಬ್ರಾಹ್ಮಣರಿಗೆ ದಾನವಾಗಿ ಕೊಡಲಾಯಿತು. ''ಬುಕ್ಕರಾಯ ಪುರ''ವೆಂದು ಪ್ರತಿನಾಮಧ್ಯೇಯವುಳ್ಳ ಮುರಡಿಯ ಅಗ್ರಹಾರವನ್ನು ಸರ್ವಮತದಿಂದ ನೀಡಿ ಅದಕ್ಕೆ ಒಬ್ಬ

ತಳವಾರನನ್ನು ನೇಮಿಸಲಾಯಿತು. ಜೊತೆಗೆ 'ಕಣೇಕಲ್ಲನ್ನು' ಕೂಡಾ ಅದೇ ಗ್ರಾಮಕ್ಕೆ ಸೇರಿಸಿ ವಿಠಲ ರಾಚಯ್ಯನಿಗೆ ಸಹಮತದಿಂದ ದಾನವಾಗಿ ನೀಡಿದರು ಎಂಬುದು ಶಾಸನಗಳಿಂದ ತಿಳಿದುಬರುತ್ತದೆ.

ದೇವಸಮುದ್ರದಲ್ಲಿರುವ ಶಿಲಾಶಾಸನವನ್ನು ವೀರಸದಾಶಿವರಾಯನ ಆಳ್ವಿಕೆಯ ಅವಧಿಯಲ್ಲಿ ಆಳಿಯ ರಾಮರಾಯನು ಹಾಕಿಸಿದ್ದಾನೆ. "ರಾಯದುರ್ಗ ಸೀಮೆಯ ದೇವಸಮುದ್ರಕ್ಕೆ ಸೇರಿದ 'ಉರುಮ', 'ಮುರುವಡಿ, ದಾಖವಾಡಿ, ದಡಗೂರು, ಜಂಬಲಮಲಿಕೆ, ಪೊಕ್ಕಳಿಕೆ, ವಿಠಲಾಪುರ ಈ ಎಲ್ಲಾ ಗ್ರಾಮಗಳ ಅಂಗಡಿಗಳಿಂದ ಅಗಸರು, ನಾಯಿಂದರು, ಬಣಜಿಗರು, ಅಲ್ಲದೆ ಉಪ್ಪಿನವರಿಂದ ಬಂದಂತಹ ಸುಂಕವನ್ನು ದೇವಸಮುದ್ರದ ಬೀರೆ ದೇವರ ಅಮೃತಪಡಿಗೆ ಸಲ್ಲುವುದು. ಆದರೆ ವೀರ ಪ್ರತಾಪ ಸದಾಶಿವರಾಯನ ಪಟ್ಟಣದಲ್ಲಿ ವಿಠಲ ದೇವಾಲಯದ ಲೆಕ್ಕವನ್ನು ಪರಿಶೀಲಿಸುವಾಗ ಮೇಲೆ ತಿಳಿಸಿದ ೭ ಗ್ರಾಮಗಳಿಂದ ಬರುತ್ತಿದ್ದ ಸುಂಕವನ್ನು ಬೀರದೇವರ ದೇವಾಲಯಕ್ಕೆ ೧೫೨೧ರ ಪೂರ್ವದಲ್ಲೇ ಕೃಷ್ಣದೇವರಾಯನ ಕಾಲದಲ್ಲಿ ನೀಡಿದ್ದು, ಕಾಲನಂತರದಲ್ಲಿ ಇದು ನಿಂತುಹೋಗಿತ್ತು. ಇದನ್ನು ಸದಾಶಿವರಾಯನು ಚಾಲನೆಗೆ ತಂದು ಇದರ ಜೊತೆಗೆ ಮತ್ತಷ್ಟು ತೆರಿಗೆಗಳ ಆದಾಯವನ್ನು ಇದಕ್ಕೆ ಸೇರಿಸಿ ಅಳಿಯರಾಮರಾಯ ಪುಣ್ಯವಾಗಲೆಂದು ದಾನ ನೀಡಿದನು."[೧೩] ಈ ಶಾಸನದಲ್ಲಿ ಉಕ್ತವಾದ 'ಉರುಮ' ಗ್ರಾಮವು ಉರುತಳ(ಉರ್ಥಾಳ) ಆಗಿದ್ದು, ದಾಖವಾಡಿ ಎಂಬ ಗ್ರಾಮವು ಈ ಪ್ರದೇಶದ ಸುತ್ತಲೂ ಎಲ್ಲಿಯೂ ಆ ಹೆಸರಿನ ಊರು ಇಲ್ಲ ಎಂಬುದು ಗಮನಿಸಬೇಕಾದ ಅಂಶವಾಗಿದೆ.

"ಸಂತೇಗೋವಿ (ಸಂತೇಗುಡ್ಡ)ಯ ದಿಡಿಗೆ ಈಶ್ವರಯ್ಯನವರಲ್ಲಿದ್ದ ಕ್ರಿ.ಶ.೧೬೬೫ರ ತಾಮ್ರ ಶಾಸನವು ವಿರುಪಾಕ್ಷ ದೇವರನ್ನು ಪ್ರಾರ್ಥಿಸಿ ಶ್ರೀಮನ್ ಮಹಾನಾಯಕ ಆಚಾರ್ಯ ಇಮ್ಮಡಿ ಘಟಿಯಂಕ ಭೀಮ, ಸಂಡೂರು, ಗುಡೇಕೋಟೆ, ಬಾಣರಾವಿ, ಗ್ರಾಮದ ರಾಜರಾಜಶ್ರೀ ಬೋರಿನಾಯಕ್ ಬೊಮ್ಮವ್ವ ನಾಗತಿಯರು, ಗುರುಮಠದ, ಹಿರೇಮಠದ, ಆರಿದ್ರಮಠದ ಮಹೇಶ್ವರಯ್ಯನವರ ಉಸ್ತುವಾರಿಕೆಯಲ್ಲಿ ಪೂಜಾರಿ ಹಿರೇದಾಸಪ್ಪ, ಪಟ್ಟಣಶೆಟ್ಟಿ, ಕೊಮ್ಮಟಿಗರ ತಿಮ್ಮಪ್ಪ, ಗಂಧ ಹಿಡಿಯದ ಶೀನಪ್ಪ ಲಕ್ಷ್ಮಪ್ಪ ಗೌಡ ಮತ್ತು ಶಾನಭೋಗ -ಇನ್ನು ಮುಂತಾದ ೧೨ ಮಂದಿ ಆಯಗಾರರು ದಳವಾಯಿಗಳು ಸೇರಿ "ಬಾಣರಾವಿ"ಯಲ್ಲಿ ದೇವಾಲಯವನ್ನು ಕಟ್ಟಿಸಿ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿ, ಆ ದೇವಾಲಯದ ಮೂರ್ತಿಗೆ ಬಂಗಾರದ ಕಿರೀಟವನ್ನು ಮಾಡಿಸುತ್ತಾರೆ. ಅದನ್ನು ಕೆಂಬಾವಿ ವೀರಣ್ಣನ ಮನೆಯಲ್ಲಿ ಇಡಲಾಗಿದ್ದಾಗ ಕಳ್ಳರು ಅಪಹರಿಸಿದರು. ಅದನ್ನು ಹೇಗೋ ಕಳ್ಳರಿಂದ ವಶಪಡಿಸಿಕೊಂಡು ಸತ್ಯಪ್ಪನ ಮನೆಯಲ್ಲಿ ಇಡಲಾಯಿತು. ಇಲ್ಲಿಯೂ ಸಹ ಕಳ್ಳರು ಅಪಹರಿಸಿದಾಗ ಮತ್ತೆ ವಶಪಡಿಸಿಕೊಂಡು ಕಳ್ಳನಿಗೆ ೧೨೦ ವರಹ ದಂಡ ವಿಧಿಸಿ ಅದನ್ನು ಅಕ್ಕಸಾಲಿಗರ ಮನೆಯಲ್ಲಿಟ್ಟು ಭೂಮಿಯನ್ನು ಉಂಬಳಿಯಾಗಿ ಬಿಟ್ಟರು. ಗೌಡ, ಶಾನಭೋಗ, ೧೨ ಮಂದಿ ಆಯಗಾರರು ಹಾಗೂ ಸಮಸ್ತರು ಸೇರಿ ದೈವದ ಮುಂದೆ ಪ್ರಮಾಣೀಕರಿಸಿ ಆ ಭೂಮಿಯನ್ನು ದಾನ ನೀಡಿದರು. ವಿಠಲಾಪುರ, ಹಿರೇಕೆರೂರು, ಬಾಣರಾವಿ.

ಮಲ್ಲಾಪುರ, ತಿಮ್ಮಲಾಪುರ, ರಾಜಾಪುರ, ಉಬ್ಬಲಗಂಡಿ, ಆವಿನ ಮಡಗು, ಮುದಕಲು, ಲಿಂಗಯ್ಯನಹಳ್ಳಿ, ಮೆಟ್ರಿಕೆ, ಗುಡ್ನಹಳ್ಳಿ ಮುಂತಾದ ಗ್ರಾಮಗಳ ಭೂಮಿಯನ್ನು ಉಂಬಳಿ ಬಿಟ್ಟಿದ್ದನ್ನು ಉಲ್ಲೇಖಿಸುತ್ತದೆ."[೧೪]

ಈ ಶಾಸನದಲ್ಲಿ ಉಕ್ತವಾದ ಕೆಲವು ಗ್ರಾಮಗಳ ಹೆಸರುಗಳು ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನಲ್ಲಿ ಸೇರಿಕೊಂಡಿರುವುದು ಗಮನಿಸಬೇಕಾದ ಸಂಗತಿಯಾಗಿದೆ. ನಾಗಸಮುದ್ರದ ಕ್ರಿ.ಶ.೧೪೭೭ರ ಶಾಸನದಲ್ಲಿ "ಕೋನರಾಜಯ್ಯ ಮಹಾ ಅರಸುಗಳು" ಎಂದು ಉಲ್ಲೇಖವಿದೆ. ಈತನಿಂದ ಕೋನಸಾಗರ ಎಂಬ ಹೆಸರು ಪ್ರಾಪ್ತವಾಗಿದೆ ಎಂದು ಹೇಳಬಹುದು.

ಭೂತಕಾಲದ ದಾಖಲೆಗಳಾಗಿ ಉಳಿದ ಈ ಶಾಸನಗಳಲ್ಲಿ ಉಕ್ತವಾದ ಸ್ಥಳನಾಮಗಳನ್ನು ಇಲ್ಲಿ ಪಟ್ಟಿಮಾಡಲಾಗಿದೆ. ಮುಖ್ಯವಾಗಿ ಇಲ್ಲಿ ಶಾಸನೋಕ್ತ ಸ್ಥಳನಾಮಗಳ ಪಟ್ಟಿಯಲ್ಲಿ ರಾಯದುರ್ಗ, ಕಣೇಕಲ್ಲು, ಬೆಣಕಲ್ಲು, ಬದಂಡಾ(ಬಂಡೂರು) ಈ ಸ್ಥಳಗಳು ಈಗಿನ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ರಾಯದುರ್ಗ ತಾಲ್ಲೂಕಿಗೆ ಒಳಪಟ್ಟಿದೆ. ಶಾಸನೋಕ್ತ ಸ್ಥಳನಾಮಗಳ ಪಟ್ಟಿ ಈ ಕೆಳಗಿನಂತೆ ಗಮನಿಸಬಹುದಾಗಿದೆ.

ಮೊಳಕಾಲ್ಮೂರು ಪರಿಸರದ ಶಾಸನೋಕ್ತ ಸ್ಥಳನಾಮಗಳ ಪಟ್ಟಿ

ಕ್ರ.ಸಂ.	ಶಾಸನೋಕ್ತ ಸ್ಥಳನಾಮಗಳು	ಶಾಸನದ ಕಾಲ	ರಾಜವಂಶ
೧.	ಇಸಿಲ	ಕ್ರಿ.ಪೂ.೨೭೩	ಮೌರ್ಯರು
೨.	ಸುವರ್ಣಗಿರಿ	,,	,,
೩.	ಬ್ರಹ್ಮಗಿರಿ	,,	,,
೪.	ವಿಜಯಗಿರಿ	ಕ್ರಿ.ಶ.೧೨೧೫	ಹೊಯ್ಸಳರು
೫.	ಚಾಮಗೊಂಡನಹಳ್ಳಿ (ಬೇಚರಾಕ್ ಗ್ರಾಮ)	ಕ್ರಿ.ಶ.೯೮೮	ಕದಂಬರು
೬.	ಲುಂಕೆಕೋಟೆ(ಲುಂಕೇಶ)	,,	
೭.	ಕಂಪಲಿ(ಕಂಪ್ಲಿ)	೧೦೬೪	ನೊಳಂಬರು
೮.	ಕಣೇಕಲ್ಲು	,,	
೯.	ಬದಂಡಾ(ಬಂಡೂರು)	,,	
೧೦.	ಬ್ರಹ್ಮೇಶ್ವರ(ಬ್ರಹ್ಮಗಿರಿ)	೧೨೬೦	ನಿಡುಗಲ್ಲುಚೋಳರು
೧೧.	ರೊದ್ದ(ರೊಪ್ಪ)	,,	
೧೨.	ಜೀಯರಹಳ್ಳಿ(ರಾಮಸಾಗರ) ೧೩೮೭	,,	

೧೩.	ಬೆಣಕಲ್ಲು	೧೦೭೧	ನೊಳಂಬರು
೧೪.	ಹರಿಹರಪುರ (ಕರಡಿಹಳ್ಳಿ)	೧೫೫೬	ವಿಜಯನಗರ
೧೫.	ಬುಕ್ಕರಾಯಪುರ (ಮುರುಡಿ)	,,	
೧೬.	ಉರುಮ(ಉರ್ಥಾಳ್)	,,	
೧೭.	ಮುರವಡಿ (ಮುರುಡಿ)	೧೫೫೬	ವಿಜಯನಗರ
೧೮.	ದಾಖವಾಡಿ	,,	
೧೯.	ದಡಗೂರು	,,	
೨೦.	ಜಂಬಲಮಲಿಕೆ (ಜಂಬಲಮಲ್ಕಿ)	,,	
೨೧.	ಪೊಕುಜಿಕೆ(ಪಕ್ಕೂರ್ತಿ)	,,	
೨೨.	ವಿಠಲಾಪುರ	,,	
೨೩.	ಬಾಣರಾವಿ (ಬಾಂಡ್ರಾವಿ)	೧೬೬೫	ವಿಜಯನಗರ
೨೪.	ಸಂತೇಗೋವಿ(ಸಂತೇಗುಡ್ಡ)	,,	
೨೫.	ವಿಠಲಾಪುರ	,,	
೨೬.	ರಾಜಾಪುರ	,,	
೨೭.	ಉಬ್ಬಲಗಂಡಿ	,,	
೨೮.	ತಿಮ್ಮಲಾಪುರ	,,	
೨೯.	ಆವಿನ ಮೊಡಗು	,,	
೩೦.	ಲಿಂಗಯ್ಯನ ಹಳ್ಳಿ	,,	
೩೧.	ಮೆಟ್ರಿಕೆ	,,	
೩೨.	ಕೋನಸಾಗರ	೧೪೭೭	,,
೩೩.	ದೇವಸಮುದ್ರ	೧೫೫೦	,,
೩೪.	ಜಟಂಗಿರಾಮೇಶ್ವರ	೬೬೧	ರಾಷ್ಟ್ರಕೂಟರು
೩೫.	ಹಿರೇಆರ್ಯರ ಗುಡ್ಡ (ಹಿರಾಣಿ ಗುಡ್ಡ)	-	ಕದಂಬರು
೩೬.	ರಾಯದುರ್ಗ	೧೫೫೬	ವಿಜಯನಗರ
೩೭.	ಸಿದ್ದರಪುರ (ಸಿದ್ದಾಪುರ)	-	ಮೌರ್ಯರು
೩೮.	ಪೆರೂರಹಳ್ಳಿ(ಹೆರೂರಹಳ್ಳಿ)	೯೯೧	ರಾಷ್ಟ್ರಕೂಟರು

೨. ಸ್ಥಳನಾಮಗಳಲ್ಲಿ ಭಾಷೆಯ ಚಾರಿತ್ರಿಕ ಬೆಳವಣಿಗೆ

ಶಾಸನಗಳಲ್ಲಿ ಉಕ್ತವಾಗಿರುವ ಸ್ಥಳನಾಮಗಳನ್ನು ಅನುಲಕ್ಷಿಸಿ, ಭಾಷೆಯ ಚಾರಿತ್ರಿಕ ಬೆಳವಣಿಗೆಯನ್ನು ಗುರುತಿಸಬಹುದು. ಆಯಾ ಕಾಲದಲ್ಲಿ ಬದಲಾದ ಭಾಷೆಯು ಸಹಜವಾಗಿ ಸ್ಥಳನಾಮಗಳ ಮೇಲೆಯೂ ಪ್ರಭಾವ ಬೀರಿರುವುದನ್ನು ಇಲ್ಲಿನ ಶಾಸನಗಳಿಂದ ತಿಳಿಯುತ್ತವೆ. ಭಾಷೆಯ ಚಾರಿತ್ರಿಕ ಬೆಳವಣಿಗೆಯ ಅಧ್ಯಯನದಲ್ಲಿ ಈ ರೀತಿಯ ಮಾದರಿಯು ಕೂಡ ಪ್ರಮುಖವೆಂದು ತಿಳಿಯಬಹುದು. ಇದಕ್ಕೆ ಉದಾಹರಣೆಯಾಗಿ ಕೆಲವು ಅಂಶಗಳನ್ನು ನೋಡಬಹುದು.

೧. **ಶಕಟರೇಫ ಮತ್ತು ರಳ :** ಹಳಗನ್ನಡ ಭಾಷೆಯಲ್ಲಿ ಕಾವ್ಯದಲ್ಲಿ ಬಳಕೆಯಾಗಿರುವ ಱ, ೞ, ಕಾರಗಳು ಶಾಸನಗಳಲ್ಲಿಯೂ ಬರೆಯಲ್ಪಟ್ಟಿವೆ.

ಉದಾ : ಱ - ಪೊಕ್ಕುಱಕೆ - ೧೫೫೬ ಪೊಕ್ಕುಱಕೆ

೨. **ಪ > ಹ ಬದಲಾವಣೆ :** ಶಾಸನೋಕ್ತ ಸ್ಥಳನಾಮಗಳಲ್ಲಿ 'ಪ' ಕಾರವು ಮೊದಲು ಬಳಕೆಯಾಗಿದ್ದು ಅದು ನಂತರದ ಅವಧಿಯಲ್ಲಿ 'ಹ'ಕಾರವಾಗಿರುವುದು ಶಾಸನಗಳಿಂದ ತಿಳಿಯುತ್ತದೆ.

ಉದಾ : ಪೆರೂರ ಹಳ್ಳಿ (ಹೆರೂರ ಹಳ್ಳಿ), ಕ್ರಿ.ಶ.೯೯೧

೩. **ಲ > ನ ಬದಲಾವಣೆ :** ಶಾಸನದಲ್ಲಿ ಉಕ್ತವಾದ 'ನ' ಕಾರದ ಸ್ಥಾನದಲ್ಲಿ 'ಲ'ಕಾರವು ಬಳಕೆಯಾದ ಬಗೆಗೆ ಮಾಹಿತಿಗಳಿವೆ.

ಉದಾ : ಲುಂಕಪ್ಪ - ನುಂಕಪ್ಪ

ಹೀಗೆ ಒಂದು ಭಾಷೆಯ ಚಾರಿತ್ರಿಕ ಅಂಶಗಳಿಂದ ಅದರ ಬೆಳವಣಿಗೆಯ ಹಂತಗಳನ್ನು ಸ್ಥಳನಾಮಗಳ ಮೂಲಕ ತಿಳಿಯಬಹುದು. ಬಹುಮುಖ್ಯವಾಗಿ ಇಲ್ಲಿ ಚರ್ಚಿಸಿದ ಶಾಸನೋಕ್ತ ಸ್ಥಳನಾಮಗಳಲ್ಲಿ ಶಕಟರೇಫ ರಳ, ಪ>ಹ, ಲ>ನ ಧ್ವನಿ ಬದಲಾವಣೆ ಬಳಕೆಯ ಇತ್ಯಾದಿಯಿಂದ ಕ್ರಮೇಣ ಭಾಷೆಯು ಬೆಳೆಯುತ್ತಾ ಸ್ಥಳನಾಮಗಳಲ್ಲಿ ಪ್ರಯೋಗವಾದುದನ್ನು ಗಮನಿಸಿ ಅದರ ಸ್ಥಿತ್ಯಂತರ ಅವಸ್ಥಾಂತರಗಳನ್ನು ಚಾರಿತ್ರಿಕವಾಗಿ ಗುರುತಿಸಬಹುದು. ಈ ಕಾರಣದಿಂದ ಶಾಸನೋಕ್ತ ಸ್ಥಳನಾಮಗಳಲ್ಲಿ ಭಾಷೆಯ ಚಾರಿತ್ರಿಕ ಬೆಳವಣಿಗೆಯನ್ನು ಸಮಗ್ರ ಅಧ್ಯಯನಕ್ಕೆ ತೆಗೆದುಕೊಳ್ಳುವ ಅಗತ್ಯವೂ ಇದೆಯೆನ್ನಬಹುದು.

೩. ಪ್ರಾದೇಶಿಕ ಆಡಳಿತಗಾರರು ಮತ್ತು ಸ್ಥಳನಾಮಗಳು

ಇತಿಹಾಸದ ಪರದೆಯ ಮೇಲೆ ಆಗಿ ಹೋದ ಮೌರ್ಯ, ಶಾತವಾಹನ, ಕದಂಬ, ಚಾಲುಕ್ಯ, ಹೊಯ್ಸಳ, ರಾಷ್ಟ್ರಕೂಟ, ವಿಜಯನಗರ, ಮುಸ್ಲಿಂ, ಆಂಗ್ಲೇಯರ ಆಡಳಿತಾವಧಿಯಲ್ಲಿ ಅನೇಕ ರೀತಿಯ

ಸ್ಥಿತ್ಯಂತರಗಳು ಏರ್ಪಟ್ಟಿವೆ. ಮುಖ್ಯವಾಗಿ ಈ ರಾಜ ಪ್ರಭುತ್ವದ ಅಡಿಯಲ್ಲಿ ಆಡಳಿತ ನಡೆಸಿದ ಪಾಳೆಗಾರರು, ನಾಯಕರು, ವಿಜಯನಗರದ ಅರಸರು, ಹೊಯ್ಸಳರು ಗೌಡರು ಮುಂತಾದ ಸಾಮಂತರು ಕೆಲವು ಸಂದರ್ಭದಲ್ಲಿ ತಮ್ಮ ಹೆಸರು, ತಮ್ಮ ಕುಟುಂಬದ ಸದಸ್ಯರುಗಳ ಹೆಸರುಗಳನ್ನು ಪ್ರತಿನಿಧಿಸುವ ಸಲುವಾಗಿ, ಅದರಂತೆ ತಾವು ಮಾಡಿದ ಯುದ್ಧ ವಿಜಯವಾದಲ್ಲಿ, ಆ ಯುದ್ಧದ ಸವಿನೆನಪಿಗೆ ಕೆಲವು ಗ್ರಾಮಗಳನ್ನು, ಕೆರೆ, ಭಾವಿ, ಕೋಟೆಗಳನ್ನು ನಿರ್ಮಿಸಿದ್ದಾರೆ. ಅವುಗಳಿಗೆ ತಮ್ಮ ಹೆಸರುಗಳನ್ನು ಇಟ್ಟಿರುವುದು ತಿಳಿದುಬರುತ್ತದೆ. ಆ ಬಗೆಯ ಉದಾಹರಣೆಗಳನ್ನು ಇಲ್ಲಿ ನೋಡಬಹುದು.

೧. ವಿಜಯಗಿರಿ : ಕ್ರಿ.ಶ.೧೨೭೮ರ ಶಾಸನದಲ್ಲಿ 'ಹನೆಯಕೋಟೆ' ಎಂಬ ಉಲ್ಲೇಖವಿದೆ. ಈ ಹನೆಯ ಕೋಟೆಯನ್ನು ಕ್ರಿ.ಶ.೧೨೧೫ರಲ್ಲಿ ಹೊಯ್ಸಳರ ದೊರೆ ಮೂರನೇ ಬಲ್ಲಾಳನು ಗೆದ್ದು ಅಲ್ಲಿ ಮಗನ ಹೆಸರಿನಲ್ಲಿ 'ವಿಜಯಗಿರಿ' ಎಂಬ ಪಟ್ಟಣವನ್ನು ನಿರ್ಮಿಸಿ, ಮೊದಲಿದ್ದ ಕೋಟೆಯನ್ನು ವಿಸ್ತರಿಸಿ ಬಲಪಡಿಸಿದನು.[೧೫]

೨. ಕೋನಸಾಗರ : ನಾಗಸಮುದ್ರದ ಕ್ರಿ.ಶ.೧೪೭೭ರ ಶಾಸನದಲ್ಲಿ "ಕೋನರಾಜಯ್ಯ ಮಹಾ ಅರಸುಗಳು" ಎಂಬ ಉಲ್ಲೇಖ ಬರುತ್ತದೆ. ಈತನಿಂದ 'ಕೋನಸಾಗರ' ಎಂಬ ಹೆಸರುಪ್ರಾಪ್ತವಾಗಿದೆಯೆನ್ನಬಹುದು.[೧೬]

೩. ಬೊಮ್ಮಗೊಂಡನಕೆರೆ : 'ಬೊಮ್ಮಗೌಡ' ಎನ್ನುವವನು ಇಲ್ಲಿ ಕೆರೆ ಕಟ್ಟಿಸಿದ್ದರಿಂದ 'ಬೊಮ್ಮಗೊಂಡನ ಕೆರೆ' ಎಂಬ ಹೆಸರು ಬಂದಿದೆಯೆಂದು ಸ್ಥಳೀಯರಿಂದ ತಿಳಿದುಬರುತ್ತದೆ.

ವಿಜಯನಗರದ ಪ್ರೌಢದೇವರಾಯನು ತನ್ನ ರಾಣಿಯರ ಹೆಸರಿನಲ್ಲಿ ಎರಡು ಕೆರೆಗಳನ್ನು ನಿರ್ಮಿಸಿ, ನಾಗಲಾಂಬಿಕೆ ಹೆಸರಿಗೆ ನಾಗಸಮದ್ರ, ಗಂಗಾಂಬಿಕೆ(ಗೌರಸಮುದ್ರ) ಎಂದು ನಾಮಕರಣ ಮಾಡಿ ಪ್ರೌಢದೇವರಾಯನ ಹೆಸರಿನಲ್ಲಿ 'ದೇವಸಮುದ್ರ' ಎಂದು ನಾಮಕರಣ ಮಾಡಿರುವುದು ಆಧಾರಗಳಿಂದ ತಿಳಿದುಬರುತ್ತದೆ. ಮೊಳಕಾಲ್ಮೂರು ಬೆಟ್ಟದ ಮೇಲಿನ ಕೆರೆಯ ಬಳಿಯಿರುವ ಬಂಡೆಯಲ್ಲಿನ ಶಾಸನವು "ಶ್ರೀಮದ್ ಮಹಾನಾಯಕ ಚಾರ್ಯಹಟ್ಟಿ(ನಾಯಕನಹಟ್ಟಿ) ಕಸ್ತೂರಿ ಮಲ್ಲಪ್ಪನಾಯಕನು ತನ್ನ ತಾಯಿಯಾದ 'ಲಕ್ಷ್ಮವ್ವ ನಾಗತಿ'ಯ ಹೆಸರಿನಲ್ಲಿ ಕ್ರಿ.ಶ.೧೬೨೦ರಲ್ಲಿ ಕೆರೆಯನ್ನು ನಿರ್ಮಿಸಿದ ವಿಚಾರವು ಪ್ರಸ್ತಾಪಿಸುತ್ತದೆ"[೧೭] ಈಗಲೂ ಈ ಬೆಟ್ಟದ ಮೇಲೆ ಕೆರೆಯಿದೆ. ಈ ಕೆರೆಯೊಳಗಿನ ಹುಟ್ಟು ಗುಂಡಿನ ಮೇಲಿರುವ ಶಾಸನವು ಕಾಳಿದಾಸ ಮತ್ತು ಹೇಮಚಂದ್ರ ಕವಿಗಳ ಬಗೆಗೆ ಉಲ್ಲೇಖಿಸುತ್ತದೆ. ಹೀಗೆ ಸ್ಥಳನಾಮಗಳಿಂದ ಪ್ರಾದೇಶಿಕ ವೀರರ ಚರಿತ್ರೆಯೊಂದಿಗೆ ಅಲ್ಲಿನ ಸ್ಥಳೀಯ ಸಂಸ್ಕೃತಿಯನ್ನು ಅನಾವರಣಗೊಳಿಸಬಹುದು.

೪. ಸ್ಥಳನಾಮಗಳ ಪ್ರತಿನಾಮಕರಣ

ಒಂದು ರಾಜಾಧಿಪತ್ಯದಿಂದ ಇನ್ನೊಂದು ರಾಜಾಧಿಪತ್ಯಕ್ಕೆ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಒಂದು ಗ್ರಾಮವು ಅಥವಾ ಒಂದು ಸ್ಥಳವು ಪಡೆದುಕೊಂಡಿರುವ ಸ್ಥಿತ್ಯಂತರಗಳನ್ನು

ವಸ್ತುನಿಷ್ಠವಾಗಿ ಸಂಶೋಧಿಸಿದರೆ, ಅವುಗಳ ಪ್ರತಿನಾಮಕರಣ, ಪುನರ್ ನಾಮಕರಣದ ವೈಶಿಷ್ಟ್ಯತೆಗಳು ಉಳಿಯುತ್ತವೆ. ''ಮೂಲತಃ ಅಲ್ಲಿಯ ಸ್ಥಳೀಯರು ತಮ್ಮ ನೆಲೆಗಳಿಗೆ ಇಟ್ಟುಕೊಂಡ ಹೆಸರನ್ನು ಆ ಪ್ರಾಂತದ ಅಥವಾ ಆಕ್ರಮಿತ ಪ್ರಭುತ್ವದ ಜನತೆಯು ಒಂದು ಘಟನೆಯ ನೆನಪಿಗಾಗಿ, ಬದಲಾಯಿಸಿ ಪುನರ್ ನಾಮಕರಣ ಮಾಡಿದ್ದು ತಿಳಿಯುತ್ತದೆ. ಯುದ್ಧ ವಿಜಯವಲ್ಲದೇ ರಾಜನ, ತಂದೆ, ತಾಯಿಯ, ಅವನ ಪತ್ನಿ, ಪುತ್ರರ ನೆನಪಿಗಾಗಿಯೋ ಹಾಗೂ ದಾನ ನೀಡಿ ಅಗ್ರಹಾರವನ್ನಾಗಿ ಪರಿವರ್ತಿಸಿದ ನೆನಪಿಗಾಗಿಯೋ ಅನೇಕ ಗ್ರಾಮಗಳಿಗೆ ಪ್ರತಿನಾಮಕರಣ ಮಾಡಿದ್ದನ್ನು ಶಾಸನಗಳು ತಿಳಿಸುತ್ತವೆ. ಅಲ್ಲಿ ನೆಲೆಸಿದ ಜನತೆಯು ಪ್ರತಿನಾಮಕರಣವನ್ನು ಸ್ವೀಕರಿಸಲಿ, ಸ್ವೀಕರಿಸದಿರಲಿ, ರಾಜಾಜ್ಞೆಯ ಮೇರೆಗೆ ಅದು ಕಡ್ಡಾಯವೂ ಆದ ಮತ್ತು ಆ ಹೆಸರನ್ನು ವಿರೋಧಿಸಿದವರಿಗೆ ಶಿಕ್ಷೆಯನ್ನು ವಿಧಿಸಿದ ಘಟನೆಗಳು ಕನ್ನಡ ನಾಡಿಲ್ಲಿ ನಡೆದಿವೆ. ಅದೇನಿದ್ದರೂ ಒತ್ತಡ, ಒತ್ತಾಯದಿಂದಲಾದರೂ ಆ ಸ್ಥಳಕ್ಕೆ ಬದಲಿ ಹೆಸರು ಪ್ರಾಪ್ತವಾದದ್ದಿದೆ. ಮುಂದಿನ ಹಂತದಲ್ಲಿ ಅವು ನಾಶವಾಗಿಯೂ, ಮತ್ತೆ ಮೊದಲಿನ ಹೆಸರು ಚಾಲ್ತಿಗೆ ಬಂದಂತಹ ಉದಾಹರಣೆಗಳಿವೆ.

ಮೊಳಕಾಲ್ಮೂರು ಪರಿಸರದಲ್ಲಿ ದೊರೆಯುವ ಪ್ರತಿನಾಮಕರಣ ಸಂದರ್ಭಗಳನ್ನು ಕೆಲವು ಶಾಸನಗಳು ಉಲ್ಲೇಖಿಸಿವೆ. ಅಂಥಾ ಕೆಲವು ಮಾದರಿಗಳು ಇಲ್ಲಿವೆ.

೧. ಕರಡಿಹಳ್ಳಿ - ಹರಿಹರ ಪುರ : ಕರಡಿಹಳ್ಳಿಯ ಪಟೇಲರ ವಶದಲ್ಲಿದ್ದ ತಾಮ್ರಶಾಸನ ಹಾಗೂ ಹನುಮಂತ ದೇವರ ಗುಡಿಯ ಮುಂದಿರುವ ಶಾಸನ ಕ್ರಿ.ಶ.೧೫೫೬ರ ವಿಜಯನಗರದ ಹರಿಹರನನ್ನು ಹಾಗೂ ಸದಶಿವರಾಯನನ್ನು ಕುರಿತು ಉಲ್ಲೇಖಿಸುತ್ತದೆ. ''ವಿಜಯನಗರದ ಹರಿಹರ(ಹಕ್ಕ ಭೂಪತಿ)ಯು ಹೇಮಕೂಟದ ಶ್ರೀ ವಿರೂಪಾಕ್ಷಿ ಸನ್ನಿಧಿಯಲ್ಲಿ ಆಳ್ವಿಕೆ ನಡೆಸುತ್ತಿದ್ದಾಗ ಈ ವೇಳೆಯಲ್ಲಿ ರಾಯದುರ್ಗ ಸೀಮೆಯ ಉತ್ತರ ಭಾಗದಲ್ಲಿರುವ 'ಹರಿಹರ ಪುರ'ವೆಂಬ ಪ್ರತಿನಾಮಧ್ಯೇಯವುಳ್ಳ 'ಕರಡಿಹಳ್ಳಿ' ಎಂಬ ಗ್ರಾಮವನ್ನು ಭೂಸುರತ್ರಿವಿಕ್ರಮನೆಂಬ ವಿದ್ವಾಂಸನ ಪುತ್ರನಾದ ಗುಣಶಾಲಿ ಮಾಯಿಭಟ್ಟನೆಂಬುವನಿಗೆ ಹರಿಹರ ಮಹಾರಾಯನು ದಾನ ನೀಡಿದನು.''[೧೮] ನಂತರ ಹರಿಹರ ಪುರವನ್ನು ಅಗ್ರಹಾರವಾಗಿ ಪರಿವರ್ತಿಸಲಾಯಿತು.

೨. ಮುರುಡಿ - ಬುಕ್ಕರಾಯಪುರ : ಮುರುಡಿ ಗ್ರಾಮದ ಬಸವನ ಗುಡಿಯ ಹಿಂದಿರುವ ಕ್ರಿ.ಶ.೧೫೫೬ರ ಶಿಲಾಶಾಸನವು ಈ ರೀತಿ ಹೇಳುತ್ತದೆ. ಮಹಾರಾಜಧಿರಾಜ ವೀರ ಪ್ರತಾಪ ಸದಾಶಿವರಾಯನು ವಿದ್ಯಾನಗರದಲ್ಲಿ ಆಡಳಿತ ನಡೆಸುತ್ತಿರುವಾಗ ಮಹಾಮಂಡಲೇಶ್ವರರಾದ ರಾಮರಾಯ, ವಿಠಲರಾಯ, ತಿರುಮಲದೇವ ಎಂಬ ಮೂವರು ತಮ್ಮ ಕಾರ್ಯದಲ್ಲಿ ನಿರತರಾಗಿದ್ದರು. ರಾಯದುರ್ಗ ಸೀಮೆಗೆ ಸಲ್ಲುವ ಮುರುಡಿ ಗ್ರಾಮದ ಅಗ್ರಹಾರವನ್ನು ವಿದ್ವನ್ಮಣಿಗಳಾದ ಬ್ರಾಹ್ಮಣರಿಗೆ ದಾನ ಕೊಡಲಾಯಿತು. 'ಬುಕ್ಕರಾಯಪುರ'ವೆಂದು ಪ್ರತಿನಾಮಧ್ಯೇಯವುಳ್ಳ ಮುರುಡಿಯ ಅಗ್ರಹಾರವನ್ನು ಸರ್ವಮತದಿಂದ ನೀಡಿ

ಅದಕ್ಕೆ ಒಬ್ಬ ತಳವಾರನನ್ನು ನೇಮಿಸಲಾಯಿತು. ಜೊತೆಗೆ ಕಣೇಕಲ್ಲನ್ನು ಗ್ರಾಮಕ್ಕೆ ಸೇರಿಸಿ ವಿಠಲ ರಾಚಯ್ಯನಿಗೆ ಸಹಮತದಿಂದ ದಾನವಾಗಿ ನೀಡಿದರು.''[೧೯] ಹೀಗೆ ಸ್ಥಳನಾಮಗಳು ಪ್ರತಿನಾಮಕರಣ ಪ್ರಕ್ರಿಯೆಗೆ ಒಳಪಟ್ಟಿರುವುದು ಶಾಸನಗಳಿಂದ ತಿಳಿಯುತ್ತದೆ. ವಿಜಯನಗರದ ಅರಸರ ಕಾಲದಲ್ಲಿ ಗಡಿಭಾಗದಲ್ಲಿ ಪ್ರತಿನಾಮಕರಣ ಕ್ರಿಯೆಯು ಹೆಚ್ಚಾಗಿ ನಡೆದಿದೆಯೆಂದು ತಿಳಿದುಬರುತ್ತದೆ. ಹರಿಹರ(ಹಕ್ಕಭೂಪತಿ)ನು ಕರಡಿಹಳ್ಳಿ ಗ್ರಾಮವನ್ನು ಹರಿಹರಪುವೆಂದು, ಬುಕ್ಕರಾಯನು ಮುರುಡಿ ಗ್ರಾಮವನ್ನು ಬುಕ್ಕರಾಯಪುರವೆಂದು ಪ್ರತಿನಾಮಕರಣ ಮಾಡಿದ ಬಗೆಯನ್ನು ತಿಳಿದಂತಾಯಿತು. ಒಟ್ಟಾರೆ ಗ್ರಾಮನಾಮಗಳ ಪುನರ್ ನಾಮಕರಣ ಸಂದರ್ಭದಲ್ಲಿ ಶಾಸನಗಳ ಮೂಲಕ ಸ್ಥಳನಾಮಗಳ ಚಾರಿತ್ರಿಕ ಸಂಗತಿಗಳನ್ನು ತಿಳಿಯಬಹುದು.

೫. ವೀರಗಲ್ಲು-ಮಾಸ್ತಿಗಲ್ಲುಗಳು-ಸ್ಥಳನಾಮಗಳು

''ವೀರಗಲ್ಲು, ಮಾಸ್ತಿಗಲ್ಲುಗಳಿಂದ ಸ್ಥಳನಾಮಗಳ ಅಭ್ಯಾಸ ಮಾಡುವ ಸಾಧ್ಯತೆಯಿದೆ. ಈ ರೀತಿಯ ನೆಡುಗಲ್ಲುಗಳಿಂದ ಕನ್ನಡ ನಾಡಿನಲ್ಲಿ ನಾಮನಿರ್ದೇಶನಗೊಂಡ ಸ್ಥಳನಾಮಗಳಿವೆ. ಇದು ಚರಿತ್ರೆಯನ್ನು, ಸಂಸ್ಕೃತಿಯನ್ನು ಕಂಡುಕೊಳ್ಳುವ ಮತ್ತೊಂದು ಬಗೆಯೂ ಹೌದು. ಈ ನೆಡುಗಲ್ಲುಗಳಲ್ಲಿ ಮುಖ್ಯವಾಗಿ ಲಿಪಿಯನ್ನು ಹೊಂದಿದ, ಲಿಪಿರಹಿತ ಪ್ರಕಾರಗಳಿವೆ. ಲಿಪಿಯಿರುವ ಕಲ್ಲುಗಳಲ್ಲಿ ಸ್ಥಳನಾಮ ಗಳು ಉಲ್ಲೇಖವಾಗಿವೆ. ಅದರಂತೆ ಲಿಪಿರಹಿತ ವೀರಮಾಸ್ತಿಗಲ್ಲುಗಳ ಹೆಸರಿನಿಂದಲೂ ಗ್ರಾಮ ನಾಮ ಗಳಿವೆ. ಒಂದೊಮ್ಮೆ ವೀರರ, ಮಹಾಸತಿಯ ನೆನಪಿನ ಕಲ್ಲುಗಳು ಮಾತ್ರವಿದ್ದು, ಅದೇ ಹೆಸರಿನ ಊರು, ಸ್ಥಳಗಳಿರದೇ, ಆ ವೀರರ, ಮಾಸ್ತಿಯರ ನಿಜ ಹೆಸರುಗಳಿಂದ ಕರೆಯಲ್ಪಟ್ಟ ಉದಾಹರಣೆಗಳಿವೆ.''[೨೦] ಅಂತಹ ಕೆಲವು ಮಾದರಿಗಳನ್ನು ಇಲ್ಲಿ ಗಮನಿಸಲಾಗಿದೆ.

ವೀರಗಲ್ಲುಗಳು-ಸ್ಥಳನಾಮ

ವೀರಗಲ್ಲುಗಳನ್ನು ಹೆಚ್ಚಾಗಿ ನೆಡುತ್ತಿದ್ದುದು ದೇವಾಲಯಗಳ ಮುಂದೆ ಇಲ್ಲವೇ ಊರ ಬಾಗಿಲ ಮುಂದೆ. ಚಾವಡಿಗಳಲ್ಲಿ, ಹೊಂಡಗಳ ಬಳಿ, ಹೊಲ ಗದ್ದೆಗಳಲ್ಲಿಯೂ ನೆಟ್ಟಿರುವುದನ್ನು ಗಮನಿಸಬಹುದು. ವೀರನಾದವನು ಎಲ್ಲಿಯೇ ಸಾಯಲಿ ಅವನ ಸ್ವಂತ ಸ್ಥಳದಲ್ಲಿ ವೀರಗಲ್ಲನ್ನು ಹಾಕಿಸುತ್ತಿದ್ದರೆಂದು ಶಾಸನಗಳಿಂದ ತಿಳಿಯುತ್ತದೆ. ಕೆಲವು ಬಾರಿ ಅವನು ಮಡಿದಲ್ಲಿಯೂ ಹಾಕಿಸಿದ್ದಾರೆ. ಈ ಸ್ಥಳಗಳಿಗೆ ಜನರು ಹೆಸರನ್ನು ಇಟ್ಟಿದ್ದಾರೆ. ಇದರಿಂದ ಆಯಾ ಪ್ರಾದೇಶಿಕ ವೀರನ ಚರಿತ್ರೆ, ಆ ಕಾಲದ ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಗಳು ಮುಂತಾದ ಮಾಹಿತಿಯು ದೊರೆಯುತ್ತದೆ. ವೀರಗಲ್ಲುಗಳು ಇರುವಲ್ಲಿ ಈಗ ಜನವಸತಿ ಇರಬಹುದು, ಇಲ್ಲದೆಯೂ ಇರಬಹುದು. ಆದರೆ ಅವುಗಳಿಗಿರುವ ಹೆಸರುಗಳು ಮಾತ್ರ ಗಮನವನ್ನು ಸೆಳೆಯುತ್ತವೆ.

ಅಧ್ಯಯನ ಕ್ಷೇತ್ರ ಮೊಳಕಾಲ್ಮೂರು ಪರಿಸರದಲ್ಲಿ ಅನೇಕ ವೀರಗಲ್ಲುಗಳನ್ನು ಕಾಣಬಹುದು. ಆದರೆ ವೀರರ ಹೆಸರಾಗಿ ಇರುವ ಸ್ಥಳನಾಮಗಳು ವಿರಳವಾಗಿವೆಯೆಂದೇ ಹೇಳಬಹುದು. ಉದಾಹರಣೆಗೆ ವೀರಾಪುರ. ಆದರೆ ಹೊಯ್ಸಳರ ಕಾಲದಲ್ಲಿ ನಡೆದು ಬಂದ ಸಾಂಸ್ಕೃತಿಕ ಹಾಗೂ ಆತ್ಮಾರ್ಪಣೆಯ "ಹೊನ್ನಿಯ ಸಿಡಿತಲೆ ಕಲ್ಲು" ಎನ್ನುವ ವೀರಗಲ್ಲಿನ ಮಹತ್ವವನ್ನು ಈ ರೀತಿ ವಿಶ್ಲೇಷಿಸಲಾಗಿದೆ.

ಹೊನ್ನಿಯ ಸಿಡಿತಲೆ ಕಲ್ಲು

ಅಶೋಕ ಸಿದ್ದಾಪುರದ ಜಾಲಿ ಹೊಲದ ಕಟ್ಟೆ ಕೆಳಗಿನ ಒಂದು ಕಲ್ಲಿನಿಂದ ಈ ವೀರಗಲ್ಲಿನಲ್ಲಿ ಮೂರು ಅಂಕಣಗಳಿದ್ದು, ಕೆಳಗಿನ ಅಂಕಣದಲ್ಲಿ ಎಡಗಡೆ ಸೇವಕಿ ತನ್ನ ಒಡತಿಗೆ ಛತ್ರಿ ಹಿಡಿದಿದ್ದಾಳೆ. ಬಲಗಡೆ ಹೊನ್ನಿಯ ಧ್ಯಾನಾಸಕ್ತ ಚಿತ್ರವಿದೆ. ಅವಳ ಮುಡಿಗೆ ಸೆಳೆದೆಬ್ಬೆಯ ಬಂಧನವಿದೆ. ಎರಡನೇ ಅಂಕಣದಲ್ಲಿ ಹೊನ್ನವ್ವ ನಾಗತಿಯನ್ನು ತೋಳತೆಕ್ಕೆಯಲ್ಲಿ ಸುರಾಂಗನೆಯರು ಕೊಂಡೊಯ್ಯುತ್ತಿದ್ದಾರೆ. ಇನ್ನೊಬ್ಬ ಸುರಾಂಗನೆ ಸೇವಕಿಯನ್ನು ಕೈ ಹಿಡಿದು ಕರೆಯುತ್ತಿದ್ದಾಳೆ. ಮೂರನೇ ಅಂಕಣದಲ್ಲಿ ಶಿವನು ತನ್ನ ಕೈಲಾಸದಲ್ಲಿ ಭಕ್ತರ ಗಣಾಕೂಟ ನಡೆಸಿದ್ದಾನೆ. ಮಧ್ಯೆ ಶಿಲಾಕ್ಷರಗಳು ಸಿಡಿತಲೆಕೊಟ್ಟ ಹೊನ್ನಿಯ ಗುಣಗಾನ ಮಾಡುತ್ತಿವೆ. ಈ ವೀರಗಲ್ಲಿಗೆ ಹಿನ್ನೆಲೆಯಾಗಿ ಮಹಮದ್ ಬಿನ್ ತೊಘಲಕ್ ನು ಕಮ್ಮಟ ದುರ್ಗದ ದೊರೆ ವೀರಕಂಪಿಲರಾಯನು ಅವನ ಮಗ ಕುಮಾರ ರಾಮನನ್ನು ಕೊಂದ ನಂತರ ಕನ್ನಡ ನಾಡಿನಲ್ಲಿ ಒಬ್ಬ ಪ್ರಾಂತ್ಯಾಧಿಕಾರಿಯನ್ನು ನೇಮಿಸಿದ್ದನು. ಆದರೆ ದ್ವಾರಸಮುದ್ರದ ವೀರಬಲ್ಲಾಳನು ಮೊಗಲರು ಕಮ್ಮಟ ರಾಜ್ಯದ ದಕ್ಷಿಣ ಭಾಗವನ್ನು ಆಕ್ರಮಿಸದಂತೆ ತಡೆ ಹಿಡಿದಿದ್ದನು. ಅವನಿಗೆ ಮೊಗಲರನ್ನು ತಡೆಗಟ್ಟಲು ಒಂದು ಆಯಕಟ್ಟಿನ ಸ್ಥಳ ಬೇಕಿತ್ತು. ನಿಡುಗಲ್ಲು ದೊರೆ ಚೋಳ ಮಹಾರಾಜನ ಉಪರಾಜಧಾನಿಯಾದ 'ಹನೆಯಕೋಟೆ' ಯೋಗ್ಯವೆಂದು ನಿರ್ಧರಿಸಿ ಅದನ್ನು ಗೆದ್ದು ತನ್ನ ಮಗನ ಹೆಸರಿನಲ್ಲಿ 'ವಿಜಯಗಿರಿ' ಎಂದು ನಾಮಕರಣ ಮಾಡಿ, ಕೋಟೆಯನ್ನು ಬಲಪಡಿಸಿ ಹಾಲಿವಾಣದ ಸಾಮಂತನಾದ ಸಿವೋದನಾಯಕನನ್ನು ಕೋಟೆಯ ಕಾವಲಿಗೆ ನೇಮಿಸಿದನು. ಈ ಸಿವೋದನಾಯ್ಕನ ತಾಯಿಯೇ ಹೊನ್ನವ್ವ ನಾಗತಿ. ಮಹಾಶಿವಶರಣೆ. ವಿಜಯಗಿರಿಯಲ್ಲಿ ನೆಲಸಿ, ಹಗರಿ ನದಿಯಲ್ಲಿ ಪುಣ್ಯಾ ಸ್ನಾನ ಮಾಡಿ, ತ್ರಿಶಂಕೇಶ್ವರನನ್ನು ಪೂಜಿಸಿ, ರಾಮಗಿರಿ ಬೆಟ್ಟವನ್ನೇರಿ ಸೀತಾ ದೋಣಿಯಲ್ಲಿ ಪುಣ್ಯಸ್ನಾನ ಮಾಡಿ, ರಾಮೇಶ್ವರನನ್ನು ಆರಾಧಿಸಿ, ಧಾನ ಧರ್ಮಗಳನ್ನು ಮಾಡಿ ಶಿವೈಕ್ಯಳಾದಳು. ಆಗ ಹೊನ್ನವ್ವ ನಾಗತಿ ಸಾಕಿ ಸಲುಹಿದ ನೆಚ್ಚಿನ ಸೇವಕಿ 'ಹೊನ್ನಿ' ಎನ್ನುವಾಕೆ ತನ್ನ ಒಡತಿಗಾಗಿ ವೀರ ಮರಣ ಹೊಂದಲು ನಿರ್ಧರಿಸಿ, ನನ್ನ ಒಡತಿಯ ಶವದ ಬಳಿ ಧ್ಯಾನ ಮಾಡುತ್ತಾ ಕುಳಿತಾಗ ಅವಳ ಬಯಕೆಯಂತೆ ತಲೆಗಡುಕು ಹೊನ್ನಿಯ ಪಕ್ಕದಲ್ಲಿ ಸೆಳೆದೆಬ್ಬೆ ನಿಲ್ಲಿಸಿ, ಅದರ ತುದಿಯನ್ನು ಸಿರಿಮುಡಿಗೆ ಕಟ್ಟಿ, ಕತ್ತಿಯ ಒಂದೇ ಏಟಿಗೆ ಅವಳ ಶಿರವನ್ನು ಕತ್ತರಿಸುತ್ತಾರೆ. ತನ್ನ ಒಡತಿಗಾಗಿ ತನ್ನನ್ನೇ ಅರ್ಪಿಸಿಕೊಂಡ ವೀರಾಂಗನೆ ಹೊನ್ನಿ. ಮುಂದೆ ಶಾಶ್ವತವಾಗಿ ಇವಳ ಕತೆ ಸಾರುವ ಶಾಸನದ ವೀರಗಲ್ಲೇ ಹೊನ್ನಿಯ ಸಿಡಿತಲೆ ಕಲ್ಲು."[೨೯]

ಹೀಗೆ ವೀರಗಲ್ಲುಗಳು ಕೂಡ ಒಂದು ನಾಡಿನ ಸಾಂಸ್ಕೃತಿಕ ಚರಿತ್ರೆಯನ್ನು ನೀಡುವಲ್ಲಿ ಸಹಕಾರಿಯಾಗಿದೆ ಎನ್ನಬಹುದು. ಹೊನ್ನಿಯ ಹೆಸರಿನಲ್ಲಿ ಹೊನ್ನೂರು ಎಂಬ ಗ್ರಾಮವಿದೆ. ಆದರೆ ಅದು ಈಗ ಆಂಧ್ರಪ್ರದೇಶದ ರಾಯದುರ್ಗ ಸೀಮೆಗೆ ಸೇರಿದ ಪ್ರದೇಶ.

ಮಾಸ್ತಿಗಲ್ಲು

ತನ್ನ ನಾಡಿಗಾಗಿ ಪ್ರಾಣಾರ್ಪಣೆ ಮಾಡಿದ ವೀರನ ಹಿಂದೆಯೇ ಪ್ರಾಣಾರ್ಪಣೆ ಮಾಡಿದ ಸತಿಯರ ನೆನಪನ್ನು ಎಷ್ಟೋ ಗ್ರಾಮಗಳು ಉಳಿಸಿಕೊಂಡುಬಂದಿವೆ. ಮಾಸ್ತಿಕಟ್ಟೆ, ಮಾಸ್ತಿ ಹೊಳೆ, ಮಾಸ್ತಿ ಮನೆ, ಮಾಸ್ತಿ ಮರಡಿ, ಮಾಸ್ತಿ ಎಂಬ ಗ್ರಾಮಗಳು ಈ ಬಗೆಯವು. ಅಗ್ನಿ ಪ್ರದೇಶಿಸಿದ ಮಾಸ್ತಿ ಈ ಊರುಗಳಲ್ಲಿ ಒಂದು ಶಕ್ತಿಯಾಗಿ ಬೆಳೆದಿದ್ದು, ಬೇಡಿದುದನ್ನು ನೀಡುವ ಗ್ರಾಮದೇವತೆಯಾಗಿ ಮಾರ್ಪಟ್ಟಿದ್ದನ್ನು ಕಾಣಬಹುದು.[೨೨] ಹೀಗೆ ಸತಿ ಹೋದ ಘಟನೆಯನ್ನು ಸಾರುವ ಹಲವು ವಸ್ತುಗಳು ಕರ್ನಾಟಕದಲ್ಲಿ ಉಳಿದುಕೊಂಡು ಬಂದಿದೆ. ಸತಿ ಹೋದ ಸ್ಥಳದಲ್ಲಿ ಊರೋ, ಕಟ್ಟೆಯೋ, ಕೆರೆಯೋ, ಗದ್ದಿಗೆಯೋ ನಿರ್ಮಾಣವಾಗಿ ಅವು ಇಂದಿಗೂ ಸತಿಘಟನೆಯನ್ನು ತಲೆ ತಲಾಂತರಗಳಿಂದ ಜೀವಂತವಾಗಿಟ್ಟುಕೊಂಡು ಬಂದಿವೆ. ಹೊಲ, ಕಾಡು, ಗುತ್ತ, ಕೊಂಡ, ಗಿಡ, ಹಳ್ಳಿ, ದಿಬ್ಬ ಈ ಮೊದಲಾದ ರೂಪಗಳಲ್ಲಿ ಸತಿ ಘಟನೆಯು ಉಳಿದುಕೊಂಡು ಬಂದಿದೆ.[೨೩] ಅಧ್ಯಯನ ಕ್ಷೇತ್ರ ಮೊಳಕಾಲ್ಮೂರು ಪರಿಸರದಲ್ಲಿ ಮಾಸ್ತಿಗಲ್ಲುಗಳು ವಿಪುಲ ಪ್ರಮಾಣದಲ್ಲಿ ಇದ್ದರೂ ಸ್ಥಳನಾಮಗಳನ್ನು ಸೂಚಿಸುವ ಮಾಸ್ತಿಗಲ್ಲು ಇಲ್ಲವೆಂದೇ ಹೇಳಬಹುದು. ಆದರೆ ಕುತೂಹಲವನ್ನು ಕೆರಳಿಸುವ ವೀರಮಾಸ್ತಿಗಲ್ಲು ಅಧ್ಯಯನ ಕ್ಷೇತ್ರ ಬಾಂಡ್ರಾವಿಯಲ್ಲಿ ದೊರತಿದೆ. ಈ ವೀರಗಲ್ಲಿನ ವಿಶೇಷತೆಯನ್ನು ಹೀಗೆ ವಿವರಿಸಬಹುದು. ಬಾಂಡ್ರಾವಿಯ ವೀರ ಮಾಸ್ತಿಗಲ್ಲಿನಲ್ಲಿ ಎತ್ತಿದ ಕೈಯಲ್ಲಿ ನಿಂಬೆಹಣ್ಣು ಹಿಡಿದಿರುವ ಮಹಾಸತಿಯನ್ನು ಸ್ಥಳೀಯರು "ಗರ್ಭಲಕ್ಷ್ಮಿ" ಎಂದು ಕರೆಯುತ್ತಾರೆ. ಈ ಊರಿನಲ್ಲಿ ಯಾವುದೇ ಗರ್ಭಿಣಿ ಸ್ತ್ರೀಗೆ ಹೆರಿಗೆ ಕಷ್ಟವಾದರೆ, ಈ ಶಿಲೆಯನ್ನು ಬೋರಲು ಹಾಕಿದಾಗ ಹೆರಿಗೆಯು ಸುಗಮವಾಗುತ್ತದೆಂದು ಅಲ್ಲಿನ ಜನರಲ್ಲಿ ಬಲವಾದ(ದೃಢ) ನಂಬಿಕೆಯಿದೆ. ಹೆರಿಗೆಯಾದ ತಕ್ಷಣ, ಈ ಶಿಲೆಯನ್ನು ನೆಟ್ಟಗೆ ನಿಲ್ಲಿಸಿ ಪೂಜೆ-ಪುನಸ್ಕಾರಗಳನ್ನು ಸಲ್ಲಿಸುತ್ತಾರೆ. ಹಾಗಾದರೆ ಈ ಮಾಸ್ತಿಗಲ್ಲಿನಲ್ಲಿರುವ ಮಹಾಸತಿಯು ಗರ್ಭಿಣಿಯಾಗಿದ್ದಳೇ? ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಇದೇ ರೀತಿಯ ಸಾಮಾನ್ಯ ಲಕ್ಷಣಗಳಿರುವ ಆಚರಣೆಯಲ್ಲಿರುವ ಮಾಸ್ತಿಗಲ್ಲುಗಳು ಅಧ್ಯಯನ ಕ್ಷೇತ್ರ ಗೌರಸಮುದ್ರ, ಮಾಚೇನಹಳ್ಳಿಯಲ್ಲಿ ದೊರೆತಿರುವುದು ಮಹತ್ವದ ಸಂಗತಿಯಾಗಿ ಸಾಂಸ್ಕೃತಿಕ ಚಿತ್ರಣವನ್ನು ಕಣ್ಮುಂದೆ ಕಟ್ಟಿಕೊಡತ್ತವೆ.

"ಊರುಗಳು ಶಿಲಾಶಾಸನಾದಿಗಳಿಗಿಂತಲೂ ಸಾವಿರ ವರುಷ ಮೊದಲು ಎಂಬಲ್ಲಿ ಸಂದೇಹವಿಲ್ಲ. ಆದುದರಿಂದ ಲಿಖಿತ ಆಧಾರಗಳಿಂದ ಗೊತ್ತಾಗದ ಹಲವು ಸಂಗತಿಗಳಾಗಿ ಊರುಗಳ ಹೆಸರಿನ ನೆರವನ್ನು

ಕೋರದೆ ಗತಿಯಿಲ್ಲ, ಕಲ್ಬರೆಹ, ತಾಮ್ರಪಟಗಳಂತೆ ಎಡೆಯ ಹೆಸರುಗಳು ನಮ್ಮ ನಾಡಿನ ಇರುವಿಕೆಯನ್ನು ತೋರುವ ಮಹತ್ವದ ಸಾಧನಗಳಾಗಿವೆ"[೨] ಎಂಬುದನ್ನು ಇಲ್ಲಿ ಮನಗಾಣಬಹುದು. ಒಂದು ಭೌಗೋಳಿಕ ಪರಿಸರದ ಚರಿತ್ರೆಯೆಂದರೆ, ಅದು ಕೇವಲ ರಾಜರ ಇತಿಹಾಸವಲ್ಲ. ಅದೊಂದು ಸಮಕಾಲೀನ ಸಂಸ್ಕೃತಿಯ, ಸಮಾಜದ ಜನ ಜೀವನ ವಿಧಾನವಾಗಿದೆ. ಆ ಇತಿಹಾಸವನ್ನು ಬರೆಯುವಲ್ಲಿ ಶಾಸನಗಳು ಆಕರಗಳಾದಲ್ಲಿ, ಅದರೊಂದಿಗೆ ಸ್ಥಳನಾಮಗಳಂತಹ ಆಕರಗಳನ್ನು ಬಳಸಿಕೊಂಡು ಚರಿತ್ರೆಯ ವ್ಯಾಖ್ಯಾನಕ್ಕೆ ತೊಡಗಿದಾಗ ಸಂಪೂರ್ಣವಾಗಿ ಚರಿತ್ರೆಯ ಸಂಗತಿಗಳನ್ನು ತಿಳಿಯಲು ಸಾಧ್ಯವಾಗುತ್ತದೆ. ಈ ಕಾರಣದಿಂದ ಚಾರಿತ್ರಿಕ ಸಂಗತಿಗಳ ಅನಾವರಣಕ್ಕೆ ಸ್ಥಳನಾಮಗಳ ಪಾತ್ರ ಮುಖ್ಯವಾಗುತ್ತದೆ. ಸ್ಥಳನಾಮ ಅಧ್ಯಯನವು ಮಬ್ಬುಕವಿದ ಹಲವಾರು ಕ್ಷೇತ್ರಗಳಿಗೆ ಹೊಸ ಬೆಳಕಿನ ಪ್ರವಾಹವನ್ನು ಹರಿಸಬಲ್ಲದು. ಹಾಗೂ ಇತಿಹಾಸದ ಕಪ್ಪು ಹಾದಿಯನ್ನು ಬೆಳಗಿಸಬಲ್ಲದು. ಚರಿತ್ರೆ ನಿರುತ್ತರವಾದಲ್ಲಿ ಸ್ಥಳನಾಮ ಉಸುರುತ್ತದೆ ಎಂಬ ಮಾತನ್ನು ನೆನೆಯುವುದು ಸೂಕ್ತವಾಗಿದೆ.

ಸಂಸ್ಕೃತಿ-ಸ್ಥಳನಾಮಗಳು

'ಸಂಸ್ಕೃತಿ' ಎಂಬುದು ನಡುವಳಿಕೆಯಾಗಿದ್ದು, ಜೀವನ ಸ್ವರೂಪವನ್ನು ನಿರ್ಧರಿಸುವ ಗುಣವನ್ನು ಹೊಂದಿದೆ. ಸಂಸ್ಕೃತಿಯನ್ನು ವ್ಯಾಖ್ಯಾನಿಸುವಾಗ "ಭೌತಿಕ ಸಂಸ್ಕೃತಿ ಮತ್ತು ಆಧ್ಯಾತ್ಮಿಕ ಸಂಸ್ಕೃತಿಗಳೆಂದು ವಿಭಾಗ ಮಾಡುವ ಪ್ರಯತ್ನಗಳನ್ನು ಸಹ ಕಾಣುತ್ತೇವೆ. ಪರಿಸರ, ಪರಂಪರೆ ಹಾಗೂ ಪ್ರತ್ಯಕ್ಷ ಜೀವನದ ಅನೇಕ ಸಂಸ್ಕಾರಗಳ ಮೂಲಕ ಮನುಷ್ಯನ ಅಂತರಂಗ ಪಡೆಯುವ ಪರಿಪಕ್ವತೆ."[೨೫] ಇದು ಸಂಸ್ಕೃತಿಯನ್ನು ಕುರಿತಂತೆ ಒಂದು ಸ್ಥೂಲವಾದ ವ್ಯಾಖ್ಯೆ ಎನ್ನಲಾಗಿದೆ. ಭಾರತೀಯ ಸಂಸ್ಕೃತಿಯು ವಿಭಿನ್ನ ಪ್ರಾದೇಶಿಕ ಸಂಸ್ಕೃತಿಗಳ ಒಟ್ಟು ಮೊತ್ತವಾಗಿದೆ. ಹೀಗಾಗಿ ಅದು ಸಂಕೀರ್ಣ ಸ್ವರೂಪದ ಸಂಸ್ಕೃತಿ ಎನ್ನಲೂ ಅಡ್ಡಿಯಿಲ್ಲ. ಮಾನವನ ಆಧ್ಯಾತ್ಮಿಕ ಸಾಧನೆಯೇ ಸಂಸ್ಕೃತಿ. ಸಕಲ ಜೀವಿಗಳಿಗೆ ಒಳ್ಳೆಯದನ್ನು ಬಯಸುವ ಉಚ್ಚ ಆದರ್ಶವೇ ಸಂಸ್ಕೃತಿ. ಭೌಗೋಳಿಕ ಲಕ್ಷಣಗಳು, ಭಾಷೆ, ಧರ್ಮ ಇವುಗಳಿಂದಾಗಿ ಪ್ರಾದೇಶಿಕ ಭೇದಗಳುಂಟಾಗಿ ಸಂಸ್ಕೃತಿಯ ಅಭಿವ್ಯಕ್ತಿಗೆ ವೈವಿಧ್ಯವನ್ನು ಒದಗಿಸಿವೆ. ಕರ್ನಾಟಕ ಸಂಸ್ಕೃತಿಯು ಭಾರತೀಯ ಸಂಸ್ಕೃತಿಯಲ್ಲಿ ಅಂತರ್ಗತವಾಗಿದ್ದರೂ ತನ್ನದೇ ಆದ ಉದಾತ್ತ ಗುಣಗಳಿಂದಾಗಿ ವಿಶೇಷ ಮತ್ತು ಪ್ರೌಢವಾಗಿ ಗೋಚರಿಸುತ್ತದೆ. ಕರ್ನಾಟಕದ ಸಂಸ್ಕೃತಿಗೆ ಹಿರಿದಾದ ಅಂತಃಸತ್ವವಿದ್ದು, ಅನೇಕ ಶತಮಾನಗಳ ಕಾಲಾವಧಿಯಲ್ಲಿ ನಡೆದು ಕೊಡು-ಕೊಳ್ಳುವಿಕೆಗಳ ಗುಣದಿಂದಾಗಿ ಉನ್ನತ ಸ್ಥಾನದಲ್ಲಿದೆ.

ಕರ್ನಾಟಕದಲ್ಲಿ ಮಾನವನ ಅಸ್ತಿತ್ವವನ್ನು ಕ್ರಿ.ಪೂ.೫,೦೦,೦೦೦ ವರ್ಷಗಳಿಂದಲೂ ಗುರುತಿಸಿದ್ದಾರೆ. ಕ್ರಿ.ಪೂ.೩೦೦ವರೆಗೆ ಜನ ಜೀವನವನ್ನು ಶಿಲಾಯುಗಗಳ ಕಾಲದ ಸಂಸ್ಕೃತಿ ಎಂದು ಪುರಾತತ್ವಜ್ಞರು ಕರೆದಿದ್ದಾರೆ. ಶಿಲಾಶಾಸನಗಳ ಆಗಮನ ಕಾಲದಿಂದ ಇಲ್ಲಿಯವರೆಗಿನ ಸಂಸ್ಕೃತಿಯನ್ನು ಕುರಿತು ಅಧ್ಯಯನಗಳು ವಿವಿಧ ನೆಲೆಯಲ್ಲಿ ನಡೆಯುತ್ತಾ ಬಂದಿವೆ. ಅಶೋಕನ ಶಾಸನಗಳ ಅಸ್ತಿತ್ವದಿಂದಾಗಿ

ಕರ್ನಾಟಕವೂ ಔತ್ತರೇಯ ಸಂಸ್ಕೃತಿಯ ಸಂಪರ್ಕವನ್ನು ಹೊಂದಿತ್ತೆಂಬ ಸಂಗತಿ ಗಮನಾರ್ಹ. ಕೆಲವು ಚಾರಿತ್ರಿಕ ಘಟನೆಗಳಿಂದ ಕರ್ನಾಟಕ ಸಂಸ್ಕೃತಿಯನ್ನು ಕಾಲಕಾಲಕ್ಕೆ ಹೊಸ-ಹೊಸ ಅಂಶಗಳನ್ನು ತನ್ನದಾಗಿಸಿಕೊಂಡು ಬೆಳೆದ ಬಗೆಯನ್ನು ಮನಗಾಣುತ್ತೇವೆ. ಅಂದರೆ ವ್ಯಾಪಾರ, ವ್ಯವಹಾರಗಳೊಂದಿಗೆ ವೇಷಭೂಷಣಗಳು, ಆಹಾರ ಪದ್ಧತಿ, ಆಚಾರ-ವಿಚಾರಗಳು, ಕಲೆ ಮತ್ತು ವಾಸ್ತುಶಿಲ್ಪ, ನಾಣ್ಯ ಮೊದಲಾದ ಕ್ಷೇತ್ರಗಳಲ್ಲಿ ಕೊಡು-ಕೊಳ್ಳುವಿಕೆಗಳು ವ್ಯಾಪಕ ಪ್ರಮಾಣದಲ್ಲಿ ನಡೆದಿವೆ. ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಮೌರ್ಯರು, ಕದಂಬರ ಪೂರ್ವಕಾಲದಿಂದಲೂ ಈ ನೆಲದ ಸಂಸ್ಕೃತಿಯ ಚೌಕಟ್ಟು ರೂಪುಗೊಂಡಿತ್ತು. ಅಸಂಖ್ಯಾತ ಶಾಸನಗಳು ಈ ಪರಿಸರದಲ್ಲಿ ಬೆಳೆದುಬಂದ ತ್ಯಾಗ, ಸಹನೆ, ಸಹಬಾಳ್ವೆ, ಸಾಮರಸ್ಯ ಔದಾರ್ಯ, ದಾನ ಮತ್ತು ಶೌರ್ಯವನ್ನು ಕುರಿತು ಉಲ್ಲೇಖಿಸುತ್ತವೆ. ರಾಜರು, ರಾಣಿಯರು, ಮಂತ್ರಿಗಳು, ಅಧಿಕಾರಿಗಳು, ನಾಯಕರು, ಜನ ಸಾಮಾನ್ಯರು ನೀಡಿದ ದಾನ-ದತ್ತಿಗಳು, ಪುಣ್ಯ ಸಂಪಾದನೆಯ ಗುರಿಯನ್ನು ಹೊಂದಿದ್ದರೂ ಅವು ಜನಕಲ್ಯಾಣದ ಕಡೆಗೆ ಮುಖ ಮಾಡಿದ್ದವು. ಧರ್ಮಾಚಾರಣೆ ಎಂದು ಎಂದೋ ನಿರ್ಮಾಣಗೊಂಡ ಕೆರೆ-ಕಟ್ಟೆಗಳು, ದೇವಾಲಯಗಳು ಮತ್ತು ಮಠಗಳು, ಸಮಾಜದ ಒಳಿತನ್ನೇ ಬಯಸಿದ್ದವು. ಕನ್ನಡಿಗರು ನಂಬಿದ ಮೌಲ್ಯಗಳು ಆದರ್ಶವಾಗಿವೆ. ಅವು ಅವರನ್ನು ಸುಸಂಸ್ಕೃತರನ್ನಾಗಿಸಿವೆ. ಜೊತೆಯಲ್ಲಿಯೇ ಅವರನ್ನು ಅಸಹಾಯಕರನ್ನಾಗಿಸಿರುವುದು ವಿಪರ್ಯಾಸದ ಸಂಗತಿ. ನೆರೆಯ ರಾಜ್ಯಗಳ ಜನರ ಭಾಷಾ ನೀತಿ ಮತ್ತು ಪ್ರದೇಶಾಭಿಮಾನ ಗಮನಿಸಿದಾಗ ಕರ್ನಾಟಕದಲ್ಲಿ ಅದರ ದೊಡ್ಡ ಕೊರತೆ ಎದ್ದು ಕಾಣುತ್ತದೆ. ಬಹುಶಃ ಕನ್ನಡಿಗರು ಹೃದಯ ವೈಶಾಲ್ಯತೆ, ಉದಾರತೆ, ಸಹಿಷ್ಣತೆ ಮತ್ತು ಸಹಬಾಳ್ವೆಯಂತಹ ಗುಣಗಳನ್ನು ಮೈಗೂಡಿಸಿಕೊಂಡಿರುವುದೇ ಕಾರಣವಾಗಿರಬಹುದು. ಅಂದರೆ ಬದುಕಿನಲ್ಲಿ ಉನ್ನತಸ್ಥಿತಿಯನ್ನು ತಲುಪಿರುವುದು.

ಜಾಗತಿಕ ಮಟ್ಟದಲ್ಲಿ ಪುರಾತತ್ವಜ್ಞರಾಗಿ ಗುರುತಿಸಿಕೊಂಡಿರುವ ಸರ್ ಮಾರ್ಟಿಮರ್ ವೀಲರ್ ರವರು ದಕ್ಷಿಣ ಭಾರತದ ಇತಿಹಾಸವನ್ನು ಕಟ್ಟಿ ಕೊಡುವಲ್ಲಿ ಪ್ರಮುಖ ಪುರಾತತ್ವ ನೆಲೆಗಳಲ್ಲಿ ಒಂದಾದ 'ಬ್ರಹ್ಮಗಿರಿ'ಯ ಮರು ಉತ್ಖನನವನ್ನು ಬಹು ಜಾಗರೂಕತೆಯಿಂದ ಮಾಡಿದರು. ಇದು ಪ್ರಾಚೀನ ಸಂಸ್ಕೃತಿಯ ನೆಲೆ, ಬೃಹತ್ ಶಿಲಾಯುಗಕ್ಕಿಂತ ಮೊದಲು ಇದೇ ನೆಲೆಯು ನವಶಿಲಾಯುಗ ಸಂಸ್ಕೃತಿಯ ಜನ ಜೀವನದ ಭಾಗವೂ ಆಗಿತ್ತೆಂದು ಅಭಿಪ್ರಾಯಪಟ್ಟು ಪೂರಕವಾದ ಕುರುಹುಗಳನ್ನು ಕಂಡುಹಿಡಿದಿದ್ದಾರೆ.

ಇಂದು ಸಂಸ್ಕೃತಿ ಅಧ್ಯಯನಕ್ಕೆ ಚರಿತ್ರೆಯ ಆಕರ ಅಗತ್ಯವೆನಿಸಿದೆ. ಇವೆರಡಕ್ಕೂ ಅವಿನಾಭಾವ ಸಂಬಂಧ. ಒಂದು ರೀತಿಯ ನಿಕಟ ಸಂಬಂಧ ಹೊಂದಿದೆ. ಒಂದು ನಾಡಿನ ಜೀವಂತ ಸಂಸ್ಕೃತಿಯನ್ನು ಮೈವೆತ್ತಿ ನಿಲ್ಲಿಸಿರುವುದು ಆ ನಾಡಿನ ಜಾನಪದ ಅಂಶಗಳು ಹಾಗೂ ಸ್ಥಳನಾಮಗಳು. ಜನರ ಹಾಗೂ ಸ್ಥಳನಾಮಗಳ ಮೂಲಕ ಈ ಸಂಸ್ಕೃತಿಯ ವಿಚಾರಗಳು ಹರಿದುಬರುತ್ತವೆ ಇದನ್ನು ಅಭ್ಯಾಸಿಸಬೇಕಾದರೆ ಜನರ ನಾಡು-ನುಡಿ ಸಾಹಿತ್ಯಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು ಅತ್ಯವಶ್ಯಕ. ಮೊಳಕಾಲ್ಮೂರು ಪ್ರದೇಶದಲ್ಲಿ ಕಂಡುಬರುವ ವೀರಗಲ್ಲುಗಳು, ಮಹಾಸತಿ ಕಲ್ಲುಗಳು, ಸ್ಮಾರಕ ಶಿಲೆಗಳು ನಾಡಿನ

ಶೌರ್ಯ ಗುಣವನ್ನು ಎತ್ತಿ ಹಿಡಿದಿವೆ. ಇದು ನಮ್ಮ ಸಂಸ್ಕೃತಿಯ ಬೇರುಗಳಲ್ಲಿ ಪ್ರಧಾನವೂ ಆಗಿದೆ. ಪ್ರಾಚೀನ ಸಂಸ್ಕೃತಿಯ ನೆಲೆಗಳನ್ನು ಗುರುತಿಸುವ ಸ್ಥಳನಾಮಗಳು ಮೊಳಕಾಲ್ಮೂರು ಪ್ರದೇಶದಲ್ಲಿ ವಿರಳ. ಆದರೂ ಕೆಲವೊಂದು ಸಂಸ್ಕೃತಿಯ ಪರಂಪರೆಯನ್ನು ಮೈಗೂಡಿಸಿಕೊಂಡಿರುವ ಸ್ಥಳಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ಜಟಂಗಿ ರಾಮೇಶ್ವರ : ಈ ಪ್ರದೇಶವು ಬೃಹತ್ ಶಿಲಾಯುಗ ಹಾಗೂ ನೂತನ ಶಿಲಾಯುಗ ಸಂಸ್ಕೃತಿಯನ್ನು ಬಿಂಬಿಸುವ ಕುರುಹುಗಳು. ಈ ಪರಿಸರದಲ್ಲಿ ಕಂಡುಬಂದಿದೆ. ಈ ಪ್ರದೇಶ ಪ್ರಾಚೀನ ವಾಸ್ತವ್ಯದ ನೆಲೆಯಾಗಿದ್ದು ಅಲ್ಲಿ ಕಂಡುಬರುವ ಗವಿಯಲ್ಲಿ ವರ್ಣಚಿತ್ರಗಳು ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಯಾಗಿತ್ತು ಎಂಬುದನ್ನು ದೃಢಪಡಿಸುತ್ತದೆ.

ಬ್ರಹ್ಮಗಿರಿ : ಈ ಪರಿಸರವು ಸಹ ನೂತನ ಹಾಗೂ ಬೃಹತ್ ಶಿಲಾಯುಗ ಸಂಸ್ಕೃತಿಯ ಪ್ರತೀಕವಾಗಿದೆ. ಈ ಪರಿಸರದಲ್ಲಿ ದೊರೆತ ಶಿಲೋಪಕರಣಗಳು, ವಿವಿಧ ಮಡಿಕೆಯ ಮಾದರಿಗಳು, ವಿವಿಧ ಬಗೆಯ ಗೋರಿಗಳು ಅಂದಿನ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ.

ಇಸಿಲ : ಬ್ರಹ್ಮಗಿರಿಯ ಸಮೀಪದಲ್ಲೇ ಇಟ್ಟಿಗೆಗಳಿಂದ ಕಟ್ಟಿದ ಚೈತ್ಯಾಲಯ ಮತ್ತು ಮೌರ್ಯರ ಕಾಲದ ಅನೇಕ ಅವಶೇಷಗಳು ದೊರಕಿದ್ದು 'ಇಸಿಲ' ಇಲ್ಲೇ ಇದ್ದ ನಗರವೆಂಬುದಕ್ಕೆ ಪುಷ್ಠಿ ದೊರೆತಿದೆ.

ನುಂಕೆಮಲೆ : ಈ ಪ್ರದೇಶವೂ ಕೂಡ ನೂತನ ಹಾಗೂ ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಯಾಗಿತ್ತು. ಉಜ್ಜಿ ನಯಗೊಳಿಸಿದ ಕೊಡಲಿ, ಕೆಂಪು ವರ್ಣದ ಮಡಿಕೆಯ ಭಾಗ, ಕಲ್ಲಾಸರೆಯ ರೇಖಾಚಿತ್ರಗಳು, ಗೋರಿಗಳು, ನೆಲದೊಳಗಿನ ಕಲ್ಮನೆಗಳು ಸ್ವಸ್ತಿಕ ಮಾದರಿಯಲ್ಲಿ ಕಂಡುಬರುತ್ತವೆ. ಇದರಿಂದ ಪ್ರಾಚೀನ ಶಿಲಾಯುಗ ಸಂಸ್ಕೃತಿಯ ವಾಸ್ತವ್ಯದ ನೆಲೆ ಈ ಪ್ರದೇಶವಾಗಿತ್ತು ಎಂದು ಭಾವಿಸಲಾಗಿದೆ.

ರೊಪ್ಪ : "ಶ್ರೀ ಎಂ.ಆರ್.ವೀಲ್ಹ್‌ರವರು ಕ್ರಿ.ಪೂ.೧೦೦ ರಿಂದ ಕ್ರಿ.ಪೂ.೨೦೦ರವರೆಗೆ ಬ್ರಹ್ಮಗಿರಿಯ ಪ್ರದೇಶವನ್ನು ಶಿಲಾಯುಗದ್ದೆಂದು ಅನಂತರ ಮೆಗಾಲಿಕ್ ಸಂಸ್ಕೃತಿಯವರೆಂದೂ, ಮೂರನೇ ಶತಮಾನದವರೆಗೆ, ಆಂಧ್ರಸಂಸ್ಕೃತಿ ಹೊಂದಿದ್ದಾಗಿ ಅಭಿಪ್ರಾಯಪಟ್ಟಿದ್ದಾರೆ. ಕ್ರಿ.ಪೂ.೨೦೦೦ ವರ್ಷಗಳ ಹಿಂದೆಯೇ ಸಿಂದ್, ಸಮರ್, ಕ್ರೀಟ್ ಗಳೊಂದಿಗೆ ಸಂಬಂಧ ಹೊಂದಿತ್ತೆಂದು ಇಲ್ಲಿಯ ಸಂಸ್ಕೃತಿಗೆ 'ರೊಪ್ಪ' ಸಂಸ್ಕೃತಿ ಎಂದು ಹೇಳುತ್ತಾರೆ."[೨] ರೊಪ್ಪ ಸಂಸ್ಕೃತಿಯೆಂದು ಹೆಸರಾದ ಈ ಪ್ರದೇಶದಲ್ಲಿ ರೊಪ್ಪ ಎಂಬ ಒಂದು ಚಿಕ್ಕ ಗ್ರಾಮವಿದೆ. ಸಂಸ್ಕೃತಿಯ ಹೆಸರಿನಲ್ಲಿಯೇ ಸ್ಥಳ ಪ್ರಸಿದ್ಧಿ ಹೊಂದಿದೆ. ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಸಂಸ್ಕೃತಿಯನ್ನು ಮೈಗೂಡಿಸಿಕೊಂಡ ಸ್ಥಳನಾಮವೆಂದರೆ 'ರೊಪ್ಪ' ಗ್ರಾಮ. ಇದು ಕ್ರಿ.ಪೂ.ದಿಂದಲೂ ತನ್ನ ಸ್ಥಳನಾಮವನ್ನು ಹಾಗೇ ಉಳಿಸಿಕೊಂಡು ಬಂದಿದೆ ಎಂಬುದು ಮಹತ್ವದ ಸಂಗತಿ ಎನ್ನಬಹುದು. ರೊಪ್ಪದಲ್ಲಿನ ಪೂರ್ವಿಕರ ಸಮಾಧಿಗಳು ಇಂದಿಗೂ ಜೀವಂತ ಸಾಕ್ಷಿಯಾಗಿವೆ.

ಸಂತೇಗುಡ್ನ : ಪ್ರಾಚೀನ ಕಾಲದಲ್ಲಿ ಈ ಸ್ಥಳದಲ್ಲಿ ಮುತ್ತಿನ ವ್ಯಾಪಾರ ಮಾಡುತ್ತಿದ್ದು ಹಾಗೂ ಪಾತ್ರೆ ಸಾಮಾನು ತಯಾರಿಸುವಲ್ಲಿ ಪ್ರಸಿದ್ಧಿಯಾಗಿತ್ತು ಎಂಬುದು ಶಾಸನಗಳು ದೃಢಪಡಿಸುತ್ತವೆ. ಹಿಂದೆ ಪಂಚ ಕುಶಲ ಕರ್ಮಿಗಳ ಕೈಗಾರಿಕೆಗಳ ನೆಲೆಯಾಗಿದ್ದ ಈ ಪ್ರದೇಶದಲ್ಲಿ ಸಂತೆ ನಡೆಯುತ್ತಿದ್ದರಿಂದ ಇದಕ್ಕೆ ''ಸಂತೆಗುಡ್ನ'' ವೆಂಬ ಹೆಸರು ಬಂದಿದೆ. ಸಂತೇಗುಡ್ನವು ಚಿತ್ರದುರ್ಗದ ಪಾಳೆಗಾರರ ಕಾಲದಲ್ಲಿ ಒಂದು ಗಡಿ ಕೋಟೆಯಾಗಿತ್ತು ಎನ್ನಲಾಗಿದೆ.

ಹಾನಗಲ್ಲು : ಬೃಹತ್ ಶಿಲಾಯುಗ ಸಂಸ್ಕೃತಿಗೆ ಒಳಪಟ್ಟ ಈ ಗ್ರಾಮ ಈಗಲೂ ಗ್ರಾನೈಟ್ ಶಿಲೆಯನ್ನು ಹೊಂದಿದ ಪ್ರದೇಶವಾಗಿದೆ. ಅದಕ್ಕಾಗಿ ಈ ಸ್ಥಳವನ್ನು 'ಹಾನಗಲ್ಲು' ಎಂದು ಕರೆದಿರುವುದು ಸ್ಪಷ್ಟಪಡಿಸುತ್ತದೆ.

ಮೊಳಕಾಲ್ಮೂರು ಪ್ರದೇಶವು ಸೂಕ್ಷ್ಮ, ನೂತನ ಹಾಗೂ ಬೃಹತ್ ಶಿಲಾಯುಗದ ಸಂಸ್ಕೃತಿಯ ಪ್ರತೀಕಗಳಾಗಿ ಕೆಲವೊಂದು ಸ್ಥಳನಾಮಗಳು ಕಂಡುಬಂದಿವೆ.

ರೊಪ್ಪ, ಸಂತೇಗುಡ್ನ, ಸ್ಥಳಗಳನ್ನು ಪ್ರಾಚೀನ ಸಂಸ್ಕೃತಿಯ ಸಾಂಸ್ಕೃತಿಕ ಸ್ಥಳನಾಮಗಳು ಎನ್ನಬಹುದು. ಅನೇಕ ವರ್ಷಗಳಾದರೂ ಸಾಮಾಜಿಕ, ಆರ್ಥಿಕ ಸ್ಥಿತ್ಯಂತರಗಳನ್ನು ಕಂಡರೂ ಈ ಪ್ರದೇಶ ತನ್ನ ಸ್ಥಳನಾಮಗಳೊಂದಿಗೆ ತಮ್ಮ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ತಮ್ಮದೇ ಹೆಸರಿನಲ್ಲಿ ಹಾಸು ಹೊಕ್ಕಾಗಿವೆ. ಬ್ರಹ್ಮಗಿರಿ, ನುಂಕೆಮಲೆ, ಜಟಂಗಿ ರಾಮೇಶ್ವರಗಳಲ್ಲಿ ಬೃಹತ್ ಶಿಲಾಯುಗದ ಸಂಸ್ಕೃತಿಯ ಕುರುಹುಗಳು ಕಂಡುಬರುತ್ತವೆ. ಮೊಳಕಾಲ್ಮೂರು ಪರಿಸರವು ಪುರಾತನ ಕಾಲದ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಪಡೆದ ಪ್ರದೇಶವಾಗಿದೆ ಎಂದು ಹೇಳಬಹುದು.

ಸ್ಥಳನಾಮಗಳು ಸಂಸ್ಕೃತಿಯ ನಿರ್ವಚನಕ್ಕೆ ಮಹತ್ವದ ಸಂಗತಿಗಳನ್ನು ನೀಡುತ್ತವೆ. ಸಂಸ್ಕೃತಿಯ ನಿರ್ವಚನದ ಸಂದರ್ಭದಲ್ಲಿ ಈವರೆಗೆ ಸ್ಥಳನಾಮಗಳನ್ನು ಮುಖ್ಯ ಆಕರಗಳೆಂದು ವ್ಯಾಪಕವಾಗಿ ಭಾವಿಸಿದಂತಿಲ್ಲ. ಇವುಗಳ ಉಪಯೋಗವನ್ನು ಕನ್ನಡದಲ್ಲಿ ಶಂಬಾ ಜೋಶಿಯವರು ತೋರಿಸಿಕೊಟ್ಟರೆನ್ನ ಬಹುದು. ಕನ್ನಡ ಸಂಸ್ಕೃತಿಯ ಭೌಗೋಳಿಕ ಹಾಗೂ ಸಾಂಸ್ಕೃತಿಕ ಎಲ್ಲೆಗಳ ಹುಡುಕಾಟದಲ್ಲಿ ಗ್ರಾಮನಾಮಗಳನ್ನು ಶಂಬಾ ಆಧರಿಸಿದ್ದರು. ಆ ಮೂಲಕ ಕನ್ನಡ ಸಂಸ್ಕೃತಿಯನ್ನು ಭಾರತಾದ್ಯಂತ ಗುರುತಿಸುವ ಪ್ರಯತ್ನ ಮಾಡಿದರು. ಎಡೆಗಳು ಹೇಳುವ ಕಂನಾಡ ಕಥೆ, ಕನ್ನಡ ಸಂಸ್ಕೃತಿಯ ಹುಟ್ಟು, ಕಂನುಡಿಯ ಜೀವಾಳ. ಇವೆಲ್ಲಾ ಕೃತಿಗಳಲ್ಲಿ ಸ್ಥಳನಾಮಗಳನ್ನು ಸಂಸ್ಕೃತಿಯ ಚಹರೆಗಳನ್ನಾಗಿ ಶಂಭ ಗುರುತಿಸಿದರು. ಸಂಸ್ಕೃತಿ ಅಧ್ಯಯನ ಸಂದರ್ಭದಲ್ಲಿ ಅಧ್ಯಯನಕಾರರು ಸ್ಥಳನಾಮಗಳನ್ನು ಅಲಕ್ಷಿಸಿರುವುದು ಕಂಡುಬರುತ್ತದೆ. ವಿಶೇಷವಾಗಿ ಸಂಸ್ಕೃತಿಯನ್ನು ಪ್ರಾದೇಶಿಕ ಜನಾಂಗಿಕ ನೆಲೆಯಲ್ಲಿ ಅಧ್ಯಯನ ಮಾಡುವ ಸಂದರ್ಭದಲ್ಲಿ ಸ್ಥಳನಾಮಗಳು ಹಲವಾರು ಉಪಯುಕ್ತ ಮಾಹಿತಿಗಳನ್ನು ಒದಗಿಸುವಲ್ಲಿ ಮಹತ್ವ ಪಡೆದುಕೊಳ್ಳುತ್ತವೆ. ಆ ಮೂಲಕ ಸಂಸ್ಕೃತಿಯನ್ನು ಪುನರ್ ರಚಿಸುವ ಅಗತ್ಯ ಮತ್ತು ಅನಿವಾರ್ಯತೆ ಇದೆ. ಇದರಿಂದ ಸಂಸ್ಕೃತಿಯನ್ನು ಮತ್ತಷ್ಟು ಗಟ್ಟಿಗೊಳಿಸಿದಂತಾಗುತ್ತದೆ. ಅಲ್ಲದೆ ಆ ಮೂಲಕ ಸಂಸ್ಕೃತಿಯ ಹೊಸ ಸಾಧ್ಯತೆಯನ್ನು ಗುರುತಿಸಬಹುದು.

ಅಡಿಟಿಪ್ಪಣಿಗಳು

೧. ಆಂಧ್ರ-ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು, ಡಾ.ಜಾಜಿ ದೇವೇಂದ್ರಪ್ಪ, ಪು.೧೭೪

೨. ಅದೇ, ಪು.೧೭೫

೩. ಶಂಬಾ ಕೃತಿ ಸಂಪುಟ-೨, ಎಡೆಗಳು ಹೇಳುವ ಕಂನಾಡಕಥೆ, ಸಂ.ಮಲ್ಲೇಪುರಂ ಜಿ.ವೆಂಕಟೇಶ್ ಕ.ವಿ.ವಿ. ಹಂಪಿ, ಪು.೬

೪. ಚಿತ್ರದುರ್ಗ ಜಿಲ್ಲಾದರ್ಶಿನಿ, ಟಿ. ಗಿರಿಜ, ಪು.೨೪೪

೫. ಎಫಿಗ್ರಾಫಿ ಕರ್ನಾಟಕ ಸಂ.೧೧, ಮೊಳಕಾಲ್ಮೂರು ೩೩

೬. ಚಂದ್ರಕೊಡೆ, ಹಂಪನಾ, ಪು.೩

೭. ಸ್ಥಳನಾಮ ವ್ಯಾಸಂಗ, ದೇಜಗೌ, ಪು.೨೨

೮. ಅದೇ, ಪು.೨೨

೯. ಚಿತ್ರದುರ್ಗ ಜಿಲ್ಲೆಯ ಕೋಟೆಗಳು, ಡಾ.ಎಸ್ .ತಿಪ್ಪೇಸ್ವಾಮಿ, ಪು.೨೨

೧೦. ಎಫಿಗ್ರಾಫಿ ಕರ್ನಾಟಕ ಸಂ.೧೧, ಮೊಳಕಾಲ್ಮೂರು, ಶಾ.ಸಂ.೨೯

೧೧. ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನಾ ಲೇಖನಗಳು, ಸಂ.ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ ಎಂ.ವಿ, ಪು.೩೫೨

೧೨. ಮೊಳಕಾಲ್ಮೂರು ತಾಲ್ಲೂಕಿನ ಪುರಾತತ್ವೀಯ ಪರಿಸರ, ಜಯಣ್ಣ ಯು., ಪಿಎಚ್.ಡಿ. ಅಪ್ರಕಟಿತ ಪ್ರಬಂಧ, ಕ.ವಿ.ಹಂಪಿ, ಪು.೨೦೭

೧೩. ಎಫಿಗ್ರಾಫಿ ಕರ್ನಾಟಕ ಸಂ.೧೧, ಮೊಳಕಾಲ್ಮೂರು, ಶಾ.ಸಂ.೧

೧೪. ಅದೇ, ಶಾ.ಸಂ.೨೫

೧೫. ಚಿತ್ರದುರ್ಗ ಜಿಲ್ಲೆಯ ಕೋಟೆಗಳು, ಡಾ.ತಿಪ್ಪೇಸ್ವಾಮಿ, ಪು.೨೨

೧೬. ಚಿತ್ರದುರ್ಗ ಜಿಲ್ಲಾದರ್ಶಿನಿ, ಟಿ.ಗಿರಿಜ, ಪು.೨೫೪

೧೭. ಎಫಿಗ್ರಾಫಿ ಕರ್ನಾಟಕ, ಸಂ.೧೧, ಮೊಳಕಾಲ್ಮೂರು, ಶಾ.ಸಂ.೩೭

೧೮. ಅದೇ, ಶಾ.ಸಂ.೫

೧೯. ಅದೇ, ಶಾ.ಸಂ.೪

೨೦. ಆಂಧ್ರ ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು, ಡಾ.ಜಾಜಿ ದೇವೇಂದ್ರಪ್ಪ, ಪು.೨೦೭

೨೧. ಚಿತ್ರದುರ್ಗ ಜಿಲ್ಲಾದರ್ಶಿನಿ, ಟಿ.ಗಿರಿಜ, ಪು.೨೭೩

೨೨. ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಚೆನ್ನಕ್ಕ ಎಲಿಗಾರ, ಪು.೨೫೪

೨೩. ಕರ್ನಾಟಕದಲ್ಲಿ ಸತಿಪದ್ಧತಿ, ಬಿ.ಎಸ್.ಶೇತೆ, ಪು.೭೧

೨೪. ಎಡೆಗಳು ಹೇಳುವ ಕಂನಾಡಕಥೆ, ಶಂಬಾಜೋಶಿ, ಪು.೬-೭

೨೫. ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ಸಂ.ರಮೇಶ ನಾಯಕ, ಕ.ವಿ.ವಿ.ಹಂಪಿ, ಪು.೧೧೮

೨೬. ಚಿತ್ರದುರ್ಗ ಜಿಲ್ಲಾದರ್ಶಿನಿ, ಟಿ.ಗಿರಿಜ, ಪು.೨೪೯

ಅಧ್ಯಾಯ ೬

ಸಮಾರೋಪ

೬

ಸಮಾರೋಪ

ಅಧ್ಯಯನದ ಒಟ್ಟುನೋಟ

ಸ್ಥಳನಾಮಗಳಂತಹ ಸಾಂಸ್ಕೃತಿಕ ಪಳೆಯುಳಿಕೆಗಳು ಒಂದು ಭೌಗೋಳಿಕ ಪರಿಸರದ ಸಂಸ್ಕೃತಿಯ ನಿರ್ವಚನದಲ್ಲಿ ಅಗತ್ಯವಾಗಿ ಬಳಸಿಕೊಳ್ಳಬೇಕಾದ ಸಾಮಗ್ರಿಗಳೆಂಬುದನ್ನು ಇಲ್ಲಿಯವರೆಗಿನ ಅಧ್ಯಯನಗಳಿಂದ ಎತ್ತಿ ತೋರಿಸಲಾಗಿದೆ. ಮಾನವ ಅಲೆಮಾರಿ ಜೀವನಕ್ಕೆ ವಿದಾಯ ಹೇಳಿ ಸ್ಥಿರವಾಸಿ ಜೀವನಕ್ಕೆ ಕಾಲಿಟ್ಟಾಗಿನಿಂದ ತಾವು ವಾಸಿಸುತ್ತಿದ್ದ ಭೌಗೋಳಿಕ ಪ್ರದೇಶಕ್ಕೆ ಒಂದು ಹೆಸರನ್ನು ಕರೆಯುವ ಪ್ರಯತ್ನ ಮಾಡಿದರು. ಇದು ಆಗತಾನೇ ಅಂಬೆಗಾಲಿಡುತ್ತಿದ್ದ ಮಗುವಿನಂತೆ ಬೇರು ಬಿಡುತ್ತಿದ್ದ ನೆಲೆಯೂರಿಕೆಯ ಪ್ರತೀಕವಾಗಿದೆ. ತಮ್ಮ ಭದ್ರ ನೆಲೆಯೂರಿಕೆಯ ನಂತರ ಇಟ್ಟ ಹೆಸರುಗಳು ಬೆಟ್ಟ, ಗುಡ್ಡ, ಕಣಿವೆ, ಕಂದರ, ಸರೋವರ ಹೀಗೆ ಪ್ರಾಕೃತಿಕ ಸಂಬಂಧವನ್ನು ಗಾಢವಾಗಿ ಬೆಸೆದುಕೊಂಡಿವೆ. ಪ್ರಕೃತಿಯ ಒಂದೊಂದು ವಸ್ತುವು ಸ್ಥಳನಾಮಗಳಿಗೆ ಪ್ರೇರಣೆ ನೀಡಿರುವುದು ಗಮನಿಸಬೇಕಾದ ಸಂಗತಿ. ಭೌಗೋಳಿಕ ಪರಿಸರಕ್ಕೆ ತಕ್ಕಂತೆ ವೈರುಧ್ಯಗಳೂ ಕಾಣಿಸುತ್ತವೆ. ಹೆಚ್ಚಾಗಿ ಜಲ, ನೆಲ, ಬೆಟ್ಟ, ಗಿಡಮರಗಳು ನಾಮನಿರ್ದೇಶನಕ್ಕೆ ಒಳಗಾಗಿವೆ. ಇಲ್ಲಿ ಹೆಚ್ಚಾಗಿ ಒಣಹವೆಯಿಂದ ಕೂಡಿದ ಬಯಲು ಭೂಮಿಯಿದ್ದರೂ, ಸಾಗರ, ಸಮುದ್ರದಿಂದ ಕೊನೆಗೊಳ್ಳುವ ಗ್ರಾಮ ನಾಮಗಳಿವೆ. ಇದು ಈ ಪ್ರದೇಶದ ಸಂಸ್ಕೃತಿಯು ಕಂಡುಕೊಂಡ ವಿಭಿನ್ನ ನೆಲೆಯೆಂದು ಗುರುತಿಸಬಹುದು.

ಸ್ಥಳನಾಮಗಳು ಆರಂಭದಲ್ಲಿ ಭೌಗೋಳಿಕತೆಯ ಪ್ರೇರಣೆ ಪ್ರಭಾವದಿಂದ ನಾಗರೀಕತೆ ಬೆಳೆದಂತೆ ಸಂಸ್ಕೃತಿ ಮುಖಿಯಾಗಿ ಸ್ಥಿತ್ಯಂತರಕ್ಕೆ ಒಳಪಟ್ಟಿತು. ವ್ಯಕ್ತಿ ಕುಟುಂಬದ ಅತಿಮುಖ್ಯ ಘಟಕ. ಇಂತಹ ವ್ಯಕ್ತಿ ಕೇಂದ್ರಿತ ಕುಟುಂಬಗಳು ಸೇರಿ ಒಂದು ಊರಾಗುತ್ತದೆ. ವಿಶೇಷವಾದ ನಡೆ ನುಡಿ, ವ್ಯಕ್ತಿತ್ವವನ್ನು ಹೊಂದಿರುವವರ ಹೆಸರುಗಳೂ ಸ್ಥಳಗಳಾಗಿ ನಾಮಕರಣಗೊಂಡಿವೆ. ಅಂತೆಯೇ ಗ್ರಾಮ ಸಮಾಜಗಳು ದೇವರು-ಧರ್ಮವನ್ನು ತಮ್ಮ ಅವಿಭಾಜ್ಯ ಅಂಗವೆಂದು ನಂಬಿವೆ. ಭಕ್ತಿ ಮತ್ತು ಭಯದ ನೆಲೆಯಲ್ಲಿ ತಮ್ಮ ವಾಸಸ್ಥಳಗಳಿಗೆ ದೈವಗಳ ಹೆಸರನ್ನು ಕರೆದುಕೊಂಡ ಬಗೆಗೆ ಮಾಹಿತಿಯಿದೆ. ಇದರಿಂದ ಶುಭವಾಗುತ್ತದೆಯೆಂಬ ಬಲವಾದ ನಂಬಿಕೆಯು ಗ್ರಾಮ ಸಮಾಜದಲ್ಲಿ ಬೇರೂರಿದೆ. ಒಂದೆಡೆ ನೆಲೆನಿಂತ ಮಾನವ ಕೃಷಿ ಮತ್ತು ಪಶುಪಾಲನೆಯನ್ನು ತಮ್ಮ ಮುಖ್ಯ ವೃತ್ತಿಯನ್ನಾಗಿಸಿಕೊಂಡರು. ವೃತ್ತಿಯಿಂದಲೇ

ತಾವು ವಾಸಿಸುತ್ತಿದ್ದ ಸ್ಥಳಗಳಿಗೆ ನಾಮಕರಣ ಮಾಡಿ ಗುರುತಿಸಿಕೊಂಡರು. ನಂತರದ ದಿನಗಳಲ್ಲಿ ವೃತ್ತಿಮತ್ತು ಜಾತಿಯಿಂದ ಸ್ಥಳನಾಮಗಳು ನಿರ್ದೇಶಿಸಲ್ಪಟ್ಟಿವೆ. ಇದರಿಂದ ನಮ್ಮ ನಾಡಿನ ಪ್ರಾಚೀನ ಸಮುದಾಯಗಳ ಸಾಂಸ್ಕೃತಿಕ ಅಧ್ಯಯನಕ್ಕೆ ಇಂತಹ ಗ್ರಾಮನಾಮಗಳು ಪೂರಕ ಮಾಹಿತಿಯನ್ನು ನೀಡುತ್ತವೆ. ಈ ಪ್ರದೇಶದಲ್ಲಿ ಕಂಡುಬರುವ ಕಾಟನಾಯಕನಹಳ್ಳಿ, ಭಟ್ಟರಹಳ್ಳಿ, ಪೂಜಾರಿಹಟ್ಟಿ, ಗೊಲ್ಲರಹಟ್ಟಿ, ಮಠದ ಜೋಗಿಹಳ್ಳಿ, ತಳವಾರಹಳ್ಳಿ ಮುಂತಾದ ಗ್ರಾಮ ನಾಮಗಳಿಂದ ಕಾಟನಾಯಕ, ಭಟ್ಟರು, ಪೂಜಾರಿ, ಗೊಲ್ಲರು, ಮಠದ ಜೋಗಿ, ತಳವಾರ ಎಂಬಂತಹ ಜನಾಂಗಗಳು ಈ ಭಾಗದಲ್ಲಿ ಪ್ರಾಚೀನ ಕಾಲದಲ್ಲಿ ನೆಲೆಸಿರಬೇಕು ಎಂಬಂತಹ ಸುಳಿವುಗಳನ್ನು ಈ ಹೆಸರುಗಳು ನೀಡುತ್ತವೆ. ಜನಾಂಗಿಕ ಅಧ್ಯಯನದಲ್ಲಿ ಇಂತಹ ಸ್ಥಳನಾಮಗಳು ದಿಕ್ಸೂಚಿಯಾಗಲಿವೆ.

ಗ್ರಾಮ ಸಮಾಜಗಳು ಬೆಳೆದು ಪಟ್ಟಣ, ನಗರಗಳಾದವು. ಈ ಪಟ್ಟಣ-ನಗರಗಳಲ್ಲಿ ಆಳುವ ಪ್ರಭುಗಳು ವಾಸಿಸತೊಡಗಿದರು. ಇಡೀ ರಾಜ್ಯವನ್ನು ತಮ್ಮ ಅಧಿಪತ್ಯದಲ್ಲಿ ಇಟ್ಟುಕೊಂಡು ಆಳುತ್ತಿದ್ದಂತಹ ರಾಜ, ಮಂತ್ರಿಗಳು, ಸಾಮಂತರು ಮತ್ತು ರಾಜ ಪರಿವಾರದವರು ಸ್ಥಳನಾಮಗಳಿಗೆ ಹೆಸರಾಗಿರುವುದನ್ನು ಕಾಣಬಹುದು. ಅಲ್ಲದೇ ಅನೇಕ ಗ್ರಾಮಗಳಿಗೆ ದತ್ತಿಯನ್ನು ನೀಡುವ ಮೂಲಕ, ಇಲ್ಲೇ ಯಾವುದಾದರೂ ಲೋಕೋಪಯೋಗಿ ಕಾರ್ಯಗಳನ್ನು ಮಾಡಿ ಕೆರೆ-ಬಾವಿಗಳನ್ನು ಕಟ್ಟಿಸಿ, ಆ ಮುಂಚೆ ಇದ್ದ ಹೆಸರನ್ನು ಅಳಿಸಿ ತಮ್ಮ ಹೆಸರುಗಳನ್ನು ಪ್ರತಿನಾಮಕರಣಗೊಳಿಸಿರುವುದು ಚರಿತ್ರೆಯುದ್ದಕ್ಕೂ ಕಂಡುಬರುತ್ತದೆ. ಉದಾಹರಣೆಗೆ ಇಂತಹ ಪೂರಕ ಮಾಹಿತಿಯನ್ನು ನೀಡುವ ಗ್ರಾಮಗಳೆಂದರೆ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಕಾಲದಲ್ಲಿ ಹರಿಹರ(ಹಕ್ಕಭೂಪತಿ)ನು 'ಕರಡಿಹಳ್ಳಿ' ಗ್ರಾಮವನ್ನು ''ಹರಿಹರಪುರ'' ಎಂದೂ ಸದಾಶಿವರಾಯನ ಆಳ್ವಿಕೆಯಲ್ಲಿ 'ಮುರುಡಿ' ಗ್ರಾಮವನ್ನು ''ಬುಕ್ಕರಾಯಪುರ'' ಎಂದು ಪ್ರತಿನಾಮಕರಣ ಮಾಡಿ ಈ ಎರಡೂ ಗ್ರಾಮಗಳನ್ನು ಅಗ್ರಹಾರವನ್ನಾಗಿ ಪರಿವರ್ತಿಸಿದ ಬಗೆಯನ್ನು ಶಾಸನವು ಉಲ್ಲೇಖಿಸುತ್ತದೆ. ಮೊಳಕಾಲ್ಮೂರು ಪರಿಸರದ ಶಾಸನಗಳು ಸ್ಥಳನಾಮಗಳನ್ನು ಉಲ್ಲೇಖಿಸುತ್ತವೆ. ಇದರಿಂದ ಶಾಸನೋಕ್ತ ಸ್ಥಳನಾಮಗಳಿಂದ ಪ್ರಾಚೀನ ಕರ್ನಾಟಕದ ಐತಿಹಾಸಿಕ ಸಂಗತಿಗಳನ್ನು ತಿಳಿಯಲು ಸಾಧ್ಯವಾಗುತ್ತದೆ. ಕಾರಣ ಶಾಸನೋಕ್ತ ಗ್ರಾಮನಾಮಗಳು ಐತಿಹಾಸಿಕ ಕೋಶವನ್ನು ನೇಯುತ್ತವೆ. ಸ್ಥಳಪುರಾಣಗಳು ಕಥೆಗಳು ಪ್ರಾದೇಶಿಕ ಚರಿತ್ರೆಯನ್ನು ಸ್ಥಳನಾಮಗಳ ಮೂಲಕ ಉಲ್ಲೇಖಿಸುತ್ತವೆ. ಚರಿತ್ರೆ ಮತ್ತು ಸ್ಥಳನಾಮಗಳು ಒಳಗಣ ಮಾಹಿತಿ ನೀಡಿ ನಾಡಿನ ಚರಿತ್ರೆಗೆ ವಿಪುಲವಾದ ಮಾಹಿತಿ ನೀಡುತ್ತವೆ. ನಾಡಿನಲ್ಲಿ ದೊರೆಯುವ ಮೌಖಿಕ ಸಾಹಿತ್ಯ, ಸಂಸ್ಕೃತಿಯ ಅನನ್ಯತೆಯನ್ನು ಸಾರುತ್ತದೆ. ಈ ನೆಲದ ಸಮುದಾಯಗಳ ಚರಿತ್ರೆಯನ್ನು ಪದರು ಪದರಾಗಿ ಬಿಚ್ಚಿಕೊಡುತ್ತದೆ. ದೇಸೀಯ ಸತ್ವವನ್ನು ಗ್ರಾಮಸಮಾಜ ಒಳಗೊಂಡಿದೆ. ಈ ಗ್ರಾಮ ಸಮಾಜದೊಂದಿಗೆ ಬದುಕುವ ಸಮುದಾಯಗಳು ಹೇಳುವ ಕಥೆ, ಹಾಡು ಗಾದೆ, ಒಗಟು, ಒಡಪುಗಳಲ್ಲಿ ಒಂದೊಂದು ಪ್ರಾದೇಶಿಕ ಸಂಸ್ಕೃತಿಯೇ ಅಡಗಿದೆ. ಸಾಂದರ್ಭಿಕವಾಗಿಯೆಂಬಂತೆ ಈ ಜಾನಪದ ಪ್ರಕಾರಗಳಲ್ಲಿ ಅದೆಷ್ಟೋ ಸ್ಥಳನಾಮಗಳು ಉಲ್ಲೇಖಗೊಂಡಿವೆ.

ಜಾನಪದ ಕೇಳಬೇಕಾದ, ನೋಡಿ ಆನಂದಿಸಬೇಕಾದ ಸಂಸ್ಕೃತಿ. ಓದಬೇಕಾದ ಸಂಸ್ಕೃತಿಯಲ್ಲ. ಜಾನಪದ ಜನಜೀವನದ ನೈಜ ಅಭಿವ್ಯಕ್ತಿ. ಇದೊಂದು ನಿರಂತರ ವಾಹಿನಿ. ಇದಕ್ಕೆ ಕೊನೆ ಮೊದಲಿಲ್ಲ. ಪಟ್ಟಣ - ನಗರ, ನಾಗರೀಕ-ಅನಾಗರೀಕ ಎಂಬ ಭೇದ ಇಲ್ಲವೇ ಇಲ್ಲ. ಶಿಷ್ಟ-ಪರಿಶಿಷ್ಟ ಎರಡೂ ಪರಂಪರೆಯಲ್ಲಿ ಸಾಗುವ ಜಾನಪದ ತಲೆಮಾರಿನಿಂದ ತಲೆಮಾರಿಗೆ ಸಂಸ್ಕೃತಿಯನ್ನು ರವಾನಿಸುವುದು. ಇದು ಸಹಜ ಕ್ರಿಯೆ. ಒಂದು ಅರ್ಥದಲ್ಲಿ ಜಾನಪದ ಕರಿಕೆಯ ಹಾಗೆ. ಬೇಸಿಗೆಯ ರಣಬಿಸಿಲಿಗೆ ಒಣಗಿ ಇನ್ನಿಲ್ಲವಾದಂತೆ ಕಂಡರೂ ಮುಂಗಾರು ಮೊದಲ ನಾಲ್ಕು ಹನಿ ನೆಲಕ್ಕೆ ಬಿದ್ದೊಡನೆ ಬಸವನ ಕೋಡಿನಂತೆ ಮೇಲೇಳುವ ಜಾಯಮಾನ ಕರಿಕೆಯದ್ದು. ಜಾನಪದವು ಹಾಗೆಯೇ. ಸಹಜ ಬದುಕಿನ ಅನುಭಾವದ ಒಡಲಾಳದಿಂದ ರೂಪುಗೊಂಡು ಇದ್ದಕ್ಕಿದ್ದ ಹಾಗೆ ಸಾಂದರ್ಭಿಕವಾಗಿ ಪ್ರಕಟಗೊಳ್ಳುವುದು ಜಾನಪದದ ಜೀವಾಳ. ಇಂತಹ ಜನಪದ ಮೌಖಿಕ ಪರಂಪರೆಯ ಎಳೆಯನ್ನು ಸಂಕ್ಷಿಪ್ತವಾಗಿ ಅಧ್ಯಯನಕ್ಕೆ ಒಳಗು ಮಾಡಿ ಅನಾವರಣಗೊಳಿಸಲಾಗಿದೆ.

ಸ್ಥಳನಾಮಗಳನ್ನು ಭಾಷಿಕ ಘಟಕಗಳೆಂದೂ ಅಧ್ಯಯನ ಮಾಡುವುದು ಮುಖ್ಯವಾಗಿದೆ. ಸ್ಥಳನಾಮಗಳಿಂದ ಅನೇಕ ಭಾಷಿಕ ಚಹರೆಗಳು ತಿಳಿಯುತ್ತವೆ. ಭಾಷೆ ಒಂದು ಸಂಸ್ಕೃತಿಯ ಮಹತ್ವದ ವಾಹಕ. ಇಂತಹ ಅಂಶಗಳಿಂದ ಸಮಾಜದ ಅಧ್ಯಯನವನ್ನು, ಭೌಗೋಳಿಕ ಅಧ್ಯಯನವನ್ನು ಮಾಡಲು ಸಾಧ್ಯ. ಶಂಬಾಜೋಶಿಯವರು ಸ್ಥಳನಾಮಗಳ ಭಾಷಿಕ ಅಂಶಗಳಿಂದಲೇ ಕನ್ನಡ ನಾಡಿನ ಭೌಗೋಳಿಕ ಮೇರೆಗಳನ್ನು ಭಾರತದಾದ್ಯಂತ ಅನ್ವೇಷಿಸುತ್ತಾರೆ. ಆ ಮೂಲಕ ಕನ್ನಡ ಸಂಸ್ಕೃತಿಯ ಹುಡುಕಾಟವನ್ನು ಎಡೆಗಳ ಮುಖಾಂತರ ವಿವರಿಸುತ್ತಾರೆ. ಈ ಸ್ಥಳನಾಮಗಳ ಅಧ್ಯಯನದಲ್ಲಿ ಮೊಳಕಾಲ್ಮೂರು ತಾಲ್ಲೂಕಿನ ಸಾಂಸ್ಕೃತಿಕ ಪರಿಸರವನ್ನು ಕಟ್ಟಿಕೊಡಲಾಗಿದೆ. ದೇವಾಲಯ, ಶಾಸನ, ಕೋಟೆ, ಮಾಸ್ತಿ ವೀರಗಲ್ಲು, ಸಾಂಸ್ಕೃತಿಕ ವೀರರು ಚಾರಿತ್ರಿಕ ನೆಲೆಗಳು, ಸಾಂಸ್ಕೃತಿಕ ಬೆಟ್ಟಗಳು -ಹೀಗೆ ಮೊಳಕಾಲ್ಮೂರು ಪರಿಸರದ ಸಾಂಸ್ಕೃತಿಕ ಅವಲೋಕನವನ್ನು ಅನಾವರಣಗೊಳಿಸಲು ಪ್ರಯತ್ನಿಸಿದ ಮಾದರಿ ವಿಶೇಷ ವೆನ್ನಬಹುದು.

ಈ ಅಧ್ಯಯನದ ಫಲಿತಗಳು

೧. ''ಮೊಳಕಾಲ್ಮೂರು ಪ್ರದೇಶದ ಸ್ಥಳನಾಮ ಅಧ್ಯಯನ'' ಈ ಅಧ್ಯಯನದಿಂದ ದೊರೆತ ಫಲಿತಗಳನ್ನು ಹೀಗೆ ಕಲೆಹಾಕಿದೆ. ಹಿಂದಿನ ಅಧ್ಯಯನಗಳು ಬಹುತೇಕ ಭಾಷಾಶಾಸ್ತ್ರದ ನೆಲೆಯಲ್ಲಿ ವರ್ಣನಾತ್ಮಕ ಮಾದರಿಯಿಂದ ಸಿದ್ಧಗೊಂಡುಪರಂಪರೆಯಂತೆ ಮುಂದುವರೆದಿರುವುದು ಗಮನಿಸಲಾಯಿತು. ಇದನ್ನು ಪರಿಗಣನೆಗೆ ತೆಗೆದುಕೊಂಡು ಕೆಲವು ಹೊಸ ವಿಭಿನ್ನ ಆಯಾಮಗಳು ಅಂದರೆ ಸ್ಥಳನಾಮಗಳ ಸಾಮಾಜಿಕ ನೆಲೆ, ಚಾರಿತ್ರಿಕ ನೆಲೆಗಳ ಹಿನ್ನಲೆಯಲ್ಲಿ ಸಾಂಸ್ಕೃತಿಕವಾಗಿ ಹೊಸ ಅಂಶಗಳನ್ನು ಪ್ರಸ್ತುತ

ನಿಬಂಧಕ್ಕೆ ಒಳಪಡಿಸಲು ಪ್ರಯತ್ನಿಸಲಾಗಿದೆ. ಸ್ಥಳನಾಮಗಳು ಸಾಮಾಜಿಕ ಆಯಾಮ ಕುರಿತು ಈವರೆಗೂ ಬಂದಿರುವ ಚಿಂತನೆಗಳ ದಾಟಿ ಹೊಸ ಹೊರಬರುವ ಮಾರ್ಗಗಳನ್ನು ರೂಪಿಸಲಾಗಿದೆ. ಸ್ಥಳನಾಮಗಳು ಸಹಿತ ಚಲನಶೀಲ ಆಕರಗಳಾಗಿರುವುದರಿಂದ ಹೊಸಶೋಧಗಳತ್ತ ಈ ಅಧ್ಯಯನ ತೋರ್ಬೆರಳು ಆಗುತ್ತದೆ.

೨. ಸ್ಥಳನಾಮಗಳನ್ನು ವರ್ಗೀಕರಿಸುವ ಮೂಲಕ ಭೌಗೋಳಿಕ ಚಹರೆಯನ್ನು ಅಲ್ಲಿನ ಸ್ವರೂಪವನ್ನು ವಿಂಗಡಿಸಿ, ಜಲವಾಚಿ, ಶಿಲಾವಾಚಿ, ಕ್ಷೇತ್ರವಾಚಿ, ಸಸ್ಯವಾಚಿ, ಲೋಹವಾಚಿ ಮುಂತಾದ ಪ್ರಾಕೃತಿಕ ಮೂಲಸ್ಥಳನಾಮಗಳೊಂದಿಗೆ ಜಾತಿ, ವರ್ಗ, ವೃತ್ತಿ, ದೈವ, ವ್ಯಕ್ತಿ, ಪ್ರಾಣಿ, ಪಕ್ಷಿ ಮುಂತಾದ ಸಾಂಸ್ಕೃತಿಕ ಅಂಶಗಳನ್ನು ಪ್ರತಿನಿಧಿಸುವ ಸ್ಥಳನಾಮಗಳಿರುವುದನ್ನು ಗುರುತಿಸಲಾಗಿದೆ. ನೈಸರ್ಗಿಕವಾಗಿ ಒಣಭೂಮಿಯಿಂದ ಕೂಡಿದ ಮೊಳಕಾಲ್ಮೂರು ಪರಿಸರದಲ್ಲಿ ಸಮುದ್ರ-ಸಾಗರ ಎಂಬ ವಾರ್ಗಿಕಗಳನ್ನೊಂದಿದ ಗ್ರಾಮಗಳಿರುವುದು ವಿಶೇಷ ಸಂಗತಿ. ಉದಾಹರಣೆಗೆ, ದೇವಸಮುದ್ರ, ಗೌರಸಮುದ್ರ, ನಾಗಸಮುದ್ರ, ರಾಮಸಾಗರ, ಕೋನಸಾಗರ ಇದು ಈ ಭಾಗದ ಜನರ ಜೀವನ ಧೋರಣೆ ಹಾಗೂ ಪ್ರಕೃತಿ ಪ್ರೀತಿಯನ್ನು ತೋರುತ್ತದೆಂಬುದನ್ನು ಗುರುತಿಸಲಾಗಿದೆ. ಮಹತ್ವವನ್ನೊಂದಿದ ಸ್ಥಳನಾಮಗಳೂ ಇಲ್ಲಿವೆ.

೩. ಸ್ಥಳನಾಮಗಳ ಭಾಷಿಕ ಅಧ್ಯಯನದಿಂದ ಮುಖ್ಯವಾಗಿ ಮೊಳಕಾಲ್ಮೂರು ಪರಿಸರ ದ್ವಿಭಾಷಿಕ ಪರಿಸರವನ್ನು ಹೊಂದಿ ತೆಲುಗು ಭಾಷೆ ಕನ್ನಡ ಭಾಷೆ ಮಾತನಾಡುವ ಸಂದರ್ಭದಲ್ಲಿ ನುಡಿ ಜಗಿತ, ನುಡಿ ಬೆರಕೆಯ ಅಂಶಗಳು ಕಂಡುಬರುತ್ತವೆ. ಏಕೆಂದರೆ, ಈ ಪ್ರದೇಶ ಗಡಿಭಾಗವಾಗಿರುವುದರಿಂದ ತೆಲುಗು ಭಾಷೆಯ ಪ್ರಭಾವವನ್ನು ಗುರುತಿಸಲಾಗಿದೆ.

೪. ಈ ಪ್ರದೇಶದ ಸಾಂಸ್ಕೃತಿಕ ಹಾಗೂ ಐತಿಹಾಸಿಕ ಮಹತ್ವ ಸ್ಥಾನ ಪಡೆದ ಬ್ರಹ್ಮಗಿರಿ, ಜಟಂಗಿ ರಾಮೇಶ್ವರ, ನುಂಕೆಮಲೆ, ಕದಂಬಗುಡ್ಡ -ಹೀಗೆ ತಾಲ್ಲೂಕಿನ ಸಾಂಸ್ಕೃತಿಕ ಅಂಶಗಳನ್ನು ಸಾಂದರ್ಭಿಕವಾಗಿ ಚರ್ಚಿಸಿ ಅವಧೂತರ ಸಾಧನೆಯನ್ನು ಕೂಡ ಪರಿಚಯಿಸಲಾಗಿದೆ.

೫. ಸ್ಥಳನಾಮಗಳನ್ನು ವಿಶಿಷ್ಟ ಐತಿಹಾಸಿಕ ಆಕರಗಳೆಂದು ಪರಿಗಣಿಸಲಾಗಿದೆ. ಚಾರಿತ್ರಿಕ ಸಂಗತಿಗಳಿಂದ ಹೆಸರುಗಳು ವಿವಿಧ ಆಯಾಮಗಳು ತಿಳಿದುಬಂದಿವೆ. ಪ್ರಾಚೀನ ಕಾಲದಿಂದಲೂ ಆಳಿದ ರಾಜ ಮನೆತನ, ರಾಜ ಪರಿವಾರದ ಸ್ಥಳಗಳು ಹಾಗೂ ಕೆಲವು ಹಳೇ ಗ್ರಾಮಗಳಿಗೆ ಪ್ರತಿನಾಮಕರಣ ಮಾಡಲಾಗಿದೆ. ಶಾಸನೋಕ್ತ ಸ್ಥಳನಾಮಗಳ ಮೂಲಕ ಭಾಷೆಯ ಹಾಗೂ ಚಾರಿತ್ರಿಕ ಮತ್ತು ದಾನದತ್ತಿ ನೀಡಿದ ವಿವರಗಳನ್ನು ಕುರಿತು ಚರ್ಚಿಸಲಾಗಿದೆ. ಇದೊಂದು ಹೊಸ ಮಾದರಿಯ ಅಧ್ಯಯನವಾಗಿದೆ.

೬. ಮೌಖಿಕ ಪರಂಪರೆಯ ಐತಿಹ್ಯ, ಕಥೆ, ಒಗಟು, ಗಾದೆ ಮುಂತಾದ ಪ್ರಕಾರಗಳ ಮೂಲಕ ಸ್ಥಳನಾಮಗಳ ಚಹರೆಗಳು ತಿಳಿಯುತ್ತವೆ. ಆದರೆ ಅದನ್ನು ಸಂಕ್ಷಿಪ್ತ ಮಿತಿಯೊಳಗೆ ಅಳವಡಿಸಿಕೊಂಡಿದೆ.

೭. ಚರಿತ್ರೆ ಮತ್ತು ಸ್ಥಳನಾಮಗಳ ಮೂಲಕ ಸಂಸ್ಕೃತಿ, ಭಾಷೆಯ ಚಾರಿತ್ರಿಕ ಬೆಳವಣಿಗೆಯನ್ನು ಅಧ್ಯಯನದಲ್ಲಿ ಅಭ್ಯಾಸಿಸಿದೆ.

೮. ಸಾಮಾಜಿಕ ಅಧ್ಯಯನದಿಂದ ವೃತ್ತಿ ಜಾತಿಯಾಧಾರಿತ ಸ್ಥಳನಾಮಗಳ ಕುರಿತು ಬಹುಮುಖ್ಯವಾಗಿ ಚರ್ಚಿಸಲಾಗಿದೆ.

ಹೀಗೆ ಸಮಕಾಲೀನ ರಾಜಕಾರಣದ ವ್ಯಕ್ತಿನಾಮಗಳು ಸ್ಥಳನಾಮಗಳಿಗೆ ನಿರ್ದೇಶನಗೊಳ್ಳುತ್ತಿರುವುದು ಇತ್ತೀಚೆಗೆ ಕಂಡುಬರುತ್ತದೆ. ಆಧುನಿಕತೆಯ ಪ್ರಭಾವದಿಂದ ಸ್ಥಳಗಳಿಗೆ ಇಡುವ ಹೆಸರುಗಳು ಇತ್ತೀಚೆಗೆ ಬದಲಾಗುತ್ತಿವೆ. ಇವು ಅಧ್ಯಯನದ ಮುಖ್ಯ ಫಲಿತಗಳಾಗಿವೆ.

ಮುಂದಿನ ಅಧ್ಯಯನದ ಸುಳಿವುಗಳು

೧. 'ಮೌಖಿಕ ಪರಂಪರೆ ಮತ್ತು ಸ್ಥಳನಾಮಗಳು' ಎಂಬ ಶೀರ್ಷಿಕೆಯಡಿಯಲ್ಲಿ ಒಂದು ಪ್ರತ್ಯೇಕ ಅಧ್ಯಯನ ಮಾಡಬಹುದು.

೨. ಚರಿತ್ರೆ ಮತ್ತು ಸ್ಥಳನಾಮಗಳ ಭಾಷೆಯ ಅವಸ್ಥಾಂತರದ ಕುರುಹುಗಳು ಶಾಸನೋಕ್ತ ಸ್ಥಳನಾಮಗಳು, ಪ್ರತಿನಾಮಕರಣಗೊಂಡ ಸ್ಥಳ ನಾಮಗಳು, ಮಾಸ್ತಿ ವೀರಗಲ್ಲುಗಳು ಮತ್ತು ಸ್ಥಳನಾಮಗಳು ಇಂತಹ ವಿಷಯಗಳ ಮೇಲೆ ಬೆಳಕು ಚೆಲ್ಲಬಹುದಾಗಿದೆ.

೩. 'ಸ್ಥಳನಾಮಗಳ ಸಾಮಾಜಿಕ ಅಧ್ಯಯನ' ಎಂಬ ಪ್ರತ್ಯೇಕ ಅಧ್ಯಯನವನ್ನು ಕೈಗೊಂಡು ನ್ಯಾಯ ದೊರಕಿಸಿಕೊಡುವ ಪ್ರಯತ್ನ ಮಾಡಬಹುದು.

ಯಾವುದೇ ಅಧ್ಯಯನದಲ್ಲಿ ತೀವ್ರವಾಗಿ ತೊಡಗಿಸಿಕೊಂಡಾಗ ಹೊಸ ಹೊಸ ಮುಖಗಳು ದಾರಿಗಳು ಪರಿಚಯವಾಗುತ್ತಾ ಹೋಗುತ್ತವೆ. ಅಂತಹ ಪರಿಸರದ ಅನುಭವ ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡೆ. ಮೌಖಿಕ ಪರಂಪರೆಯನ್ನು ಈಗ ಕಾಣಸಿಗುವ ಐತಿಹ್ಯಗಳೊಂದಿಗೆ ಹೋಲಿಸಿ ನೋಡಿದರೆ, ಕೆಲವು ಸತ್ಯಗಳು ಗೋಚರಿಸುತ್ತವೆ. ಹಾಗೆಯೇ ಸತ್ಯಕ್ಕೆ ದೂರವಾದ ಎಳೆಗಳೂ ಸಿಗುತ್ತವೆ. ಹೀಗಾಗಿ ಸೂಕ್ಷ್ಮದೃಷ್ಟಿಕೋನದಿಂದ ಸತ್ಯಾಸತ್ಯತೆಗಳನ್ನು ಪರಾಮರ್ಶಿಸಿ ನೋಡುವ ಪ್ರಯತ್ನವನ್ನು ಮಾಡಿದ್ದೇನೆ.

ಈ ಮೇಲಿನ ಎಲ್ಲಾ ಅಂಶಗಳು ನನ್ನ ಅಧ್ಯಯನದ ಫಲಿತಗಳು. ಇಲ್ಲಿ ಭಾಷಿಕ, ಚಾರಿತ್ರಿಕ, ಸಾಮಾಜಿಕ ನೆಲೆಯಲ್ಲಿ ಸಾಂಸ್ಕೃತಿಕ ಪರಿಸರದ ವಿಭಿನ್ನ ಆಯಾಮಗಳನ್ನು ಅಧ್ಯಯನದಲ್ಲಿ ಬಳಸಿಕೊಳ್ಳುವ ಮೂಲಕ ಸ್ಥಳನಾಮಗಳ ವಿವಿಧ ಹೊಸ ಬಗೆಯ ಚಹರೆಗಳನ್ನು ಪರಾಮರ್ಶಿಸಿ ಅನಾವರಣಗೊಳಿಸಿದ್ದೇನೆ. ಈ ಅಧ್ಯಯನವೇ ಅಂತಿಮ ಎನ್ನುವ ನಿರ್ಧಾರ ನನ್ನದಲ್ಲ.

ಆಧುನೀಕರಣದ ಹೆಸರಿನಲ್ಲಿ ಮನುಷ್ಯ ಮತ್ತು ಪ್ರಕೃತಿ ಸಂಬಂಧಗಳನ್ನು ಛಿದ್ರಗೊಳಿಸಲಾಗುತ್ತದೆ. ಇಂತಹ ಕಲುಶಿತ ವಾತಾವರಣದಲ್ಲಿಯೂ ಮನುಷ್ಯ-ಮನುಷ್ಯರೊಂದಿಗಿನ ಪ್ರೀತಿಯಿಂದ ಬೆರೆಯುವ ಮಾತನಾಡುವ ಆಯಾ ಸಾಂಸ್ಕೃತಿಕ ಪರಿಸರದ ಚಹರೆಗಳನ್ನು ಅರಿಯುವ ಅಪರೂಪದ ಅವಕಾಶವನ್ನು ಈ ಅಧ್ಯಯನ ಕಲ್ಪಿಸಿಕೊಟ್ಟಿತು. ಈ ಪ್ರದೇಶದ ಸ್ಥಳನಾಮ ಅಧ್ಯಯನದಿಂದ ಆ ಪ್ರದೇಶದ ಚರಿತ್ರೆ, ಜನರ ಅಧ್ಯಯನಕ್ಕೆ ಈ ಅಧ್ಯಯನ ಆಕರವಾಗುತ್ತದೆ. ಈ ಅಧ್ಯಯನದ ಸಂದರ್ಭದಲ್ಲಿ ಚಾರಿತ್ರಿಕ ಮತ್ತು ಭಾಷಾಶಾಸ್ತ್ರ ಅಧ್ಯಯನದ ವಿಭಾಗಗಳನ್ನು ಅಳವಡಿಸಿಕೊಳ್ಳಲಾಗಿದೆ.

ಅನುಬಂಧಗಳು


೧. ಮೊಳಕಾಲ್ಮೂರು ತಾಲ್ಲೂಕಿನ ಭೂಪಟ

೨. ಮೊಳಕಾಲ್ಮೂರು ತಾಲ್ಲೂಕಿನ ಸ್ಥಳನಾಮಗಳ ಸೂಚಿ

೩. ಪರಾಮರ್ಶನ ಗ್ರಂಥಗಳು

೧

ಮೊಳಕಾಲ್ಮೂರು ತಾಲ್ಲೂಕಿನ ಭೂಪಟ



ಕೃಪೆ ಕೆ.ಎನ್.ಭೀಮಾರೆಡ್ಡಿ, ಮೊಳಕಾಲ್ಮೂರು ತಾಲ್ಲೂಕು ದರ್ಶನ

೨

ಮೊಳಕಾಲ್ಮೂರು ತಾಲ್ಲೂಕಿನ ಸ್ಥಳನಾಮಗಳ ಸೂಚಿ

೧. ಅಶೋಕ ಸಿದ್ಧಾಪುರ
೨. ಅಮುಕುಂದಿ
೩. ಅಯ್ಯನಹಳ್ಳಿ
೪. ಅಡವಿ ಮಲ್ಲಾಪುರ
೫. ಅರವಿನ ದೊಡ್ಡಿ
೬. ಬಾಂಡ್ರಾವಿ
೭. ಬಸಾಪುರ
೮. ಭಟ್ರಹಳ್ಳಿ
೯. ಬೈರಾಪುರ
೧೦. ಬೊಮ್ಮಗೊಂಡನಕೆರೆ
೧೧. ಬೊಮ್ಮದೇವರಹಳ್ಳಿ
೧೨. ಬೊಮ್ಮಲಿಂಗನಹಳ್ಳಿ
೧೩. ಬೊಮ್ಮಕ್ಕನಹಳ್ಳಿ
೧೪. ಚಿಕ್ಕನಹಳ್ಳಿ
೧೫. ಚಿಕ್ಕೇರಹಳ್ಳಿ
೧೬. ಚಿಕ್ಕೋಬನಹಳ್ಳಿ
೧೭. ಚಿಕ್ಕುಂಮ್ಮಿತ್ತಿ ಕಂಪಳದೇವರಟ್ಟಿ
೧೮. ಚಾಮಗೊಂಡನಹಳ್ಳಿ
೧೯. ಚಿನಿವಾಲದ ಗುಡ್ಡ
೨೦. ದೇವಸಮುದ್ರ
೨೧. ದೊಣೆತಮ್ಮೇನಹಳ್ಳಿ
೨೨. ದುಪ್ಪಿ
೨೩. ಇರಾಣಗುಡ್ಡ ಉಚ್ಚಂಗಿದುರ್ಗ
೨೪. ಗೌರಸಮುದ್ರ
೨೫. ಗುಡ್ಡದಹಳ್ಳಿ
೨೬. ಗುಂಡ್ಲೂರು
೨೭. ಹಾನಗಲ್ಲು
೨೮. ಹಳೇ ದಡಗೂರು
೨೯. ಹೇರೂರು
೩೦. ಹೊಸಳ್ಳಿ
೩೧. ಹಿರೇಕೆರೆಹಳ್ಳಿ
೩೨. ಹನುಮನಗುಡ್ಡ
೩೩. ಹನುಮಾಪುರ
೩೪. ಹೊಸೂರು
೩೫. ಹೊಸಕೋಟೆ
೩೬. ಹೊಸದಡಗೂರು
೩೭. ಹೊಸನಾಗಲಾಪುರ
೩೮. ಜಹಗೀರು ಬುಡ್ಡೇನಹಳ್ಳಿ
೩೯. ಜಂಬಲಮಲ್ಕಿ
೪೦. ಜಾಲಿಪೆಂಟೆ
೪೧. ಜಿಲ್ಲದಗುಂಡಿ
೪೨. ಕಾಮರಕಾವಲು
೪೩. ಕಣಕುಪ್ಪೆ
೪೪. ಕರಡಿಹಳ್ಳಿ

೪೫. ಕಾಡುಸಿದ್ದಾಪುರ

೪೬. ಕಾಟಾನಾಯಕನಹಳ್ಳಿ

೪೭. ಕೋಡಿಹಳ್ಳಿ

೪೮. ಕೋನಾಪುರ

೪೯. ಕೋನಸಾಗರ

೫೦. ಕೊಮ್ಮನಪಟ್ಟಿ

೫೧. ಕೆಳಗಳಹಟ್ಟಿ

೫೨. ಕೆಳಗಿನ ಕಣಿವೆ

೫೩. ಕೊಂಡ್ಲಹಳ್ಳಿ

೫೪. ಕೃಷ್ಣರಾಜಾಪುರ

೫೫. ಕೆರೆಕೊಂಡಾಪುರ

೫೬. ಮಲ್ಲರವಿ

೫೭. ಮೇಗಳಕಣಿವೆ

೫೮. ಮೇಗಳಹಟ್ಟಿ

೫೯. ಮಹಿಮೇನಹಟ್ಟಿ

೬೦. ಮಾರಮ್ಮನಹಳ್ಳಿ

೬೧. ಮಠದ ಜೋಗಿಹಳ್ಳಿ

೬೨. ಮಾಚೇನಹಳ್ಳಿ

೬೩. ಮೊಳಕಾಲ್ಮೂರು

೬೪. ಮರ್ಲಹಳ್ಳಿ

೬೫. ಮುರುಡಿ

೬೬. ಮೊಗಲಹಳ್ಳಿ

೬೭. ಮುತ್ತಿಗಾರಹಳ್ಳಿ

೬೮. ನಾಗಸಮುದ್ರ

೬೯. ನಲ್ಲರೆಡ್ಡಿ ಕೊಂಡಾಪುರ

೭೦. ನೇರ್ಲಹಳ್ಳಿ

೭೧. ಓಬಳಾಪುರ

೭೨. ಪೆನ್ನಮ್ಮನಹಳ್ಳಿ

೭೩. ಪೊಕ್ಕ್ರೂರ್ತಿ

೭೪. ಪುರ ಪೋರನಹಟ್ಟಿ

೭೫. ಪಿ.ಟಿ.ಹಟ್ಟಿ

೭೬. ಪೂಜಾರಹಟ್ಟಿ

೭೭. ರಾಜಾಪುರ

೭೮. ರಾಮಸಾಗರ

೭೯. ರಾಮಪುರ ರಾಂಪುರ

೮೦. ರಂಗಯ್ಯನದುರ್ಗ

೮೧. ರೊಪ್ಪ

೮೨. ರಾಯಾಪುರ

೮೩. ಸಂತೇಗುಡ್ಡ

೮೪. ಸಂಜೀವರಾಯನಕೋಟೆ

೮೫. ಶಿರೇಕೊಳ

೮೬. ಸಿದ್ದಯ್ಯನಕೋಟೆ

೮೭. ಸೂಲೇನಹಳ್ಳಿ

೮೮. ಸೋವೇನಹಳ್ಳಿ

೮೯. ಸೂರವ್ವನಹಳ್ಳಿ

೯೦. ಸ್ವಾಮಿಕೆರೆ

೯೧. ತಳವಾರಹಳ್ಳಿ

೯೨. ತಮ್ಮೇನಹಳ್ಳಿ

೯೩. ತಿಮ್ಮಲಾಪುರ

೯೪. ತುಪ್ಪದಕ್ಕನಹಳ್ಳಿ

೯೫. ತಮಕೂರ್ಲಹಳ್ಳಿ

೯೬. ಉರ್ಥಾಳ್

೯೭. ವೀರಾಪುರ

೯೮. ವಡೇರಹಳ್ಳಿ

೯೯. ವೆಂಕಟಾಪುರ

೧೦೦. ವಿಠಲಾಪುರ

ಪರಾಮರ್ಶನ ಗ್ರಂಥಗಳು

೧. ಕಲಬುರ್ಗಿ ಎಂ.ಎಂ., ಕನ್ನಡ ನಾಮವಿಜ್ಞಾನ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ೧೯೮೯

೨. ಕಲಬುರ್ಗಿ ಎಂ.ಎಂ., ಮಾರ್ಗ, ಸಂಪುಟ ೨, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು, ೧೯೯೮

೩. ಗಿರಿಜ ಟಿ., ಚಿತ್ರದುರ್ಗ ಜಿಲ್ಲಾ ದರ್ಶನ, ೧೯೯೧

೪. ಗೋಪಾಲಕೃಷ್ಣ ವಿ., ಸ್ಥಳನಾಮ ಅಧ್ಯಯನಗಳು, ವಿದ್ಯಾಗಿರಿ, ಪ್ರಕಾಶನ, ಕೋಲಾರ, ೧೯೮೭

೫. ಚಿದಾನಂದಮೂರ್ತಿ ಎಂ., ಹೊಸತು ಹೊಸತು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೩

೬. ಜವರೇಗೌಡ ದೇ., ಸ್ಥಳನಾಮ ವ್ಯಾಸಂಗ, ಸಹ್ಯಾದ್ರಿ ಪ್ರಕಾಶನ, ಮೈಸೂರು, ೧೯೯೦

೭. ಜಾಜಿ ದೇವೇಂದ್ರಪ್ಪ, ಆಂಧ್ರ-ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು, ವಿಕಾಸ ಪ್ರಕಾಶನ, ಹೊಸಪೇಟೆ, ೨೦೦೪

೮. ಜಯಣ್ಣ ಯು., ಮೊಳಕಾಲ್ಮೂರು ತಾಲ್ಲೂಕಿನ ಪುರಾತತ್ವೀಯ ಪರಿಸರ, ಕನ್ನಡ ವಿಶ್ವವಿದ್ಯಾಲಯ,ಹಂಪಿ ಪಿಎಚ್.ಡಿ.ಅಪ್ರಕಟಿತ ಪ್ರಬಂಧ.

೯. ನಾರಾಯಣ ಕೆ.ವಿ.(ಸಂ), ಸ್ಥಳನಾಮಗಳು ಪರಿವರ್ತನೆ ಮತ್ತು ಪ್ರಭಾವ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೧೦. ನಾರಾಯಣ ಕೆ.ವಿ.(ಸಂ), ವ್ಯಕ್ತಿನಾಮಗಳು ಸ್ವರೂಪ ಮತ್ತು ವಿಶ್ಲೇಷಣೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೧೧. ಭೀಮಾರೆಡ್ಡಿ ಕೆ.ಎನ್., ಮೊಳಕಾಲ್ಮೂರು ತಾಲ್ಲೂಕು ದರ್ಶನ, ಐಬಿಎಚ್ ಪ್ರಕಾಶನ, ಬೆಂಗಳೂರು, ೧೯೮೭

೧೨. ಮಲ್ಲೇಪುರಂ ಜಿ.ವೆಂಕಟೇಶ(ಸಂ), ಶಂಬಾಕೃತಿ ಸಮೀಕ್ಷೆ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೯೨

೧೩. ರಘುಪತಿಭಟ್ಟ ಕೆಮ್ತೂರು, **ತುಳುನಾಡಿನ ಸ್ಥಳನಾಮಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೧

೧೪. ಲಕ್ಷ್ಮಣ್ ತೆಲಗಾವಿ ಮತ್ತು ಎಂ.ವಿ.ಶ್ರೀನಿವಾಸ(ಸಂ), **ಹುಲ್ಲೂರು ಶ್ರೀನಿವಾಸ ಜೋಯಿಸರ ಲೇಖನಗಳು**, ೧೯೭೯

೧೫. ವಿಶ್ವನಾಥಯ್ಯ ಸಿ.ಎಂ., **ಕಡೂರು ತಾಲ್ಲೂಕಿನ ಸ್ಥಳನಾಮಗಳು**, ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾನಿಲಯ, ೨೦೦೪

೧೬. ವಿಶ್ವನಾಥ, **ಸಕಲೇಶಪುರ ಪರಿಸರದ ಸ್ಥಳನಾಮಗಳು**, ದೇವೀ ಪ್ರಕಾಶನ, ಮೈಸೂರು, ೧೯೯೬

೧೭. ವಿಶ್ವನಾಥ, **ಗ್ರಾಮನಾಮಗಳ ಸಾಂಸ್ಕೃತಿಕ ಪರಿವೇಷ**, ದೇವೀ ಪ್ರಕಾಶನ, ಮೈಸೂರು, ೨೦೦೦

೧೮. ವಿಶ್ವನಾಥ, **ಸ್ಥಳನಾಮಗಳು**, ಸಂವಹನ ಪ್ರಕಾಶನ, ಮೈಸೂರು, ೧೯೯೫

೧೯. ಶಂಬಾ ಜೋಷಿ, **ಎಡೆಗಳು ಹೇಳುವ ಕಂನಾಡ ಕಥೆ**, ಮಾಧವ ಬಲ್ಲಾಳ ಬಂಧುಗಳು, ಧಾರವಾಡ, ೧೯೪೭

೨೦. ಸೂರ್ಯನಾಥ ಯು.ಕಾಮತ್ (ಸಂ), **ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ ೨**, ಗ್ಯಾಸೆಟಿಯರ್ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು

೨೧. ಸೋಮಶೇಖರ ಎಸ್.ವೈ., **ಜಟಂಗಿ ರಾಮೇಶ್ವರ ಸಾಂಸ್ಕೃತಿಕ ದರ್ಶನ**, ಸುಮೇಧ ಪ್ರಕಾಶನ, ದೇವಸಮುದ್ರ, ೨೦೦೪

ಶಾಸನ ಸಂಪುಟ

೧. **ಎಪಿಗ್ರಾಫಿಯ ಕರ್ನಾಟಿಕ, ಸಂಪುಟ ೧೧**, ಮೊಳಕಾಲ್ಮೂರು